ಜೆ. ಬಿ. ಖಾಡೆ ಸಂಕಲಿತ ಜನಪದ ಸಾಹಿತ್ಯ

ಸಂಶೋಧಕರು :

ಶ್ರೀಮತಿ ಲಲಿತಾ. ಎಂ. ಕಲ್ಯಾಣಶೆಟ್ಟಿ

ಮಾರ್ಗದರ್ಶಕರು :

ಡಾ. ಅಶೋಕ. ನರೋಡೆ

ಕನ್ನಡ ಪ್ರಾಧ್ಯಾಪಕರು, ಕಲಾ ಹಾಗೂ ವಾಣಿಜ್ಯ ಕಾಲೇಜು, ಮಹಾಲಿಂಗಪುರ

ಕನ್ನಡ ಸಾಹಿತ್ಯಾಧ್ಯಾಯನ ವಿಷಯದಲ್ಲಿ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ

೨೦೦೮

ಜಿ.ಬಿ. ಖಾಡೆ ಸಂಕಲಿತ ಜನಪದ ಸಾಹಿತ್ಯ

ಸಂಶೋಧಕರು:

ಶ್ರೀಮತಿ ಲಲಿತಾ. ಎಂ. ಕಲ್ಯಾಣಶೆಟ್ಟಿ

ಮಾರ್ಗದರ್ಶಕರು:

ಡಾ. ಅಶೋಕ. ನರೋಡೆ.

ಕನ್ನಡ ಪ್ರಾಧ್ಯಾಪಕರು,ಕಲಾ ಹಾಗೂ ವಾಣಿಜ್ಯ ಕಾಲೇಜು,ಮಹಾಲಿಂಗಪುರ

ಕನ್ನಡ ಸಾಹಿತ್ಯಾಧ್ಯಾಯನ ವಿಷಯದಲ್ಲಿ ಎಂ.ಫಿಲ್‌ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ

೨೦೦೮

ಪರಿವಿಡಿ

ಅನುಬಂಧಗಳು

೧. ಪರಾಮರ್ಶನ ಗ್ರಂಥಪಟ್ಟಿ

೨. ಜಿ.ಬಿ.ಖಾಡೆಯವರ ಸಾಹಿತ್ಯ ಕೃತಿಗಳು

೩. ಛಾಯಾಚಿತ್ರಗಳು

೪. ಪ್ರಶಸ್ತಿ ಪತ್ರಗಳು

೫. ವಂಶಾವಳಿ

೬. ಹಸ್ತಾಕ್ಷರ

ಪ್ರಮಾಣ ಪತ್ರ

"ಜಿ.ಬಿ. ಖಾಡೆ ಸಂಕಲಿತ ಜನಪದ ಸಾಹಿತ್ಯ" ಎಂಬ ಪ್ರಬಂಧವನ್ನು ಡಾ. ಅಶೋಕ ನರೋಡೆ. ಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ನಿರ್ದೇಶಕರು, ಶ್ರೀ. ಬಿ. ಆರ್. ದರೂರ. ಸಂಶೋಧನಾ ಕೇಂದ್ರ, ಹಾರೂಗೇರಿ, ಇವರ ಮೂಲಕ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನೂತನವಾಗಿದ್ದು, ಈ ಮೊದಲು ಎಲ್ಲಿಯೂ ಇಡಿಯಾಗಿ ಅಥವ ಬಿಡಿಯಾಗಿ ಪ್ರಕಟಣೆಗೊಂಡಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಲಲಿತಾ. ಎಂ. ಕಲ್ಯಾಣಶೆಟ್ಟಿ

ಸಂಶೋಧಕರು

ಬಿ. ಆರ್. ದರೂರ. ಸಂಶೋಧನಾ ಕೇಂದ್ರ,

ಹಾರೂಗೇರಿ.

ಸ್ಥಳ: ಹಾರೂಗೇರಿ

ದಿನಾಂಕ: ೧೨/೦೬/೦೮

ದೃಢೀಕರಣ ಪತ್ರ

"ಜಿ.ಬಿ. ಖಾಡೆ ಸಂಕಲಿತ ಜನಪದ ಸಾಹಿತ್ಯ" ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಶ್ರೀಮತಿ ಲಲಿತಾ. ಎಂ. ಕಲ್ಯಾಣಶೆಟ್ಟಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ನಿರ್ದೇಶಕರು, ಶ್ರೀ. ಬಿ. ಆರ್. ದರೂರ. ಸಂಶೋಧನಾ ಕೇಂದ್ರ, ಹಾರೂಗೇರಿ, ಇವರ ಮೂಲಕ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ನೂತನವಾಗಿದ್ದು, ಈ ಮೊದಲು ಎಲ್ಲಿಯೂ ಇಡಿಯಾಗಿ ಅಥವ ಬಿಡಿಯಾಗಿ ಪ್ರಕಟಣೆಗೊಂಡಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಅಶೋಕ ನರೋಡೆ.

ಮಾರ್ಗದರ್ಶಕರು

ಬಿ. ಆರ್. ದರೂರ. ಸಂಶೋಧನಾ ಕೇಂದ್ರ,

ಹಾರೂಗೇರಿ.

ಸ್ಥಳ: ಹಾರೂಗೇರಿ.

ದಿನಾಂಕ: 09/08/08

[illegible]

[illegible]

[illegible]

[illegible]

ಕೃತಜ್ಞತೆಗಳು

ಕನ್ನಡ ಸಾಹಿತ್ಯ ಅಧ್ಯಯನದಲ್ಲಿ ಆಸಕ್ತಿ ಹೊಂದಿರುವ ನಾನು, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರವಾದ ಹಾರೂಗೇರಿಯ ಶ್ರೀ ಬಿ.ಆರ್. ದರೂರ್ ಸಂಶೋಧನಾ ಕೇಂದ್ರದಲ್ಲಿ ಎಂ.ಫಿಲ್. ಪದವಿಯ ಅಧ್ಯಯನ ಕೈಗೊಂಡೆನು. ಕನ್ನಡ ಸಾಹಿತ್ಯದಲ್ಲಿ ವಿಶೇಷವಾಗಿ ಜಾನಪದ ಸಾಹಿತ್ಯದಲ್ಲಿ ಕೃಷಿ ಮಾಡಿ, ಅಲಕ್ಷಿತಗೊಂಡಿರುವ ಹಲವಾರು ಸಾಹಿತಿಗಳಿದ್ದಾರೆ. ಅಂಥವರು ಈ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಅನುಲಕ್ಷಿಸಿ, "ಜಿ.ಬಿ. ಖಾಡೆಯವರ: ಸಂಕಲಿತ ಸಾಹಿತ್ಯ" ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ದುಕೊಂಡೆ.

ನನ್ನ ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟ ಮುಧೋಳದ ಶ್ರೀ ಎಸ್. ಆರ್. ಕಂಠಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಎಚ್.ಎಸ್. ಪೂಜಾರ್ ಹಾಗೂ ಶ್ರೀ ಜಿ.ಎಂ. ಚನ್ನಪ್ಪಗೋಳ, ಬಾಗಲಕೋಟೆಯ ಶ್ರೀ ಬಿ.ವಿ.ವಿ. ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ ವೀರಣ್ಣ ಚರಂತಿಮಠ ಹಾಗೂ ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರಾದ ಶ್ರೀ ಸಿ.ಎಂ. ಅಥಣಿಯವರಿಗೆ ನನ್ನ ಕೃತಜ್ಞತೆಗಳು.

ಪ್ರಬಂಧವನ್ನು ಪೂರ್ಣಗೊಳಿಸುವಲ್ಲಿ ಮಾರ್ಗದರ್ಶಕರಾದ ಡಾ. ಅಶೋಕ ನರೋಡೆಯವರು ವಿಷಯಕ್ಕೆ ಸಂಬಂಧಿಸಿದ ಹಲವಾರು ಉಪಯುಕ್ತ ಮಾಹಿತಿಗಳನ್ನು ಮತ್ತು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಹೊಸ ಸಂಗತಿಗಳನ್ನು ಪರಾಮರ್ಶಿಸುವಲ್ಲಿ ಸಹಾಯ ಮಾಡಿದ್ದಾರೆ. ಅವರಿಗೆ ನನ್ನ ತುಂಬು ಹೃದಯದ ಧನ್ಯವಾದಗಳು.

ಅದೇ ರೀತಿಯಾಗಿ ಹಾರೂಗೇರಿಯ ಶ್ರೀ ಬಿ.ಆರ್. ದರೂರ್. ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ವ್ಹಿ.ಎಸ್. ಮಾಳಿ ಹಾಗೂ ಪ್ರಾಚಾರ್ಯರಾದ ಶ್ರಿ ಈರಣ್ಣ ಕೊಕಟನೂರ ಅವರಿಗೆ ನನ್ನ ನಮನಗಳು. ನನ್ನ ಕಲಿಕೆಯನ್ನು ಸದಾ ಪೋಷಿಸುತ್ತ ಬಂದಿರುವ ಮುರಘೇಶ, ವಿಶ್ವನಾಥ, ದಾನಮ್ಮ ಹಾಗೂ ನನ್ನ ತಾಯಿ, ಸಹೋದರರು, ನನ್ನ ಮಾವಂದಿರಾದ ಶ್ರೀ ಎಸ್.ಎಂ. ಬಿದರಿ ಹಾಗೂ ನನ್ನ ಬಾಳಸಂಗಾತಿ ಸೂರ್ಯಕಾಂತ, ಪುತ್ರ ಸುಮಿತ್ ಇವರ ಸಹಾಯವನ್ನು ಮರೆಯುವಂತಿಲ್ಲ.

ನನ್ನ ಅಧ್ಯಯನಕ್ಕೆ ಪೂರಕವಾದ ಗ್ರಂಥಗಳನ್ನು ಒದಗಿಸಿದ ಎಸ್.ಆರ್. ಕಂಠಿ ಪದವಿ ಮಹಾವಿದ್ಯಾಲಯದ ಮುಖ್ಯಗ್ರಂಥಪಾಲಕರಾದ ಶ್ರೀ ಎಸ್.ಎಸ್. ಕಿಣಗಿ ಹಾಗೂ ಡಾ. ಸಂಗಮೇಶ ಕಲ್ಯಾಣಿ, ಪ್ರೊ. ಜಿ.ಜಿ. ಕೋಟಿ, ಪ್ರೊ. ಶ್ರೀಮತಿ. ಜಿ.ಬಿ. ಆನೆಪ್ಪನವರ, ಪ್ರೊ. ಎಂ.ಎನ್. ತೋಟದ, ಪ್ರೊ. ಜವಳಗಿ. ಪ್ರೊ. ಎ.ಆರ್. ಜಿಗಜಿನ್ನಿ, ಪ್ರೊ. ಪಿ.ಬಿ. ಬಡಿಗೇರ ಗುರುಗಳಿಗೂ ನನ್ನ ವಂದನೆಗಳು. ಹಾಗೆಯೇ ಪ್ರಬಂಧ ರಚನೆಗೆ ಉಪಯುಕ್ತ ಮಾಹಿತಿಗಳನ್ನು ನೀಡಿದ ಡಾ.ರೆಹಮತ್ ತರಿಕೇರಿ, ಡಾ.ರಮೇಶ ನಾಯಕ, ಡಾ.ಸುರೇಶ ಅಂಗಡಿ, ಡಾ. ವಿರಕ್ತಮಠ, ಡಾ. ಗಾಯಕವಾಡ. ಡಾ. ಪ್ರಕಾಶ ಖಾಡೆ. ಡಾ. ಗುರುಪಾದ ಮರೆಗುದ್ದಿ ಇವರಿಗೂ ಕೂಡ ನಾನು ಚಿರಋಣಿ.

ಪ್ರಬಂಧವನ್ನು ಅಚ್ಚುಕಟ್ಟಾಗಿ ಮುದ್ರಣ ಮಾಡಲು ಸಹಾಯ ಮಾಡಿದ ಮುಧೋಳದ ವರದಾನೇಶ್ವರಿ ಗ್ರಾಫಿಕ್ಸನ ಎಸ್.ಎಸ್. ಬಗಟಿ, ಐಡಿಯಲ್ ಅಕಾಡೆಮಿಯ ಶ್ರೀ ಮುತ್ತು ಮಠ ಹಾಗೂ ಈಶ್ವರ ಹಿರೇಮಠ, ಶ್ರೀ ಮಾತೃಛಾಯಾ ಗ್ರಾಫಿಕ್ಸ, ಮುಧೋಳ ಅವರಿಗೂ ನನ್ನ ವಂದನೆಗಳು.

ಸಂಶೋಧನೆಯ ಸಂದರ್ಭದಲ್ಲಿ ಹಲವು ರೀತಿ ಸಹಾಯ ಮಾಡಿದ ಶ್ರೀ ಘಟನಟ್ಟಿ ಹಾಗೂ ಶೋಭಾ ಕೊಕಟನೂರ್ ಮತ್ತು ನಂದಾ ಪಾಟೀಲರವರಿಗೂ ನನ್ನ ನಮನಗಳು.

ಲಲಿತಾ ಕಲ್ಯಾಣಶೆಟ್ಟಿ

[illegible]

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

೧.೧ ಪ್ರವೇಶ

ಆಧುನಿಕ ಬದುಕು ಜಾಗತೀಕರಣಕ್ಕೆ ಒಳಗಾಗಿ ಯಾಂತ್ರಿಕವಾಗಿದೆ. ಜಾಗತೀಕರಣ ಬಿಟ್ಟು ಬದುಕಲು ಸಾಧ್ಯವಾಗುತ್ತಿಲ್ಲ. ನಾಲ್ಕು ದಶಕಗಳ ಹಿಂದೆ ಅವಿಭಕ್ತ ಕುಟುಂಬಗಳಿದ್ದವು. ಒಕ್ಕಟ್ಟು ಮನೆ ಮಾಡಿ ಜನಪದ ಸಂಸ್ಕೃತಿ ಹಾಸು ಹೊಕ್ಕಾಗಿತ್ತು. ಆದರೆ ಇಂದು ತಾನು, ತನ್ನ ಹೆಂಡತಿ ಹಾಗೂ ಮಕ್ಕಳಿಗೆ ಸೀಮಿತವಾದ ಚಿಕ್ಕ ಕುಟುಂಬಗಳಿವೆ. ಎಷ್ಟೋ ಬಾರಿ ಕುಟುಂಬದ ಸದಸ್ಯರು ಪರಕೀಯರಾಗಿದ್ದಾರೆ. ಅವಿಭಕ್ತ ಕುಟುಂಬದಲ್ಲಿದ್ದ ಬಾಂಧವ್ಯ ಇಂದು ಮಾಯವಾಗಿದೆ. ಮನೆತನದ ಗೌರವ ಹೆಚ್ಚಿಸಲು, ನೆಮ್ಮದಿಯ ಬದುಕು ಸಾಗಿಸಲು ಪ್ರತಿಯೊಬ್ಬರೂ ದುಡಿಯಬೇಕಾದದ್ದು ಅನಿವಾರ್ಯವಾಗಿ ಪರಿಣಮಿಸಿದೆ.

ಮನುಷ್ಯನ ಜೀವನಕ್ಕೆ ನೆಮ್ಮದಿ ಬರುವುದು ಪ್ರಾಮಾಣಿಕ ಪ್ರೀತಿಯಿಂದ ಮಾತ್ರ. ಕುಟುಂಬದ ಸದಸ್ಯರು ಪ್ರೀತಿ–ವಿಶ್ವಾಸಗಳಿಂದ ಬದುಕಿದರೆ ಅರ್ಥ ಉಂಟು; ತತ್ವವುಂಟು. ಪ್ರೀತಿಯನ್ನು ಬಿಟ್ಟು ಸಿಟ್ಟು, ಅಸೂಯೆ, ದ್ವೇಷಗಳನ್ನೇ ಅಳವಡಿಸಿಕೊಂಡರೆ, ಜೀವನ ದುಸ್ತರವಾಗುವುದು. ಜೀವನದಲ್ಲಿ ಸುಖ–ದುಃಖ ಸ್ವಾಭಾವಿಕ. ನಮ್ಮ ಜನಪದ ಕವಿಗಳು ಮಾರ್ಮಿಕವಾಗಿ ಹೇಳಿದ್ದಾರೆ.

"ಚಿಂತಿ ಮಾಡಲಿಬ್ಯಾಡ ಛಿ ಹುಚ್ಚಿ ಹಡೆದವ್ವ
ಚಿಂತ್ಯಾಗ ಕಾಯ ಇಳಿತಾರ ಪಾಂಡವರು
ಅಂಥವರಿಗುಂಟ ವನವಾಸ"[೧]

ಎನ್ನುವಲ್ಲಿ ದೇವತಾ ಪುರುಷರೆನಿಸಿಕೊಂಡಿರುವ ಪಾಂಡವರು ದುಃಖದಿಂದ ಬಳಲಿದ್ದಾರೆ. ಅವರ ದುಃಖದ ಮುಂದೆ; ನಮ್ಮ ದುಃಖ ದೊಡ್ಡವಲ್ಲವೆಂದು ಬೋಧಿಸಿ ಜೀವನ ಸಾಗಿಸಲು ಸಿದ್ಧರಾಗಬೇಕೆಂದು ಉಪದೇಶಿಸುವ ಗರತಿಯ ಹಾಡು ತುಂಬಾ ಮಾರ್ಮಿಕವಾಗಿದೆ.

೧, ಗರತಿಯ ಹಾಡು, ಪುಟ– ೧೭೬

[illegible]

[illegible]

[illegible]

[illegible]

[illegible]

[illegible]

'ಪ್ರೀತಿ' ಎಂಬ ವಸ್ತು ಯಾರ ಸೊತ್ತೂ ಅಲ್ಲ. ಬಡತನ ಶ್ರೀಮಂತಿಕೆಗಳು ಅದಕ್ಕೆ ಅಡ್ಡ ಬರಲಾರವು. ಆದರೆ ಅದನ್ನು ಉಳಿಸಿಕೊಂಡು ಬಳಸಿಕೊಳ್ಳುವ ಕಲೆ ಗೊತ್ತಿರಬೇಕು. ಬಡತನದಲ್ಲಿರುವ ಗಂಡ ಹೆಂಡತಿಯರು ಪ್ರೀತಿಯಿಂದ ಬಾಳ್ವೆ ಸಾಗಿಸುತ್ತಿರುವುದನ್ನು ಕಾಣಬಹುದು. ಗಂಡನಾದವನು ಎಂಥ ಕೆಲಸವನ್ನಾದರೂ ಮಾಡಲಿ ಅವನು ತನಗೆ ಪ್ರೀತಿಯ ಧಾರೆಯನ್ನು ಎರೆಯುತ್ತಾನೆಂದು ಹೆಂಡತಿ ಹೇಳುವ ಮಾತನ್ನು ನೋಡಬಹುದು.

"ಕೂಲಿ ಮಾಡಿದರೇನ ಕೋರಿ ಹೊತ್ತರೇನ
ನನಗ ನನಗಂಡ ಬಡವೇನ । ಬಂಗಾರ
ಮಾಲ ಇದ್ದಂಗ ಮನಿಯಾಗ"[೨]

ಇಲ್ಲಿ ಗಂಡ-ಹೆಂಡಿರ ಪ್ರೀತಿಯ ನೆಲೆಗಟ್ಟು ಎಷ್ಟು ಗಟ್ಟಿಯಾಗಿದೆ ಎಂಬುದನ್ನು ಗುರತಿಸಬಹುದು. ಮೂರೇ ಮೂರು ಸಾಲಿನ ಪದ್ಯದಲ್ಲಿ ಜೀವನದ ಸತ್ವವನ್ನೇ ನಮ್ಮ ಜನಪದ ಕವಿಗಳು ತುಂಬಿರುವುದನ್ನು ಕಾಣುತ್ತೇವೆ. "ಆಡು ಭಾಷೆಯನ್ನು ಸಾಹಿತ್ಯಮಟ್ಟಕ್ಕೇರಿಸಿ, ತಮ್ಮ ಅನುಭವಗಳನ್ನು ಇತರರಿಗೆ ಉಣಬಡಿಸಿದ್ದಾರೆ. ತಮಗೊದಗಿದ ಸುಖ-ದುಃಖ ಆಶೆ-ನಿರಾಶೆ, ಹಾಸ್ಯ-ಲಾಸ್ಯ ಬೇಕು-ಬೇಡಗಳು ಮುಂತಾದವುಗಳನ್ನು ತಮಗೆ ತೋಚಿದಂತೆ ಅಂದರೆ ಹಾಡು, ಗಾದೆ, ನಾಣ್ಣುಡಿ, ಕಥೆ, ಆಟ ಪಾಠಗಳ ಮುಖಾಂತರ ಪ್ರಕಟಪಡಿಸಿರುವುದನ್ನು ಕಾಣಬಹುದಾಗಿದೆ.

ನಿಜವಾಗಿ ನೋಡಿದರೆ ಜನಪದ ಸಾಹಿತ್ಯ ಎಂಬುದೆಲ್ಲಿ ಇರುವುದೋ ಅಲ್ಲಿ ಸಾಹಿತ್ಯದ ಮೂಲ ಬೇರು ಇದ್ದೇ ಇರುವುದು. ಪಂಪ, ರನ್ನ ಜನ್ನ, ಡಾಂಟೆ, ಷೆಕ್ಸ್‌ಪೀಯರ, ಡಾಲ್ಟನ್ ಮುಂತಾದ ಎಲ್ಲ ಹಿರಿಯ ಕವಿಗಳು ಜಾನಪದ ಸಾಹಿತ್ಯದ ಕೂಸುಗಳಾಗಿದ್ದಾರೆ. ಜಾನಪದ ಸಾಹಿತ್ಯವನ್ನು ಹೆಣ್ಣು ಗಂಡು ಮಕ್ಕಳೆಲ್ಲರೂ ನಿರ್ಮಿಸಿದವರಾಗಿದ್ದರೂ ಸಹಿತ ಹೆಚ್ಚಿನ ಭಾಗ ಮಹಿಳೆಯರಿಗೆ ಸಲ್ಲುತ್ತದೆ. ಆದ್ದರಿಂದ "ಗರತಿ ಸಾಹಿತ್ಯದ ವರತಿ' ಎನಿಸಿಕೊಂಡಿದ್ದಾಳೆ. ಇದರೊಂದಿಗೆ ಹೇಳಬೇಕೆಂದರೆ 'ಗರತಿ ಸಾಹಿತ್ಯದ ಒಡತಿ' 'ಗರತಿ ಸಾಹಿತ್ಯದ ಗೌಡತಿ' ಎಂದು ಹೇಳಿದರೂ ತಪ್ಪಾಗಲಾರದು"[೩]. ನಮ್ಮ ದೇಶದ ಎಲ್ಲ ರಾಜ್ಯಗಳಲ್ಲಿಯೂ ಜಾನಪದ ಸಾಹಿತ್ಯ ಹರಡಿದ್ದರೂ ಕನ್ನಡ ನಾಡಿನ ಜಾನಪದ ಸಾಹಿತ್ಯ ಆಳವಾದುದು ಮತ್ತು ವಿಸ್ತಾರವಾದುದು. ಇಂಥ ಸಾಹಿತ್ಯ "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್"[೪] ಎಂಬ ಶ್ರೀ ವಿಜಯನ ವಾಕ್ಯವು ಸತ್ಯವೆನಿಸುವಷ್ಟರ ಮಟ್ಟಿಗೆ ನಾಡಿನ ಜನಪದ ಸಾಹಿತ್ಯ ಬೆಳೆದು ಬಂದಿದೆ.

ಶಿಷ್ಟ ಕವಿಗಳು ಜಾನಪದ ಸಾಹಿತ್ಯಕ್ಕೆ ಋಣಿಯಾಗಿದ್ದಾರೆ "ಜನವಾಣಿ ಬೇರು, ಕವಿವಾಣಿ ಹೂವು" ಎಂಬ ಬಿ.ಎಂ.ಶ್ರೀ ಯವರ ಮಾತು ಈ ಸಾಹಿತ್ಯಕ್ಕೆ ಅನ್ವಯಿಸುತ್ತದೆ. ಇದು ತಿಣುಕಿ ಬರೆದಂತಹ ಸಾಹಿತ್ಯವಲ್ಲ. ಜಾನಪದ ಸಾಹಿತ್ಯವನ್ನು ನಿರ್ಮಾಣ ಮಾಡಿದವರು ಯಾರೊ?

---

೨. ಗರತಿಯ ಹಾಡು, ಪುಟ-೮೩.

೩. ಬಂಗಾರದ ಹುರಿಗೆಜ್ಜಿ ನುಡಿದಾವ, ಎಸ್. ಎಮ್. ಬಿದರಿ, ಪುಟ-೫೫.

೪. ಕವಿರಾಜಮಾರ್ಗಂ, ಶ್ರೀ ವಿಜಯ, ಪುಟ-೧-೩೮.

ಏನೊ? ಹೆಸರಿಲ್ಲದ, ಹೆಸರೊಲ್ಲದ ನೂರಾರು, ಸಾವಿರಾರು ಅನಾಮಧೇಯ ಕವಿಗಳಿಂದ ಈ ಸಾಹಿತ್ಯ ನಿರ್ಮಾಣವಾಗಿದೆ. ಹಾಡುವಾಗ, ನಾನೇ ರಚಿಸಿದೆ ಎಂಬ ಅಹಂಭಾವ ಇದ್ದರೂ ಕೆಲವೇ ಕ್ಷಣಗಳಲ್ಲಿ ಹಾಡು ಸಾರ್ವಜನಿಕ ಸ್ವತ್ತಾಗುತ್ತದೆ.

ಇಂಥ ಸ್ಥಳದಲ್ಲಿಯೇ ಈ ಸಾಹಿತ್ಯ ನಿರ್ಮಾಣ ಮಾಡಬೇಕೆಂಬ ನಿರ್ಬಂಧತೆಯೂ ಇವರಿಗಿಲ್ಲ. ಉಳುವಾಗ, ನಡೆಯುವಾಗ, ಬೀಜ ಬಿತ್ತುವಾಗ, ಕಳೆ ಕೀಳುವಾಗ, ತೆನೆ ಕೊಯ್ಯುವಾಗ, ಕೊಯ್ದ ತೆನೆಯನ್ನು ಕಣಕ್ಕೆ ಹಾಕುವಾಗ, ತುಳಿಸುವಾಗ, ಬೀಸುವಾಗ, ಕುಟ್ಟುವಾಗ, ರೊಟ್ಟಿ ಮಾಡುವಾಗ, ಕಟ್ಟೆಗೆ ಕುಳಿತಾಗ, ಮಕ್ಕಳನ್ನು ಆಡಿಸುವಾಗ, ಮದುವೆಯಲ್ಲಿ ನಗುವಾಗ, ಸತ್ತಾಗ ಅಳುವಾಗ, ಕ್ರಿಯಾತ್ಮಕವಾಗಿರುವಾಗ ಸಾಹಿತ್ಯ ನಿರ್ಮಾಣವಾಗಿದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಜೀವನದ ಪ್ರತಿಯೊಂದು ರಂಗವೂ ಇದರ ಸಾಮಗ್ರಿಯಾಗಿದೆ. ಇಂಥ ಸಾಹಿತ್ಯವನ್ನು ಯಾರೂ ಬರೆದಿಡಲು ಅಥವಾ ಆಳವಾಗಿ ಅಭ್ಯಾಸ ಮಾಡಲು ಸಿದ್ಧರಾಗದಿರುವುದು ಶೋಚನೀಯವಾಗಿದೆ. ಆದಾಗ್ಯೂ ಇದು ತಲೆಯಿಂದ ತಲೆಗೆ, ಎದೆಯಿಂದ ಎದೆಗೆ, ಬಾಯಿಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹೆಚ್ಚಾಗಿ ಹೃದಯದಿಂದ ಹೃದಯಕ್ಕೆ ಸಾಗಿ ಬಂದ ವಿಶಿಷ್ಟವಾದ ಸಾಹಿತ್ಯವಿದಾಗಿದೆ.

ಹಾಡಿದವರು ತಾಳೆ-ಓಲೆಗಳಲ್ಲಿ ಬರೆದಿಡಲು ಬಯಸಿಲ್ಲ. ರಾಜ-ಮಹಾರಾಜರಿಂದ ದಾನ, ಮಾನ, ಸನ್ಮಾನ ಪಡೆದಿಲ್ಲ. ಅವುಗಳ ಅವಶ್ಯಕತೆಯೂ ಅವರಿಗಿರಲಿಲ್ಲ. ವ್ಯಾಕರಣದ ಅಭ್ಯಾಸದ ಅನುಭವ ಇಲ್ಲವಾಗಿದ್ದರೂ ಅವರು ರಚಿಸಿದ ಪದ್ಯ ನೋಡಿದಾಗ ಛಂದಸ್ಸು ತಾನಾಗಿಯೇ ಮೂಡಿ ಬಂದುದು ವಿಶೇಷವಾಗಿದೆ. ಸಾಮಾನ್ಯವಾಗಿ ತ್ರಿಪದಿ ರೂಪದಲ್ಲಿ ಗೋಚರಿಸಿರುವುದು ಸ್ಪಷ್ಟವಾಗಿದೆ.

"ತ್ರಿಪದಿಯು ಕನ್ನಡ ಕಾವ್ಯದ ಗಂಗೋತ್ರಿಯಾಗಿದೆ" ಕನ್ನಡ ಭಾಷೆಯ ಅಚ್ಚಗನ್ನಡ ಛಂದಸ್ಸಾಗಿದೆ. ತ್ರಿಪದಿಯ ಮುಖ್ಯ ಲಕ್ಷಣವಾದ "ರಶದಶ ಸ್ಥಾನದೊಳ್ ಬ್ರಹ್ಮಗಣ ಬರ್ಕುಂ" ಅಂದರೆ ೬ ಮತ್ತು ೧೦ನೇ ಸ್ಥಾನಗಳಲ್ಲಿ ಬ್ರಹ್ಮಗಣ ಬರಲೇಬೇಕು. ಅದು ಅವರಿಗೆ ಗೊತ್ತಿಲ್ಲದಿದ್ದರೂ ಅವರ ತ್ರಿಪದಿಗಳಲ್ಲಿ ಬಂದಿದ್ದು ಗಮನಾರ್ಹವಾದ ಸಂಗತಿಯಾಗಿದೆ.

"ಈ ಸಾಹಿತ್ಯದ ಬಹುಭಾಗ ಹೆಣ್ಣು ಮಕ್ಕಳಿಂದ ನಿರ್ಮಾಣವಾಗಿರುವುದರಿಂದ ಒಲವಿದೆ. ಬಲವಿದೆ, ಕಲೆಯಿದೆ, ಚೆಲುವಿದೆ, ಛಲವಿದೆ, ಸರ್ವಾಕರ್ಷಕ ಶಕ್ತಿಯಿದೆ. ನಮ್ಮ ಸಂಸ್ಕೃತಿಯ ಪಡಿನೆಳಲನ್ನು ಈ ಸಾಹಿತ್ಯದಲ್ಲಿ ಕಾಣಬಹುದಾಗಿದೆ. "[೫]

ಹೊಟ್ಟೆಯಲ್ಲಿ ಕೂಸು ಮೂಡಿದಾಗಿನಿಂದ ಆರಂಭವಾದ ಈ ಸಾಹಿತ್ಯ, ಸತ್ತು ಹದಿಮೂರು ದಿನಗಳವರೆಗೆ ಮುಂದುವರಿಯುತ್ತದೆ. ಜೀವನದ ಎಲ್ಲ ರಂಗಗಳನ್ನು ಈ ಸಾಹಿತ್ಯ ಪಡೆಮೂಡಿಸುವುದು.

---

೫ . ಬಂಗಾರದ ಹುರಿಗೆಜ್ಜಿ ನುಡಿದಾವ, ಎಸ್. ಎಂ. ಬಿದರಿ, ಪುಟ-೫.

ಇಂಥ ವೈವಿಧ್ಯಮಯವಾದ ಸಾಹಿತ್ಯವನ್ನು ಉಳಿಸಲು ಪ್ರಯತ್ನಪಟ್ಟವರು ಸಾಕಷ್ಟುಂಟು. ಮೊದಲಿಗೆ ಜನಪದ ಸಾಹಿತ್ಯವನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಹಲಸಂಗಿ ಗೆಳೆಯರು. ಅವರಲ್ಲಿ ಮಧುರಚೆನ್ನ, ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ, ಧೂಲಾ ಸಾಹೇಬರು ಮುಂತಾದವರು. ಡಾ. ಬಿ.ಎಸ್. ಗದ್ದಗಿಮಠ. ಜನಪದ ಸಾಹಿತ್ಯದಲ್ಲಿ ಮೊದಲ ಪಿ.ಎಚ್.ಡಿ ಪದವಿ ಪಡೆದವರಾಗಿದ್ದು, ತದನಂತರದಲ್ಲಿ ಈ ಸಾಹಿತ್ಯವನ್ನು ಹಿಡಿದಿಡುವಲ್ಲಿ ಜೀ.ಶಂ. ಪರಮಶಿವಯ್ಯ, ಕರೀಂಖಾನ್, ಡಾ. ಎಚ್.ಎಲ್. ನಾಗೇಗೌಡ, ಡಾ. ಸೋಮಶೇಖರ ಇಮ್ರಾಪುರ, ಚಂದ್ರಶೇಖರ ಕಂಬಾರ, ಜಿ.ಬಿ.ಖಾಡೆ, ಶಿವಯೋಗಿ ಬಿದರಿ, ಡಾ. ಎಂ.ಎನ್. ವಾಲಿ, ಡಾ. ಸಂಗಮೇಶ ಬಿರಾದಾರ, ಪ್ರಾ. ಜ್ಯೋತಿ ಹೊಸೂರ, ಡಾ. ನಿಂಗಣ್ಣ ಸಣ್ಣಕ್ಕಿ, ಡಾ. ಶ್ರೀರಾಮ ಇಟ್ಟಣ್ಣವರ ಮುಂತಾದವರನ್ನು ಇಲ್ಲಿ ಹೆಸರಿಸಬಹುದು.

ಜನಪದ ಸಾಹಿತ್ಯ ಸಂಕಲನ ಎಂಬುದು ಕಷ್ಟಕರವಾದ ಕೆಲಸ. ಸಂಕಲನ ಮಾಡುವಾಗ ಮೂಲ ವಿಚಾರಕ್ಕೆ ಹಾಗೂ ವಿಷಯಕ್ಕೆ ಧಕ್ಕೆ ಬರದ ಹಾಗೆ ನೋಡಿಕೊಳ್ಳುವುದು ಅಷ್ಟೇ ಮಹತ್ವದ್ದಾಗಿದೆ. ಇದು ಗ್ರಾಮೀಣ ಪ್ರದೇಶದಲ್ಲಿ ಲಭ್ಯವಾಗುವ ಸಾಹಿತ್ಯವಾದುದರಿಂದ ಅವರಿದ್ದಲ್ಲಿಗೆ ಹೋಗಿ ಸಂಕಲನ ಮಾಡಬೇಕು. ಕ್ಷೇತ್ರಕಾರ್ಯ ಅನಿವಾರ್ಯ, ಅಗತ್ಯವಾಗಿದೆ. ಇಂಥ ಗುರುತರವಾದ ಕೆಲಸವನ್ನು ಶ್ರೀಯುತ ಜಿ.ಬಿ.ಖಾಡೆಯವರು ಮಾಡಿರುವುದು ಅಭಿನಂದನೀಯವಾಗಿದೆ. ಅವರ ಸಂಗ್ರಹವನ್ನು ಮೈಸೂರು ವಿಶ್ವವಿದ್ಯಾಲಯದಿಂದಲೂ, ಕನ್ನಡ ಸಾಹಿತ್ಯ ಪರಿಷತ್ತಿನಿಂದಲೂ ಪ್ರಕಟಿಸಿರುವುದು ಅವರ ಕಾರ್ಯತತ್ಪರತೆಗೆ ಹಿಡಿದ ಕನ್ನಡಿಯಾಗಿದೆ. ಅವರ ಪುಸ್ತಕಗಳು ಕನ್ನಡ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳಾಗಿರುವುದು ಅವರ ವಿದ್ವತ್ತಿಗೆ ಸಿಕ್ಕ ಪುರಸ್ಕಾರ.

೧.೨. ಅಧ್ಯಯನದ ಉದ್ದೇಶ:

ವಿಶ್ವದಷ್ಟೇ ವಿಶಾಲವಾದ, ಸಾಗರದಷ್ಟೇ ಆಳವಾದ, ಅಮೃತ ಸದೃಶವಾದ ಜಾನಪದ ಕ್ಷೇತ್ರ, ಸಂಶೋಧಕರಿಗೆ ತುಂಬಾ ಆಸಕ್ತಿ ಕೆರಳಿಸುವ ವಿಷಯ. ಗ್ರಂಥಸ್ಥವಲ್ಲದ, ಮೌಕಿಕ ಸಂಪ್ರದಾಯದ ಜನಪದ ಸಾಹಿತ್ಯವು ಪ್ರಥಮವಾಗಿ ಬರಹ ರೂಪದಲ್ಲಿ ನಮಗೆ ಕಂಡುಬರುವುದು ೭ನೇ ಶತಮಾನದ ಬಾದಾಮಿಯ ಕಪ್ಪೆ ಆರಭಟ್ಟನ ಶಿಲಾಶಾಸನದ ತ್ರಿಪದಿಗಳಲ್ಲಿ. "ರಾಜ್ಯದ ಅಥವಾ ರಾಷ್ಟ್ರೀಯ ಜೀವನ ದಾಖಲೆ ಇತಿಹಾಸವಾದರೆ, ಜನಪದ ಸಾಹಿತ್ಯವು ಪ್ರಾಗೈತಿಹಾಸಿಕ ಜೀವನದ ಪರಂಪರಾಗತ ಸಂಗತಿಯಾಗಿದೆ"[೬] ಎಂಬ ಜೇಮ್ಸ್ ಹೇಸ್ಟಿಂಗ್ಸರ ಮಾತುಗಳು ಸ್ಮರಣೀಯ. ಜನಪದ ಸಂಶೋಧಕರಿಗೆ ಭಾರತ ಒಂದು ಮಹಾಸಾಗರ ಇದ್ದ ಹಾಗೆ. ಅದರಲ್ಲಿಯೂ ವಿಜಾಪುರ ಜಿಲ್ಲೆಯಲ್ಲಿರುವಷ್ಟು ಗಂಡು ಭಾಷೆಯ ಜನಪದ ಸಾಹಿತ್ಯ ಬೇರೆಲ್ಲಿಯೂ ದೊರೆಯುವದಿಲ್ಲ.

---

೬. ಕಲ್‌ಸಕ್ಕರಿ, ಸ್ಮರಣ ಸಂಚಿಕೆ,ವಿಜಾಪುರ ಜಿಲ್ಲಾ ೭ನೇ ಸಾಹಿತ್ಯ ಸಮ್ಮೇಳನ,ಪುಟ–೮.

ಅಷ್ಟೊಂದು ಸಮೃದ್ಧವಾಗಿದೆ. ಜೀವನದ ವಿವಿಧ ಮುಖಗಳನ್ನು ತುಂಬಿಕೊಂಡ ಈ ಸಾಹಿತ್ಯದ ಕಸುವು-ಕುಸುರಿಗೆ ವಿದೇಶಿಯರು ಮಾರು ಹೋದರು. ಅಂತೆಯೇ ಜನಪದ ಸಂಗ್ರಹ ಹಾಗೂ ಅಧ್ಯಯನದತ್ತ ಆಸಕ್ತಿ ವಹಿಸಿದವರು ಅಂಗ್ಲ ಆಡಳಿತಗಾರರು, ಪಾಶ್ಯಾತ್ಯ ವಿದ್ವಾಂಸರು ಮತ್ತು ಕ್ರೈಸ್ತಧರ್ಮ ಪ್ರಚಾರಕರು. ಕರ್ನಾಟಕದಲ್ಲಿ ಜಾನಪದ ಸಾಹಿತ್ಯ ಸಂಗ್ರಹಕಾರರಲ್ಲಿ "ಫ್ಲೀಟ್" ಹೆಸರು ಅಜರಾಮರವಾಗಿದೆ. ಇವರೇ ಈ ಕ್ಷೇತ್ರದ ಪಿತಾಮಹರೆನ್ನುವರು. ಹಾಗೆಯೇ ಮಾಸ್ತಿ, ರಾವ್‌ಬಹದ್ದೂರ, ಹಲಸಂಗಿ ಗೆಳೆಯರ ಬಳಗ, ಡಾ. ಕಾರಂತ ಹಾಗೆ ಅಜ್ಞಾತವಾಗಿ ಉಳಿದಿದ್ದ ಅಪಾರವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪರಿಶೀಲಿಸಿ ಪ್ರಕಟಿಸುವಲ್ಲಿ ಅದ್ವಿತೀಯ ಕಾರ್ಯಗೈದವರಲ್ಲಿ ಜಿ.ಬಿ.ಖಾಡೆಯವರೂ ಒಬ್ಬರು.

ಚಿಕ್ಕಂದಿನಿಂದಲೂ ತಮ್ಮ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಕಲಾವಿದರೊಡನೆ ಬಯಲಾಟಗಳಲ್ಲಿ ಬಣ್ಣ ಹಾಕಿ ಗೆಜ್ಜೆ ಕಟ್ಟಿ ಕುಣಿದ ಜಿ.ಬಿ.ಖಾಡೆ ಅವರು ಜಾನಪದ ಲೋಕಕ್ಕೆ ವಿಶೇಷವಾದ ಸ್ಥಾನಮಾನವನ್ನು ಕಲ್ಪಿಸಿದವರು. ಕನ್ನಡ ವಿದ್ವತ್ ಪ್ರಪಂಚದಲ್ಲಿ ಇದೀಗ ಜಾನಪದ ಸಾಹಿತ್ಯದ ಸಂಪಾದನೆ, ಸಂಗ್ರಹ ಹಾಗೂ ಪ್ರಕಟನೆಯ ಕಾರ್ಯ ಭರಾಟೆಯಿಂದ ಸಾಗಿದೆ. ವಿಶ್ವವಿದ್ಯಾಲಯಗಳಲ್ಲಿ 'ಜಾನಪದ ಅಧ್ಯಯನ' ವಿಭಾಗವು ಇಂದು ಶಾಸ್ತ್ರೀಯವಾಗಿ ಅಧ್ಯಯನವನ್ನು ಆರಂಭಿಸಿದೆ. ವ್ಯಕ್ತಿಗತ ನೆಲೆಯಲ್ಲಿ ಹಾಗೂ ಸಾಂಸ್ಥಿಕ ನೆಲೆಗಳಲ್ಲಿ ಕೂಡ ಜಾನಪದ ಸಾಹಿತ್ಯವನ್ನು ಅತ್ಯಂತ ಗಂಭೀರವಾಗಿ ಅಧ್ಯಯನಿಸುವ ಪರಿಪಾಠವಿದೆ. ಆದರೆ ಈ ವಲಯದಿಂದ ದೂರ ಉಳಿದ, ವಿಶ್ವವಿದ್ಯಾಲಯಗಳೆಂದರೆ ಗೊತ್ತಿಲ್ಲದ, ಯಾವುದೇ ಫಲಾಫಲದ ಅಪೇಕ್ಷೆಯಿಲ್ಲದೆ, ತಮ್ಮ ಪಾಡಿಗೆ ತಾವು 'ಹವ್ಯಾಸ'ಕ್ಕಾಗಿ ಜನಪದ ಸಾಹಿತ್ಯದ ಸಂಕಲನಗಳನ್ನು ಹೊರತಂದವರು ಹಳ್ಳಿ-ಹಳ್ಳಿಗಳಲ್ಲಿ ಚೆಲ್ಲುವರೆದಿದ್ದಾರೆ. ವಿದ್ವತ್‌ಪೂರ್ಣ ಹಾಗೂ ಅಧ್ಯಯನಶೀಲ ಸಂಕಲನಗಳ ಅಧ್ಯಯನ ಅಕಾಡಿಮೆಕ್ ವಲಯದಲ್ಲಿ ಚರ್ಚೆಗೊಳಗಾಗುತ್ತದೆ. ಅದರಿಂದ ದೂರವಿರುವ ಹವ್ಯಾಸಿ ಸಂಕಲಿತ ಸಾಹಿತ್ಯವು ಸಂಶೋಧನಾ ವಲಯದಿಂದ ಹೊರಗುಳಿಯಬಾರದೆಂಬ ಕಾರಣದಿಂದಾಗಿ 'ಜಿ.ಬಿ. ಖಾಡೆಯವರ ಸಂಕಲಿತ ಸಾಹಿತ್ಯ'ವನ್ನು ಅಧ್ಯಯನಿಸುವುದು ಈ ಪ್ರಬಂಧದ ಪ್ರಮುಖ ಉದ್ದೇಶವಾಗಿದೆ.

೧.೩ ಪ್ರಬಂಧದ ಸ್ವರೂಪ:

ಪ್ರಸ್ತುತ ಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಿವೆ. ಮೊದಲ ಅಧ್ಯಾಯದಲ್ಲಿ ಪ್ರಬಂಧದ ಉದ್ದೇಶ ಮತ್ತು ಸ್ವರೂಪ ನಿರೂಪಿಸಲಾಗಿದೆ. ಅಧ್ಯಾಯ ಎರಡರಲ್ಲಿ ಕನ್ನಡ ಸಾಹಿತ್ಯದಲ್ಲಿ ಜಾನಪದ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಅವಲೋಕಿಸುತ್ತ ಪ್ರಾತಿನಿಧಿಕವೆನಿಸುವ ಜಾನಪದ ಕೃತಿಗಳನ್ನು ಪರಿಶೀಲಿಸಿ; ಅವುಗಳ ಆಶಯವನ್ನು ಸ್ಥೂಲವಾಗಿ ವಿವೇಚಿಸಲಾಗಿದೆ.

[illegible]

[illegible]

ಅಧ್ಯಾಯ ಮೂರರಲ್ಲಿ ಜಿ.ಬಿ. ಖಾಡೆ ಸಂಕಲಿತ ಸಾಹಿತ್ಯವನ್ನು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಜನಪದ ಪದ್ಯ ಸಂಕಲನ ಹಾಗೂ ಜನಪದ ಗದ್ಯ ಸಂಕಲನಗಳೆಂದು ವಿಭಾಗಿಸಿ ಅಧ್ಯಯನಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮೂಲವಸ್ತುವನ್ನು ಸಮಾಜದಿಂದಲೇ 'ಬಳುವಳಿ'ಯಾಗಿ ಪಡೆದು, ಅದಕ್ಕೆ ತನ್ನದೇ ಅಭಿವ್ಯಕ್ತಿ ನೀಡುವುದನ್ನು ಸ್ಥೂಲವಾಗಿ 'ಸಂಗೋಪನ ಸಾಹಿತ್ಯ'ವೆಂದು ಈ ಹಿನ್ನೆಲೆಯಲ್ಲಿ ಜಿ.ಬಿ. ಖಾಡೆಯವರ ಸಂಗೋಪನ ಸಾಹಿತ್ಯವನ್ನು ಪರಿಶೀಲಿಸಲಾಗುವುದು.

ಐದನೆಯ ಅಧ್ಯಾಯದಲ್ಲಿ ಜನಪದ ಸಂಕಲಿತ ಸಾಹಿತ್ಯಕ್ಕೆ ಖಾಡೆಯವರ ಕೊಡುಗೆ, ಅವರ ವೈಶಿಷ್ಟ್ಯವನ್ನು ಚರ್ಚಿಸಲಾಗುವುದು. ಆರನೆಯ ಅಧ್ಯಾಯವೇ ಸಮಾರೋಪವಾಗಿದೆ. ಈವರೆಗೆ ಅಧ್ಯಯನಿಸಿದ ಒಟ್ಟು ಫಲಶ್ರುತಿಯೇ ಸಮಾರೋಪವಾಗಿದೆ. ಕೊನೆಯಲ್ಲಿ ಅನುಬಂಧವನ್ನು ನೀಡಲಾಗಿದೆ. ಇದು ಸ್ಥೂಲವಾದ ಪ್ರಬಂಧದ ಸ್ವರೂಪವಾಗಿದೆ.

ಜಾನಪದ ಸಾಹಿತ್ಯದ ಸಂಗ್ರಹ, ಸಂಪಾದನೆ, ಸಂಶೋಧನೆ ಪ್ರಕಟನೆಯಂತಹ ಮಹತ್ತರವಾದ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರ, ಯಕ್ಷಗಾನ ಮತ್ತು ಜನಪದ ಅಕಾಡೆಮಿ ಮುಂತಾದ ಸಂಸ್ಥೆಗಳು ಕೈಗೊಂಡಿರುವುದು ಶ್ಲಾಘನೀಯವಾಗಿದೆ. ಈ ದಿಸೆಯಲ್ಲಿ ಜಿ.ಬಿ. ಖಾಡೆಯವರು ತಮ್ಮ ಜನಪದ ಪ್ರೀತಿ ಕಾರಣವಾಗಿ ಏಕವ್ಯಕ್ತಿ ನೆಲೆಯಲ್ಲಿ ಮಾಡಿದ ಕಾರ್ಯವೂ ಪ್ರಶಂಸನೀಯವಾಗಿದೆ. ಕಳೆದು ಹೋಗಬಹುದಾಗಿದ್ದ ಜನಪದದ ಅಮೂಲ್ಯ ಸಂಪತ್ತನ್ನು ಜಿ.ಬಿ. ಖಾಡೆಯವರು ಸಂಕಲಿಸಿದ್ದಾರೆ. ಅವರ ಹವ್ಯಾಸ, ಅವಿರತ ಪರಿಶ್ರಮ, ಶ್ರದ್ಧೆಗಳನ್ನು ನಿರ್ಲಕ್ಷಿಸುವಂತಿಲ್ಲ. ಏಕಾಂಗಿಯಾಗಿ ಮಾಡಿದ ಸಾಹಸವನ್ನು ಗುರುತಿಸುವುದು, ಜನಪದ ಕಾರ್ಯವನ್ನು ದಾಖಲಿಸುವುದು ಈ ಅಧ್ಯಯನದ ಪ್ರಮುಖ ಆಶಯವಾಗಿದೆ.

ಅಧ್ಯಾಯ ಎರಡು

ಜನಪದ ಸಾಹಿತ್ಯ ಅಧ್ಯಯನದ ಪ್ರವೇಶ

ಅಧ್ಯಾಯ ಎರಡು

ಜನಪದ ಸಾಹಿತ್ಯ ಅಧ್ಯಯನದ ಪ್ರವೇಶ

ಕನ್ನಡದ ಕಾವ್ಯಕ್ಕೆ ಜನಪದ ಸತ್ವ, ಸೌಂದರ್ಯ ತುಂಬಿ ಅಪ್ಪಟ ದೇಸೀ ಕವಿತೆಗಳನ್ನು ನೀಡಿ ಆಧುನಿಕ ಕನ್ನಡ ಕಾವ್ಯದ ಶ್ರೇಷ್ಠತೆಯನ್ನು ಮೆರೆದವರು ಹಲಸಂಗಿ ಭಾಗದ ಕವಿಗಳು. ಬರೀ ಕಾವ್ಯ ರಚನೆಗೆ ನಿಲ್ಲದೆ ಮುಂಬರುವ ಕನ್ನಡ ಕಾವ್ಯಕ್ಕೆ ತನ್ನ ನೆಲದ ಧ್ವನಿಯನ್ನೇ ಪ್ರಧಾನ ಭಿತ್ತಿಯಾಗಿ ನೀಡುವಲ್ಲಿ ಕಾವ್ಯ ಸಂದರ್ಭವನ್ನು ಸೃಷ್ಠಿ ಮಾಡಿಕೊಟ್ಟ ಹಿರಿಮೆ ಇವರದು. "ಪಶ್ಚಿಮಾಭಿಮುಖಿಯಾಗಿ ಹುಸಿ ಬೆರಗುಗಣ್ಣಿನಿಂದ ನೋಡುತ್ತಿದ್ದ ಪಂಡಿತಕವಿ ಮಂಡಳಿಯು ನಿಬ್ಬೆರಗಾಗುವಂತೆ ಕರ್ನಾಟಕದ ಉತ್ತರದ ಗಡಿಯಲ್ಲಿ 'ನವಿಲು ಕೇಕೆ' ಹಾಕಿ ಕನ್ನಡ ಕಾವ್ಯದ ಜನಮುಖಿ ಶ್ರೇಷ್ಠತೆಗೆ ಜಾನಪದದ ರಂಗು ನೀಡಿದ ಹಲಸಂಗಿ ಭಾಗದ ಕಾರ್ಯ ಸಾಧನೆ ದಾಖಲಾರ್ಹವಾದುದು. ಹಲಸಂಗಿ ಗೆಳೆಯರು ಜನಪದ ಸಾಹಿತ್ಯದ ಅನರ್ಘ್ಯ ಕೃತಿಗಳನ್ನು ಪ್ರಕಟಿಸಿದ್ದಲ್ಲದೆ, ಆ ಮೂಲಕ ನೆಲದ ಬದುಕು, ಭಾಷೆ, ಭಾವ, ನಾಡ ಆಡುನುಡಿಯ ಮೋಡಿಗಳಿಗಾಗಿ ಪರಿತಪಿಸುತ್ತಿದ್ದ ಕನ್ನಡ ಶಿಷ್ಟ ಕಾವ್ಯದ ಹೊಸತನಕ್ಕೆ ಹೊಸ ರಕ್ತ ಮಾಂಸಕೊಟ್ಟ ಶ್ರೇಯಸ್ಸಿಗೂ ಕಾರಣರಾದರೆನ್ನುವುದು ಅತ್ಯಂತ ಮಹತ್ವದ್ದಾಗಿದೆ"[೧] ಎಂಬುದು ಗಮನಾರ್ಹವಾದುದು.

ಕನ್ನಡ ಕಾವ್ಯಕ್ಕೆ 'ಆಡುನುಡಿಯ ಅಗತ್ಯತೆ, ಅನಿವಾರ್ಯತೆಯನ್ನು ಗುರುತಿಸಿಕೊಟ್ಟು ಆ ಮೂಲಕ ಅಂಥ ರಚನೆಗಳಿಗೆ ಮೊದಲು ಮಾಡಿದ ಈ ಬಳಗದ ಸಾಧನೆ ಹಿರಿದಾದುದು. ಕನ್ನಡ ಜನಪದ ಸಂಕಲಿತ ಸಾಹಿತ್ಯಕ್ಕೆ ಶ್ರೀಕಾರ ಹಾಕಿದವರು ಹಲಸಂಗಿ ಗೆಳೆಯರ ಬಳಗ. ಜಾನಪದ ಸಾಹಿತ್ಯ ಕೃಷಿಯನ್ನು ಅವಲೋಕಿಸುವಾಗ ಹಲಸಂಗಿ ಗೆಳೆಯರ ಗುಂಪಿನ ಸಾಧನೆ ಅನನ್ಯವಾಗಿದೆ. ಅದರ ಸ್ಥೂಲ ಪರಿಚಯವನ್ನಿಲ್ಲಿ ಮಾಡಿಕೊಳ್ಳಬಹುದು.

ಮಧುರಚನ್ನರ ಗೆಳೆಯರ ಬಳಗದ ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ, ಪಿ. ಧೂಲಾ ಇವರನ್ನು ಒಳಗೊಂಡ ಹಲಸಂಗಿಯನ್ನು ಜನಪದದ ಪ್ರಮುಖ ಭಾಗವೆಂದು ಪರಿಗಣಿಸಿದ್ದೇವೆ. ಯಾಕೆಂದರೆ ಕಾವ್ಯಧಾರೆಯೊಂದನ್ನು ತುಂಬುವ ಜನಪದ ಸಾಹಿತ್ಯ ಸಂಗ್ರಹ ಹಾಗೂ ಆ ಕುರಿತ ಅಧ್ಯಯನವನ್ನು ಕನ್ನಡದ ಸಂದರ್ಭದಲ್ಲಿ ಮೊಟ್ಟಮೊದಲಿಗೆ ಹಲಸಂಗಿ ಭಾಗ ಪ್ರಾರಂಭಿಸಿತು.

---

೧. ನವೋದಯ ಕಾವ್ಯದ ಮೇಲೆ ಜಾನಪದ ಪ್ರಭಾವ,. ಡಾ. ಪ್ರಕಾಶ ಖಾಡೆ, ಪುಟ–೧೫೨.

[illegible]

[illegible]

[illegible]

[illegible]

[illegible]

ಹಲಸಂಗಿ ಗೆಳೆಯರ ಗುಂಪು ಜನಪದ ಸಾಹಿತ್ಯಕ್ಕೆ ಹಲಸಂಗಿ ಗೆಳೆಯರ ಕೊಡುಗೆ ಅಮೂಲ್ಯವಾದುದು. ಒಂದು ಪ್ರತ್ಯೇಕ ಸ್ವತಂತ್ರ ಕೇಂದ್ರವಾಗಿಹಲಸಂಗಿ ಗುರುತಿಸಿಕೊಲ್ಲ ಗುರುತಿಸಿಕೊಳ್ಳಲು ಅರ್ಹವಾದುದು. "ನವೋದಯ ಕಾಲದ ಹಿರಿಯ ಸಾಹಿತಿಗಳ ಪ್ರಭಾವದಿಂದ ನಾಡು, ನುಡಿ, ಪ್ರೇಮ, ಹಳ್ಳಿಯ ಜನ ಜೀವನ ಗಾಢ ಸಂಪರ್ಕದಿಂದ ಜನಪದ ಮತ್ತು ಮಾನವ ಪ್ರೇಮ ಎಲ್ಲದರ ಜೊತೆಗೆ ಅದರಲ್ಲಿನ ಜನ್ಮಜಾತ ಪ್ರತಿಭಾಶಕ್ತಿ ಈ ಗೆಳೆಯರನ್ನು ಒಂದು ಮಾಡಿತ್ತು. ಈ ಗೆಳೆಯರ ಗುಂಪಿಗೆ ಮಧುರಚೆನ್ನರೇ ಹಿರಿಯಣ್ಣ. ಈ ಗುಂಪಿನಲ್ಲಿ ಸಿಂಪಿ ಲಿಂಗಣ್ಣ, ಓಲೇಕಾರ ಮಾದಣ್ಣ, ರೇವಣಸಿದ್ದಪ್ಪ, ಮದಭಾವಿ ಚೆನ್ನಮಲ್ಲಪ್ಪ ಸರಸಂಬಿ. ವಿಜಾಪುರದ ಬಸಣ್ಣ ಅಕ್ಕಿ, ಪದ್ಮರಾಜ ಹುನಗುಂದ, ಚಡಚಣದ ಗುರುಪಾದಪ್ಪ ಜೀರಂಕಲಗಿ, ಅಗರಬೇಡದ ಅಣ್ಣಾರಾವ ಪಾಟೀಲ ಮುಂತಾದವರ ಸೇರಿದ್ದರು"[೨] ಇವರೆಲ್ಲ ಉತ್ತರ ಕರ್ನಾಟಕದ ಬಿರು ಬಿಸಿಲಿನ ಒಂದು ಚಿಕ್ಕ ಗ್ರಾಮವಾಗಿದ್ದ 'ಹಲಸಂಗಿ'ಯನ್ನು ಕರ್ನಾಟಕದಲ್ಲಿ ಗುರುತಿಸುವಂತೆ ಮಾಡಿದ್ದು ಸಣ್ಣ ಸಾಧನೆಯೇನಲ್ಲ.

ಕನ್ನಡದಲ್ಲಿ ಜಾನಪದದ ಬಗ್ಗೆ ವಿಚಾರ ಮಾಡಿದ ಮೊದಲಿಗರು ಮಧುರಚೆನ್ನರು. 'ಮಧುರಚೆನ್ನ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ ಗಲಗಲಿಯವರು ಕನ್ನಡಕ್ಕೆ ಜಾನಪದ ಅಧ್ಯಯನ ಪ್ರಜ್ಞೆಯನ್ನು ತಂದ ಮೊದಲಿಗರಾಗಿ ತೋರುತ್ತಾರೆ. ಅನುಭಾವಿ ಕವಿಗಳಾದ ಇವರು ೧೯೨೩ರಲ್ಲಿ ವಿಜಾಪುರದಲ್ಲಿ ಜರುಗಿದ ೯ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ "ಹಳ್ಳಿಯ ಹಾಡುಗಳು" ಎಂಬ ಪ್ರಬಂಧವನ್ನು ಓದಿ ಇಡೀ ಕನ್ನಡ ನಾಡಿನ ಸಾಹಿತಿಗಳ ಲಕ್ಷ್ಯವನ್ನು ಆ ಕಡೆಗೆ ಸೆಳೆದರು.

೧೯೩೧ರಲ್ಲಿ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಇವರು ಕೂಡಿ ಪ್ರಕಟಿಸಿದ "ಗರತಿ ಹಾಡು" ಕನ್ನಡದ ಮೊಟ್ಟ ಮೊದಲ ಜನಪದ ಹಾಡುಗಳ ಸಂಗ್ರಹ. ಮಧುರಚೆನ್ನರು ಮತ್ತು ಅವರ ಗೆಳೆಯರು ಪ್ರಾರಂಭಿಸಿದ ಜಾನಪದ ಸಂಗ್ರಹ ಹಾಗೂ ಅಧ್ಯಯನ ಕಾರ್ಯ ಮುಂದೆ ಕರ್ನಾಟಕದಾದ್ಯಂತ ಉತ್ಸಾಹದಿಂದ ನಡೆದು ಈ ಬಗೆಯ ಕೆಲಸಗಳಿಗೆ ಪ್ರೇರಣೆಯಾದದ್ದಲ್ಲದೆ, ಜಾನಪದ ಅಧ್ಯಯನ ಬಹುಮುಖವಾಗಿ ಬೆಳೆದಿದೆ. ಕನ್ನಡ ಜನಪದ ಗೀತ ಸಂಕಲನ ಮೊಟ್ಟ ಮೊದಲ ಕೃತಿಯಾದ 'ಗರತಿಯ ಹಾಡು' ಇದರಂಥದು ಇನ್ನೊಂದಿಲ್ಲವೆನ್ನುವಷ್ಟು ಅದ್ವಿತೀಯವಾಗಿದೆ. ಇದು ಕನ್ನಡ ಕಾವ್ಯ ಕ್ಷೇತ್ರದಲ್ಲಿ ಉಂಟುಮಾಡಿದ ತೀವ್ರತರವಾದ ಸೆಳೆತ ದಾಖಲಾರ್ಹವಾದುದು. ಹಲಸಂಗಿ, ಚಡಚಣ, ಸಾಲೋಟಗಿ, ಇಂಡಿ ಮೊದಲಾದ ಈ ಪರಿಸರದ ಹಳ್ಳಿಗಳಲ್ಲಿ ಜನಪದ ಹಾಡುಗಳನ್ನು ದಣಿವಿಲ್ಲದೆ ಹಾಡುವ ಹೆಣ್ಣು ಮಕ್ಕಳನ್ನು ಮುಂದೆ ಕುಳ್ಳಿರಿಸಿಕೊಂಡು ಹಲಸಂಗಿ ಗೆಳೆಯರು ಹಾಡಿಸಿ ಬರೆದುಕೊಂಡರು. ಇವರು ಸಂಗ್ರಹಿಸಿದ ಹಾಡುಗಳ ಸಂಖ್ಯೆ ವಿಫುಲವಾಗಿಯೇ ಬೆಳೆಯಿತು.

---

೨. ನವೋದಯ ಕಾವ್ಯದ ಮೇಲೆ ಜಾನಪದ ಪ್ರಭಾವ. ಡಾ. ಪ್ರಕಾಶ ಖಾಡೆ. ಪುಟ–೧೫೯.

ಇದರಲ್ಲಿನ ಸುಮಾರು ೮೦೦ ತ್ರಿಪದಿಗಳು ಜನಪದ ತಾಯಂದಿರ ಕಲ್ಪಿತ ಶಕ್ತಿಗೆ, ಅನುಭವಕ್ಕೆ, ಬದುಕಿನ ವಿವಿಧ ಬಗೆಯ ಸಂದರ್ಭಗಳಿಗೆ ಹಿಡಿದ ಕನ್ನಡಿಗಳಾಗಿವೆ. ಬಿಜಾಪುರ ಜಿಲ್ಲೆಯ ಭಾಷಿಕ ಸೊಗಡು ಇಲ್ಲಿ ಹೆಪ್ಪುಗಟ್ಟಿದೆ. ಇಲ್ಲಿಯ ಹಾಡುಗಳನ್ನು ಅವುಗಳ ವಿಷಯ, ವಸ್ತುಗಳ ಹಿನ್ನೆಲೆಯಲ್ಲಿ ವರ್ಗೀಕರಿಸಿಕೊಂಡಿದ್ದಾರೆ. ಪರಂಪರೆ, ಸ್ತುತಿ, ತವರುಮನೆ, ತಾಯ್ತಂದೆ, ಅಣ್ತಮ್ಮರು, ಅಕ್ಕತಂಗಿಯರು, ಅತ್ತಿಗೆ ನಾದಿನಿಯರು, ಗೆಳತಿ, ಅತ್ತೆ ಮನೆಯ ಕಷ್ಟ, ಸತಿಪತಿ ಇತ್ಯಾದಿ ಶೀರ್ಷಿಕೆಗಳಲ್ಲಿ ಸರಿಜೋಡಿಸಿ ಇಂಥ ಸಂಗ್ರಹಗಳ ವಿಧಾನವನ್ನು ತಾವೇ ರೂಪಿಸಿ ಮುಂದಿನ ಸಂಗ್ರಾಹಕರಿಗೆ ಮಾರ್ಗ ತೋರಿಸಿದ್ದಾರೆ.

ಜನಪದ ತಜ್ಞರಾದ ಸಿಂಪಿ ಲಿಂಗಣ್ಣವರು ಜಾನಪದ ಕ್ಷೇತ್ರದಲ್ಲಿ ಆಚಾರ್ಯ ಪುರುಷರೆನಿಸಿಕೊಂಡಿದ್ದಾರೆ. ನಡೆದಾಡುವ ಜಾನಪದ ಕೋಶವೆಂದೇ ಪ್ರಖ್ಯಾತರಾದ ಅವರ ಹನ್ನೊಂದು ಜನಪದ ಕೃತಿಗಳು ಕನ್ನಡ ಜಾನಪದ ಲೋಕಕ್ಕೆ ನೀಡಿದ ಅಮೂಲ್ಯ ಕೊಡುಗೆಗಳಾಗಿವೆ. ಸಿಂಪಿಯವರು ಗೆಳೆಯರ ಜೊತೆಗೂಡಿ ಸಂಗ್ರಹಿಸಿದ 'ಗರತಿಯ ಹಾಡು' ಗುಣದ ದೃಷ್ಠಿಯಿಂದ ಮೌಲಿಕ ಗ್ರಂಥವಾಗಿದೆ. ಇವರು ಪಿ. ಧೂಲಾ ಅವರೊಂದಿಗೆ ಸಂಗ್ರಹಿಸಿ ಪ್ರಕಟಿಸಿದ ಹದಿನಾಲ್ಕು ಲಾವಣಿಗಳ ಕೃತಿ 'ಜೀವನ ಸಂಗೀತ' (೧೯೭೭) ಇದರಲ್ಲಿ ಶೃಂಗಾರ ಲಾವಣಿಗಳೇ ಅಧಿಕವಾಗಿವೆ. 'ಗರತಿಯ ಬಾಳು' (೧೯೫೪) 'ಜನಾಂಗದ ಜೀವಾಳ' (೧೯೫೭) ಎಂಬೆರಡು ಕೃತಿಗಳಲ್ಲಿ ಗರತಿಯ ಬಾಳಿನ ನಾಲ್ಕು ಅವತಾರಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. 'ಉತ್ತರ ಕರ್ನಾಟಕದ ಜನಪದ ಗೀತೆಗಳು' (೧೯೭೭) ಜನಪದ ಸಾಹಿತ್ಯದಲ್ಲಿ 'ಕಿರಿದರೊಳ್ ಪಿರಿದರ್ಥದ ಚಲಕ' (೧೯೭೬) ಎಂಬ ಪ್ರಸಾರಾಂಗದ ಪುಸ್ತಕದಲ್ಲಿ ಗಾದೆ ಮಾತುಗಳು, ದೃಷ್ಟಾಂತ ಕಥೆಗಳ ವಿವೇಚನೆ ಮಾಡಿದ್ದಾರೆ. "ಉತ್ತರ ಕರ್ನಾಟಕದ ಜನಪದ ಕಥೆಗಳು" (೧೯೮೦) 'ಕನ್ನಡ ಲಾವಣಿಗಳು' (೧೯೭೭) ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಪ್ರಕಟಿಸಿದ ಪತ್ರಿಕೆಯಲ್ಲಿ ಲಾವಣಿಗಳ ಮೈಕಟ್ಟು ಮನಕಟ್ಟುಗಳ ಬಗ್ಗೆ ವಿವರಣೆ ನೀಡಿದ್ದಾರೆ. ೧೯೮೬ರಲ್ಲಿ ಪ್ರಕಟವಾದ 'ಹೆಡಿಗೆ ಜಾತ್ರೆ' ಜಾನಪದ ವಿಷಯವನ್ನೇ ಕುರಿತು ೧೭ ಪ್ರಬುದ್ಧ ಪ್ರಬಂಧಗಳ ಸಂಕಲನವಾಗಿ ಹೊರಹೊಮ್ಮಿತು. 'ಗರತಿಯ ಬಾಳ ಸಂಹಿತೆ'ಯಲ್ಲಿ (೧೯೮೫) ಹೆಣ್ಣಿನ ವಿವಿಧ ಮುಖಗಳನ್ನು ಪರಿಚಯಿಸಲಾಗಿದೆ.

ಜನಪದರು ನಿತ್ಯ ಹೊಸತಾಗುವ, ಹೊಸತನಕ್ಕಾಗಿ ತೆಗೆದುಕೊಳ್ಳುವ ವಿಶಿಷ್ಟತೆಗೆ ಸಾಕ್ಷಿಯಾಗಿ ಕಾಪಸೆ ರೇವಪ್ಪನವರ ಹಾಡುಗಳು ಮತ್ತು ಹಾಡೊಳಗಿನ ವಸ್ತು ಸಂಗತಿಗಳು ಪ್ರಧಾನವಾಗುತ್ತವೆ. ರೇವಪ್ಪನವರ ಸಾಹಿತ್ಯಿಕ ಕಾರ್ಯಗಳಲ್ಲಿ ಚಿರಸ್ಮರಣೀಯವಾದದ್ದು "ಮಲ್ಲಿಗೆ ದಂಡೆ". ಇಲ್ಲಿ ಜನಪದರ ಆಚರಣೆಗಳ ವಿಶಿಷ್ಟ ಹೆಣಿಕೆ ಇದೆ. ಸ್ತುತಿಪದ, ಪ್ರಣಯ, ಭಾವಗೀತೆ, ಕಥೆಯ ಹಾಡು, ಹಾಸ್ಯದ ಹಾಡು, ಮದುವೆಯ ಹಾಡು ಮುಂತಾದ ಸಾಂದರ್ಭಿಕ ಹಾಡುಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿಯ ಹಾಡುಗಳಲ್ಲಿ ಗ್ರಾಮೀಣರ ಸಂಸ್ಕೃತಿಯ ಅಪ್ಪಟ ಚಿತ್ರಣವಿದೆ. ಆಹಾರ, ಉಡುಗೆ, ತೊಡುಗೆ, ದೈವ ನಂಬುಗೆ, ಆಚರಣೆ, ಆರಾಧನೆ ಎಲ್ಲವನ್ನು ಇಲ್ಲಿ ಕಂಡರಿಸಿದ್ದಾರೆ. ಈ ಎಲ್ಲಾ ಹಾಡುಗಳ ಕೊನೆಯಲ್ಲಿ ಪ್ರತಿ ಹಾಡಿನ ಅರ್ಥ, ಸಂದರ್ಭ ಮತ್ತು ಪ್ರಾದೇಶಿಕ ಪದಗಳ ಅರ್ಥ

ಹಾಗೂ ಛಂದಸ್ಸು ವಿವರಿಸಲಾಗಿದೆ. ಹಾಗಾಗಿ ಈ ಸಂಕಲನವು ಜನಪದ ಗೀತ ಸಂಗ್ರಹಕಾರರಿಗೆ ಒಂದು ಮಾದರಿಯಾಗಿದೆ. ಜನಪದರ ಮದುವೆ, ಸೋಬಾನೆ ಪ್ರಸಂಗಗಳು ಜನಪದೀಯತೆಯನ್ನು ಅರಿಯಲು ತುಂಬಾ ಪ್ರಯೋಜನಕಾರಿಯಾಗಿವೆ. ಜನಪದ ಸಂಪ್ರದಾಯ, ಸಂಸ್ಕೃತಿಗಳ ಅಧ್ಯಯನಕ್ಕೆ ವಿಫುಲ ಸಾಮಗ್ರಿ ಒದಗಿಸುತ್ತದೆ. ತ್ರಿಪದಿಗಿಂತ ಭಿನ್ನವಾದ ಲಯಗಳಲ್ಲಿಯೂ ಜನಪದ ಹಾಡುಗಳು ಬೇಕಾದಷ್ಟಿವೆಯೆಂಬುದನ್ನು ತೋರಿಸುವಂತೆ "ಮಲ್ಲಿಗೆ ದಂಡೆ"ಯ ಹಾಡುಗಳಿರುವುದು ಒಂದು ವಿಶೇಷ. ಜನಪದ ಸಾಹಿತ್ಯ ಸಂಗ್ರಹ ಮಾಡುವವರಿಗೆ ಮಾರ್ಗದರ್ಶಕವಾಗಿದ್ದು ಜೊತೆಗೆ ಹೊಸ ಕಾವ್ಯ ರಚನಾಕಾರರಿಗೆ ಅಪರೂಪ ಮಾದರಿಯಾಗಿ ಗುರುತಿಸಿಕೊಂಡಿದೆ.

ಪ್ರಥಮ ಲಾವಣಿಗಳ ಸಂಗ್ರಹವಾದ "ಜೀವನ ಸಂಗೀತ"ವನ್ನು ಸಿಂಪಿ ಲಿಂಗಣ್ಣನವರ ಜೊತೆಗೂಡಿ ಸಂಗ್ರಹಿಸಿದ ಹೆಗ್ಗಳಿಕೆ ಪಿ.ಧೂಲಾರವರದು. ೧೯೩೧ ರಲ್ಲಿ ಡಾ. ಕಾರಂತರು ಪ್ರಥಮ ಬಾರಿಗೆ ಹಲಸಂಗಿಗೆ ಬಂದಾಗ ಲಾವಣಿಗಳನ್ನು ಕೇಳಿ ಆನಂದಿಸಿ ನಂತರ ತಮ್ಮೂರಿಗೆ ಧೂಲಾರನ್ನು ಕರೆಯಿಸಿಕೊಂಡರು. ಆ ಹಾಡುಗಳನ್ನು ಹಾಡಿಸಿ, ಕೇಳಿದ್ದಲ್ಲದೆ, ಶಾಲೆಯ ಹುಡುಗರಿಗೂ ಲಾವಣಿಗಳನ್ನು ಕಲಿಸುವ ಏರ್ಪಾಡು ಮಾಡಿದರು. ಇದಕ್ಕೆಲ್ಲ ಸಹಕರಿಸಿದವರು ಪಿ.ಧೂಲಾ ಹೀಗೆ ಧೂಲಾ ಸಾಹೇಬರು ಲಾವಣಿಗಳನ್ನು ರಚಿಸುತ್ತಾ ಹಾಡುತ್ತಾ ಪ್ರಸಾರ ಕಾವ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು ಅಭಿಮಾನದ ವಿಷಯವಾಗಿದೆ.

ಹೀಗೆ ಕನ್ನಡ ಜಾನಪದ ಸಾಹಿತ್ಯಕ್ಕೆ ಪ್ರಶಸ್ತವಾದ ಪ್ರವೇಶವನ್ನು ಒದಗಿಸಿದವರು ಹಲಸಂಗಿಯ ಗೆಳೆಯರ ಬಳಗದವರು. ಒಟ್ಟು ಕನ್ನಡ ಜಾನಪದ ಸಾಹಿತ್ಯವನ್ನು ಅಧ್ಯಯನಿಸುವ ಸಂದರ್ಭದಲ್ಲಿ ಮುಖ್ಯವಾಗಿ ಮೂರು ನೆಲೆಗಳಲ್ಲಿ ವಿಭಾಗಿಸಿಕೊಂಡು ಈ ಕೆಳಗಿನಂತೆ ಅಧ್ಯಯನಿಸಬಹುದಾಗಿದೆ.

೨.೧. ವಿದ್ವತ್‌ಪೂರ್ಣ ಜಾನಪದ ಸಾಹಿತಿಗಳು.

೨.೨. ಅಧ್ಯಯನಶೀಲ ಜಾನಪದ ಸಾಹಿತಿಗಳು.

೨.೩. ಹವ್ಯಾಸಿ ಜಾನಪದ ಸಾಹಿತಿಗಳು.

೨.೧. ವಿದ್ವತ್‌ಪೂರ್ಣ ಜಾನಪದ ಸಾಹಿತಿಗಳು:

ಜಾನಪದ ಸಾಹಿತ್ಯವನ್ನು ಅಧ್ಯಯನದ ಶಿಸ್ತಿಗೆ ಅಳವಡಿಸಿ, ಶಾಸ್ತ್ರೀಯ ಚೌಕಟ್ಟನ್ನು ನೀಡಿ, ಅತೀ ಗಂಭೀರವಾಗಿ ಅಧ್ಯಯನಿಸಿದ ಜಾನಪದ ವಿದ್ವಾಂಸರು ನಮ್ಮಲ್ಲಿದ್ದಾರೆ. ವಿಶಿಷ್ಟವಾದ ಸಂಗ್ರಹಣೆ, ಸೂಕ್ಷ್ಮ ನಿರೀಕ್ಷಣೆ, ಪಾಂಡಿತ್ಯಪೂರ್ಣ ಸಂಪಾದನೆ, ಲಭ್ಯ ಆಕರ ಸಾಮಗ್ರಿ ಪರಿಶೀಲನೆ ಮಾಡಿ, ಮಹತ್ತರ ಕೃತಿ ನೀಡಿದ್ದಾರೆ. ಒಂದು ವಸ್ತುವಿಗೆ ಸಂಬಂಧಿಸಿದಂತೆ, ದಂತಕಥೆ, ಸ್ಥಳಪುರಾಣ, ಮೌಕಿಕ ಸಾಮಗ್ರಿ, ಜನಾಂಗದ ನಂಬಿಗೆ, ಆಚಾರ–ವಿಚಾರ ಎಲ್ಲವನ್ನೂ ಪರಿಶೀಲಿಸಿ, ಕೆಲವು ಸಂದರ್ಭದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಅತ್ಯಂತ ಪರಿಶ್ರಮದಿಂದ ಹಾಕಿಕೊಂಡ ಯೋಜನೆಯನ್ನು ಪೂರ್ಣಗೊಳಿಸಿದವರಿದ್ದಾರೆ. ತಮ್ಮ ಪ್ರತಿಭೆಯನ್ನು ಧಾರೆಯೆರೆದು, ಅಖಂಡ ಜೀವನವನ್ನು

ಮುಡಿಪಿಟ್ಟು ಜಾನಪದ ಕ್ಷೇತ್ರಕ್ಕಾಗಿ ತಮ್ಮನ್ನು ಇಡಿಯಾಗಿ ತೊಡಗಿಸಿಕೊಂಡವರಿದ್ದಾರೆ. ಅಂಥವರಲ್ಲಿ ಡಾ. ಬಿ.ಎಸ್. ಗದ್ದಗಿಮಠ, ಪ್ರೊ. ಜೀಶಂಪ, ಡಾ. ಎಂ.ಎಸ್. ಸುಂಕಾಪುರ, ಡಾ.ದೇ. ಜವರೇಗೌಡ, ಪ್ರೊ. ಜ್ಯೋತಿ ಹೊಸೂರ, ಡಾ. ವಿವೇಕ ರೈ ಮುಂತಾದವರು ಅಗ್ರಗಣ್ಯರಾಗಿದ್ದಾರೆ. ಇವರು ಜನಪದಕ್ಕೆ ವೈಜ್ಞಾನಿಕ ಶಿಸ್ತನ್ನು ಅಳವಡಿಸಿದ್ದಾರೆ. ಜಾನಪದಕ್ಕೆ ವಿದ್ವತ್ ಲೋಕದಲ್ಲಿ ಮಾನ್ಯತೆ ತಂದುಕೊಟ್ಟಿದ್ದಾರೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸ್ತರದಲ್ಲಿ ಜಾನಪದ ಕ್ಷೇತ್ರಕ್ಕೆ ಘನತೆಯನ್ನು ತಂದು ಕೊಟ್ಟವರಾಗಿದ್ದಾರೆ. ಈ ಮಹನೀಯರ ಸಾಧನೆಯನ್ನು ಸ್ಥೂಲವಾಗಿ ಇನ್ನು ಮುಂದೆ ನೋಡಬಹುದು.

ಜನಪದ ಸಾಹಿತ್ಯ ಸಂಗ್ರಹಕ್ಕೆ ಮೊದಲು ನಾಂದಿ ಹಾಡಿದ ಹಲಸಂಗಿ ಗೆಳೆಯರ ಪ್ರಭಾವ, ಪ್ರೇರಣೆಯಿಂದ ಡಾ. ಬಿ.ಎಸ್.ಗದ್ದಗಿಮಠ ಅವರು ಹೈಸ್ಕೂಲಿನಲ್ಲಿರುವಾಗಲೇ ಜನಪದ ಸಾಹಿತ್ಯವನ್ನು ಸಂಕಲನ ಮಾಡುವ ದೀಕ್ಷೆಯನ್ನು ಪಡೆದುಕೊಂಡರು. ಜನಪದ ಸಂಶೋಧನೆ ಅವರಿಗೆ ಒಂದು ಹುಚ್ಚಾಗಿ ಪರಿಣಮಿಸಿತು. ಖ್ಯಾತ ಕನ್ನಡ ವಿದ್ವಾಂಸರಾದ ಡಾ. ಕೆ.ಜಿ.ಕುಂದಣಗಾರ. ಅವರ ಮಾರ್ಗದರ್ಶನದಲ್ಲಿ "ಕನ್ನಡ ಜಾನಪದ ಗೀತೆಗಳು" ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿ ೧೯೫೮ರಲ್ಲಿ ಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದರು. ಇದರಿಂದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮೊಟ್ಟ ಮೊದಲ ಪಿ.ಎಚ್.ಡಿ. ಪಡೆದ ಕೀರ್ತಿಗೆ ಭಾಜನರಾದರು. ಜನಪದವೂ ಪಿ.ಎಚ್.ಡಿ ಪದವಿಗೆ ವಸ್ತುವಾಗಬಲ್ಲುದೆಂದು ತೋರಿಸಿಕೊಟ್ಟ ಮೊದಲಿಗರು.

ಊರೂರುಗಳಿಗೆ ಅಲೆದಾಡಿ ಸಂಗ್ರಹಿಸಿದ ಹಾಡುಗಳನು ನಾಲ್ಕು ನಾಡ ಪದಗಳು, ಕಂಬಿಯ ಹಾಡುಗಳು, ಜನತಾ ಗೀತೆಗಳು, ಲೋಕಗೀತೆಗಳು ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ. ಈ ಮೊದಲು ಬಿಡಿ ಹಾಡುಗಳೇ ಹೆಚ್ಚಾಗಿ ಹೊರಬಂದು ಕಥನ ಗೀತೆಗಳು ಪ್ರಕಟವಾಗದೇ ಇರುವುದನ್ನು ಕಂಡುಕೊಂಡ ಗದ್ದಗಿಮಠ, ಅವುಗಳನ್ನೇ ಹೆಚ್ಚಾಗಿ ಸಂಗ್ರಹಿಸಿ ಹೊರತಂದರು. ಅವರು ಜನಪದಗೀತೆ, ಬಿಡಿ ಹಾಡುಗಳನ್ನಲ್ಲದೆ ಕನ್ನಡ ಗಾದೆಗಳು, ಜನಪದ ಶಬ್ದಕೋಶ ಮುಂತಾದ ಕೃತಿ ಗಳನ್ನಲ್ಲದೆ, ಸಂಪ್ರದಾಯಗಳು, ಕಲಾರಾಶಿ, ಬಯಲಾಟಗಳು, ಕರ್ನಾಟಕದ ದುರಗಮುರಗಿಯರು ಮುಂತಾದ ಲೇಖನಗಳನ್ನು ಬರೆದಿದ್ದಾರೆ.

ವಿಶ್ವವಿದ್ಯಾಲಯ ಮಟ್ಟದಲ್ಲಿ ಅಕ್ಯಾಡೆಮಿಕ್ ಚಿಂತನೆಗೆ, ಶಿಸ್ತಿಗೆ, ಗಂಭೀರ ಅಧ್ಯಯನಕ್ಕೆ ಡಾ. ಗದ್ದಗಿಮಠ ಅವರ ಈ ಕಾರ್ಯ ಅಪೂರ್ವ ಕಾಣಿಕೆಯಾಗಿ ಒಂದು ಪರಂಪರೆಯನ್ನು ನಿರ್ಮಿಸಿತು. ಡಾ. ಗದ್ದಗಿಮಠ ಅವರು ತಮ್ಮ ಸಂಕಲನಗಳಿಗೆಲ್ಲ ಬರೆದಿರುವ ಮೊದಲ ಮಾತು ಇಲ್ಲವೆ ಮುನ್ನುಡಿ ಇತ್ಯಾದಿಗಳು ಬೆಲೆಯುಳ್ಳ ವಿಮರ್ಶಾ ಲೇಖನಗಳಾಗಿವೆ. ಅವುಗಳಲ್ಲಿ ಆಯಾ ಕೃತಿಯ ಸಂಗ್ರಹ ಕಾರ್ಯ, ಹಾಡುಗಳ ಪ್ರಕಾರ ವರ್ಗೀಕರಣ, ಹಾಡುವ ಸಂದರ್ಭ-ಧಾಟಿ-ಸಂಪ್ರದಾಯ-ಜನಾಂಗ, ಹಾಡುಗಳ ಐತಿಹ್ಯ-ಐತಿಹಾಸಿಕ, ವಿವೇಚನೆ-ಛಂದಸ್ಸು, ಜಾನಪದರ ಬಗೆಗಿನ ಕಳಕಳಿ, ತಮ್ಮದೇ ಆದ ಯೋಚನೆ-ಯೋಜನೆಗಳು ಸವಿಸ್ತಾರವಾಗಿ ಪ್ರಸ್ತಾಪಿಸಲ್ಪಟ್ಟಿವೆ. ಈ ಕಾರಣದಿಂದ ಒಂದೊಂದು ಸಂಶೋಧನ ಪ್ರಬಂಧಗಳ ಮೌಲ್ಯವನ್ನು ಪಡೆದಿವೆ. ಅವರು ಸಂಗ್ರಹ

[illegible]

ವಿಧಾನದಲ್ಲಿ ಅರ್ಥಕೋಶಗಳನ್ನು ತಂದಿರುವುದು ವೈಜ್ಞಾನಿಕ ದೃಷ್ಟಿಯುಳ್ಳದ್ದಾಗಿದೆ. ಇದು ಅವರ ಜನಪದ ಸಂಗ್ರಹಗಳ ಮತ್ತೊಂದು ವೈಶಿಷ್ಟ್ಯ. ಅವರು ಮಾಡಿದ ಕ್ಷೇತ್ರಕಾರ್ಯದ ವ್ಯಾಪ್ತಿ, ಸಂಗ್ರಹಿಸಿದ ಸಾಹಿತ್ಯದ ವೈವಿಧ್ಯ, ವರ್ಗೀಕರಿಸಿದ ರೀತಿ, ಬರೆದ ವಿಸ್ತೃತ ಪ್ರಸ್ತಾವನೆ, ಜೋಡಿಸಿದ ಅರ್ಥಕೋಶ ಎಲ್ಲವೂ ವಿಶಿಷ್ಟವೆನಿಸಿ, ಈ ಕ್ಷೇತ್ರದಲ್ಲಿ ಮುಂದೆ ಕೆಲಸ ಮಾಡುವವರಿಗೆ ದಾರಿದೀಪವೆನಿಸಿವೆ.

ಜಾನಪದ ಕಲೆಯನ್ನು ನಮ್ಮ ನಾಡಿನಲ್ಲಿ ಅಷ್ಟೇ ಅಲ್ಲ, ದೇಶ ವಿದೇಶಗಳಲ್ಲಿ ಮೆರೆಸಿದವರು ಜೀ.ಶಂ. ಪರಮಶಿವಯ್ಯನವರು. ನಾಡಿನ ಕಲೆ ವಿದೇಶದಲ್ಲಿ ಪ್ರದರ್ಶನಗೊಂಡಿದ್ದು ಇವರ ಸಾಧನೆಯಿಂದ. ೧೯೮೯ ರಲ್ಲಿ ಕರ್ನಾಟಕದ 'ಬೀಸು ಕಂಸಾಳೆ' ಕಲಾತಂಡವನ್ನು ಟರ್ಕಿ, ಟ್ಯುನೀಷಿಯ, ಸೈಪ್ರಸ್, ಮಾಲ್ಟಾ ದೇಶಗಳಲ್ಲಿ ಪ್ರದರ್ಶನ ನೀಡಲು ಕರೆದೊಯ್ದರು. ಇಂಗ್ಲೆಂಡ್, ಸ್ಕಾಟ್ಲೆಂಡ್, ಜರ್ಮನಿ, ಡೆನ್ಮಾರ್ಕ್, ಸ್ವೀಡನ್, ಫಿನ್ಲೆಂಡ್, ಝೆಕೊಸ್ಲೋವಾಕಿಯಾ ದೇಶಗಳಿಗೆ ಭೇಟಿ ನೀಡಿ ಅಲ್ಲಿಯ ಜನಪದವನ್ನು ಅಭ್ಯಸಿಸಿದರು. ಕನ್ನಡ ನಾಡಿನಲ್ಲೊಂದು ಜಾನಪದ ವಿಶ್ವವಿದ್ಯಾಲಯ ಕಟ್ಟುವ ಕನಸು ಕಂಡವರು ಜೀಶಂಪ. ವೃತ್ತಿಗಾಯಕರ ಸಾಹಿತ್ಯದಷ್ಟೇ ಅವರ ಬದುಕೂ ವರ್ಣಮಯ ಎಂಬುದನ್ನು ಗುರುತಿಸಿ, ಅವರ ಬದುಕಿನ ಸೂಕ್ಷ್ಮ ಎಳೆಗಳನ್ನು ಗುರುತಿಸಿ, ಪರಿಚಯಿಸಿ ಅವರು ಕೇವಲ ಭಿಕ್ಷುಕರಲ್ಲ; ನಮ್ಮ ಸಂಸ್ಕೃತಿಯ ಅಮೂಲ್ಯ ಅಂಶಗಳನ್ನು, ಅಪೂರ್ವ ಜನಪದ ಕಾವ್ಯ ಪರಂಪರೆಯನ್ನು ಶತ-ಶತಮಾನಗಳಿಂದ ಮೌಖಿಕ ಪರಂಪರೆಯ ಸಾರವನ್ನು ಹೊತ್ತು ಉಳಿಸಿಕೊಂಡು ಬಂದವರು; ಎಂಬುದನ್ನು ತಿಳಿಸಿ, ಇಂತಹ ವೃತ್ತಿಗಾಯಕರ ಬಗೆಗೆ ಗೌರವ ಹೆಚ್ಚುವಂತೆ ಮಾಡಿದ ಕೀರ್ತಿ ಡಾ. ಜೀಶಂಪ ಅವರದ್ದು. ಕರ್ನಾಟಕ ವೃತ್ತಗಾಯಕರ ಅಮೂಲಾಗ್ರ ಅಧ್ಯಯನ ಪ್ರಥಮ ಬಾರಿಗೆ ಇವರಿಂದ ನಡೆಯಿತು. ಕಂಸಾಳೆಯವರಂತೆ, ನೀಲಗಾರರಂತೆ, ದೊಂಬಿದಾಸರಂತೆ ಅನೇಕ ಬಗೆಯ ವೃತ್ತಿ ಗಾಯಕರು ಭಾರತದ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಕಂಡು ಬರುತ್ತಾರೆ. ಅಂತಹ ಕೆಲವು ಸಂಪ್ರದಾಯಗಳನ್ನು ಡಾ. ಜೀಶಂಪ ಅವರೇ ಹೆಸರಿಸಿದ್ದಾರೆ. "ಭಾರತೀಯ ಸಂಸ್ಕೃತಿಯ ಮೂಲ ಸೆಲೆಗಳನ್ನು ಭೇದಿಸಲು ರಾಮಾಯಣ ಮಹಾಭಾರತಗಳಂತೆಯೇ ನಮ್ಮ ಜನಪದ ಕಾವ್ಯಗಳು ಸಹಾಯಕವಾಗುತ್ತವೆ"[೩] ಎಂಬ ಮಾತನ್ನು ಅಲ್ಲಗಳೆಯುವಂತಿಲ್ಲ.

ಸಂಗ್ರಾಹಕರಾಗಿ, ಸಂಶೋಧಕರಾಗಿ, ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿರುವ ಜ್ಯೋತಿ ಹೊಸೂರ ಕನ್ನಡದ ಶ್ರೇಷ್ಠ ಜನಪದ ವಿದ್ವಾಂಸರಲ್ಲಿ ಒಬ್ಬರು. ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಮುಗಳಖೋಡದವರಾದ ಹೊಸೂರ ಅವರು ಮಹಾರಾಷ್ಟ್ರ ಗಡಿಯಲ್ಲಿ ಕನ್ನಡ ಪರ ಚಟುವಟಿಕೆಗಳಲ್ಲಿ ನಿರಂತರ ತಮ್ಮನ್ನು ತೊಡಗಿಸಿಕೊಂಡು ಕೆಲಸ ಮಾಡುತ್ತಿರುವ ಶ್ರೇಯಸ್ಸು ಇವರದಾಗಿದೆ. "ರಾಯಬಾಗ ಪರಿಸರದಲ್ಲಿ ವೈಚಾರಿಕತೆಯ, ಸೂಕ್ತ ಪ್ರಜ್ಞೆಯ ಕೊರತೆಯಿಂದಾಗಿ ಸಂಪ್ರದಾಯ ಮತ್ತು ಪ್ರಗತಿಪರ ಧೋರಣೆಯ ಗೊಂದಲದ ಸ್ಥಿತಿಯಲ್ಲಿ ಸಾಹಿತ್ಯಿಕ

---

೩. ಮಹಾಮಾರ್ಗ, ಪುಟ–೭೬೧.

ಮತ್ತು ಸಾಂಸ್ಕೃತಿಕ ಕಾರ್ಯಗಳು ನಡೆಯುತ್ತಿದ್ದವು. ಇಂಥ ಒಂದು ಸಂದರ್ಭದಲ್ಲಿ ವಿಜ್ಞಾನದ ವಿದ್ಯಾರ್ಥಿಯಾದ ಹೊಸೂರು ಅವರು ಕಲೆ, ಸಾಹಿತ್ಯ, ಸಾಂಸ್ಕೃತಿಕ ವಿಶಿಷ್ಟ ಕಾಳಜಿಯೊಂದಿಗೆ ವೈಚಾರಿಕತೆಯ ಜ್ಯೋತಿ ಬೆಳಗಿಸಿದರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು”[೪] ಜ್ಯೋತಿ ಹೊಸೂರ ಅವರು ಜಾನಪದ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಅನುಪಮ. ಈ ಕ್ಷೇತ್ರದ ಕಾರ್ಯ ಅವರಿಂದ ವೈಜ್ಞಾನಿಕ ತಳಹದಿಯ ಮೇಲೆ ಸುವ್ಯವಸ್ಥಿತವಾಗಿ ನಡೆದಿದೆ. ಎಂ.ಎ.ಪ್ರಥಮ ವರ್ಷದ ವಿದ್ಯಾರ್ಥಿಯಾಗಿದ್ದಾಗಲೇ, ‘ಬೆರೆಸಿ ಇಟ್ಟೇನ ಬೆಲ್ಲ ನೆನಗಡಲಿ’ ಜನಪದ ತ್ರಿಪದಿಯ ಸಂಗ್ರಹ ಸಂಪಾದಿಸಿ (೧೯೬೯) ಪ್ರಕಟಗೊಳಿಸಿದ್ದು ಒಂದು ಮೈಲಿಗಲ್ಲಾಗಿದೆ. ‘ಹೆಸರು ಹೇಳ್ತಿನಿ ಒಡಪ ಕಟ್ಟೆ’ (೧೯೭೧) ‘ಜಾತಿಗಾರರ ಜಾತಕ’ (೧೯೮೫) ‘ಕನಕದಾಸರ ಜೀವನ ವಿಚಾರ’ (೧೯೮೩) ಕೃತಿಗಳು ವಿದ್ವಾಂಸರ ಮೆಚ್ಚುಗೆ ಗಳಿಸಿದ ಮೌಲ್ಯಯುತ ಕೃತಿಗಳಾಗಿವೆ. ಇವು ಜಾನಪದ ಅಧ್ಯಯನ ಆಸಕ್ತರಿಗೆ ಜೀವಂತ ಆಕರಗಳಾಗಿವೆ. ‘ಹೆಸರ್ ಹೇಳ್ತಿನಿ ಒಡಪುಕಟ್ಟೆ’ ಒಡಪುಗಳ ಸಂಗ್ರಹ. ತುಂಬ ಸುಂದರವಾದ ಸಂಗ್ರಹವಿದು. ಒಡಪುಗಳ ಮಧ್ಯದಿಂದ ಜಿನುಗುವ ಅಲಂಕಾರ, ಗೇಯತೆಗಳು, ಒಡಪುಗಳಿಗೆ ಕಾವ್ಯದ ಸೌಂದರ್ಯ ತುಂಬಿದೆ. ‘ಗರತಿಯ ಹಾಡು’ ಸಂಗ್ರಹದ ದೃಷ್ಟಿಯಿಂದ ತ್ರಿಪದಿಗಳಿಗೆ ಆದಿಕೃತಿಯಾಗಿರುವಂತೆ, ‘ಹೆಸರ ಹೇಳ್ತಿನಿ ಒಡಪಕಟ್ಟೆ’ ಒಡಪುಗಳಿಗೆ ಆದಿ ಸಂಗ್ರಹ”[೫] ಎಂಬುದು ಶಬ್ದಶಃ ಸತ್ಯವಾದುದು.

‘ಜಾನಪದ ಉಪಾಸನೆ’ ಮತ್ತು ‘ಜಾನಪದ ಕುರಿತು’ ಎಂಬುವು ಜಾನಪದದ ಸಂಶೋಧನಾತ್ಮಕ, ವಿಮರ್ಶಾತ್ಮಕ ಲೇಖನಗಳನ್ನೊಳಗೊಂಡಿವೆ. ವೈವಿಧ್ಯಮಯವಾಗಿರುವ ಈ ಲೇಖನಗಳ ತುಂಬ ಜ್ಯೋತಿ ಹೊಸೂರ ಅವರ ಜಾನಪದವನ್ನು ಕುರಿತಾದ ಸೂಕ್ಷ್ಮ ಅವಲೋಕನ ಮತ್ತು ಖಚಿತ ವಿಶ್ಲೇಷನಾತ್ಮಕ ನೀತಿಯನ್ನು ಗಮನಿಸಬಹುದು. ಜಾನಪದದಲ್ಲಿ ಮಹತ್ವದ ಸಾಧನೆಗೈದಿದ್ದು ಓದುಗರಿಗೆ ಹೊಸ ಬೆಳಕಿನ ಹಾದಿಯಲ್ಲಿ ನಡೆಯುವಂತೆ ಲೇಖನಗಳನ್ನು ರಚಿಸಿ ನೀಡಿದ್ದಾರೆ.

ಜನಪದ ಕಲೆಗಳಲ್ಲಿ ಯಕ್ಷಗಾನ ಬಯಲಾಟಗಳ ಹುಟ್ಟು ಮತ್ತು ಬೆಳವಣಿಗೆ ಕುರಿತು ಅಧ್ಯಯನ ನಡೆಸಿದವರು. ಡಾ. ಎಂ.ಎಸ್.ಸುಂಕಾಪೂರ. ಇವರು ಉತ್ತರ ಕರ್ನಾಟಕದಲ್ಲಿ ಸುಪ್ರಸಿದ್ಧ ಕಲೆಯಾದ ಬಯಲಾಟವನ್ನು ಮತ್ತು ದಕ್ಷಿಣ ಕರ್ನಾಟಕದಲ್ಲಿ ಪ್ರಸಿದ್ಧ ಹೊಂದಿದ ಯಕ್ಷಗಾನಗಳೆರಡನ್ನು ಸಂಗ್ರಹ ಮಾಡುವ ಕಾರ್ಯದಲ್ಲಿ ತೊಡಗಿ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಜನಪದ ಪ್ರದರ್ಶಕ ಕಲೆಗಳಲ್ಲಿ ದೊಡ್ಡಾಟ, ಸಣ್ಣಾಟ, ಬಯಲಾಟ, ಯಕ್ಷಗಾನ ಕಲೆಗಳು ಬರುವವು. ‘ತಿರುನೀಲಕಂಠ’ (ಸಣ್ಣಾಟ) ‘ಪ್ರಮೀಳೆ’ (ದೊಡ್ಡಾಟ) ‘ಬಬ್ರುವಾಹನ’ ವಿಜಯ ‘ಶ್ರೀಕೃಷ್ಣ ಪಾರಿಜಾತ’

೪ .ಹಸಿರು ಕ್ರಾಂತಿ, ದಿನಪತ್ರಿಕೆ, ೫–೨–೨೦೦೩ರಲ್ಲಿ ಪ್ರಕಟವಾದ ಲೇಖನ, (ಕೆ.ಎಂ. ದೊಡಮನಿ) ಪುಟ–೪

೫. ಜನಪದ ಕೈಪಿಡಿ. ಕನ್ನಡ ಅಭಿವೃದ್ಧಿ ಪ್ರಾಧಿಕಾರ. ಪುಟ–೨೩೪.

[illegible]

‘ಅಲ್ಲಮ ಪ್ರಭು’ ‘ಕೃಷ್ಣ ಸಂಧಾನ’ (ಯಕ್ಷಗಾನ) ಮುಂತಾದವುಗಳನ್ನು ರಚಿಸಿದ್ದಾರೆ. ಹಲವು ಕಡೆಗಳಲ್ಲಿ ಇವರು ಅಖಿಲ ಕರ್ನಾಟಕ ಜಾನಪದ ಸಮ್ಮೇಳನಗಳನ್ನು ನಡೆಸಿರುವುದಲ್ಲದೆ, ‘ಜಾನಪದ ಸಾಹಿತ್ಯ ದರ್ಶನ’ದ ಐದು ಸಂಪುಟಗಳಿಗೆ ಸಂಪಾದಕರಾಗಿದ್ದರು. ‘ಜೀವನ ಜೋಕಾಲಿ’ ಎಂಬ ಮಾಲೆಯಲ್ಲಿ ಜನಪದ ಗೀತ ಪ್ರಕಾರಗಳ ಸಂಗ್ರಹ ರೂಪಕ ಕೃತಿಗಳನ್ನು ಸಂಪಾದಿಸಿದ್ದಾರೆ. ಇವರು ಬರೆದ ‘ಕನ್ನಡ ಸಾಹಿತ್ಯದಲ್ಲಿ ಹಾಸ್ಯ’ ಎಂಬ ಮಹಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ದೊರೆತಿದ್ದು ಹಾಸ್ಯ ಜೀವನದಲ್ಲಿ ಎಷ್ಟೊಂದು ಮಹತ್ವದ ಪಾತ್ರ ವಹಿಸುವದೆಂಬುದನ್ನು ವಿವರಿಸಿದ್ದಾರೆ.

ಬರವಣಿಗೆಯಲ್ಲದೆ ಇತರ ವಿಧಾಯಕ ಚಟುವಟಿಕೆಗಳ ಮೂಲಕ ಕನ್ನಡ ಜಾನಪದ ಅಧ್ಯಯನ ಬೆಳವಣಿಗೆಯನ್ನು ಹಾರೈಸಿದವರಲ್ಲಿ ಡಾ. ದೇ.ಜವರೇಗೌಡರೂ ಒಬ್ಬರು. ಜಾನಪದದ ವ್ಯಾಪಕತೆಯನ್ನು ಮನಗಂಡ ದೇಜಗೌ ಇದನ್ನು ಸ್ನಾತ್ತಕೋತ್ತರ ವಿದ್ಯಾರ್ಥಿಗಳಿಗೆ ಪಠ್ಯವಾಗಿಸುವ ಹೊಳಹು ಹಾಕಿದವರು. ೧೯೬೭ ರಲ್ಲಿ “ಕರ್ನಾಟಕ ಜಾನಪದ ಪರಿಷತ್ತು” ಎಂಬ ಸಂಸ್ಥೆಯನ್ನು ದೇಜಗೌ ಹುಟ್ಟು ಹಾಕಿದರು. ಈ ಪರಿಷತ್ತಿನಿಂದ ಹೊರಡುತ್ತಿದ್ದ ‘ಜನಪದ’ವೆಂಬ ಪತ್ರಿಕೆ ಅನೇಕ ಮಹತ್ವಪೂರ್ಣ ಲೇಖನಗಳನ್ನು ಕೊಟ್ಟಿತು. ‘ಜಾನಪದ ಅಧ್ಯಯನ’ (೧೯೬೬) ‘ಜಾನಪದ ಸೌಂದರ್ಯ’ (೧೯೭೭) ‘ಜಾನಪದ ವಾಹಿನಿ’ (೧೯೮೩) ಇವು ಜವರೇಗೌಡರ ಮಹತ್ವದ ಜಾನಪದ ಕೃತಿಗಳು. ಇವರ “ಜಾನಪದ ಅಧ್ಯಯನ”ವೆಂಬ ಬೃಹತ್ ಗ್ರಂಥದಲ್ಲಿ ಜನಪದದ ವ್ಯಾಪಕತೆ, ಸಂಗ್ರಹ, ಸಂಪಾದನೆ, ವೈಜ್ಞಾನಿಕ ದೃಷ್ಟಿ ಇವೆಲ್ಲವುಗಳ ಸಮಾಲೋಚನೆಯನ್ನು ಪ್ರಸ್ತುತ ಪೀಠಿಕೆಯಲ್ಲಿ ಕಾಣುತ್ತೇವೆ. ಜನಪದ ಗೀತೆ, ಜನಪದ ಕಥೆ, ಜನಪದ ಕಥನ ಕಾವ್ಯ, ಐತಿಹ್ಯ, ಪುರಾಣಗಳು, ಕುಣಿತ ಮತ್ತು ಬಯಲಾಟ, ಗಾದೆಗಳು ಎಂದು ಮುಂತಾಗಿ ಇಲ್ಲಿಯ ಲೇಖನಗಳೆಲ್ಲ ಆಯಾ ವಿಷಯದ ಆಳಕ್ಕಿಳಿದು ಅಭ್ಯಸಿಸುತ್ತದೆ. ಇಲ್ಲಿಯ ಅನೇಕ ವಿಷಯಗಳು ಅಂದಿಗೆ ಹೊಸದೆನಿಸಿದವು. ಇವುಗಳ ವಿವೇಚನೆಯೂ ಹೊಸ ಬಗೆಯದಾಗಿದ್ದಿತು. ಇಲ್ಲಿಯ ಲೇಖನಗಳ ಹರಹು ಆ ಕಾಲಕ್ಕೆ ಜವರೇಗೌಡರಂಥವರು ಕಂಡ ಜಾನಪದ ಸರ್ವವ್ಯಾಪಕತೆಗೆ ಸಾಕ್ಷಿ ಎಂಬಂತಿವೆ.

ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಕುಲಪತಿಗಳಾಗಿರುವ ಇವರು ತಾರುಣ್ಯದಲ್ಲಿಯೇ ಸಾಕಷ್ಟು ವಿದ್ವತ್ತಿನ ಕೆಲಸಗಳನ್ನು ನಿರ್ವಹಿಸಿದ್ದಾರೆ. ಜಾನಪದದಲ್ಲಿ ವಿಶೇಷ ಅಧ್ಯಯನ ನಡೆಸಿದ ಅವರು ‘ತುಳು ಜಾನಪದ’ವನ್ನು ಕುರಿತು ಪಿ.ಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಈ ಕೃತಿ ತುಳು ನಾಡಿನ ಸಂಸ್ಕೃತಿಯ ಅಧ್ಯಯನಕ್ಕೆ ಹೊಸ ಹಾದಿಯನ್ನು ನಿರ್ಮಿಸಿ ಕೊಟ್ಟಿತು. ‘ಕನ್ನಡ ಕಾದಂಬರಿಯ ಹೊಸ ಹೆಜ್ಜೆಗಳು’ ಇವರ ಸಂಪಾದಿತ ಕೃತಿಯಾಗಿದ್ದು, ‘ಅನ್ವಯಿಕ ಜಾನಪದ’ ಎಂಬ ಪ್ರಸಿದ್ಧ ಕೃತಿಯನ್ನು ರಚಿಸಿದ್ದಾರೆ. ಕೇವಲ ಸಾಹಿತ್ಯ ವಿಮರ್ಶೆಯಲ್ಲಿ ಪ್ರಚಲಿತವಿದ್ದ ಪ್ರಾಯೋಗಿಕತೆಯನ್ನು ಜಾನಪದಕ್ಕೂ ಅಳವಡಿಸಿ, ಅಭ್ಯಸಿಸಿ ಹೊಸ ಅರ್ಥ, ನೆಲೆಗಳನ್ನು ಕಂಡು ಹಿಡಿದು; ಜಾನಪದ ಅಧ್ಯಯನಕಾರರಿಗೆ ಮಾರ್ಗವನ್ನು ಹಾಕಿಕೊಟ್ಟಿದ್ದಾರೆ. ಅವರ ಸೇವೆ ಸ್ಮರಣೀಯವಾದುದು.

೨.೨. ಅಧ್ಯಯನಶೀಲ ಜಾನಪದ ಸಾಹಿತಿಗಳು:

ಇವರು ಮೂಲತಃ ಜಾನಪದ ಸಾಹಿತ್ಯ ಅಭಿಮಾನಿಗಳು, ಆರಾಧಕರು. ಜನಪದ ಸಂಗ್ರಹ, ಸಂಪಾದನೆ, ಸಂಶೋಧನೆ, ವಿಮರ್ಶೆಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ಕೆಲವರು ಸೃಜನಶೀಲ ಸಾಹಿತ್ಯದಲ್ಲಿ ಕೃಷಿ ಮಾಡಿದರೂ ಕೂಡ ಜಾನಪದ ಪ್ರೀತಿ ಕಾರಣವಾಗಿ, ಬೆಳೆದು ಬಂದ ಪರಿಸರದ ಪ್ರಭಾವದಿಂದಾಗಿ ಜನಪದ ಸಾಹಿತ್ಯ ಪೋಷಣೆಗೆ ಮುಂದಾದವರಾಗಿದ್ದಾರೆ. ಜಾನಪದ ವಿಮರ್ಶೆ ಮತ್ತು ಸಂಶೋಧನೆಗಳಲ್ಲಿ ತಮ್ಮದೇ ಆದ ಕೊಡುಗೆ ನೀಡಿದವರಾಗಿದ್ದಾರೆ.

ತಮ್ಮ ಅಧ್ಯಯನಶೀಲ ವ್ಯಕ್ತಿತ್ವದಿಂದಾಗಿ ಕಳೆದು ಹೋಗುತ್ತಿರುವ ಜಾನಪದ ಸಾಹಿತ್ಯದ ಅಮೂಲ್ಯ ಸಂಪತ್ತನ್ನು ಉಳಿಸಬೇಕೆಂಬ ಅದಮ್ಯ ಆಸಕ್ತಿಯಿಂದ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರದರ್ಶನ ಕಲೆಗಳಾಗಿರಬಹುದು. ಜನಪದದ ವಿವಿಧ ಸಾಹಿತ್ಯ ಪ್ರಕಾರಗಳಾಗಿರಬಹುದು. ಜನಾಂಗಿಕ ಅಧ್ಯಯನವಾಗಿರಬಹುದು. ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಗಾಢವಾಗಿ ತೊಡಗಿಸಿಕೊಂಡು ಜಾನಪದದ ಅನನ್ಯತೆಯನ್ನು ಕಟ್ಟಿಕೊಟ್ಟವರಿದ್ದಾರೆ. ವಿದ್ವತ್‌ವಲಯದಲ್ಲಿ ಜಾನಪದ ಸಾಹಿತ್ಯಕ್ಕೆ ಮಾನ್ಯತೆ ಒದಗಿಸುವಲ್ಲಿ ಇವರ ಕಾಣಿಕೆಯು ಗಣನೀಯವಾಗಿದೆ. ಅಂಥ ಜಾನಪದ ಸಾಹಿತಿಗಳ ಕಾರ್ಯವನ್ನು ಸ್ಥೂಲವಾಗಿ ಇದರಲ್ಲಿ ವಿವರಿಸಲಾಗಿದೆ.

ಜಾನಪದ ಮತ್ತೋರ್ವ ವಿದ್ವಾಂಸರಾದ ಡಾ. ಸೋಮಸೇಖರ ಇಮ್ರಾಪೂರ ಅವರು ಒಗಟನ್ನು ಕುರಿತು ಸಂಶೋಧನೆ ನಡೆಸಿ ಪಿ.ಎಚ್.ಡಿ ಪಡೆದಿದ್ದಾರೆ "ಸಾವಿರದ ಒಗಟುಗಳು" ಸಂಗ್ರಹವು ಉತ್ತರ ಕರ್ನಾಟಕದ ಜನರ ಸಂಸ್ಕೃತಿಯನ್ನು ಅರ್ಥೈಸುವ ಪ್ರಮುಖ ಗ್ರಂಥ. ಒಗಟುಗಳ ಸೊಗಡನ್ನು ಎಳೆಎಳೆಯಾಗಿ, ತಿಳಿತಿಳಿಯಾಗಿ, ತೊಳೆತೊಳೆಯಾಗಿ ಬಿಡಿಸಿದ್ದಾರೆ.ಜನಪದ ಭಾಷೆಯ ಸಕಲ ಸಾಧ್ಯತೆಗಳನ್ನು ಚೆನ್ನಾಗಿ ಬಳಸಿಕೊಂಡು ಕವಿತೆ ರಚನೆ ಮಾಡುತ್ತಾರೆ. ಬಯಲಾಟದ ನಟನೆ ಮತ್ತು ಜನಪದ ಗಾಯನ ಇವರ ಮತ್ತೊಂದು ವೈಶಿಷ್ಟ್ಯ. ಇಮ್ರಾಪೂರ ಹಾಡುತ್ತಾರೆಂದರೆ, ಅದೊಂದು ವಿಶಿಷ್ಟ ಅನುಭವ. ತಮ್ಮ ಮಾತಿನಲ್ಲಿಯೇ ಜಾನಪದೀಯವಾಗಿರುವ ಈ ವಿದ್ವಾಂಸರು ಕರ್ನಾಟಕ ಜಾನಪದ ಸಂದರ್ಭದಲ್ಲಿ ಮುಖ್ಯರು.

ಜಾನಪದದಲ್ಲಿ ಮೀಮಾಂಸೆ ಕೂಡ ಸಾಧ್ಯವನ್ನಾಗಿ ಮಾಡಿ ತೋರಿಸಿದವರು ಡಾ. ಸಂಗಮೇಶ ಬಿರಾದಾರ ಅವರು. ಕನ್ನಡ ಹಾಗೂ ಮರಾಠಿ ಲಾವಣಿ ಸಾಹಿತ್ಯ ಕುರಿತು ಆಳವಾದ ಅಧ್ಯಯನ ಮಾಡಿದ್ದಾರೆ. ಅವರ "ಚಾಪಹಾಕತೀನ ಡಪ್ಪಿನ ಮ್ಯಾಲ" (೧೯೮೧) ತರಂಗ ಒಂದರಲ್ಲಿ, ಜಾನಪದ ಸಾಹಿತ್ಯದ ಸಾಮಾನ್ಯ ಸ್ವರೂಪ, ಡಪ್ಪಿನ ಮುಖದರ್ಶನ, ಜಾನಪದ ಪ್ರಾಚೀನತೆ, ಲಾವಣಿಯ ಸ್ವರೂಪ, ಮೈಕಟ್ಟು, ಕನ್ನಡ ಮರಾಠಿ ತುಲನೆ, ಛಂದಸ್ಸು ಹೀಗೆ ಶಾಸ್ತ್ರೀಯವಾಗಿ ಲಾವಣಿ ಸಾಹಿತ್ಯದ ಮೀಮಾಂಸೆ ಮಾಡಿದ್ದಾರೆ. ತರಂಗ ಎರಡರಲ್ಲಿ, ೧೪ ಪೌರಾಣಿಕ ಲಾವಣಿಗಳ ಸಂಗ್ರಹಗಳಿವೆ. ಸಮಾಲೋಚನೆಯಲ್ಲಿ ಲಾವಣಿಕಾರನ ಹೆಸರು ಹಾಗೂ ಹಾಡಿದವರ ಹೆಸರುಗಳನ್ನು ಉಲ್ಲೇಖಿಸಿ, ಲಾವಣಿಯ ಅರ್ಥ ವಿವರಣೆಯನ್ನು ಜನಸಾಮಾನ್ಯರಿಗೂ ತಿಳಿಯುವಂತೆ

[illegible]

ನಿರೂಪಿಸಿದ್ದಾರೆ. ಕೊನೆಗೆ ಕಠಿಣ ಶಬ್ದಾರ್ಥ ಕೊಟ್ಟಿದ್ದಾರೆ. ಜಾನಪದ ಕೃಷಿ ಅಧ್ಯಯನ ಹೀಗೆ ವೈಜ್ಞಾನಿಕವಾಗಿ ನಡೆಸಬೇಕು ಎನ್ನುವ ಅಭ್ಯಾಸಿಗಳಿಗೆ ಈ ಎರಡೂ ಕೃತಿಗಳು ಮಾರ್ಗದರ್ಶಿಯಾಗಿವೆ. ಜಾನಪದ ಸಾಹಿತ್ಯ ಸಂಗ್ರಹವೂ ಒಂದು ಕಲೆ ಎಂಬ ಅರಿವು ಮೂಡಿಸುತ್ತದೆ. ಇವರ "ಜನಪದದಲ್ಲಿ ಮಕ್ಕಳ ಸಾಹಿತ್ಯ" ವಿಶ್ವವಿದ್ಯಾಲಯ ಪ್ರಕಟಿಸಿದ ಮಹತ್ವದ ಕೃತಿಯಾಗಿದೆ.

ಸಾಲೋಟಗಿಯಂತ ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದಿರುವ ಎಂ.ಎಸ. ವಾಲಿಯವರು, ಜನಪದ ಸಂಗ್ರಹ, ಸಂಶೋಧನೆ, ವಿಮರ್ಶೆ, ಪ್ರಕಟಣೆ ಹಾಗೂ ಪ್ರಸಾರ ಕಾರ್ಯಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಉತ್ಸಾಹಿ ತರುಣರು. 'ಸಿಂಪಿ ಲಿಂಗಣ್ಣನವರ ಜೀವನ ಹಾಗೂ ಸಾಹಿತ್ಯ' (೧೯೯೦) ಎಂಬ ಮಹಾ ಪ್ರಬಂಧ ಬರೆದ ಪ್ರತಿಭಾವಂತರು. 'ಜಾನಪದ ಸಾಹಿತ್ಯದಲ್ಲಿ ನೀತಿ' (೧೯೭೮) 'ಸಿರಿಗನ್ನಡ ಒಡಮು' (೧೯೮೫) 'ಜಾನಪದ ಒಗಟುಗಳು' (೧೯೮೬) 'ಹಬ್ಬಗಳ ಜಾನಪದ ಹಾಡುಗಳು' ಲಾವಣಿಗಳ ಸಂಗ್ರಹ 'ಶರಣಸ್ಮೃತಿ' 'ಜಾನಪದ ಜೀವಾಳ' 'ಗಾನಗಂಧರ್ವ ಬಾಳಪ್ಪಾ ಹುಕ್ಕೇರಿ' ಅವರ ಪರಿಚಯ. 'ನಮ್ಮ ಒಕ್ಕಲಿಗರ ನಂಬಿಕೆಗಳು', ತೆಲಸಂಗದ ಶ್ರೀಗಂಧ ನಂದಾದೀಪ, ಕವಿ ರಾಜಶೇಖರ ವಿಳಾಸ, ಅಥಣಿ ತಾಲೂಕು ದರ್ಶನ, ಚಿನ್ಮಯ ಚಿಂತಾಮಣಿ, ಲೇಖನ ಸಂಪದ, ಚಿಂತನ ಪ್ರತಿಭೆ ಮೊದಲಾದವು ಸಂಕೀರ್ಣ ಕೃತಿಗಳಾಗಿವೆ. ಬಿಜಾಪುರದಲ್ಲಿ 'ಭುವನೇಶ್ವರಿ ಪ್ರಕಾಶನ'ವೆಂಬ ಸಂಸ್ಥೆ ಸ್ಥಾಪಿಸಿ ಮೂವತ್ತೈದಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಇದರ ಮೂಲಕ ಪ್ರಕಟಿಸಿದ್ದಾರೆ. ಹೊಸಬರ, ಯುವಕರ, ಕೃತಿಗಳನ್ನು ಇದರಲ್ಲಿ ಪ್ರಕಟಿಸಿದ್ದು ಶ್ಲಾಘನೀಯವಾಗಿದೆ. ಡಾ. ವಾಲಿ ಸಹ ಸಂಪಾದಕತ್ವದಲ್ಲಿ ಹೊರಟ "ದುಂಡು ಮಲ್ಲಿಗೆ ಹೂವು ಬುಟ್ಟಿಲಿ ಬಂದಾವ" ಮೇರು ಕೃತಿ; ಜಾನಪದ ಪರಿಷತ್ತಿನ ಪ್ರಕಟಣೆಯಾಗಿದ್ದು ಅಧ್ಯಯನಕ್ಕೆ, ಸಂಶೋಧನೆಗೆ ಮಾರ್ಗದರ್ಶಿಯಾಗಿವೆ.

ಬೆಳಗಾವಿ ಜಿಲ್ಲೆಯವರಾದ ಬಸವರಾಜ ಮಲಶೆಟ್ಟಿಯವರು "ಉತ್ತರ ಕರ್ನಾಟಕದ ಬಯಲಾಟಗಳು" ಸಂಶೋಧನಾ ಮಹಾಪ್ರಬಂಧಕ್ಕೆ, ಕರ್ನಾಟಕ ವಿಶ್ವ ವಿದ್ಯಾಲಯದಿಂದ ಪಿ.ಎಚ್.ಡಿ ಪದವಿ ಗಳಿಸಿದವರು. ವಿವಿಧ ವಿಶ್ವವಿದ್ಯಾಲಯಗಳು ಮತ್ತು ಅಕಾಡಮಿಗಳ ಪುನರ್ಮನನ ಶಿಬಿರ, ಕಮ್ಮಟಗಳ ಸಂಪನ್ಮೂಲ ವ್ಯಕ್ತಿ ೧೫೦ ಕ್ಕೂ ಹೆಚ್ಚು ರಾಷ್ಟ್ರಮಟ್ಟದ ಮತ್ತು ರಾಜ್ಯಮಟ್ಟದ ವಿಚಾರಗೋಷ್ಠಿಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ ಇವರು ಜನಪದ ಸಾಹಿತ್ಯ, ವಚನ ಸಾಹಿತ್ಯ, ಹಾಗೂ ಪ್ರಾಚೀನ ಮಧ್ಯಕಾಲೀನ ಸಾಹಿತ್ಯದ ಕೃತಿಗಳನ್ನು ರಚಿಸಿದ್ದಾರೆ. ರಂಗ ನಾಟಕಗಳ ನಟ ಹಾಗೂ ನಿರ್ದೇಶಕರು, ಆಕಾಶವಾಣಿ, ದೂರದರ್ಶನ, ನಾಟಕ, ಧಾರವಾಹಿಗಳಲ್ಲಿ ಅಭಿನಯಿಸಿರುತ್ತಾರೆ. ಉತ್ತರ ಕರ್ನಾಟಕದ ರಂಗಕಲೆಗಳು, ಉತ್ತರ ಕರ್ನಾಟಕದ ಜನಪದ ವಾದ್ಯಗಳು, ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳನ್ನು ರಚಿಸಿ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. "ಗಿರಿಜಾ ಕಲ್ಯಾಣ ಪರಿಷ್ಕೃತ ದೊಡ್ಡಾಟದ ಲೇಖಕ, ನಿರ್ಮಾಪಕ ಹಾಗೂ

[illegible]

[illegible]

ನಿರ್ದೇಶಕರಾಗಿ, ದಿಲ್ಲಿ, ಮುಂಬೈ, ಬೆಂಗಳೂರುಗಳಲ್ಲಿ ಹಾಗೂ ಪ್ರತಿಷ್ಠಿತ, ಸಾಂಸ್ಕೃತಿಕ ಉತ್ಸವಗಳಲ್ಲಿಯೂ ಪ್ರದರ್ಶನಗೊಂಡಿವೆ."[೬] ಇದು ಅವರ ಜನಪದ ಸಾಹಿತ್ಯಕ್ಕೆ ಕೊಡುಗೆಯಾಗಿದೆ.

ಶ್ರೀರಾಮ ಇಟ್ಟಣ್ಣನವರ ಹೆಸರು ಜಾನಪದ ಸಂಶೋಧನಾ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನ ಪಡೆದಿದೆ. 'ಶ್ರೀಕೃಷ್ಣ ಪಾರಿಜಾತ ಒಂದು ಅಧ್ಯಯನ' (೧೯೯೧) ಇಟ್ಟಣ್ಣನವರ ಪಿ.ಎಚ್.ಡಿ. ಮಹಾ ಪ್ರಬಂಧ. ಶ್ರದ್ಧೆ, ಸದಭಿರುಚಿಯಿಂದ ಕ್ಷೇತ್ರಕಾರ್ಯ ಕೈಗೊಂಡು ಶ್ರೀಕೃಷ್ಣ ಪಾರಿಜಾತಕ್ಕೆ ಸಂಬಂಧಪಟ್ಟ ಸಮಗ್ರ ಮಾಹಿತಿ ಕಲೆ ಹಾಕಿ ಶಾಸ್ತ್ರೀಯವಾಗಿ ಪ್ರಸ್ತುತ ಗ್ರಂಥ ರಚಿಸಿ ಕನ್ನಡ ರಂಗಭೂಮಿಯ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಜಾನಪದ ಅಕಾಡೆಮಿಯಿಂದ 'ಕೌಜಲಗಿ ನಿಂಗವ್ವ' ಹಾಗೂ 'ಕೊಣ್ಣೂರ ಕರಿಸಿದ್ದೇಶ್ವರ ದೇವಸ್ಥಾನ' ಎಂಬೆರಡು ಕೃತಿಗಳು ಪ್ರಕಟಗೊಂಡಿವೆ. 'ಕಟ್ಟಿಚೆನ್ನ' ಎಂಬ ಅಪರೂಪದ ಸಣ್ಣಾಟ ಹಾಗೂ 'ಜನಪದ ಪಶುವೈದ್ಯ ಬೀಳಗಿ ಸಿದ್ದಪ್ಪ' (೧೯೯೦) ಕುರಿತು ಸಂಪಾದಿಸಿದ್ದಾರೆ. ವೀರಶೈವ ಮಠಗಳೂ ಈ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದು, 'ಶ್ರೀ ನಾಗನೂರ ರುದ್ರಾಕ್ಷಿಮಠ ಬೆಳಗಾವಿ' ವೀರಶೈವ ಅಧ್ಯಯನ ಅಕಾಡೆಯಿಂದ ಅವರ 'ಹಲಗಲಿ ಗ್ರಾಮ ಜಾನಪದ' (೧೯೯೪) ಕೃತಿ ಮುದ್ರಣಗೊಂಡಿದೆ. ಇವರ 'ಒಕ್ಕಲಿಗರ ಸೋಗು' 'ತಳವಾರ' 'ಬರಗಾಲದ ಲಾವಣಿ' ಹಲವಾರು ಜನಪದ ಲೇಖನಗಳು ಪ್ರಕಟವಾಗಿದ್ದು ಮುಂಬರುವ ಸಂಗ್ರಹಕಾರರಿಗೆ ಮಾರ್ಗದರ್ಶಿಗಳಾಗಿವೆ.

೨.೩. ಹವ್ಯಾಸಿ ಜಾನಪದ ಸಾಹಿತಿಗಳು:

ಈ ಭಾಗದಲ್ಲಿ ಬರುವವರು ವೃತ್ತಿಯಿಂದ ಬೇರೆಯಾಗಿದ್ದು, ಪ್ರವೃತ್ತಿಯಿಂದ ಜನಪದದ ಸಾಹಿತ್ಯ ನಂಟನ್ನು ಬೆಳೆಸಿಕೊಂಡವರು. ಸಾಹಿತ್ಯಕ್ಕೆ ಪೂರಕವಲ್ಲದ ಯಾವುದೋ ಕ್ಷೇತ್ರದಲ್ಲಿದ್ದು, ತಮ್ಮ ಪರಿಸರದ ದಟ್ಟ ಪ್ರಭಾವದಿಂದಾಗಿ, ಬಾಲ್ಯದ ಪರಂಪರಾಗತ ಪ್ರೇರಣೆಯಿಂದಾಗಿ ಜನಪದದ ಸೊಗಸಾಗಿ ಮರುಳಾಗಿ ಸಂಗ್ರಹಿಸಲು ಆಸಕ್ತಿಯನ್ನು ತಾಳಿದವರು.

ಹಳ್ಳಿಗರ ಜೀವನವನ್ನು ಸಮೀಪದಿಂದ ಕಂಡು, ಅವರ ಆಗು-ಹೋಗುಗಳನ್ನು ಗಮನಿಸಿದವರು. ಗ್ರಾಮೀಣ ಜನಾಂಗದಲ್ಲಿರುವ ಮೌಖಿಕ ಪರಂಪರೆಯ ಸಾಹಿತ್ಯವನ್ನು ದಾಖಲಿಸಬೇಕೆಂಬ ಉದ್ದೇಶದಿಂದ ಸಂಗ್ರಹ ಕಾರ್ಯ ಕೈಗೊಂಡವರು. ಮುಖ್ಯವಾಗಿ ಇವರು ಫಲಾಫಲದ ಅಪೇಕ್ಷೆ ಇರದೆ, ಜಾನಪದ ಕ್ಷೇತ್ರಕ್ಕೆ ಕೊಡುಗೆ ನೀಡುತ್ತೇವೆಯೆಂಬ ಪರಿಕಲ್ಪನೆಯಿಲ್ಲದೆ, ತಮಗೆ ಸರಿಕಂಡಿರುವ ಹಾಡುಗಳನ್ನು, ಕಥೆಗಳನ್ನು, ಒಗಟು, ಒಡಮಗಳನ್ನು ಜನಪದ ಸಾಹಿತ್ಯದ ಇತರ ಪ್ರಕಾರಗಳನ್ನು ಸಂಕಲಿಸಿದವರು. ಇವರಲ್ಲಿ ಗ್ರಂಥ ಸಂಪಾದನೆಯ ಶಿಸ್ತು, ಅಧ್ಯಯನದ ಸೈದ್ಧಾಂತಿಕ ತಿಳುವಳಿಕೆ ಯಾವುದೂ ಇಲ್ಲ. ಜನಪದ ಸಾಹಿತ್ಯದ ಪ್ರೀತಿ ಕಾರಣವಾಗಿ, 'ಹವ್ಯಾಸ'ವಾಗಿ ಸಂಕಲಿಸಿದವರು. ಡಾ. ನಿಂಗಣ್ಣ ಸಣ್ಣಕ್ಕಿ, ಶ್ರೀ ಎಸ್. ಎಮ್. ಬಿದರಿ.

---

೬. ಸಾಹಿತಿ ಮಾಹಿತಿ ಕೋಶ, ಬಿ.ಜಿ. ಸತ್ಯಮೂರ್ತಿ, ಪುಟ-೧೩೮.

ಎಮ್. ಜೀವನ. ಮತ್ತು ಜಿ.ಬಿ. ಖಾಡೆಯವರು. ಡಾ. ನಾಗೇಗೌಡರು ಅಧಿಕಾರಿಯಾಗಿದ್ದವರು. ಜಾನಪದ ಪ್ರೀತಿಯಿಂದಾಗಿ ಸಂಗ್ರಹ-ಸಂಪಾದನೆ ಕೈಗೊಂಡವರು. ಡಾ. ಸಣ್ಣಕ್ಕಿ ಪ್ರಾಥಮಿಕ ಶಾಲಾ ಶಿಕ್ಷಕರು. ಶ್ರೀ ಎಸ್. ಎಂ. ಬಿದರಿ ಶಾಲಾ ತಪಾಸಣಾಧಿಕಾರಿಗಳು. ಜಿ.ಬಿ. ಖಾಡೆಯವರು ಗ್ರಾಮಲೆಕ್ಕಿಗರು. ಹೀಗೆ ಸಾಹಿತ್ಯಕ್ಕೆ ಪೂರಕವಲ್ಲದ ಕ್ಷೇತ್ರದಲ್ಲಿ ಜಾನಪದ ಸಾಹಿತ್ಯ ಸಂಗ್ರಹ-ಸಂಪಾದನೆ ಮಾಡಿರುವುದು ವಿಶೇಷವಾಗಿದೆ.

ಜಾನಪದ ಲೋಕದ ರೂವಾರಿಗಳಾದ ಡಾ. ಎಚ್.ಎಲ್. ನಾಗೇಗೌಡರು ತಮ್ಮ ಜೀವನದಲ್ಲಿ ವೃತ್ತಿಯಿಂದ ನ್ಯಾಯಾಧೀಶರಾಗಿ ಸರ್ಕಾರಿ ಸೇವೆಯಲ್ಲಿದ್ದರೂ, ಪ್ರವೃತ್ತಿಯಿಂದ ಜನಪದ ಸಂರಕ್ಷಣೆಗಾಗಿ ತಮ್ಮ ಜೀವನವನ್ನೆ ಮೀಸಲಾಗಿಟ್ಟರು. ಅವರ ಪ್ರಧಾನ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ ಜಾನಪದ ವಿಷಯಕ್ಕೆ ಮೀಸಲಾದ ಏಕೈಕ ಪತ್ರಿಕೆಯಾದ "ಜಾನಪದ ಜಗತ್ತು" ಬರಹಗಾರರಿಗೆ, ಸಂಶೋಧಕರಿಗೆ ತವರು ಮನೆ ಇದ್ದ ಹಾಗೆ. ವಿಶ್ರಾಂತಿ ಜೀವನದಲ್ಲಿ "ಎಚ್.ಎಲ್.ನಾಗೇಗೌಡ ಟ್ರಸ್ಟ್" ಎಂಬೊಂದು ಸಂಸ್ಥೆಯನ್ನಾರಂಭಿಸಿದರು. ಮುಂದೆ ಇದೇ ಸಂಸ್ಥೆ "ಕರ್ನಾಟಕ ಜಾನಪದ ಟ್ರಸ್ಟ್" ಎಂದು ನಾಮಕರಣವಾಗಿ, ಕನ್ನಡ ಜಾನಪದದ ಸಂರಕ್ಷಣೆಯ ಕಾರ್ಯ ಕೈಗೊಂಡು ಜನಪದ ಕಲಾ ಮೇಳಗಳನ್ನು ನಡೆಸುವುದು. ಜನಪದ ಕಲಾವಿದರು ಹಾಗೂ ಕ್ಷೇತ್ರ ತಜ್ಞರನ್ನು ಗುರುತಿಸಿ ಗೌರವಿಸುವುದು ಮುಂತಾದ ಕಾರ್ಯಗಳನ್ನು ಈ ಸಂಸ್ಥೆ ಮಾಡಿದೆ. 'ವೆರಿಯರ್ ಎಲ್ವಿನ್'ರು ಆದಿವಾಸಿ ಜನಾಂಗದ ಮಧ್ಯದಲ್ಲಿ ತಮ್ಮ ಅನುಭವಗಳನ್ನು ಕುರಿತು ಬರೆದ ಇಂಗ್ಲೀಷ್ ಕೃತಿಯನ್ನು "ಗಿರಿಜನ ಪ್ರಪಂಚ" ಎಂಬ ಹೆಸರಿನಿಂದ ಅನುವಾದಿಸಿದ್ದಾರೆ. 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳನ್ನು ಅನುವಾದಿಸಿರುವ ಇವರು ಕರ್ನಾಟಕ ಜಾನಪದ ಸಂಗ್ರಹ ಅಧ್ಯಯನಕ್ಕೆ ಚಾಲನೆ ಕೊಟ್ಟವರಾಗಿದ್ದಾರೆ. ಅಲ್ಲದೆ ರಾಮನಗರದ ಸಮೀಪ "ಜಾನಪದ ಲೋಕ" ಎಂಬ ಜಾನಪದ ವಸ್ತು ಸಂಗ್ರಹಾಲಯದ ಸ್ಥಾಪನೆಗೂ ಕಾರಣೀಕರ್ತರಾಗಿದ್ದಾರೆ. 'ಸಿರಿಗಂಧ' ಎಂಬುವದು ಇವರ ಪ್ರಸಿದ್ಧ ದೂರದರ್ಶನ ಸರಣಿ. ಇದರಲ್ಲಿ ಕರ್ನಾಟಕದ ಜಾನಪದದ ವಿವಿಧ ವಿಚಾರಗಳ ಪ್ರದರ್ಶನ ಬಿತ್ತರಗೊಳ್ಳುವುದು. ಹೀಗೆ ಹೊಸ ಹೊಸ ಆವಿಷ್ಕಾರಗಳನ್ನು ಈ ಕ್ಷೇತ್ರದಲ್ಲಿ ಮಾಡಿ ತೋರಿಸಿದರು.

ನಿಂಗಣ್ಣ ಸಣ್ಣಕಿಯವರು ೧೯೮೨ರಲ್ಲಿ "ಕರ್ನಾಟಕದ ಗೊಂದಲಿಗರು ಹಾಗೂ ಅವರ ಸಾಹಿತ್ಯ" ಸಂಶೋಧನಾ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಗಳಿಸಿದರು. ಗೊಂದಲಿಗರ ಜನಾಂಗ ಹಾಗೂ ಸಾಹಿತ್ಯ ಮಹತ್ವದ ಅಧ್ಯಯನವಾಗಿದೆ. "ಗೊಂದಲಿಗರೇ ಹಲವು ವೃತ್ತಿಕಲಾ ಪಂಗಡದವರಾದುದನ್ನು ಮೊದಲು ಗುರುತಿಸಲು ಪ್ರಾರಂಭ ಮಾಡಿದವನೇ ನಾನು"[೭]. ಎಂದು ಸಣ್ಣಕ್ಕಿಯವರು ಹೇಳಿಕೊಂಡದ್ದನ್ನು ನೋಡಿದರೆ ಅತಿಶಯೋಕ್ತಿಯೆನಿಸಲಾರದು. ಉತ್ತರ ಕರ್ನಾಟಕದಲ್ಲಿ ಜಾನಪದ ಕಾರ್ಯವನ್ನು ಉತ್ಸಾಹದಿಂದ ಕೈಗೆತ್ತಿಕೊಂಡು ಬರೆದ ಜನಪದ ಲೇಖನಗಳು, ಜಾನಪದ ಅಭ್ಯಾಸಿಗಳಿಗೆ ಉಪಯುಕ್ತ ಮಾಹಿತಿಗಳನ್ನು ನೀಡುತ್ತಿವೆ. ಅದರಲ್ಲಿ 'ಜಾನಪದ ಜಯಂತಿ' ಬಹುಮುಖ್ಯ ಸಂಶೋಧನಾತ್ಮಕ

೭.ಜಾನಪದ ಜಯಂತಿ,ನಿಂಗಣ್ಣ ಸಣ್ಣಕ್ಕಿ, ಪುಟ-೪

[illegible]

[illegible]

[illegible]

ಲೇಖನಗಳನ್ನೊಳಗೊಂಡ ಲೇಖನವಾಗಿದೆ. ಇವಲ್ಲದೇ ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದ ಸುಮಾರು ೪೪ಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿದ್ದು ಅಧ್ಯ ಯನಕಾರರಿಗೆ ಉಪಯುಕ್ತವಾಗಿವೆ. 'ಹೇಳುವೆ ಮಜಕೂರಾ' ಎಂಬುದು ಇವರು ಸಂಪಾದಿಸಿದ ಕರ್ಬಲ್ ಪದಗಳ ಸಂಕಲನ. ಬಾಳ ಗೋಪಾಳನ ಲಾವಣಿಗಳು, ಗಂಡಸರ ಜಾನಪದ ಹಾಡುಗಳು, ಜಾನಪದದಲ್ಲಿ ಕಿತ್ತೂರು, ಜಾನಪದದಲ್ಲಿ ಅಂಕಲಗಿ, ಅಡವೇಶ ಇತ್ಯಾದಿಗಳು ಇವರ ಕೃತಿಗಳಾಗಿದ್ದು, ಇವುಗಳ ಮುಖಾಂತರ ಸಣ್ಣಕ್ಕಿಯವರು ಜಾನಪದ ಸಾಹಿತ್ಯ ಸೇವೆಯಲ್ಲಿ ತೊಡಗಿದ್ದಾರೆಂಬುದು ಸ್ಪಸ್ಟವಾಗುತ್ತದೆ.

ಎಸ್.ಎಂ.ಬಿದರಿಯವರು ವೃತ್ತಿಯಿಂದ ಶಿಕ್ಷಕರಾಗಿ, ಶಾಲಾ ತಪಾಸಣಾಧಿಕಾರಿಗಳಾಗಿ, ಪ್ರವೃತ್ತಿಯಿಂದ ಜಾನಪದ ಸಂಗ್ರಹಕಾರರು. 'ಹಾಲಸ್ವಾರಿಯ ಸುತ್ತ ಯಾಲಕ್ಕಿ ಬಿದ್ದಾವ' ಇವರ ಪ್ರಥಮ ತ್ರಿಪದಿಗಳ ಸಂಕಲನವಾಗಿದ್ದು, 'ಬಂಗಾರದ ಹುರಿಗೆಜ್ಜಿ ನುಡಿದಾವ' ಅವರ ದ್ವಿತೀಯ ಜಾನಪದ ಸಂಕಲನವಾಗಿದೆ. ತ್ರಿಪದಿಗಳನ್ನು ಸಂಗ್ರಹಿಸುವ ಕೆಲಸದಲ್ಲಿ ಕೌಶಲ್ಯವನ್ನು ತೋರ್ಪಡಿಸಿದಂತೆ, ಅವುಗಳನ್ನು ವಾದ್ಯ ಸಮೇತವಾಗಿ ಹಾಡಿ ತೋರಿಸುವ ಕೌಶಲ್ಯವನ್ನು ಪಡೆದಿರುವುದೊಂದು ವಿಶೇಷವಾಗಿದೆ. ಗೋಕಾವಿ ನಾಡಿನವರಾದ ಬಿದರಿಯವರು ಕುತೂಹಲಿಗಳಾಗಿ ಈ ಪ್ರದೇಶದುದಲ್ಲದೆ, ಬೇರೆ ಪ್ರದೇಶದಲ್ಲಿದ್ದ ಹಲವಾರು ತ್ರಿಪದಿಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಅಪ್ರಕಟಿತವೆಂದು ತಮಗೆನಿಸಿದ ೫೦೦ಕ್ಕಿಂತ ಹೆಚ್ಚಾಗಿ ತ್ರಿಪದಿಗಳನ್ನು ಸಂಕಲನಗಳಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಸಂಗ್ರಹಿತ ಪದ್ಯಗಳಲ್ಲಿ ವಿಷಯ ವೈವಿಧ್ಯವಿದೆ, ಭಾವವೈವಿಧ್ಯವಿದೆ. ಹಾಸ್ಯ, ಕೆಳೆ, ಹಗೆ, ಜೀವನದ ರೀತಿ–ನೀತಿಗಳಿವೆ. 'ಜಾನಪದ ಸೌಂದರ್ಯ' ಇವರ ಇನ್ನೊಂದು ಮಹತ್ವದ ಕೃತಿಯಾಗಿದ್ದು, ಜಾನಪದದಲ್ಲಿ ಪ್ರೀತಿ ವಿವಿಧ ಹಂತಗಳಲ್ಲಿ ಸಾಗಿಬಂದ ವಿಮರ್ಶಾ ಗ್ರಂಥವಾಗಿದೆ.

ಜಾನಪದ ಸಾಹಿತ್ಯ ಹಲಸಂಗಿ ಗೆಳೆಯರಿಂದ ಆರಂಭಗೊಂಡು ತರುವಾಯ ಹಲವಾರು ತ್ರಿಪದಿ ಸಂಕಲನಗಳು ಮೂಡಿಬಂದವು. ಅವುಗಳಲ್ಲಿ ಜಿ.ಬಿ. ಖಾಡೆಯವರ "ಕಾಡು ಹೂಗಳು" ಸಂಕಲನಗಳು ಹೆಚ್ಚು ಜನಪ್ರಿಯವಾದುದು. ಹಲಸಂಗಿ ಗೆಳೆಯರ ತರುವಾಯ ಅಖಂಡ ವಿಜಾಪುರ ಜಿಲ್ಲೆಯ ಜನಪದ ಗೀತ ಸಾಹಿತ್ಯ ಸಂಗ್ರಹ, ಸಂಪಾದನಾ ಕಾರ್ಯದಲ್ಲಿ ತೊದಲಬಾಗಿ (ಜಮಖಂಡಿ)ಯ ಜಿ.ಬಿ. ಖಾಡೆಯವರು ೧೯೬೫ರಲ್ಲಿ ಬಹುದೊಡ್ಡ ಕೆಲಸ ಮಾಡಿದರು. ಅವರು ಹಳ್ಳಿ–ಹಳ್ಳಿ ಸುತ್ತಿ, ಅದೂ ವಾಹನ ಸೌಕರ್ಯವಿಲ್ಲದ, ರೇಡಿಯೋ ಇನ್ನಿತರ ಮಾಧ್ಯಮಗಳ ಸೌಲಭ್ಯವಿಲ್ಲದ ಕಾಲದಲ್ಲಿ ಜನಪದ ಸಂಗ್ರಹ ಮಾಡಿದರು. ಬೀಸುವ ಕಲ್ಲಿನ, ಕೋಲಾಟದ ಹಾಗೂ ಹಂತಿ ಪದಗಳನ್ನು ಒಳಗೊಂಡ ತ್ರಿಪದಿ ಸಂಕಲನ 'ಕಾಡು ಹೂಗಳು' ಹೆಸರಿನಲ್ಲಿ ಮೈಸೂರು ವಿಶ್ವವಿದ್ಯಾಲಯಗಳು ೧೯೭೪ರಲ್ಲಿ ಪ್ರಕಟಿಸಿತು. ಮುಂದೆ ರಿವಾಯತ್ ಪದಗಳ ಸಂಕಲನ 'ಹಳ್ಳಿ ಹಬ್ಬಿಸಿದ ಹೂಬಳ್ಳಿ' ಹಾಗೂ ಡೊಳ್ಳಿನ ಮೇಳದವರು ಹೇಳಿದ ಕಥೆಗಳ 'ಬೆಳವಲ ಬೆಳಕು' ಕೃತಿಗಳು ೧೯೮೧ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. ಹಲಸಂಗಿ ಗೆಳೆಯರ ಪರಂಪರೆಯು ಈ ಭಾಗದಲ್ಲಿ ಜಿ.ಬಿ. ಖಾಡೆಯವರಿಂದ ಮುಂದುವರೆಯಿತು.

ಈ ರೀತಿಯಾಗಿ ಕನ್ನಡದಲ್ಲಿ ನಡೆದ ಜನಪದ ಸಾಹಿತ್ಯದ ಅಧ್ಯಯನದ ಸ್ಥೂಲ ನೋಟವನ್ನು ನೀಡಲಾಗಿದೆ. ಇಲ್ಲಿ ಪ್ರಾತಿನಿಧಿಕವಾಗಿ ಜಾನಪದ ಸಾಹಿತ್ಯವನ್ನು ಕೃಷಿ ಮಾಡಿದವರನ್ನು ಪರಿಚಯಿಸಲಾಗಿದೆ. ಜಾನಪದ ಸಾಹಿತ್ಯ ಕ್ಷೇತ್ರ ತುಂಬಾ ವ್ಯಾಪಕವಾಗಿದೆ. ಎಲ್ಲರನ್ನೂ-ಎಲ್ಲವನ್ನೂ ಇಲ್ಲಿ ಕೊಡಲು ಸಾಧ್ಯವಾಗುವುದಿಲ್ಲ. ಪ್ರಬಂಧದ ಮುಖ್ಯ ಉದ್ದೇಶವೂ ಅದಾಗಿಲ್ಲ. ಖಾಡೆಯವರ ಅಧ್ಯಯನಕ್ಕೆ ಪೂರಕವಾಗಿ ಜಾನಪದ ಸಾಹಿತ್ಯದ ಪರಿಚಯವನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಇಲ್ಲಿ ಪ್ರಸ್ತಾಪಿಸಿರುವವರಷ್ಟೆ ಜಾನಪದ ಸಾಹಿತ್ಯದ ಕಾರ್ಯ ಮಾಡಿಲ್ಲ. ಇದರಾಚೆಗೂ ಹಲವಾರು ಜನರಿದ್ದಾರೆ. ಮುಖ್ಯವಾಗಿ ಇದೊಂದು ಜಾನಪದ ಸಾಹಿತ್ಯ ಅಧ್ಯಯನದ ಪ್ರವೇಶವಾಗಿದೆ. ಅಧ್ಯಯನದ ಅನುಕೂಲತೆಗಾಗಿ ವಿದ್ವತ್‌ಪೂರ್ಣ ಜಾನಪದ ಸಾಹಿತಿಗಳು, ಅಧ್ಯಯನಶೀಲ ಸಾಹಿತಿಗಳು, ಹವ್ಯಾಸಿ ಜಾನಪದ ಸಾಹಿತಿಗಳೆಂದು ವಿಭಾಗಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಿ.ಬಿ. ಖಾಡೆಯವರ ಸಂಕಲಿತ ಜನಪದ ಸಾಹಿತ್ಯವನ್ನು ಅಧ್ಯಯನಿಸಲು ಪ್ರವೇಶ ಕಲ್ಪಿಸಲಾಗಿದೆ.

ಅಧ್ಯಾಯ ಮೂರು

ಜಿ. ಬಿ. ಖಾಡೆಯವರ ಸಂಕಲಿತ ಸಾಹಿತ್ಯ

ಅಧ್ಯಾಯ ಮೂರು

ಜಿ. ಬಿ. ಖಾಡೆಯವರ ಸಂಕಲಿತ ಸಾಹಿತ್ಯ

ಅಧ್ಯಯನದ ಅನುಕೂಲಕ್ಕಾಗಿ ಜಿ. ಬಿ. ಖಾಡೆಯವರ ಸಾಹಿತ್ಯವನ್ನು ಸಂಕಲಿತ ಜನಪದ ಸಾಹಿತ್ಯ, ಸಂಗೋಪನ ಸಾಹಿತ್ಯವೆಂದು ಪ್ರಮುಖವಾಗಿ ಎರಡು ವಿಭಾಗಗಳಾಗಿ ವಿಂಗಡಿಸಿಕೊಂಡಿದ್ದೇವೆ. ಪ್ರಥಮವಾಗಿ 'ಸಂಕಲಿತ ಜನಪದ ಸಾಹಿತ್ಯ'ದಲ್ಲಿ 'ಕಾಡು ಹೂಗಳು' 'ಹಳ್ಳಿ ಹಬ್ಬಿಸಿದ ಹೂಬಳ್ಳಿ' ಹಾಗೂ 'ಬೆಳವಲ ಬೆಳಕು' ಪರಿಗಣಿಸಿ ಅಧ್ಯಯನಿಸಲಾಗುವುದು. ಸ್ಥೂಲವಾಗಿ ಜಿ. ಬಿ. ಖಾಡೆಯವರ ಸಾಹಿತ್ಯವನ್ನು ಪದ್ಯ ಸಂಕಲನ ಹಾಗೂ ಗದ್ಯ ಸಂಕಲನವೆಂದು ವಿಂಗಡಿಸಬಹುದಾಗಿದೆ.

೩.೧. **ಪದ್ಯ ಸಂಕಲನ:**

೩.೧.೧.) ಕಾಡು ಹೂಗಳು

೩.೧.೨) ಹಳ್ಳಿ ಹಬ್ಬಿಸಿದ ಹೂಬಳ್ಳಿ

೩.೨) **ಗದ್ಯ ಸಂಕಲನ:**

೩.೨.೧) ಬೆಳವಲ ಬೆಳಕು

೩.೧.ಪದ್ಯ ಸಂಕಲನ:

೩.೧.೧. ಕಾಡು ಹೂಗಳು:

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ಒಂದು ಭದ್ರವಾದ ಬುನಾದಿಯನ್ನು ಪ್ರಪ್ರಥಮವಾಗಿ ಹಾಕಿಕೊಟ್ಟ ಕೀರ್ತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಸಲ್ಲುತ್ತದೆ. ಜಾನಪದ ಸಂಬಂಧವಾದ ಚಟುವಟಿಕೆಗಳು ಇಲ್ಲಿ ಸಕ್ರಮವಾಗಿ ಆರಂಭವಾಗಿ ವ್ಯಾಪಕವಾದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿದೆ. ಕನ್ನಡ ಎಂ.ಎ. ತರಗತಿಗೆ ಜಾನಪದವನ್ನು ಅಧ್ಯಯನ ವಿಷಯವನ್ನಾಗಿ ಅಳವಡಿಸಿದ್ದರ ಜೊತೆಗೆ ಜಾನಪದ ಸಂಶೋಧನೆ, ಜಾನಪದ ವಸ್ತು

ಸಂಗ್ರಹಾಲಯದ ಸ್ಥಾಪನೆಯ ಮೂಲಕ ಕನ್ನಡ ಅಧ್ಯಯನ ಸಂಸ್ಥೆ ಉತ್ತಮ ರೀತಿಯ ಜಾನಪದ ಸಂವರ್ಧನ ಕಾರ್ಯವನ್ನು ಕೈಗೊಂಡಿದೆ. ಸಂಗ್ರಾಹಕರು ಕೈಗೊಳ್ಳುವ ಜಾನಪದ ಸಂಬಂಧವಾದ ಸಂಶೋಧನೆಗಳಿಗೂ ವಿಶೇಷ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಜಾನಪದ ಮಾಲೆಯಲ್ಲಿ ಹದಿನೇಳು ಕೃತಿಗಳನ್ನು ಪ್ರಕಟಿಸಿದ್ದು, ಹದಿನೆಂಟನೇ ಕೃತಿಯಾಗಿ "ಕಾಡು ಹೂಗಳು" ೧೯೭೩ರರಲ್ಲಿ ಪ್ರಕಟಗೊಂಡಿದೆ. ಇದು ಜನಪದ ಗೀತ ಸಂಕಲನವಾಗಿದೆ. ಇದರಲ್ಲಿ,

೧)ಬೀಸುಕಲ್ಲಿನ ಹಾಡು. ೨)ಕೋಲಾಟದ ಪದಗಳು. ೩)ಹಂತಿ ಪದಗಳು. ೪)ಡೊಳ್ಳಿನ ಪದಗಳು ಎಂಬ ನಾಲ್ಕು ವಿಧವಾದ ಹಾಡುಗಳಿವೆ. ಪ್ರಸ್ತುತ ಗ್ರಂಥ ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಠ್ಯವಾಗಿದ್ದು ಸ್ಮರಣೀಯವಾಗಿದೆ.

೧) ಬೀಸುಕಲ್ಲಿನ ಹಾಡುಗಳು:

ಕೋಳಿ ಕೂಗುವ ಮುನ್ನ ಹಳ್ಳಿ ಹಳ್ಳಿಗಳಲ್ಲಿ ಗರತಿಯರು ಬೀಸುತ್ತ ಹಾಡುವ ಬೀಸು ಕಲ್ಲಿನ ಪದಗಳನ್ನು ಕೇಳಿ ತಲೆದೂಗದವರು ಇಲ್ಲವೇ ಇಲ್ಲ. ಬೀಸುಕಲ್ಲಿನ ಮಂದ್ರ ಷಡ್ಜದ ಸ್ವರವು ಕೇಳಿದವರ ಮನವನ್ನು ಏಕಾಗ್ರಗೊಳಿಸಿ ಚಿತ್ತಕ್ಕೆ ಸಮಾಧಾನ ತಂದುಕೊಡುವುದು. ಲಾಲಿಪದ, ಹರಕೆ ಪದ, ಪೌರಾಣಿಕ, ಪ್ರಾರ್ಥನೆ, ಸ್ವಸ್ವನೀತಿ ಪದಗಳು, ಅತ್ತೆ–ಸೊಸೆ, ಅತ್ತಿಗೆ ನಾದಿನಿಯರ ಪದಗಳು ಕಿವಿಗೆ ಬಲು ಇಂಪಾಗಿ ಕೇಳಿಸುತ್ತಿರುತ್ತವೆ. ಇಲ್ಲಿ ಗರತಿಗೆ ಬೀಸುವ ಕಲ್ಲಿನ ಬಳಿಯೇ ತವರ್ಮನೆಯಾದರೆ, ಬೀಸುವ ಕಲ್ಲಿನ ಪದಗಳ ದುಃಖ ಹೊರಬೀಳಿಸುವ ಉಪಾಯವಾಗುವುದು. ಈ ಕಲ್ಲಿನ ಗರ್ಗರ ಸಪ್ಪಳವೇ ಏಕಾಂತವಾದರೆ, ಗರತಿಯು ಸುಖ–ಸಮಾಧಾನಗಳಿಂದಲೂ, ಹಿಗ್ಗು–ಹುರುಪುಗಳಿಂದಲೂ ಮನೆತನರ ಭಾರವನ್ನೆಳೆವುದಕ್ಕೆ ಸಮರ್ಥಳಾಗುತ್ತಾಳೆ. ಆಗ ಆಕೆ ಹಾಡುವ ಲಾಲಿಯು, ನುಡಿಯುವ ಲಲ್ಲೆಯು ಕಳೆಗೊಳ್ಳುತ್ತದೆ. ಈಗ ಬೀಸುವ ಯಂತ್ರಚಾಲಿತ ಗಿರಣಿಗಳು ಬಂದಂದಿನಿಂದ ಗರತಿಯರ ಕೈಗಳೇ ಮುರಿದಂತಾಗಿವೆ. ಆದರೊಂದಿಗೆ ಬೀಸುವ ಕಲ್ಲಿನ ಪದಗಳೂ ಕಣ್ಮರೆಯಾಗುತ್ತಿದ್ದು ಅವುಗಳನ್ನು ಸಂಗ್ರಹಿಸಿ ಜಾನಪದ ಸಾಹಿತ್ಯಕ್ಕೆ ಮಹದುಪಕಾರವನ್ನು ಶ್ರೀಯುತ ಖಾಡೆಯವರು ಮಾಡಿದ್ದಾರೆ.

"ಗರತಿಯ ಹಾಡು ಸರ್ವೋದಯದ ಮಂತ್ರವಾಗಿದೆ. ಸರ್ವೋದಯದಲ್ಲಿ ಸರ್ವರ ಉದಯವಿರುವಂತೆ; ಸರ್ವ ವಿಧದ ಉದಯವೂ ಇದೆ"[೧] ಸರ್ವೋದಯದ ಸಾಧನೆಗೆ ಗರತಿಯು ಒಬ್ಬ ದೇವನದೇ ಆದ ವಿವಿಧ ರೂಪಗಳನ್ನು ವಿವಿಧ ಶಕ್ತಿಗಳನ್ನು ಆರಾಧಿಸುತ್ತಾಳೆ. ಆಗ ಆ ರೂಪಶಕ್ತಿಗಳಿಗೆ ಒಪ್ಪುವ ಹೆಸರಿನಿಂದ ಕರೆಯುತ್ತಾಳೆ. ಶಿವ, ವಿಠ್ಠಲ, ಎಲ್ಲವ್ವ, ಬೀರಪ್ಪ, ಸಿದ್ದಣ್ಣ, ಶ್ರೀಕೃಷ್ಣ, ಬಸವ, ಗುರು ಇವೆಲ್ಲ ಒಬ್ಬ ದೇವನ ಹಲವು ನಾಮಗಳಂತಿವೆ. "ಮನೆತನದ ಒಬ್ಬ ಹಿರಿಯನು ಕೆಲವರಿಗೆ ಅಜ್ಜನೆನಿಸುವಂತೆ, ಹಲವರಿಗೆ ಅಣ್ಣನೆನಿಸುವನು. ಆತನನ್ನು ಅಪ್ಪನೆಂದು

---

೧. ಹಾಲಸ್ವಾರಿಯ ಸುತ್ತ ಯಾಲಕ್ಕಿ ಬಿದ್ದಾವ. ಎಸ್. ಎಂ. ಬಿದರಿ. ಪುಟ – ೩

ಕೂಗುವವರಿರುವಂತೆ ಮಾವನೆಂದೋ, ಕಕ್ಕನೆಂದೊ ಕೂಗುವರಿರುವುದಿಲ್ಲವೆ? ಅಂಕಿತ ನಾಮದಲ್ಲಿ ಕರೆದಾಗ ಓಗೊಡುವಂತೆ, ಅನ್ವರ್ಥಕನಾಮದಲ್ಲಿ ಕರೆದಾಗ, ಅಡ್ಡ ಹೆಸರಿನಲ್ಲಿ ಕರೆದಾಗ ಅವನು ಓಗೊಡುವನು. ಸರ್ವೋದಯದ ಸಿದ್ಧಿಗೆ ಇಂಥ ಒಬ್ಬ ದೇವನ ಹಲವು ನಾಮಗಳನ್ನು ಗರತಿ ಬಯಸುತ್ತಾಳೆ"[೨] ಎಂಬುದನ್ನು ಕಾಣಬಹುದು.

"ತಂದೀ ನೀ ವಿಠಲ ತಾಯಿ ನೀ ರುಕ್ಮಿಣಿ
ಪುಂಡಲೀಕ ನನ್ನ ಹಿರಿಯಣ್ಣನ ಮುಂದಿರುವ
ಚಂದ್ರಭಾಗಾ ನನ್ನ ಸರವರ"[೩]

ದೇವರುಗಳನ್ನು ತನ್ನ ಸಂಬಂಧಿಕರನ್ನಾಗಿ ಮಾಡಿ ನೆನೆಸುವಳು. ಇಲ್ಲಿ ಬಂಧುಗಳಲ್ಲಿಯ ಅನ್ಯೋನ್ಯತೆಯನ್ನು ಸೂಚಿಸುತ್ತದೆ. "ಭಾಷಾ ಸಮುದಾಯದಲ್ಲಿ ವ್ಯಕ್ತಿಗಳನ್ನು ಒಗ್ಗೂಡಿಸುವ ಪ್ರಾಥಮಿಕ ಬಂಧನವೇ ಬಂಧುತ್ವವಾಗಿರುವುದರಿಂದ ಅಲ್ಲಿ ಸಾಮಾಜಿಕ ಮನ್ನಣೆ ಬಹುಮುಖ್ಯವಾದುದಾಗಿದೆ"[೪] ಅದಕ್ಕೇ ಗರತಿ ದೇವರನ್ನೆಲ್ಲ ಈ ರೀತಿಯಾಗಿ ನೆನೆಯುವಳು.

"ಜನಪದ ಸಾಹಿತ್ಯದ ಯಾವುದೇ ಪ್ರಕಾರವಾಗಲಿ, ಅದರಲ್ಲಿ ಪ್ರಧಾನವಾಗಿ ಕಾಣುವ ಭಾವಗಳು ಎರಡು. ಒಂದು ಧರ್ಮಕ್ಕೆ ಸಂಬಂಧಿಸಿದುದು; ಇನ್ನೊಂದು ಸಂಸಾರಕ್ಕೆ. ನಿಜವಾಗಿ ನೋಡಿದರೆ ನಮ್ಮ ಹಳ್ಳಿಗರಿಗೆ ಇವೆರಡೂ ಬೇರೆಬೇರೆಯಲ್ಲ"[೫]. ಅವರ ಧರ್ಮ ಸಂಸಾರವನ್ನು ಒಳಗೊಂಡುದು. ಒಂದನ್ನು ಬಿಟ್ಟು ಇನ್ನೊಂದಿಲ್ಲ ಅವರ ಪಾಲಿಗೆ. ಅದೇ ಅವರ ಧಾರ್ಮಿಕ ಸಾಧನೆಯ ರಹಸ್ಯ ಸಾಂಸಾರಿಕ ಸಂಬಂಧವನ್ನು ಕುರಿತು ಅವರ ದೃಷ್ಟಿಯನ್ನು ಗಮನಿಸುವುದಕ್ಕೆ ಮುನ್ನ ಅವರ ಧಾರ್ಮಿಕ ಶ್ರದ್ಧೆ, ಪ್ರಾರ್ಥನೆ, ಸ್ತುತಿ ಮೊದಲಾದವನ್ನು ಜೀವನದಲ್ಲಿ ಅಳವಡಿಸಿಕೊಂಡು ಆಚರಿಸುವ ರೀತಿಗಳನ್ನೆಲ್ಲ ನೋಡಬಹುದು.

"ಹರ್‍ಯಾಗ ಹೊತ್ತಿಲೆ ಎದ್ದು ಹರಿಧ್ಯಾನ ಗುರುಧ್ಯಾನ
ಇನ್ನೊಬ್ಬರ ಧ್ಯಾನ ನನಗಿಲ್ಲ ಪರವತ ಮಲ್ಲ
ಗುರುವ ನಿಮ್ಮ ಧ್ಯಾನ ಮನದಾಗ"[೬]

ಮುಂಜಾವಿನಲ್ಲಿ ಏಳುತ್ತಲೇ ದೇವರನ್ನು ಸ್ಮರಿಸಿಕೊಂಡು ತಮ್ಮ ದಿನನಿತ್ಯ ಕಾರ್ಯದಲ್ಲಿ ತೊಡಗುವುದು ಹಳ್ಳಿಗರ ಪದ್ಧತಿ. ಜಗತ್ತು ಎಚ್ಚರಗೊಳ್ಳುವ ಮುನ್ನವೇ ಅವಳ ಕೆಲಸ ಪ್ರಾಂರಭವಾಗುತ್ತದೆ. ಬೀಸುಕಲ್ಲಿನ ಮುಂದೆ ಕುಳಿತು ಅಂದಂದಿನ ದಿನಕ್ಕೆ ಬೇಕಾಗುವ ರಾಗಿ ಅಥವಾ ಜೋಳದ ಹಿಟ್ಟನ್ನು ಬೀಸಿಕೊಳ್ಳುವುದು ಸಾಮಾನ್ಯವಾಗಿ ಅವಳ ಮೊದಲ ಕೆಲಸ. ಸಾಮಾನ್ಯವಾಗಿ ಇಬ್ಬರು ಕುಳಿತು ಬೀಸುವುದು ಪದ್ಧತಿ. ಬೆಳಗಿನ ಜಾವದಲ್ಲಿ ಒಬ್ಬರಾದ ಮೇಲೊಬ್ಬರು ಧ್ವನಿಯೆತ್ತಿ ಹಾಡುತ್ತಾ ಬೀಸುವ

೨.ಹಾಲಸ್ವಾರಿಯ ಸುತ್ತ ಯಾಲಕ್ಕಿ ಬಿದ್ದಾವ. ಎಸ್. ಎಂ. ಬಿದರಿ. ಪುಟ–೪.

೩. ಕಾಡು ಹೂಗಳು. ಜಿ.ಬಿ. ಖಾಡೆ. ಪುಟ–೧. ಪದ್ಯ–೬.

೪. ಸಂಬಂಧವಾಚಕಗಳು, ಸಂಬೋಧನೆಗಳು, ಡಾ. ಎಸ್. ಎಸ್. ಅಂಗಡಿ. ಪುಟ–೮.

೫. ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಎಚ್. ತಿಪ್ಪೇರುದ್ರಸ್ವಾಮಿ. ಪುಟ–೪೨೪.

೬. ಕಾಡು ಹೂಗಳು. ಪುಟ – ೫. ಪದ್ಯ –೩೭.

[illegible]

ಸನ್ನಿವೇಶ ಅವಳ ಭಾವನೆಗಳ ಅಭಿವ್ಯಕ್ತಿಗೆ ಬಹಳ ಅನುಕೂಲಕರವಾದುದು. ಹೆಣ್ಣುಮಕ್ಕಳ ಹಾಡುಗಳಲ್ಲಿ ಬಹುಪಾಲು ತೌರಿನ ಹಂಬಲ, ಪತಿಯ ಪ್ರೇಮ, ಸಂಸಾರದ ಸುಖ–ದುಃಖಗಳು ಮೊದಲಾದ ಭಾವಗಳು ಬೀಸುವ ಕಲ್ಲಿನ ಮುಂದೆ ಅಭಿವ್ಯಕ್ತಿಯನ್ನು ಪಡೆದಿವೆ.

"ಮಹದೇವಾ ನಿನ ಹೊರ್ತ ಮತ್ಯಾರ್ನ ನಂಬಿಲ್ಲ
ನಾ ಮಾಡಿನೆಂಬ ಅಳಿವಿಲ್ಲ ಮ್ಯಾಗಿರುವ
ಸಂಬ ನಡಸಿರುವ ಸರುವೆಲ್ಲ"[೭]

ಬಂದ ವಿಪತ್ತುಗಳೆಲ್ಲವನ್ನು ಪಾರು ಮಾಡುವ ಶಕ್ತಿಯೊಂದನ್ನು ನಂಬಿ ನೆಚ್ಚಿದ್ದಾಳೆ. ದೇವರ ಮೇಲಿನ ನಿಷ್ಠೆ, ಸಮರ್ಪಣೆಗಳನ್ನು ಹಲವು ಮುಕ್ತಕಗಳಲ್ಲಿ ಕಾಣುವೆವು.

"ಹರ್‍ಯಾಗ ಏಳುತಲೆ ನರಿಯ ಮಾರಿ ಕಂಡೆ
ನರಿಯ ಗೊಂಗಡಿ ಮುದುಕನ ಮಾಧುರಾಯ
ತಿರಿಗಾಡುದು ಕಂಡೆ ಪವಳ್ಯಾಗ"[೮]

ಬೆಳಿಗ್ಗೆ ನರಿಯ ಮೋತಿ ಕಂಡರೆ ಶುಭ–ಲಾಭವಾಗುವುದೆಂಬ ನಂಬಿಗೆ. ತನ್ನ ಇಷ್ಟದೇವರನ್ನು ಅದಕ್ಕೆ ಹೋಲಿಸಿ ಪದ ಕಟ್ಟಿ ಹಾಡಿದ್ದಾಳೆ. ಸಾಮಾನ್ಯವಾಗಿ ಹಳ್ಳಿಗರಲ್ಲಿ ಬಹುದೇವತಾ ಆರಾಧನೆ ಹೆಚ್ಚು. ಒಂದೊಂದು ಉದ್ದೇಶಕ್ಕಾಗಿ ಒಂದೊಂದು ಶಕ್ತಿಯನ್ನು ಮೊರೆ ಹೊಗುತ್ತಾರೆ. ಅದರ ತೃಪ್ತಿಗಾಗಿ ಅನೇಕ ಆಚರಣೆಗಳನ್ನು ಕೈಗೊಳ್ಳುತ್ತಾರೆ. ಹಲವು ದೇವತೆಗಳ ಸ್ತುತಿ ಇಲ್ಲಿ ಕಂಡರೂ ಯಾವೊಂದು ಶಕ್ತಿಯನ್ನು ಲೌಕಿಕ ಸುಖಕ್ಕಾಗಿ ತೃಪ್ತಿಪಡಿಸುವ ಸ್ವಾರ್ಥ ಕ್ರಿಯೆಗಳು ಇಲ್ಲಿ ಕಾಣಿಸವು. "ನಾಮ ಬೇರೆ ಬೇರೆಯಾದರೂ ದೇವನೊಬ್ಬನೇ" ಎಂಬ ಉದಾತ್ತ ಮನಸ್ಸಿನ ತಿಳಿಯಾದ ಭಕ್ತಿಭಾವನೆ ಇವುಗಳಲ್ಲಿದೆ.

"ಸುಕ್ಕರಾರದ ಸುಗುಣಾ ಮಂಗಳಾರದ ಮಹಿಮಾ
ಅಂಗಳಕ ಬಾರೋ ಶ್ರೀ ಕೃಷ್ಣಾ । ನಾ ನಿನಗ
ಮಂಗಳಾರತಿ ಬೆಳಗೀನ"[೯]

ಈ ಹಾಡುಗಳಲ್ಲೆಲ್ಲ ನಾವು ಕಾಣುವ ಭಕ್ತಿಭಾವ ಒಂದೇ ಬಗೆಯದು. ಕೃಷ್ಣ, ಬಸವಣ್ಣ, ಮಡ್ಡಿಸಿದ್ಧಲಿಂಗ ಹೆಸರುಗಳಲ್ಲಿ ವ್ಯತ್ಯಾಸವೇ ಹೊರತು, ಅವುಗಳ ಹಿಂದಿರುವ ಅಂತರಂಗದ ಪರಿಭಾವನೆಯ ಪರಿಯಲ್ಲಿ ಭೇದವಿಲ್ಲ.

ಪ್ರಾದೇಶಿಕ ಪರಿಸರಕ್ಕೆ ಅನುಗುಣವಾಗಿ ದೇವ–ದೇವತೆಗಳ ಪ್ರಭಾವ ಕಂಡು ಬರುತ್ತದೆ. ಇಲ್ಲಿ ಬಸವಣ್ಣ ಪರವತ ಮಲ್ಲಯ್ಯ, ವಿಘ್ನೇಶ್ವರ, ರಾಮಸ್ವಾಮಿ, ವಿಠ್ಠಲ–ರುಕ್ಮಿಣಿ, ಹನುಮ, ಮಡಿಸಿದ್ಧ, ಸಂಗಯ್ಯ, ಸಾವಳಗಿ ಶಿವಯೋಗಿ, ಬಬಲಾದಿ ಸದಾಶಿವ, ಲಚ್ಚ್ಯಾಣ ಸಿದ್ದಣ್ಣ,

---

೭. ಅದೇ, ಪುಟ – ೮. ಪದ್ಯ –೬೬.

೮. ಅದೇ, ಪುಟ– ೨೮. ಪದ್ಯ –೨೩೮.

೯. ಅದೇ. ಪುಟ– ೧೪. ಪದ್ಯ –೧೧೫

[illegible]

ನಾಗರಾಳ ಪಡಿಯವ್ವ, ಕುಂಚನೂರ ಮಾದಣ್ಣ, ನಿಡೋಣಿ ಸಿದರಾಯ ಇತ್ಯಾದಿ ದೇವರುಗಳ ಸ್ತುತಿ ಪದ ಪ್ರಧಾನವಾಗಿ ಕಂಡು ಬರುತ್ತವೆ. "ಯಾವುದೇ ಗ್ರಾಮಗಳಲ್ಲಿ ನಾವು ನೋಡಿದಾಗ ಅಲ್ಲಿ ಶಿವ, ರಾಮ, ಹನುಮಂತ ಇತ್ಯಾದಿ ಶಿಷ್ಟ ದೇವಾಲಯಗಳಲ್ಲದೆ ಬಹುಸಂಖ್ಯೆಯ ಇತರ ದೇವತೆಗಳ ಗುಡಿಗಳೂ, ದೇವಸ್ಥಾನಗಳೆಂದು ಭಾವಿಸುವ ಕಲ್ಲು ಗೂಟಗಳೂ ಬರಿಯ ಬಣ್ಣ ಹಚ್ಚಿದ ಕಲ್ಲುಗಳೂ, ಮರದ ಗೂಟುಗಳೂ ಇರುವವು. ಈ ಶಿಷ್ಟೇತರ ದೇವತೆಗಳನ್ನು "ಗ್ರಾಮ್ಯ ದೇವತೆ"ಗಳೆಂದು ಹೆಸರಿಸಿದ್ದಾರೆ"[೧೦] ಎಂಬುದು ಗಮನಾರ್ಹವಾದದ್ದು.

"ಗ್ರಾಮದೇವತೆ" ಎಂಬುದು ಗ್ರಾಮ್ಯದೇವತೆಗಳಲ್ಲಿ ಒಂದಾದರೂ ಅದು ವಿಶಿಷ್ಟ ದೈವವೆಂದು ಪ್ರತಿಪಾದಿಸಲಿರುವುದರಿಂದ ಗ್ರಾಮ್ಯದೇವತೆ ಮತ್ತು ಗ್ರಾಮದೇವತೆ ಎಂಬ ಹೆಸರುಗಳನ್ನು ಪ್ರತ್ಯೇಕವಾದ ವಿಶಿಷ್ಟಾರ್ಥಗಳಲ್ಲಿ ಎಂ.ಚಿದಾನಂದಮೂರ್ತಿ ಬಳಸುತ್ತಾರೆ. ಇಲ್ಲಿರುವ ಹಾಡುಗಳಲ್ಲಿ ಲಕ್ಕವ್ವ ಗ್ರಾಮದೇವತೆಯಾಗಿ ಕಾಣಿಸಿಕೊಂಡು ದ್ಯಾಮವ್ವ, ಎಲ್ಲವ್ವ, ಗೌರಿ, ಪಡಿಯವ್ವ, ದಾನಮ್ಮ, ಭಾರಮ್ಮ ಹಲವು ದೇವತೆಗಳ ಸ್ತುತಿ, ಹರಕೆ ಪದಗಳು ಕಂಡುಬರುವುದು ಸಹಜ.

ಗ್ರಾಮದ ಎಲ್ಲ ಕೆಳವರ್ಗದ, ಅಪೌರಾಣಿಕ ದೇವತೆಗಳೆಲ್ಲವೂ ಗ್ರಾಮ್ಯದೇವತೆಗಳು. 'ಗ್ರಾಮದೇವತೆ'ಯೂ ಗ್ರಾಮ್ಯದೇವತೆಯೇ ಆದರೂ, ಅದು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುವ ಊರಿನ ದೇವತೆ. ಊರಿನ ಎಲ್ಲ ಕೆಳವರ್ಗದ ದೇವತೆಗಳೂ ಗ್ರಾಮ ದೇವತೆಗಳಲ್ಲ; ಅವು ಬರೀ ಗ್ರಾಮ್ಯ ದೇವತೆಗಳು. ಬ್ರಾಹ್ಮಣರೂ ಸೇರಿದಂತೆ ಊರಿನ ಎಲ್ಲ ಜಾತಿ ವರ್ಗಗಳ ಜನರೂ ಅಥವಾ ಇಡೀ ಊರೇ ಒಂದಲ್ಲ ಒಂದು ರೀತಿಯಲ್ಲಿ ಭಾಗಿಯಾಗುವುದೋ ಅದು ಆ ಊರಿನ "ಗ್ರಾಮದೇವತೆ". ಅಂದರೆ ಯಾವುದೇ ಊರಿಗೆ ಇರುವುದು ಒಂದೇ ಗ್ರಾಮ ದೇವತೆ; ಊರಲ್ಲಿ ಗ್ರಾಮ ದೇವತೆಯೂ ಸೇರಿದಂತೆ ಹಲವು ಗ್ರಾಮ್ಯ ದೇವತೆಗಳಿರಬಹುದು.

"ಒಂದು ಊರು ಪ್ರಾರಂಭವಾದಾಗ ಇದ್ದ ಅಥವಾ ಪ್ರಾರಂಭವಾದಾಗ ಸ್ಥಾಪಿಸಿದ ಆ ಊರಿನ ರಕ್ಷಣಾ ದೇವತೆ ಅಥವಾ ಅಧಿದೇವತೆ ಅಥವಾ ಮೂಲದೇವತೆಯೇ ಆ ಊರಿನ ಗ್ರಾಮದೇವತೆ." ಗ್ರಾಮದೇವತೆ ಗ್ರಾಮದ ಅಧಿದೈವ; ಗ್ರಾಮದ ರಕ್ಷಾದೇವತೆ ಇಲ್ಲಿ ಲೇಖಕರ ಊರಾದ ತೊದಲಬಾಗಿ ಊರಿನ ಲಕ್ಕವ್ವನ ಅಂದರೆ ಗ್ರಾಮದೇವತೆಯ ಹಲವು ಪದಗಳಿವೆ. ಅವುಗಳಲ್ಲಿ ಕೆಲವು.

"ಊರ ನನ್ನ ತೊದಲಬಾಗಿ ಉಸಕಿನ ಕಟ್ಟಿಮ್ಯಾಲ
ಸಣ್ಣಂಗಿ ಬಡಿಗ್ಯಾ ನಲನಲದ ಮಾಡ್ಯಾನ
ತಾಯಿ ಲಕ್ಕವ್ವನ ಹೊಸ ತೇರ"[೧೧]

---

೧೧. ಕಾಡು ಹೂಗಳು. ಜಿ.ಬಿ. ಖಾಡೆ. ಪುಟ–೬. ಪದ್ಯ–೪೬.

೧೦. ಹೊಸತು ಹೊಸತು. ಎಂ. ಚಿದಾನಂದಮೂರ್ತಿ. ಪುಟ–೩೪೪.

ಪ್ರಾಸಬದ್ಧವಾದ ಸ್ತುತಿ ಪದಗಳ ಗ್ರಾಮದೇವತೆಗಳಾದ ಲಕ್ಕವ್ವ, ಎಲ್ಲವ್ವ, ದ್ಯಾಮವ್ವ, ಗುಡ್ಡಾಪುರ ದಾನಮ್ಮ ಇತ್ಯಾದಿ ದೇವತೆಗಳ ವರ್ಣನೆಗಳೂ ಕಂಡು ಬರುತ್ತವೆ. ಅಲ್ಲಲ್ಲಿ ಪ್ರಚಲಿತವಿದ್ದ ಉಗ್ರ ದೇವತೆಗಳ ಉಪಾಸನೆಯನ್ನು ಕುರಿತಾಗಿ ಪದಗಳಿವೆ.

"ಕುಂತರ ನಿಮಧ್ಯಾನ ನಿಂತರ ನಿಮ ಧ್ಯಾನ
ಮಗ್ಗಲ ಹಚ್ಚಾಗ ನಿಮಧ್ಯಾನ – ವಿಠಲಸ್ವಾಮಿ
ನಿಮ್ಮ ಧ್ಯಾನದಲ್ಲಿ ನನಗ ಬೆಳಗಾತ"[೧೨]

ಕುಳಿತರೂ, ನಿಂತರೂ, ನಿದ್ದೆಗಣ್ಣಿನಲ್ಲೂ ಕೂಡ ಸದ್ಗುರುವಿನ ಧ್ಯಾನವನ್ನು ಮಾಡುವ ಗೃಹಿಣಿಯ ಸಾಧನೆ ಕೇವಲ ಬಹಿರಂಗದ ಉಪಾಸನೆ ಉತ್ಸವಗಳಿಗೆ ಮೀಸಲಾದುದಲ್ಲ. ಅಂತರ್ಮುಖ ಸಾಧನೆ ಅಲ್ಲಿ ಕಾಣುತ್ತದೆ. ಬೀಸುವ ಹಾಡುಗಳಲ್ಲಿ ನಿಷ್ಠೆ ಅಲ್ಲಲ್ಲಿ ಮೈಯೆತ್ತಿದೆ. ವಿಠಲಸ್ವಾಮಿ ಅನುಗ್ರಹದಿಂದ ಮನೆತುಂಬಿದ ಗೃಹಿಣಿ ನಿದ್ದೆಗಣ್ಣಿನಲ್ಲೂ ಅವನನ್ನು ಸ್ಮರಿಸುವ ಸಾಧಕಿಯಾಗಿ ಪರಿಣಮಿಸಿದ್ದಾಳೆ. ಈ ನಿಲವಿಗಿಂತ ಮುಂದಿನ ಹೆಜ್ಜೆಯನ್ನು ಮುಟ್ಟಿದ ಆಧ್ಯಾತ್ಮಿಕ ಸಾಧಕರು ಹಳ್ಳಿಗಳಲ್ಲಿ ಅಲ್ಲಲ್ಲಿ ಕಾಣುತ್ತಾರೆ ಗುಪ್ತಯೋಗಿಗಳವರು.

"ಸಂಗಯ್ಯ ಸ್ವಾಮೀದು ಮಹಿಮೇನು ಹೇಳಲಿ
ಪರಿ ಪರಿಯಿಂದ ಅನುಭಾವ ಸಂಗಯ್ಯಸ್ವಾಮಿ
ತಿಂಗಳ ಭಜನಿ ಹಿಡಿದಾರ"[೧೩]

ಗುರುಶಿಷ್ಯ ಪರಂಪರೆ ಹಲವು ಹಳ್ಳಿಗಳಲ್ಲಿ ಬೆಳೆದು ಬರುತ್ತಿರುವುದುಂಟು. ವೇದಾಂತ ತತ್ವಗಳನ್ನು ಉಪನಿಷತ್ ರಹಸ್ಯಗಳನ್ನು ಅರಿತು ಅರಗಿಸಿಕೊಂಡು, ಅಳವಡಿಸಿಕೊಂಡು ಅವರು ಬರೆದಿರುವುದು ಕಡಿಮೆ. ಅಂತಹ ಗುರುವಿನ ಆಶ್ರಯ ಪಡೆದು ಧನ್ಯರಾದ ಸಾರ್ಥಕ ಜೀವಗಳು, ಎಲೆಮರೆಯ ಹೂವಂತೆ ಅರಳಿ, ಬಳಿಗೆ ಬಂದವರನ್ನು ತಮ್ಮ ಪರಿಮಳದಿಂದ ಪುನೀತರನ್ನಾಗಿ ಮಾಡುತ್ತವೆ.

"ಮಡಿಗೋಳ ಉಟ್ಟಾರ ಜಡಿಗೋಳ ಬಿಟ್ಟಾರ
ದಿನ್‌ಂತ ಗುಡ್ಡಾ ಇಳಿದಾರ, ಸಾವಳಗಿ ಶಿವಲಿಂಗಾ
ಮರ ಚಂಡ್ಯಾಗ ಹಾದ ಬರತಾರ"[೧೪]

ಸ್ವಾಮಿಗಳ (ಗುರುಗಳ) ಉಡುಗೆ, ತೊಡುಗೆಗಳ ಕುರಿತಾಗಿ ವಿವರಣೆಗಳಿರುವುದನ್ನು ಗಮನಿಸಬಹುದು. ಹೆಣ್ಣು ಮಗಳು ತನ್ನ ಜೀವನದ ಪೂರ್ಣತೆಗಾಗಿ ಅನೇಕ ಸನ್ನಿವೇಶಗಳನ್ನು, ವ್ಯಕ್ತಿಗಳನ್ನು ಅವಲಂಬಿಸಿ ನಡೆಯಬೇಕಾಗುತ್ತದೆ. ಹುಟ್ಟಿದಂದಿನಂದ ಹಿಡಿದು ಮರಣದವರೆಗೂ; ಮಗುವಾಗಿರುವಾಗ ತಂದೆ–ತಾಯಿಗಳು, ಬೆಳೆಯುತ್ತ ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು, ಬಂಧು–ಬಳಗದವರು, ಗೆಳೆಯ–ಗೆಳತಿಯರು, ಸತಿಯಾಗಿ ಮುಂದೆ ಮುಂದೆ ಮಕ್ಕಳು ಈ

೧೨. ಅದೇ. ಪುಟ–೧೨. ಪದ್ಯ–೧೦೩.

೧೩. ಕಾಡು ಹೂಗಳು. ಜಿ.ಬಿ. ಖಾಡೆ, ಪುಟ–೬ ಪದ್ಯ–೪೦.

೧೪. ಕಾಡು ಹೂಗಳು. ಜಿ.ಬಿ. ಖಾಡೆ, ಪುಟ–೭ ಪದ್ಯ–೫೭.

ಮೊದಲಾದ ಸಂಬಂಧಗಳನ್ನು ಅದಕ್ಕನುಗುಣವಾದ ಪರಿಸರಗಳನ್ನು ಆಕೆ ಅಳವಡಿಸಿಕೊಂಡು ಸಂಸಾರವೆಂಬ ಸಾಗರದಲ್ಲಿ ಈಜಬೇಕಾಗುತ್ತದೆ. ಅಣ್ಣ ತಮ್ಮಂದಿರ, ಅಕ್ಕ ತಂಗಿಯರ ಪ್ರೀತಿ ಪ್ರೇಮಗಳ ಕುರಿತು ಅನೇಕ ಪದಗಳು ಮೈಯೆತ್ತಿವೆ.

"ಏರಿಯ ಹೊಲದಾಗ ಎಳಿಯ ಮುಂಡಿಪಲ್ಲಿ
ಕರಿ ಇದ್ದರ ಭಾಳ ಹುಳಿಬಾಳ ನನ್ನಕ್ಕ
ಕರಿ ಇದ್ದರ ಭಾಳ ಕಳಿಭಾಳ"[೧೫]

"ಬಿಡ್ಹೋಗುವ ಜನಮಕ ಜಿದ್ದ್ಯಾಕ ವರಮ್ಯಾಕ
ಕುದ್ದಲತನಯಾಕ ಮನದಾಗ ಮರತೇದ ಮ್ಯಾಲ
ಬಿದ್ದ ಹೋಗುದಕ ತಡಾಏನ"[೧೬]

ಮನುಜ ಜನ್ಮ ನೀರ ಮೇಲಿನ ಗುಳ್ಳೆಯಂತೆ ಕ್ಷಣಿಕವಾದುದು. ಅದಕ್ಕಾಗಿ ಎಷ್ಟೊಂದು ಹೋರಾಟ ಕಾದಾಟ! ಪ್ರತಿದಿನ ಈ ಜೀವನಕ್ಕಾಗಿ ಎಷ್ಟೊಂದು ಕೊಲೆ ಸುಲಿಗೆ ವಿರಸಗಳು ನಡೆಯುತ್ತಿವೆ. ಅದಕ್ಕಾಗಿಯೇ ಇರಬೇಕು ಗರತಿ ತಿಳಿವಳಿಕೆಯ ನುಡಿ 'ಇರುವಾಗ ಎಲ್ಲರೊಂದಿಗೆ ಹೊಂದಿ ಬಾಳುವ' ಜೀವನ ಸಾರ ತಿಳಿಸುವಳು.

"ಅವಸರಲೆ ಮಾಡಣ್ಣಾ ಅಗಸಿ ಕಾಳಿನ ಬುಗುಡಿ
ಸೇರ ಬಂಗಾರದ ತೊಲಿವಾಲಿ ಬಬಲಾದಿ
ಗ್ರಾಮದಾಗಿರುವ ಗರತೀಗಿ"[೧೭]

ಹೆಣ್ಣು ಮಕ್ಕಳಿಗೆ ವಸ್ತ್ರ ಒಡವೆಗಳ ಆಸೆ ಎಷ್ಟೊಂದು ಇರುವುದೆಂಬುದನ್ನು ತ್ರಿಪದಿ ಮೂಲಕ ಅಭಿವ್ಯಕ್ತಪಡಿಸಿದ್ದಾಳೆ. ಸೇರ ಬಂಗಾರ ಆಗಿನ ಕಾಲದಲ್ಲಿ ಸಾಮಾನ್ಯವಾಗಿತ್ತು. ಕಡಿಮೆ ಬೆಲೆಗೆ ದೊರೆಯುತ್ತಿರಬಹುದೆಂಬುದು ತಿಳಿದು ಬರುತ್ತದೆ. ಅತ್ತೆ ಮನೆಯ ಸ್ಥಿತಿ–ಗತಿಗಳನ್ನು ವಿವರಿಸುವ ಗರತಿ, ತಂದೆ–ತಾಯಿಗಿಂತಲೂ ಹೆಚ್ಚಿನ ಪ್ರೀತಿ–ವಿಶ್ವಾಸ ತೋರುವ; ಮಗಳಂತೆ ನೋಡಿಕೊಳ್ಳುವವರ ಅತ್ತೆ ಮಾವಂದಿರನ್ನು ಲಿಂಗ ಸ್ವರೂಪದಲ್ಲಿ ಹಾಡಿ ಹೊಗಳಿದ್ದಾಳೆ. ಇನ್ನು ಕೆಲವು ಮನೆಗಳಲ್ಲಿ ಸೊಸೆಯಂದಿರನ್ನು ಪಶುವಿಗಿಂತ ಕಡೆಯಾಗಿ ನಡೆಸಿಕೊಳ್ಳುವುದನ್ನು ಕಾಣುತ್ತೇವೆ. ಗಂಡನ ಮನೆಯಲ್ಲಿ ಎಂಥ ಸ್ಥಿತಿಯನ್ನೂ ಎದುರಿಸಿ, ಎದುರಾಡದೆ, ನೋವನ್ನು ಸಹಿಸಿಕೊಡ ರೀತಿಯನ್ನು ಗರತಿ ಹಾಡಿನಲ್ಲಿ ತೋಡಿಕೊಂಡಿದ್ದಾಳೆ. ಅತ್ತೆ–ಸೊಸೆ ಹೊಂದಾಣಿಕೆಯಿಂದ ತಾಯಿ–ಮಗಳು ಸಮನಾಗಿ ನಡೆದರೆ ಸಂಸಾರ ಸುಖಮಯವಾಗಿ ಸಾಗುವುದು.

---

೧೫. ಕಾಡು ಹೂಗಳು. ಜಿ.ಬಿ. ಖಾಡೆ, ಪುಟ–೬ ಪದ್ಯ–೨೨೯.

೧೬. ಅದೇ, ಪುಟ–೧೨, ಪದ್ಯ–೧೦೧.

೧೭. ಅದೇ, ಪುಟ–೩, ಪದ್ಯ–೨೩.

[illegible]

"ವಾರಿಗೆ ರಾಯರ ಊರೀಗಿ ಹ್ವಾದರ
ಬೆಳದಿಂಗಳ ನಮಗ ಬಿಸಿಲಾಗಿ ರಾಯರ
ಅಮೃತದಡಗಿ ವಿಷವಾಗಿ"[೧೮]

ಗಂಡ ಎಂತವನೇ ಇರಲಿ ಹೆಂಡತಿಯ ಪಾಲಿಗೆ ಅವನು 'ಅರಸ'. ಆತನ ಹಾದಿಯನ್ನು ಕಾಯುತ್ತಾ ಕುಳಿತಿರುವ ಸನ್ನಿವೇಶ ಇದಾಗಿದೆ. ಅದೇ ಅರಸ ಪರವೂರಿಗೆ ಹೋದಾಗ ಮೂಡಿಬಂದ ಪದಗಳಲ್ಲಿ ಎಂಥ ಧ್ವನಿ ಅಡಗಿದೆ! ಮನೆಯೊಡೆಯ ಮನೆಯಲ್ಲಿರದಿದ್ದರೆ, ಪುರುಷ ಜೊತೆಯಲ್ಲಿರದಿದ್ದರೆ, ಬೆಳದಿಂಗಳೂ ಬಿಸಿಲಾಗಿ, ಅಮೃತಕ್ಕೆ ಸಮನಾದ ಅಡುಗೆ ವಿಷವಾಗಿ ಪರಿಣಮಿಸಿತು. ತನ್ನ ವಿರಹ ವೇದನೆಯನ್ನು ತೋಡಿದ್ದು ವಿಪ್ರಲಂಭ ಭಾವ ಇಲ್ಲಿದೆ. ಸತಿ-ಪತಿಗಳ ಪ್ರೇಮಮಯ ಜೀವನದ ಮುಂದಿನ ಹೆಜ್ಜೆ ಬಲವಾಗಿ ಬಂಧಿಸುವ 'ಅನಂದಗ್ರಂಥ' ಮಗು.

"ವಂದ್ಹೊತ್ತ ಮಾಡೀನ ಒಂದ ಕಾರಣದಿಂದ
ನನ್ನ ಬಾಳಾಗ ಮಗನ್ಹುಟ್ಟಿ ತೂಗುವಾಗ
ಉಲ್ಲಾಸ ಹುಟ್ಟಿ ಮನದಾಗ"[೧೯]

ಮಗುವಿಗಾಗಿ ದೇವರಿಗೆ ಹರಕೆ ಹೊರುವ ಪದ್ಧತಿ ಈಗಲೂ ಇದೆ. ಹರಕೆ ಹೊತ್ತು, ಹೆತ್ತಾಗ ಮಗುವಿನ ಲಾಲನೆ-ಪಾಲನೆಯೇ ಅವಳ ಜೀವನದ ಸ್ವರ್ಗವಾಗುತ್ತದೆ. ವಾತ್ಸಲ್ಯದ ರಕ್ಷಣೆಯನ್ನಿತ್ತು ಮಗುವನ್ನು ಬೆಳೆಸಿ, ತನ್ನ ಮುಂದಿನ ಜೀವನಕ್ಕೆ ಆತನಿಂದ ಮಹತ್ತರವಾದ ಆಸೆಗಳನ್ನು ಕಟ್ಟಿಕೊಳ್ಳುತ್ತಾಳೆ.

"ಬಾಳಿಹಣ್ಣಿನ ತಂದು ಸೀಳಿ ಸಕ್ಕರಿ ತುಂಬಿ
ಬಾಲಾನ ಕೊಟ್ಟ ಕಳುವೀನ ಸರಸತಿದೇವಿ
ಪಲ್ಲಕ್ಕಿ ಮುಂದ ಪನಿವಾರ"[೨೦]

ವಿದ್ಯೆಗಳಿಗೆ ಅಧಿದೇವತೆಯಾದ ಸರಸ್ವತಿಯನ್ನು ತನ್ನ ಬಾಲನ ಮೇಲೆ ಅವಳ ಕೃಪೆಯಿರಲಿ ಎಂದು ಬೇಡಿಕೊಳ್ಳುವ ಗರತಿ. ಅಕ್ಷರಜ್ಞಾನದ ಮಹತಿಯನ್ನರಿತ ಗರತಿ ತನ್ನ ಮಗನಿಗೆ ವಿದ್ಯೆಯನ್ನು ಕರುಣಿಸಲೆಂದು ಬೇಡಿಕೊಳ್ಳುವಳು. ಬಾಳೆಹಣ್ಣು ಗರತಿಯ ಹಾಡುಗಳಲ್ಲಿ ಹೆಚ್ಚಾಗಿ ಕಂಡುಬರುವ, ಬಳಸುವ ವಿಶಿಷ್ಟವಾದ ಹಣ್ಣು. ಕಾರಣ ಇದು ಸರ್ವಕಾಲಕ್ಕೆ, ಸರ್ವರಿಗೂ ಲಭ್ಯವಾಗುವ, ಕೈಗೆಟುಕುವ ಬೆಲೆಗೆ ದೊರಕುವಂಥದ್ದು. ಎಲ್ಲ ನೆಲದಲ್ಲಿ ಬೆಳೆಯುವ ಗುಣ ಇದಕ್ಕಿದೆ. ಈ ಹಣ್ಣು ಎಲ್ಲ ದೇಶಗಳಲ್ಲಿ ಕಂಡುಬರುವುದು. ಬಾಳೆಗೆ ಬಾಗುವ ಗುಣವಿದೆ. ಅದರ ಗಿಡ ಪೂಜೆಗೆ, ಮಂಗಲ ಕಾರ್ಯಕ್ಕೆ, ಉಪಹಾರಕ್ಕೆ, ಹೇಗೆಂದರೆ ಹಾಗೆ ಸರ್ವವಿಧದಲ್ಲಿ ಉಪಯೋಗ ಬಂದರೂ, ನಾನೇ ಶ್ರೇಷ್ಠ ಎನ್ನುವ ಅಹಂಭಾವ ಅದಕ್ಕಿಲ್ಲ. ಬಾಗಿ ಕೈಬೀಸಿ ಕರೆಯುವಂತಿದೆ. ಶುಭ ಕಾರ್ಯಗಳಿಗೆ ಇದೇ ಹಣ್ಣಿಗೆ ಪ್ರಥಮ ಆದ್ಯತೆ.

---

೧೮. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ-೨೭, ಪದ್ಯ-೨೨೭.
೧೯. ಕಾಡು ಹೂಗಳು., ಜಿ.ಬಿ. ಖಾಡೆ, ಪುಟ-೧೫, ಪದ್ಯ-೧೨೬.
೨೦. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ-೨, ಪದ್ಯ-೯.

"ಹಿಂದೆ ಬೈಯ್ಯಾವರಿರಲೆ ನಿಂದೆ ಮಾಡವರಿರಲೆ
ವೈರಿಯ ನೆರಿಯ ನನಗಿರಲಿ ಸದಾಶಿವಸ್ವಾಮಿ
ನಿನ್ನ ಕರುಣಾ ಇರಲೆ ಅನುಗಾಲ"[೨೧]

ನೆರೆ–ಹೊರೆ ಎಂಥವರಿರಬೇಕು? ಅಂಥವರಿದ್ದಾಗಲೇ ನಾವು ಎಚ್ಚರದಿಂದ ಜೀವನ ಸಾಗಿಸುವೆವು. ವೈರಿಗಳು ನಮ್ಮ ಸುತ್ತ ಇದ್ದರೂ ದೇವರ ದಯೆ ನಮ್ಮ ಮೇಲಿದ್ದರೆ ಜೀವನ ಸುಗಮ ಸೌಖ್ಯವಾಗಿರುವುದು.

"ಅಪ್ಪಾ ನಿನ್ನ ಗುಡಿಯಾಗ ತಂಪತ್ತ ಬೀಳಲಿ
ಪತ್ತುರಿ ಬನವ ಚಿಗಿಯಲಿ ಶಿವನಿಂಗಪ್ಪ
ನಿಮ್ಮ ಶಿಖರದ ಮ್ಯಾಲ ಕವನೆಳ್ಳ"[೨೨]

ಪತ್ರಿ ಗಿಡ ಆಯುರ್ವೇದದ ಔಷಧಿಗಳಲ್ಲಿ ಮಹತ್ವದ ಸ್ಥಾನ ಪಡೆದಿದೆ. ಗರತಿಗೆ ಔಷಧೀಯ ಗುಣವುಳ್ಳ ಹಲವಾರು ರೋಗಗಳ ನಿವಾರಣೆಗಾಗಿ ಬಳಸುವ ಬಿಲ್ವಪತ್ರಿಗಿಡ ಬೆಳೆದು ಚಿಗಿಯಲಿ ಎಂದು ಆಶಿಸುತ್ತಾಳೆ. ಅಲ್ಲದೆ ಗ್ರಹಣಗಳುಂಟಾದಾಗ ಇದಕ್ಕೆ ಎಲ್ಲಿಲ್ಲದ ಬೇಡಿಕೆ. ನೀರಲ್ಲಿ ಇದನ್ನು ಹಾಕಿಡುವರು ಬಹುಶಃ ವೈಜ್ಞಾನಿಕ ಬಹುಪಯೋಗಿ ಗುಣ ಇದಕ್ಕಿರಬಹುದೇ?

"ಮಳಿಯ ಬಂದರ ಬರಲಿ ಮರದ ಹೊಟ್ಟ್ಯಾಗ ಇರುವೇನು
ಮಳಿ ಬಿಟ್ಟರ ಮರದ ಹನಿ ಬಿಡದ ನನ್ನ ಹಡದವ್ವ
ನೀ ಬಿಟ್ಟರ ನಿನ್ನ ಮನ ಬಿಡದ"[೨೩]

ತಾಯಿ–ಮಗಳ ಪ್ರೀತಿ, ತಾಯಿ–ತಂದೆಯರ ಅವಿನಾಭಾವ ಸಂಬಂಧವನ್ನು ಎತ್ತಿ ಹೇಳುತ್ತ ತಾಯಿ–ಮಗಳ ಅವಿನಾಭಾವ ಸಂಬಂಧ ಎಂಥಹುದೆಂಬುದನ್ನು ರೂಪಕದ ಮೂಲಕ ಹೇಳುವಳು. ಎಂಥ ಅದ್ಭುತ ಕಲ್ಪನೆಯಿದು!

"ಬಂಗಾರ ಬಳಿ ಇಟ್ಟು ಬೈಬ್ಯಾಡ ಬಡವರಿಗೆ
ಬಂಗಾರ ನಿನಗ ಸ್ಥಿರವಲ್ಲ ಮಧ್ಯಾನ
ಬಿಸಲ ಹೊರಳೂದು ತಡಾ ಏನ"[೨೪]

ಬಾಳಿನಲ್ಲಿ ಸಂಪತ್ತಿಗಿಂತ ಆಚಾರ–ವಿಚಾರ ಗುಣ ಸ್ವಭಾವಗಳಿಗೆ ಮಹತ್ತು ಕೊಟ್ಟ ಗರತಿ, ಬೆಳ್ಳಿ–ಬಂಗಾರ ಸ್ಥಿರವಾದವುಗಳಲ್ಲ, ಅವುಗಳು ಬಂದಾಗ ಗರ್ವ ಒಳ್ಳೆಯದಲ್ಲ. ಸಂಪತ್ತು ಮದ್ಯಾಹ್ನದ ಬಿಸಿಲಿನಂತೆ ಎಂಬುದು ಸತ್ಯವಾಗಿರುವುದು.

"ತಂಬಾಕ ಸೇದವನ ತಾರೀಪೇನ ಹೇಳಲಿ
ತಾರಿನ ಅಂಗ್ಯಾಗ ಕಿಡಿಬಿದ್ದ ತಾಯಕ್ಕ ಕೇಳಿ
ಬೇದಾಳ ಸುರಪುರದ ಮಡದಿ"[೨೫]

---

೨೧. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ–೯, ಪದ್ಯ–೭೬.
೨೨. ಅದೇ, ಪುಟ–೮, ಪದ್ಯ–೨೬.
೨೩. ಅದೇ, ಪುಟ–೯, ಪದ್ಯ–೭೫.
೨೪. ಅದೇ, ಪುಟ–೧೬, ಪದ್ಯ–೧೩೮.
೨೫. ಅದೇ, ಪುಟ–೧೮, ಪದ್ಯ–೧೫೨.

ದುಶ್ಚಟಗಳಿಗೆ ಅಂಟಿದವರ ಸ್ಥಿತಿ–ಗತಿ ಬಾಳು ಹಾಳು ಎಂಬುದರೊಂದಿಗೆ ಸಾಮಾಜಿಕ ಸ್ತರದಲ್ಲಿ ಜನರಿಂದ ತಿರಸ್ಕಾರಕ್ಕೊಳಪಡುವುದುಂಟು.

"ಊರಂತ ಊರಿಲ್ಲ ಸಮುದರಕ ನೆಲಿ ಇಲ್ಲ
ಜಾತ ಮುತ್ತೀಗಿ ಬೆಲಿ ಇಲ್ಲ ವಿಜಾಪುರದ
ಗೋಳಗುಮ್ಮಟಕ ಕಳಸಿಲ್ಲ"[೨೬]

ಈ ತ್ರಿಪದಿಯಲ್ಲಿ ಜನಪದ ಗರತಿಯ ಸೂಕ್ಷ್ಮ ನಿರೀಕ್ಷಣಾ ದೃಷ್ಟಿಕೋನ, ಭವ್ಯವಾದ ಉಪಮೆ ರೂಪಕಗಳನ್ನು ಗುರುತಿಸಬಹುದು. ಜಾನಪದ ಸ್ತ್ರೀಯು ತನಗೆ ದಕ್ಕಿದ ಅನುಭವವನ್ನೆಲ್ಲ ತ್ರಿಪದಿಯಲ್ಲಿ ಹೇಳಿಕೊಳ್ಳುವುದನ್ನು ಕಾಣುತ್ತೇವೆ. ಸಮುದ್ರದ ವಿಸ್ತಾರ, ಗೋಳ ಗುಮ್ಮಟದ ಭವ್ಯತೆ, ಮುತ್ತಿನ ಮೌಲ್ಯ ಗುರುತಿಸಿದರೂ; ಅವುಗಳಲ್ಲಿರಬಹುದಾದ ಕೊರತೆಯನ್ನು ತಾಯಿ ಗಮನಿಸಿರುವುದು ವಿಶೇಷವೆನಿಸುತ್ತದೆ.

"ಹಿಂದಿನ ಹಿರಿಯಾರ ಚಂದಕ ಚೆಲುವ್ಯಾರ
ಈಗಿನ ಮಂದಿ ವಿಪರ್ಯಾರ ಬಾಯಿಲೆ
ಅಪರಾಧದ ಮಾತ ಸುರದಾವ"[೨೭]

ಕಲಿಯುಗದ ಜನರ ರೀತಿ–ನೀತಿಗಳ ವಿಡಂಬನೆಯಿಲ್ಲಿದೆ. ಇಂದಿನ ಜನ ಮೋಸ, ವಂಚನೆ, ಸುಳ್ಳು ಮಾತನಾಡುವಲ್ಲಿ ಪರಿಣಿತರು; ಇಂದಿನ ಜನರ ಸಹಜ ಸೌಂದರ್ಯ ಆಧುನೀಕರಣದ ರಾಸಾಯನಿಕ ವಸ್ತುಗಳಿಗೆ ಮಾರು ಹೋಗಿ ಮಾಸುತ್ತಿದೆ ಎಂಬ ಸತ್ಯವನ್ನು ಎತ್ತಿ ಹೇಳುವ ಪದ ಇದಾಗಿದೆ.

"ಹೊಳಿಯ ಆಚೆಕಿನ ಅಣ್ಣ ಮಳಿ ಹ್ಯಾಂಗ ಬೆಳಿ ಹ್ಯಾಂಗ
ಮಳಿ ಭಾಳ ತಂಗಿ ಚಳಿ ಭಾಳ ನಿನ್ನ
ಕೊರಳಾನ ಬಿಳಿ ಮುತ್ತಿನಾಂಗ ಬಿಳಿಜ್ವಾಳ"[೨೮]

ಈ ತ್ರಿಪದಿಯಲ್ಲಿ ಬಂದಿರುವ "'ಅಣ್ಣ' 'ತಂಗಿ' ಇವುಗಳ ಸಂಭೋಧನೆ ಕಳ್ಳು–ಬಳ್ಳಿತನವನ್ನು ಗಟ್ಟಿಗೊಳಿಸುತ್ತದೆ"[೨೯] ಪರವೂರಿನಿಂದ ಮನೆಗೆ ಯಾರೇ ಬರಲಿ ಅತಿಥಿ ಸತ್ಕಾರ ಮಾಡಿ, ಕ್ಷೇಮ ಸಮಾಚಾರ ಕೇಳುವುದು ವಾಡಿಕೆ. ಕೌಟುಂಬಿಕ ಮತ್ತು ಸಾಮಾಜಿಕ ಸ್ತರದಲ್ಲಿ [ಜೀವನದಲ್ಲಿ] ಜನ ಪ್ರೀತಿಯಿಂದಲೂ ಈ ಸಂಭೋದನೆಯನ್ನು ಬಳಸುವರು. ಊರಿನ ಆಗು–ಹೋಗುಗಳ ವಿಚಾರಗಳನ್ನು ಕೇಳುವಾಗ ಅಣ್ಣ ಬಿಳಿಜೋಳವನ್ನು ಬಿಳಿ ಮುತ್ತಿಗೆ ಹೋಲಿಸಿ ಉತ್ತರ ನೀಡುತ್ತಾರೆ. ಗರತಿಯ ಹಾಡುಗಳಲ್ಲಿ ಒಡಮುಗಳೂ ಇವೆ.

"ಮಾಡಿಲ್ಲ ಮುಗಲಿಲ್ಲ ಮ್ಯಾಲ ಗದ್ದರಿಕಿಲ್ಲ
ಜೋಡೆರಡ ಹನಿಯ ಉದರ್ಯಾವ ನನ್ನಣ್ಣ
ಓದು ಬಲ್ಲಾವ ಒಡದ್ದೇಳು"[೩೦]

೨೬. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ–೪, ಪದ್ಯ–೨೫.
೨೭. ಅದೇ, ಪುಟ–೧೩, ಪದ್ಯ–೧೧೩.
೨೮. ಅದೇ, ಪುಟ–೨೭, ಪದ್ಯ–೨೩೪.
೨೯. ಸಂಬಂಧವಾಚಕಗಳು ಮತ್ತು ಸಂಬೋಧನೆಗಳು, ಎಸ. ಎಸ. ಅಂಗಡಿ, ಪುಟ–೩೦.
೩೦. ಕಾಡು ಹೂಗಳು., ಜಿ.ಬಿ. ಖಾಡೆ, ಪುಟ–೧೯, ಪದ್ಯ–೧೬೨.

[illegible]

[illegible]

[illegible]

[illegible]

[illegible]

ಅದಕ್ಕುತ್ತರ ಕೇಳುವ ಹೇಳುವ ರೂಢಿ ಆಗಿನ ಜನರಲ್ಲಿ ಬಹಳೇ ಇತ್ತೆಂಬುದು ತಿಳಿಯುವುದು. ಹತ್ತು ಹಲವಾರು ವಿಷಯಗಳನ್ನು ಒಳಗೊಂಡ ಈ ಬೀಸುವ ಪದಗಳನ್ನು ನೋಡಿಗಾಗ, ನಮ್ಮ ಗರತಿ ಜೀವನದ ಸೌಂದರ್ಯ ಸಂತೋಷಗಳನ್ನು ಸಾಮಾಜಿಕ ಸನ್ನಿವೇಶಗಳ ಆವರಣಕ್ಕೆ ಬದ್ಧರಾಗಿದ್ದುಕೊಂಡೇ, ಅನುಭವಿಸಿದುದು ಕಾಣುತ್ತದೆ. ನಮ್ಮ ಹಳ್ಳಿಗಳ ಸಾಮಾಜಿಕ ವ್ಯವಸ್ಥೆ ಸಮಾಜವನ್ನು ರೂಪಿಸಿದ ಶ್ರದ್ಧೆ ಮತ್ತು ಪರಂಪರೆಗಳು, ವೈಯಕ್ತಿಕ ಸಾಮಾಜಿಕ ನೀತಿನಿಯಮಗಳು ಇವೆಲ್ಲವೂ ಜಾನಪದ ಸಾಹಿತ್ಯದ ಸೃಷ್ಟಿಯಲ್ಲಿ ತಮ್ಮ ಪ್ರಭಾವವನ್ನು ಬೀರಿವೆ.

೨) ಕೋಲಿನ ಪದಗಳು:

ಕೋಲಾಟದ ಹಾಡಿಗೆ ಕೋಲುಗಳೇ ಲಯವಾದ್ಯವಾಗಿದ್ದು, ಹತ್ತರಿಂದ ಇಪ್ಪತ್ತರವರೆಗೆ ಕಲಾವಿದರಿರುತ್ತಾರೆ. ಮೊದಲು ದಿನನಿತ್ಯದ ಉಡುಗೆಯಲ್ಲಿರುತ್ತಿದ್ದ ಕಲಾವಿದರು ಇತ್ತೀಚೆಗೆ ಬಣ್ಣಬಣ್ಣದ ಬಟ್ಟೆ, ತಲೆಕಟ್ಟುಗಳಿಂದ ಅಲಂಕೃತರಾಗಿರುತ್ತಾರೆ. ಕಲಾವಿದರೆಲ್ಲ ವೃತ್ತಾಕಾರದಲ್ಲಿ ನಿಂತು ಪ್ರದರ್ಶನ ನೀಡುತ್ತಾರೆ. ಕೋಲಾಟದ ಹಾಡುಗಳು ಸಮೃದ್ಧವಾಗಿದ್ದು, ವೈವಿಧ್ಯಮಯವಾಗಿದೆ. ಜನಪದ ಮಹಿಳೆಯರು ತಮ್ಮ ಕಾವ್ಯ ಪ್ರತಿಭೆಯನ್ನು ಹಾಡುಗಳಲ್ಲಿ, ತ್ರಿಪದಿಗಳಲ್ಲಿ, ಹಾಡ್ಗತೆಗಳಲ್ಲಿ ವ್ಯಕ್ತಪಡಿಸಿರುವಂತೆ ಜನಪದ ಗ್ರಾಮೀಣ ಕಲಾವಿದರು ತಮ್ಮ ಪ್ರತಿಭೆ ಮತ್ತು ಜೀವನಾನುಭವಗಳನ್ನು ಕೋಲಾಟದ ಹಾಡುಗಳಲ್ಲಿ ಸೂರೆಗೊಂಡಿದ್ದಾರೆ. ಭಕ್ತಿ, ಪ್ರಣಯ, ಹಾಸ್ಯ, ವಿಡಂಬನೆಗಳೆಲ್ಲಾ ಈ ಹಾಡುಗಳ ವಸ್ತು. ಕೋಲಾಟದ ಹಾಡುಗಾರಿಕೆ ಕೂಡ ನಮ್ಮ ಜಾನಪದ ಸಂಗೀತದ ಗಮನಾರ್ಹ ಪ್ರಕಾರವಾಗಿದೆ.

> **“ನನ್ನ ತವರ ಮನಿಯ ನಾ ಏನ ಹೇಳಲಿ**
> **ಮಗಳ ಬಂಗಾರ ಏಳ ಸನಕಿಯ**
> **ಬಂಗಾರ ಸನಕಿ ಓದ ಬೆಂಕ್ಯಾಗ ಒತ್ತವ್ವ**
> **ವಲ್ಲೀ ನಾ ಹಡದವ್ವ ಜೀನರಂವನ”** [೩೧]

ಅಪಾರ ಸಂಪತ್ತನ್ನು ಹೊಂದಿದ, ಜೀನತನದ ಸ್ವಾದರಮಾವನೊಡನೆ ಮದುವೆ ಇಷ್ಟಪಡದ ಹುಡುಗಿ ತನ್ನ ತಾಯಿಗೆ ಹಲವು ಉದಾಹರಣೆ ಕೊಟ್ಟು ತಿರಸ್ಕರಿಸಿ, ಶಿವನ ಭಕ್ತರಿಗೆ, ಶೀಲವಂತರಿಗೆ ತನ್ನನ್ನು ಧಾರೆಯೆರೆದು ಕೊಡಲು ಪರಿ ಪರಿಯಾಗಿ ಬೇಡಿಕೊಳ್ಳುವಳು.“ಸ್ವಾದರಮಾವ ಹೆಣ್ಣ ಹೆಣ್ಣಂದ ತಿರುಗಾಡಲಿ” ಕೋಲಿನ ಪದಗಳಲ್ಲಿ ಸೋದರ ಮಾವನ ಟೀಕೆ ಆತನ ಆಚಾರ-ವಿಚಾರಗಳ ವಿಡಂಬನೆ ಮಾಡಿದ್ದು, ಆತನನ್ನು ನಿರಾಕರಿಸುವ ಹಲವು ಉದಾಹರಣೆಗಳಿವೆ.

> **“ನೆರೆಮನಿ ಹೆಣ್ಣ ಮಕ್ಕಳ ಇದರೀಗೆ ಬಂದರ**
> **ಅಕ್ಕ-ತಂಗ್ಯಾರ ಸರಿ ಅನಬೇಕ.”** [೩೨]

---

೩೧. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ-೩೪,

೩೨. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ-೮೯

[illegible]

[illegible]

[illegible]

[illegible]

[illegible]

[illegible]

“ಹಸಿಗೂಸಿನ್ಹಾಂಗ ಮಾತಾಡಿಸಬೇಕ” ಎಂಬ ಪದದಲ್ಲಿ ‘ಎನಗಿಂತ ಕಿರಿಯರಿಲ್ಲ’ ಎಂಬ ಬಸವಣ್ಣನವರ ಭಾವ ಮೂಡಿ ಬಂದಿದೆ. ಇಲ್ಲಿ ಜೀವನದ ಮಹತಿ, ನಡೆ–ನುಡಿ, ಒಳ–ಹೊರಗು ಒಂದಾಗಿ ಜೀವನವನ್ನು ನಡೆಸುವ ರೀತಿಯನ್ನು ವಿವರಿಸಲಾಗಿದೆ.

“ಬಡವನಿದ್ದರ ಎಟ್ಟ ಹೋತ ವಚನಕ ಪರಾಣ ಕೊಡಬೇಕ
ರೀತಿ ಬಿಟ್ಟು ಪರ ರೀತಿಗೆ ಹ್ವಾದರ ಅವಗ ಹೊಲ್ಯಾನೆಂದ ಕರಿಬೇಕ” [೩೩]

ಕಷ್ಟದಲ್ಲಿರುವವರಿಗೆ ಸಹಾಯ ಮಾಡಿ, ದುರ್ಗುಣಗಳಿಂದ ತನ್ನನ್ನು ಶಿವ ದೂರ ಮಾಡುವಂತೆ, ಬಡತನ ಬಂದರೆ ದುಮಾರ್ಗಕ್ಕೆಳಸಲಾರದೆ. ನೀಡಿದ ವಚನದಂತೆ ನಡೆದು ಪ್ರಾಣ ತೆರಲೂ ಸಿದ್ಧನಿರುವಂತ ನಿಷ್ಠಯುತ ಮಾತುಗಳು. ನಿಜವಾದ ಹೊಲೆತನ ನೀತಿ ಬಿಟ್ಟು ಪರ ನೀತಿ ಹೋದವರಿಗೆ ಅಂಟುವುದು, ಎಂಬ ತಿಳಿವಳಿಕೆಯ ಹಿತನುಡಿಗಳು ಮೂಡಿಬಂದಿವೆ.

“ಗಡಗಡ ಗದರುತ ಮುಗಲ ಚೆಂಡಾಡುತ
ಬಂದಾನ ಹುಲಿರಾಯ ಮೆಲಿಲಾಕ”
“ಹರ್‍ಯಾಗ ಈದೀನಿ ಹವಳ ಬಣ್ಣದ ಹೋರಿ
ಇನ್ನೊಮ್ಮೆ ಮಲಿಗೊಟ್ಟು ಬರತೀನ” [೩೪]

“ಆಕಳ ಪದ”ದಲ್ಲಿ ಆಕಳು ಸತ್ಯ ವಾಕ್ಯಕ್ಕೆ ಮೆಚ್ಚಿ ಹುಲಿರಾಯ ಪ್ರಾಣ ನೀಗುವುದರ ವಿವರವಿದೆ. ಇದು ಜನಪ್ರಿಯವಾಗಿದ್ದು ಆಕಳನ್ನು ತಿನ್ನಲು ಹಾತೊರೆಯುವ ಹುಲಿ ಮತ್ತು ನಿಸ್ಸಹಾಯಕ ಹಸುವಿನ ಕಥೆಯನ್ನು ಮಾನವರು ಸಾಮಾಜಿಕ ನಡುವಳಿಕೆಗೆ ಹೇಗೆ ಅಳವಡಿಸಿಕೊಳ್ಳಬೇಕು ಎನ್ನುವುದು ಮುಖ್ಯ ಸಂಗತಿಯಾಗಿದೆ. ಇಂದಿನ ಸಮಾಜದಲ್ಲಿ ಸುಲಿಗೆಕೋರ ಮತ್ತು ಸುಲಿಗೆಗೆ ಬಲಿಯಾಗುವ ಬಡಪಾಯಿಯ ನಡುವಣ ಸಂಬಂಧ ಇಲ್ಲಿದೆ. ಸುಲಿಗೆಕೋರನ ಮನಸ್ಸು, ಆಡಿದ ಮಾತಿಗೆ ನಡೆದುಕೊಂಡ ಬಡಪಾಯಿಯ ನಡತೆಯ ಕಾರಣಕ್ಕಾಗಿ ಬದಲಾಗುತ್ತದೆ; ಎನ್ನುವ ಕಡೆಗೆ ಹೆಚ್ಚಿನ ಒತ್ತು ಬಿದ್ದಿದೆ. ‘ಸತ್ಯಕ್ಕೆ ಜಯ ಕಟ್ಟಿಟ್ಟ ಬುತ್ತಿ’ ಎಂಬುದೂ ನೆನಪಿಗೆ ಬರುವದುಂಟು. ಇಲ್ಲಿ ಸಾಕಷ್ಟು ಸರಳತೆ ಇದ್ದು, ಪ್ರಯತ್ನ ಪೂರಕವಾಗಿ ಆಡುನುಡಿಯನ್ನು ತುಂಬಲು ಯತ್ನಿಸುವ ಇಲ್ಲಿನ ಪದಗಳಲ್ಲಿ ಪ್ರಾಸದ ಕಡೆಗೆ ಗಮನ ಕೊಟ್ಟಂತಿದೆ. ಹೊಸದಾಗಿ ಅಕ್ಷರ ಕಲಿಯುವ ಮಕ್ಕಳಿಗೆ ತುಂಬಾ ಹಿಡಿಸುವ ಅನೇಕ ಸುಂದರ ಸಾಲುಗಳಿವೆ.

ಕಂದನಿಗೆ ನಿತ್ಯವೂ ಮೊಲೆಯೂಡಿಸಬೇಕು. ತಾನೂ ಬದುಕಬೇಕು; ಅದು ತನ್ನ ಹಕ್ಕು ಎನ್ನುವ ಆಲೋಚನೆ ಹೊಳೆಯುವುದಿಲ್ಲ. ತನಗಾಗುತ್ತಿರುವ ಅನ್ಯಾಯ ಬದಿಗೊತ್ತಿ ಭಾವನೆಗಳನ್ನು ಕೆರಳಿಸುವ ಮೂಲಕ ಮೈಜುಮ್ಮೆನ್ನುವಂತೆ ಬೇರೆ ಕಡೆಗೆ ಜನತೆಯ ಮನೋಧೈರ್ಯವನ್ನು ಹರಿಸುವ ವ್ಯವಸ್ಥಿತ ಪ್ರಯತ್ನ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಮೊದಲಿನಿಂದಲೂ ಇದೆ.

---

೩೩ ಕಾಡು ಹೂಗಳು., ಜಿ.ಬಿ. ಖಾಡೆ, ಪುಟ–೮೦

೩೪ ಕಾಡು ಹೂಗಳು, ಜಿ.ಬಿ. ಖಾಡೆ, ಪುಟ–೭೭

“ಅಡಗೀಯ ಮನಿಯಾಗ ತೊಗರಿ ಊರುವ ಹೆಣ್ಣ
ನನಗಟ ಜಾಗ ಕೊಡುವಿಯ”
“ನಿನಗಟ ಜಾಗಾ ನಾಯಾಕ ಕೊಡಲಿ
ನನ್ನ ಮುತ್ತಿನಂಥ ಪುರುಷ ನಡಮನಿಗೆ”

ಹಸು ಹುಲಿಯ ಮಾತಿಗೆ ಥಟ್ಟನೆ ಒಪ್ಪಿಕೊಳ್ಳುತ್ತದೆ. ತಾನು ಸುಳ್ಳಾಡುವುದಿಲ್ಲ ಎಂದಾಣೆ ಮಾಡಿ ಹೇಳುತ್ತದೆ.

“ನಿನ್ನಾಣೆ ನಿನಗ ಒಳಿತ ನನ್ನಾಣೆ ನನಗ ಒಳಿತ
ಬಾಲಾಗ ಮಲಿಕೊಟ್ಟ ಇರಹೋಗ” [೩೫]

ಕೊನೆಗೆ ಆಣೆ ಕೊಟ್ಟದ್ದನ್ನು ಮರೆತು ಸುಖದಿಂದ ಇರಲು ಕಳುಹಿಸಿಕೊಟ್ಟಿತು. ಇಲ್ಲಿ ತಾಯಿಯ ಜೀವ ಉಳಿಸಲು ಕರು ತನ್ನನ್ನು ಬಲಿಕೊಡಲು ಬಂದಿತು. ಆ ಕರುವಿನ ಕರುಳನ್ನು ನೋಡಿ ಹುಲಿರಾಯ ತಾಯಿ ಮಕ್ಕಳಿಬ್ಬರಿಗೂ ಜೀವದಾನ ಮಾಡಿದ ಪ್ರಸಂಗವಿಲ್ಲಿದೆ.

ಕೋಲಿನ ಪದದಲ್ಲಿ ಹೆಣ್ಣು, ಹಣ, ಸಂಪತ್ತಿಗೆ ಆಸೆ ಪಡದೆ, ತನ್ನ ಹಿರಿಯನ (ಪತಿಯ) ಪ್ರೀತಿಯನ್ನು ಮೇಲೆ ಮಾಡಿ, ವ್ಯಭಿಚಾರತೆಯನ್ನು ತಿರಸ್ಕರಿಸುವ ರೀತಿ ಭಾರತೀಯ ಸಂಸ್ಕೃತಿಗೆ ಹಿಡಿದ ಕನ್ನಡಿಯಾಗಿದೆ.

“ನಿನಗಟ ಜಾಗಾ ನಾಯಾಕ ಕೊಡಲಿ
ನನ್ನ ಮುತ್ತಿನಂಥ ಪುರುಷ ನಡಿಮನಿಗಿ”[೩೬]

ಹೀಗೆ ತುಪ್ಪ, ಬೆಣ್ಣೆ, ಒಗ್ಯಾಣ, ಕುಸಬೀ ನೆವಮಾಡಿ ಬರುವೀಯ ಎಂದಾಗ ಅದಕ್ಕೆ ಅನುಕ್ರಮವಾಗಿ ಬಾಳಾನ, ಕುಸಲನ, ಅಗಸನ, ಆಳುಮಗನ ಕೊಟ್ಟು ಕಳುಹುವೆ ಎಂದು ಗರತಿಯ ಉತ್ತರಗಳು ಚಟಪಟ ಅಳ್ಳು ಹುರಿದಂತೆ ಬರುವವು. ವಾದ-ಸಂವಾದದ ಮೂಲಕ ಮೂಡಿ ಬಂದಿದೆ. ಉತ್ತರ ಹೇಳಿ ಕೊನೆಯದಾಗಿ.

“ಹೌಂದಲೇ ಒಕ್ಕಲತಿ ಮಾತೀಲೆ ಉಳಕೊಂಡಿ
ಎಂದಿಲ್ಲದೆ ಒಮ್ಮೆ ಸೆಳದೀನ”
ಸೆಳ್ಯಾವಿದ್ರ ಇಂದರ ಸೆಳಿ ಬಾ ನನ್ನ ಮನ್ಯಾನ ಹಾಳ ರಗಟೆ”[೩೭]

ಒಕ್ಕಲತಿಯ ಬಂಡಾಯ ಇಲ್ಲಿ ಕಾಣುತ್ತದೆ. ಪ್ರಶ್ನೆಗೆ ತಕ್ಕ ಉತ್ತರ ನೀಡಿ ಅದನ್ನು ವಿರೋಧ ಮಾಡುವ ಪದಗಳು ಸತ್ವಯುತವಾದವುಗಳಾಗಿವೆ. ಕೋಲಾಟದ ಪದಗಳು ಸಾಮಾನ್ಯವಾಗಿ ಧಾರ್ಮಿಕ, ಪ್ರಾರ್ಥನೆ, ಸ್ತುತಿ ಮೊದಲಾದವುಗಳಿಂದ ಕೂಡಿರುತ್ತದೆ. ಇವಲ್ಲದೆ ಪ್ರಣಯ, ಸಂಸಾರದ ಸಮಸ್ಯಗಳು, ಸುಖ ದು:ಖಗಳ, ಕಥನಾತ್ಮಕ ಗೀತೆಗಳು ಕೋಲಾಟದ ಪದಗಳಿಗೆ ವಸ್ತುಗಳಾಗಿವೆ. ಅಲ್ಲಿಯೂ ಅವರ ಧಾರ್ಮಿಕ ದೃಷ್ಟಿಯೇ ಪ್ರಧಾನವಾಗಿ ಗೋಚರವಾಗುತ್ತದೆ. ‘ಕೋಲು ಕೋಲೆನ್ನ’

---

೩೫. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ-೭೮

೩೬. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ-೮೧

೩೭. ಕಾಡು ಹೂಗಳು., ಜಿ.ಬಿ. ಖಾಡೆ, ಪುಟ-೮೨,

ಪಲ್ಲವಿ ಹಾಗೆ 'ತಾನು ತಂದಾನೋ ತಂದನಾನೋ' ಹಲವು ರೀತಿಗಳಿಂದ ಪ್ರಾರಂಭವಾಗುತ್ತ ಹಲವಾರು ದಿನಗಳವರೆಗೆ ಮುಂದುವರೆಯುವವು.

'ಶ್ರೀಗೌರಿ'ಕೋಲಿನಪದ ಉತ್ತಮ ಪಠ್ಯವಾಗಿದೆ. ಈ ಹಾಡಿನ ಕೇಂದ್ರವ್ಯಕ್ತಿ ಗಂಗಿ. ಶಿವನು ನಂದಿಗೆ ನೀರು ಕುಡಿಸುವುದು. ಶಿವ ನೀರಿನಲ್ಲಿ ಗಂಗೆಯನ್ನು ಕಾಣುವದು. ಗೌರಿ ಗಂಗಿಯನ್ನು ತೆಗಳುವುದು. ಅದಕ್ಕೆ ಶಿವ ಸಮರ್ಥನೆ ನುಡಿಗಳನ್ನು ಹೇಳುವದು. ಕೊನೆಗೆ ಸವತಿಯರಿಬ್ಬರೂ ಸೇರಿ ಶಿವನಿಗೆ ಬಿಸಿನೀರಿನ ಸ್ನಾನ ಮಾಡಿಸುವುದು. ಈ ಕ್ರಿಯೆಗಳ ಮೂಲಕ ನೀರು ಈ ಹಾಡಿನಲ್ಲಿ ಉದ್ದಕ್ಕೂ ಪ್ರವಹಿಸುತ್ತ ಬಂದುದಾಗಿದೆ. ಪ್ರೇಮದಲ್ಲಿ ಅಂಕುರಿಸಿ, ಸವತಿಮತ್ಸರದಲ್ಲಿ ಬಿಚ್ಚಿಕೊಂಡು, ದಾಂಪತ್ಯದಲ್ಲಿ ವಿರಮಿಸಿದ ಸುಖಾಂತ ಪದ್ಯವಿದು. ಒಟ್ಟಿನಲ್ಲಿ ಶಿವನ ಕುಟುಂಬವನ್ನು ದೈವೀಸ್ತರದಲ್ಲಿ ನಿಲ್ಲಿಸದೆ ಮಾನುಷ ಕುಟುಂಬ ಸ್ತರಕ್ಕೆ ಇಳಿಸಿಕೊಂಡಿದ್ದಾರೆ.

ಕೋಲಿನ ಪದಗಳಾದ ಶ್ರೀಗೌರಿ, ನಿಂಗಕ್ಕೆದ ಹೂವ ದಯಮಾಡಿ, ಸ್ವಾದರಮಾವ ಹೆಣ್ಣ ಹೆಣ್ಣಂದ ತಿರುಗಾಡಲಿ, ಅಕಳ ಪದ, ಕುಂತಿಯ ಸುತ ಹೀಗೆ ಕೆಲವೇ ಕೆಲವು ಕೋಲಿನ ಪದಗಳಿದ್ದರೂ ಮೌಲ್ಯಯುತದವುಗಳಾಗಿ ಮೂಡಿಬಂದಿವೆ. ಆಶಯಗಳು ಪರಂಪರಾಗತವಾಗಿದ್ದರೂ, ಅದರಲ್ಲಿ ಸಮಕಾಲೀನ ಅಂಶಗಳನ್ನು ಗುರುತಿಸಬಹುದು. ಸಂಪ್ರದಾಯಕ ವಿಷಯದಲ್ಲಿಯೇ ಇಂದಿನ ಸಮಾಜದ ಸ್ಥಿತಿಗತಿಗಳು ಅಲ್ಲಲ್ಲಿ ವ್ಯಕ್ತವಾಗಿದೆ. ಜಾನಪದ ಹಾಡುಗಳ ಸಾರ್ವಕಾಲೀನ ಮೌಲ್ಯ ಈ ಕೋಲಾಟದ ಹಾಡುಗಳಲ್ಲಿ ಕಾಣಬಹುದಾಗಿದೆ.

೩) ಹಂತಿ ಪದಗಳು:

ಕಾಡು ಹೂಗಳು ಸಂಕಲನದಲ್ಲಿ ೩೫೬ ಹಂತಿ ಪದಗಳಿವೆ. ಬೀಜ ಹಾಕಿ, ಕಳೆ ಕಿತ್ತು, ಬೆಳೆ ಕೊಯ್ಲಿಗೆ ಬಂದಾಗ ಕೊಯ್ದು, ಸುಗ್ಗಿಯ ಕಾಲದಲ್ಲಿ, ಹಂತಿ ಹೂಡಿದಾಗ ಹೇಳುವ ಪದಗಳು. ಹಂತಿಯ ಹಾಡು ದೇವತಾ ಸ್ತುತಿಯೊಡನೆ ಪ್ರಾರಂಭವಾಗುತ್ತದೆ.

"ಹಂತಿಯ ಹೂಡ್ಯಾಗ ಎಂಥವನ ನೆನಿಬೇಕ
ಕಾಂತಪಿತನಾದ ಗಣಪತಿ ನೆನದರ
ತಂಪತಿನ ಹಂತಿ ನುರತಾವೋ"[೩೮]

ಈ ತ್ರಿಪದಿಯಲ್ಲಿ ಬರುವ ಗಣಪತಿ ಸರ್ವ ವಿಘ್ನಗಳನ್ನು ನಿವಾರಿಸಲೆಂದು ಬೇಡಿಕೊಳ್ಳುವರು. ಹಲವಾರು ಹರಕೆಗಳನ್ನು ಹೊತ್ತು ದೇವರನ್ನು ಒಲಿಸಿಕೊಳ್ಳಲು ಉಪವಾಸ ವ್ರತಗಳನ್ನು ಕೈಗೊಳ್ಳುವಾಗ ಆಯಾ ದೇವರುಗಳು, ದಿನಗಳು ಪ್ರಸಿದ್ಧವಾಗಿದ್ದು ಇಂದಿಗೂ ರೂಢಿಯಲ್ಲಿದೆ. ತಮ್ಮ ಬಯಕೆ ಈಡೇರಿಸುವದಕ್ಕೋಸ್ಕರ ಹರಕೆ ಹೊರುವುದು ಒಂದೆಡೆಯಾದರೆ, ಈ ಉಪವಾಸ ವೃತ–

---

೩೮ ಕಾಡು ಹೂಗಳು., ಜಿ.ಬಿ. ಖಾಡೆ, ಪುಟ–೩೧

“ವಾರೀಗಿ ಗೆಣತ್ಯಾರ ವಾರಾ ಮಾಡೂನ ಬರ್ರೇ
ವಾರದಾಗ ವಾರ ಶನಿವಾರ–ಮಾಡಿದರ
ಯಾರೀಗಿ ಒಲಿತಾನ ಹನುಮಪ್ಪ” [೩೯]

ನೇಮಗಳನ್ನು ಮಾಡುವುದನ್ನು ನೋಡಿದಾಗ ತನಗೆ ವೈಜ್ಞಾನಿಕ ದೃಷ್ಟಿಕೋನದಿಂದ ಒಳ್ಳೆಯದೆನಿಸಿ, ಪ್ರತಿದಿನ ಆಹಾರ ನುರಿಸಿ ದಣಿದ ದೇಹದ ಯಂತ್ರಕ್ಕೆ ವಿಶ್ರಾಂತಿ ಕೊಡಲು ಉಪವಾಸ ಮಾಡುವರು. ಇನ್ನು ಅಮವಾಸ್ಯೆ – ಹುಣ್ಣಿಮೆಗಳಲ್ಲಿ ಭಕ್ಷ ಭೋಜನಗಳನ್ನು ಅಂದರೆ ಹೋಳಿಗೆ – ಪಾಯಸ ಬಗೆಬಗೆಯ ರುಚಿಕಟ್ಟಾದ ಅಡುಗೆಯನ್ನು ಸೇವಿಸುವರು. ಏಕೆಂದರೆ; ಪ್ರತಿದಿನ ರೊಟ್ಟಿ ಪಲ್ಯ ತಿಂದು ಬೇಸರವಾಗಿ, ಆಹಾರ ಬದಲಾವಣೆಗಾಗಿ ನೈವೇದ್ಯಕ್ಕಾಗಿ ಎಂದು ಹೇಳಿ ವಿವಿಧ ಬಗೆಯ ತಿಂಡಿ ತಿನಿಸುಗಳನ್ನು ತಯಾರಿಸಿ ಊಟ ಮಾಡುವುದು ಪದ್ಧತಿಯಲ್ಲಿದೆ. ಆಹಾರ ಬದಲಾವಣೆಗಾಗಿ ಇದನ್ನೆಲ್ಲ ಮಾಡುತ್ತೇವೆ.

“ಹಂತೀಯ ಎತ್ತಗೋಳ ಹಂತೇಕ ಕರದಾಳ
ಸೆರಗೀಲೆ ಸುಂಕ ಒರಸ್ಯಾಳ ಆ ಬಾಲಿ
ಕಂಚಿನಾರುತಿ ಬೆಳಗ್ಯಾಳ” [೪೦]

ಜನಪದ ಸಂಸ್ಕೃತಿಯ ಕಾಯಕನಿಷ್ಟೆಗೂ, ನೆಲದ ಮೋಹಕ್ಕೂ ಸಂಬಂಧವಿದೆ. ನೆಲದ ಮೋಹ ಎಂಬುದು ಭೂಮಿ ಸಂಪಾದಿಸುವ ದುರಾಸೆಯಲ್ಲ. ನೆಲದ ಬಗ್ಗೆ ಪ್ರೀತಿ, ಗೌರವ, ಮಣ್ಣಿನ ಸಂಬಂಧವನ್ನು ಕಾಯಕದ ಮೂಲಕ ಏರ್ಪಡಿಸಿಕೊಳ್ಳುವ ಅರ್ಹತಾ ಮನೋಭಾವ ನೆಲದ ಮೋಹದಲ್ಲಿದೆ. ಹುಟ್ಟಿನಿಂದ ಸಾವಿನವರೆಗೂ ಜನಪದ ಸಂಸ್ಕೃತಿಯಲ್ಲಿ ಮಣ್ಣು ಪ್ರಧಾನ ಪಾತ್ರ ವಹಿಸುತ್ತದೆ. ಮಣ್ಣಿನಿಂದ ಅನ್ನ ಬೆಳೆಯಲಾಗುತ್ತದೆ. ಶ್ರಮ ಜೀವಿಗಳ ಮನೆಗಳಲ್ಲಿ ಸಾವು ಸಂಭವಿಸಿದಾಗ ‘ಮಣ್ಣು’ ಕೊಡುತ್ತಾರೆಯೇ ವಿನಃ ಸುಡುವುದಿಲ್ಲ. “ವಿಜ್ಞಾನ ತಂತ್ರಜ್ಞಾನಗಳಲ್ಲಿ ಏನೆಲ್ಲ ಸಾಧನೆಯಾಗಿದ್ದರೂ ಅನ್ನವನ್ನು ಮಣ್ಣು ಕೊಡಬೇಕೇ ವಿನಃ ಯಂತ್ರಗಳು ಕೊಡಲಾರವು. ಅನ್ನವಿಲ್ಲದಿದ್ದರೆ ಆ ಯಂತ್ರಗಳ ಸೃಷ್ಟಿಯೂ ಸಾಧ್ಯವಿಲ್ಲದ್ದರಿಂದ ಮಣ್ಣೇ ಲೋಕದಲ್ಲಿ ಬೆಲೆಯುಳ್ಳದ್ದು”[೪೧] ಎಂಬ ಚಿಂತನೆ ಮೂಡಿ ಬಂದಿದೆ. ಕಾಲಕಾಲಕ್ಕೆ ಮಳೆ ಬಂದು ಬೆಳೆ ಕೈಗೆ ಬಂದಾಗ ದುಡಿಯುವಂಥ ಶ್ರಮಜೀವಿಗಳಿಗೆ ಹಬ್ಬ ಹರಿದಿನಗಳು, ಮದುವೆ ಮುಂಜಿಗಳು, ಜಾತ್ರೆ ಸಡಗರಗಳು ಕಾಣಿಸಿಕೊಳ್ಳುತ್ತವೆ. ಸುತ್ತ ಮುತ್ತಲಿನ ಪ್ರಕೃತಿ ವ್ಯಾಪಾರದಿಂದ ಆತ ಮಳೆಯ ಭವಿಷ್ಯವನ್ನು ನುಡಿಯುತ್ತಾನೆ.

“ಗುಡ್ಡದ ಮರ್‍ಯಾಗ ಗುಡಗುಡ ಅನ್ನುದೇನ
ದೊಡ್ಡವನ ಮಗ ಮಳಿರಾಜ ಬಡದರ
ಗುಡ್ಡಂತ ಗುಡ್ಡ ತಿಳಿನೀರ” [೪೨]

---

೩೯ ಕಾಡು ಹೂಗಳು, ಜಿ.ಬಿ. ಖಾಡೆ, ಪುಟ–೩೪

೪೦ ಕಾಡು ಹೂಗಳು, ಜಿ.ಬಿ. ಖಾಡೆ, ಪುಟ–೩೫

೪೧. ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಪುಟ–೧೬೨.

೪೨. ಕಾಡು ಹೂಗಳು., ಜಿ.ಬಿ. ಖಾಡೆ, ಪುಟ–೪೮.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ನೆಲ ಮತ್ತು ನೀರುಗಳ ಬಗ್ಗೆ ಜನಪದರಿಗೆ ಇರುವ ಗೌರವ, ಶ್ರದ್ಧೆ ಎರಡೂ ಒಂದಾಗಿ ಬೆರೆತ, ಅಮೂರ್ತವನ್ನು ಮೂರ್ತವಾಗಿ ಗ್ರಹಿಸಿ ಮಾನವೀಕರಣಗೊಳಿಸುವ ತಾತ್ವಿಕತೆ ಮೇಲೆ ಈ ಪದ್ಯಗಳು ಮೂಡಿ ಬಂದಿವೆ.

ಪ್ರಕೃತಿಯಲ್ಲಿ ಸಹಬಾಳ್ವೆ ಮತ್ತು ಸಾಮರಸ್ಯದ ನೆಲೆಯಿದೆ. ಅಂದರೆ ಕೃಷಿಕನನ್ನು ಹಲವಾರು ಪ್ರಾಣಿ ಪಕ್ಷಿಗಳು ಅವಲಂಬಿಸಿರುತ್ತವೆ. ಅವುಗಳೆಲ್ಲ ಈತನ ದುಡಿಮೆಯಲ್ಲಿ ಪಾಲು ಪಡೆದಾದ ಮೇಲೆ ಉಳಿದ ಧಾನ್ಯ ರೈತನಿಗೆ. ಶ್ರೀಯುತ ಖಾಡೆಯವರು ಹುಟ್ಟಿದ್ದು ಬೆಳವಲ ನಾಡಿನ ಒಂದು ಚಿಕ್ಕ ಹಳ್ಳಿ ತೊದಲಬಾಗಿ. ಆ ನಾಡು ಜನಪದ ಸಾಹಿತ್ಯದ ಬೀಡು.

"ಮಲ್ಲಾಡ ಕೋಗಿಲೆ ಬೆಳವಲಕ ಬಾ ಒಮ್ಮೆ
ಬಿಳಿಜ್ವಾಳ ಸುಗ್ಗಿಯ ಸಡಗರವಾ ನೋಡಿದರ
ಹಂತಿಯ ಹಾಡುಗಳ ಸುರಿಮಳೆಯಾ" [೪೩]

ಇಲ್ಲಿ ಬೆಳವಲ ನಾಡಿನ ಜನ ಮಲೆನಾಡಿನ ಕೋಗಿಲೆಯನ್ನೇ ಆಹ್ವಾನಿಸಿದ್ದಾರೆ. ರೈತರು ತಮ್ಮ ತಮ್ಮ ಎರೆಯ ಹೊಲದಲ್ಲಿ ಬೆಳೆದು ನಿಂತ ಹಸಿರು, ಮುರಿಯುವ ಬಿಳಿ ಜೋಳದ ಹೊಲಗಳಲ್ಲಿ ತಮ್ಮದೇ ಆದ ರಾಗಲಗರಿಯಲ್ಲಿ ಮಧುರ ಕಂಠದಿಂದ ಕೋಗಿಲೆಯನ್ನೇ ಮೀರಿಸುವಂತೆ ಹಂತಿಯ ಪದಗಳನ್ನು ಹಾಡುತ್ತಿರುತ್ತಾರೆ.

"ಕರಿಹೆಂಟೆ ಬರಿಗಾಲ ನಡುವ ನೆಗ್ಗಿನ ಮುಳ್ಳ
ಗೆಣೆಯಾ ನಿನ್ನ ಕಳುವಿ ಬರುವಾಗ ಕಣ್ಣೀರ
ಸಣ್ಣ ಮುತ್ತಾಗಿ ಹರದಾವೊ" [೪೪]

ಕೃಷಿಕರಿಗೆ ಆಕಳು ಮತ್ತು ಎತ್ತುಗಳು ಸರ್ವಸ್ವವಾದುದರಿಂದ ಅವುಗಳನ್ನು ಚೆನ್ನಾಗಿ ನೋಡಿಕೊಂಡಷ್ಟು ತಮಗೇ ಅನುಕೂಲ, ಎಂಬ ಭಾವನೆಯಿಂದ ಅವುಗಳನ್ನು ತಮ್ಮ ಜೊತೆಯಲ್ಲಿಯೇ ಇಟ್ಟುಕೊಂಡಿರುತ್ತಾರೆ. ಒಕ್ಕಲಿಗ ತನ್ನ ಬೆಳೆದ ಬಿಳಿಜೋಳದ ಹೊಲದಲ್ಲಿ ಹೋರಿಯೊಂದನ್ನು ಬಾಜಿಕಟ್ಟಿ ಮೇಯಿಸಿ, ಕುಸ್ತಿಯ ಗಡಿಯಂತೆ ತಯಾರಿ ಮಾಡಿರುತ್ತಾನೆ. ಆಕಸ್ಮಾತ್ ಅವರಿಗೆ ಬಂದೊದಗಿದ ಹಣದ ಅಡಚಣೆಯ ಮೂಲಕ ಆ ಹೋರಿಯನ್ನು ಹಣಕ್ಕೆ ವಿಕ್ರಯಿಸುವ ಪ್ರಸಂಗ ಬರುತ್ತದೆ. ಹೋರಿಯನ್ನು ಖರೀದಿಸಿದವರು ಎಳೆದೊಯ್ಯುವಾಗ ಒಕ್ಕಲಿಗ ಬೆನ್ನುಹತ್ತಿ ಹೋರಿಯನ್ನು ಕಳುಹಿಸಲಿಕ್ಕೆ ಬರುತ್ತಾನೆ. ಎರೆಹೊಲದಾಚೆ ಬಂದಾಗ ರೈತನ ಅಂತರಂಗದಿಂದ ಈ ಮೇಲಿನ ಪದವು ಹೊರಹೊಮ್ಮುತ್ತದೆ. ತನ್ನ ಜೀವಕ್ಕಿಂತಲೂ ಹೆಚ್ಚಿಗೆ ಪ್ರೀತಿಸಿ ಜೋಳದ ಬಾಜಿಗೆ ಕಟ್ಟಿದ ಹೋರಿ ಇಂದು ಮರಡಿ ದಾರಿಯಲ್ಲಿ ಕಲ್ಲು ಮುಳ್ಳುಗಳನ್ನು ತುಳಿಯುತ್ತಾ ಹೊರಟಾಗ ಆತನ ಅಂತರಂಗಕ್ಕೆ ಬರೆ ಎಳೆದಂತಾಗಿ, ಗೆಳೆಯಾ ನಿನ್ನನ್ನು ಹೇಗೆ ಕಳುಹಲಿ ನಿನ್ನ ಕಾಲಿಗೆ ನೋವು ಆಗಿರಬೇಕು, ಮುಳ್ಳ ಮುರಿದಿರಬೇಕು. ಇನ್ನಾರು ನಿನಗೆ ಗತಿ ನಿನ್ನನ್ನು ಬಿಟ್ಟು ಹೇಗಿರಲೆಂದು ಅಳುವಾಗ ಕಣ್ಣೀರನ್ನು ಸಣ್ಣ ಮುತ್ತಿಗೆ ಹೋಲಿಸಿದ್ದಾನೆ.

---

೪೩ ಕಾಡು ಹೂಗಳು., ಜಿ.ಬಿ. ಖಾಡೆ, ಪುಟ-೩೬.
೪೪ ಕಾಡು ಹೂಗಳು, ಜಿ.ಬಿ. ಖಾಡೆ, ಪುಟ-೧೦

"ಮೇಟಿಯ ಪೂಜೆಗೆ ತೇಟ ಮಲ್ಲಿಗೆ ಬೇಕ
ರಾಗೋಲಿಗೆ ಬೇಕ ರವಿರತನ ಖಣದಾನ
ಭೂತಪ್ಪಗ ಬೇಕೋ ಬಿಳಿಮುತ್ತೋ" [೪೫]

ಕಣದಲ್ಲಿಯ ಪೂಜೆಯ ಬಗ್ಗೆ ರೈತ ಕೋಗಿಲ ಕಂಠದಿಂದ, ಮಲ್ಲಿಗೆ, ಬಿಳಿಮುತ್ತು, ರವಿರತನ ಎಂದು ಬಳಸಿದ ಪದಗಳೆಲ್ಲ ಬಿಳಿ ಬಣ್ಣವನ್ನು ಸೂಚಿಸಿ ಸ್ವಚ್ಛ, ಶುಭ್ರತೆ, ನಿಷ್ಕಲ್ಮಶ ಮನಸ್ಸನ್ನು ಸೂಚಿಸುವವು. ತೆನೆಗಳನ್ನು ಕಣದಲ್ಲಿ ಹರವಿ ಮೇಟಿಗೆ ಎಂಟೆತ್ತನ್ನು ಕಟ್ಟಿ ರೈತರು ಹಾಡುವ ಹಂತಿಯ ಪದಗಳನ್ನು ಆ ಬೆಳದಿಂಗಳ ಸವಿಯನ್ನು ಕಣ್ಣಿನಿಂದ ನೋಡಿಯೇ ಸವಿಯಬೇಕು.

"ಕೊಡೆಕಲ್ಲ ಬಸವಣ್ಣ ಕುಂಟೋಜಿ ಬಸವಣ್ಣ
ಕಾದ ಬಿದ್ದಾವೋ ಏರಿಯಾಗ-ಎರನಾಳ
ದ್ಯಾಮವ್ವ ಬಂದ ಬಿಡಶ್ಯಾಳ" [೪೬]

ಬಸವಣ್ಣಗಳ ಮಧ್ಯೆ ನಡೆದ ಕಾದಾಟವನ್ನು ದ್ಯಾಮವ್ವ ಸ್ತ್ರಿ ದೇವತೆ ಬಿಡಿಸಿದ್ದು ಮಾರ್ಮಿಕವಾಗಿದೆ. ಸ್ತ್ರೀ ದೇವತೆಗಳನ್ನು ಪೂಜಿಸುವುದು ದ್ರಾವಿಡ ಸಂಪ್ರದಾಯ. ಭೂಮಿ, ನೀರು, ಬೆಂಕಿ, ಪ್ರಕೃತಿ ಮುಂತಾದ ಪ್ರಾಕೃತಿಕ ಸಂಗತಿಗಳನ್ನು ಪೂಜಿಸುವ ಪರಿಕಲ್ಪನೆಯೇ ದ್ರಾವಿಡರದಾದುದರಿಂದ ಫಲ ಸಮೃದ್ಧಿಯ ಸಂಕೇತವಾಗಿ ಸ್ತ್ರೀಯನ್ನು ಆ ಮೂಲಕ ಶಕ್ತಿ ದೇವತೆಯನ್ನು ಪೂಜಿಸುವುದು ಸಾಮಾನ್ಯ ಸಂಗತಿ. ಹೀಗೆ ಪ್ರಾದೇಶಿಕಗನುಗುಣವಾಗಿ ಇಲ್ಲಿ ಕಟಗೇರಿ ಲಕ್ಕವ್ವ, ಹಿರಿಹೊಳಿ ಗಂಗವ್ವ, ದುರಗವ್ವ, ಸತ್ಯವ್ವ, ಜಂಬಗಿ ಕರಿಯವ್ವ, ಗೆಣ್ಣೂರ ಲಕ್ಕವ್ವ, ಜೋಗುಳಬಾವಿ ಸತ್ಯವ್ವ ಹೀಗೆ ಹಲವು ದೇವರ ಸ್ತುತಿ ಹರಕೆಗಳು ಹಂತಿ ಪದಗಳಲ್ಲಿ ಮೂಡಿವೆ. ಅಲ್ಲದೆ ಹಂತಿ ಪದಗಳಲ್ಲಿ ಹಾಸ್ಯ ಪದಗಳೂ ಉಂಟು.

"ಹರ್ಯಾಗ ಏಳೂತಲೆ ಯಾವನ ನೆನಿಬೇಕ
ಹೊಟ್ಟೆಪ್ಪನ ತಮ್ಮ ನುಚ್ಚಪ್ಪನ ಬಡದರ
ಹೊಟ್ಟೆಪ್ಪನ ಜಟ್ಟ ಕಡಿದಿತೋ" [೪೭]

"ಮುದುಕ-ಮುದುಕೀಯ ಕೂಡಿ ಮುಧೋಳ ಸಂತಿಗಿ ಹೋಗಿ
ಮುದುಕ ಬೇಡ್ಯಾನೋ ಹುಲಿಗೆಜ್ಜಿ ಮುದುಕಿ
ತೆಲಿ ಲಾಡಿ ಬೇಡಿ ಅಳತಾಳೋ" [೪೮]

ಹಾಸ್ಯ ಎಲ್ಲರಿಗೂ ಬೇಕು. ಜನಪದದ ಎಲ್ಲ ಪ್ರಸಂಗಗಳಲ್ಲಿ ಕಂಡು ಬರುತ್ತದೆ. ಹಂತಿಯಲ್ಲಿ ಶೃಂಗಾರ ರಸದ ಹಾಡುಗಳೂ ಉಂಟು. ಬೆಳವಲದ ಸುಗ್ಗಿಯಲ್ಲಿ ಎರೆ ಹೊಲದಲ್ಲಿ ಬಿಳಿಜೋಳ ಸೀತನಿ, ಸುಲಗಾಯಿ ತಿಂದು ಕೊಬ್ಬಿ ಪೈಲವಾನರಂತೆ ಕಾಣುವ ಹುಡುಗರು ಹಾಡುವ ಕಾಮಕೇಳಿಯ ಹಾಡುಗಳನ್ನು ಕಿವಿಯಿಂದ ಕೇಳಿಯೇ ಸವಿಯಬೇಕು.

---

೪೫ ಕಾಡು ಹೂಗಳು, ಜಿ.ಬಿ. ಖಾಡೆ, ಪುಟ-೧೩

೪೬. ಅದೇ. ಪುಟ-೧೨

೪೭. ಅದೇ ಪುಟ-೫೩.

೪೮. ಅದೇ ಪುಟ-೧೭

"ಹಳದಿ ಹಚ್ಚಿದ ಹುಡುಗಾ ಹಗಲೆಲ್ಲ ಬರಬ್ಯಾಡ

ಹಳದಿ ಹತ್ತೀತ ಪತ್ತಲಕ ಎಲೆ ಹುಡುಗಾ

ಅತ್ತೆವ್ವ ಬೇದಾಳ ಮನಿಗಿ ಹೋಗೋ"[೪೯]

ಹಳದಿ ಬಣ್ಣವನ್ನು ಕಾಮದ ಪ್ರತೀಕವೆಂದು ಜನಪದರಲ್ಲಿ ಭಾವಿಸುದರಿಂದಲೇ ಏನೋ ಮದುವೆ ಸಮಾರಂಭದಲ್ಲಿ ಅರಿಷಿಣ ಹಚ್ಚುವುದು. ಹಳದಿ ಬಣ್ಣದ ಸೀರೆ ಉಡುಸುವುದು ಇರಬಹುದೇನೊ?

"ಕಿತ್ತೂರ ಚೆನ್ನಮ್ಮ ಕಿಲ್ಲೇನ ಬಿಡುವಾಗ

ಎಳನೂರ ಎಮ್ಮಿ ಎಳೆಗರಾ ಹೊಡಕೊಂಡ

ಹೊಂಗಲದಾರಿ ಹಿಡದಳೋ"[೫೦]

ಹಂತಿ ಪದಗಳಲ್ಲಿ ಹೆಚ್ಚಾಗಿ ಬಿಡಿ ಬಿಡಿ ಗೀತೆಗಳನ್ನು ಹಾಡಿದರೆ ಮಹಾ ಪುರುಷರ, ವೀರರ, ದೈವಗಳ ಚರಿತ್ರೆಯನ್ನು ಹಾಡುವುದುಂಟು. ಇತಿಹಾಸ ಪುರುಷರಲ್ಲಿ ಸಂಗೊಳ್ಳಿ ರಾಯಣ್ಣ, ಕಿತ್ತೂರ ಚನ್ನಮ್ಮ, ಮಲ್ಲಸರ್ಜ, ಮುಂಡರಗಿ ಭೀಮರಾಯ ಇವರ ಚರಿತ್ರೆಗಳು ಹಂತಿ ಪದಗಳಲ್ಲಿ ಮೂಡಿವೆ.

"ಕಾಣಾ ನೀ ಕೊಡ್ಲಾಕ ಕಡ್ಲೆಲ್ಲ ಗೋದೆಲ್ಲ

ನಿನ್ನಕ್ಕಿಂತ ದುರುಳ ಮನಿ ಪುರುಷ ಕೇಳಿದರ

ಕಬ್ಬ ಕಡದಾಂಗ ಕಡದಾನ"[೫೧]

ಊರ ಗೌಡನ ವ್ಯಭಿಚಾರತೆಯನ್ನು ತಿಳಿಸುವ ಪದಗಳೂ ಇಲ್ಲಿವೆ. ಗೌಡ ಹೆಣ್ಣಿಗೆ ಆಶೆಪಟ್ಟು ಹೋದಾಗ, ಅದು ಸಂವಾದ ರೂಪದಲ್ಲಿ ಮೂಡಿದೆ. ಗೌಡ ಮತ್ತು ಬಡ ಹೆಣ್ಣು ಮಗಳ ಸಂವಾದ ಮೂರು-ನಾಲ್ಕು ಪದಗಳಲ್ಲಿ ಬಂದಿದ್ದು, ಆಕೆ ತನ್ನ ಮನಿ ಪುರುಷ ಮನೆಯಾಗಿದ್ದಾಗ ತಾನು ಯಾರಿಗೂ ಹೆದರುವವಳಲ್ಲ ಎಂದು ಹೇಳುವ ದಿಟ್ಟತನವಾದ ಮಾತುಗಳಲ್ಲಿ ಹೆಣ್ಣಿನ ಬಂಡಾಯ ವ್ಯಕ್ತವಾಗಿದೆ "ಕಬ್ಬ ಕಡದಾಂಗ ಕಡದಾನ ಮನಿ ಪುರುಷ" ಎಂಬ ಧ್ವನಿಯಲ್ಲಿ ಮೂಡಿದೆ. ಬಡ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಸಿರಿವಂತರಿಗೆ ಸಾಮಾನ್ಯವಾಗಿದೆ.

"ಸಿಂದಿಯ ಗಿಡದವ್ವ ಎಟ್ಟುದ್ದ ಬೆಳದೆವ್ವ

ಒಂಟಿ ಮ್ಯಾಲ ಕುತ್ತ ಮೆರೆದೆವ್ವ ಎಂತೆಂತವರ

ಗೋಣಾ ಮುರಿದೆವ್ವ"[೫೨]

ಸೆರೆ-ಸಿಂದಿ ಒಳ್ಳೆಯದಲ್ಲ. ಅದು ಎಂಥೆಂಥವರ ಜೀವನವನ್ನು ಹಾಳು ಮಾಡುತ್ತದೆಂಬುದನ್ನು ಪದಗಳಲ್ಲಿ ದಿಟ್ಟವಾಗಿ, ವಿರೋಧವಾಗಿ ಮೂಡಿ ಬಂದಿದೆ. ದುಶ್ಚಟಗಳಿಗೆ ಬಲಿಯಾದರೆ ಜೀವನ ಅಂತ್ಯ ಕಾಣುವುದು ಕಟ್ಟಿಟ್ಟದ್ದು.

ಪ್ರಾದೇಶಿಕವಾಗಿ ಗಮನಿಸಿದಾಗ ಇಲ್ಲಿನ ಪದಗಳು ಸುತ್ತ ಮುತ್ತಲಿನ ಊರು, ದೇಶ, ಅಲ್ಲಿರುವ ಪ್ರಸಿದ್ಧ ದೇವತೆಗಳ ಗುಣಗಾನವನ್ನು ಮಾಡುವವುಗಳಾಗಿವೆ. ಇಲ್ಲಿ ತೊದಲಬಾಗಿ

---

೪೯. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ-೩೫.

೫೦. ಅದೇ, ಪುಟ-೩೫

೫೧. ಅದೇ, ಪುಟ-೪೨

೫೨ ಅದೇ, ಪುಟ-೪೬.

ಸುತ್ತಮುತ್ತಲಿನ ಊರುಗಳು ಉಲ್ಲೇಖನೀಯವಾಗಿವೆ. ತೊದಲಬಾಗಿ ಮಡ್ಡಿಸಿದ್ಧ, ಬಬಲಾದಿ ಸದಾಶಿವ, ಸಾವಳಗಿ ಶಿವಲಿಂಗ, ಕುಂಟೋಜಿ ಬಸವಣ್ಣ, ಉಪ್ಪಲದಿನ್ನಿ ಸಂಗಯ್ಯ, ಕಡಪಟ್ಟಿ ಬಸವಣ್ಣ, ಕೊನ್ನೂರ ಕರಿಸಿದ್ಧ, ಮುಂಡಗನೂರ ಮಾಳಿಗರಾಯ, ಖಿಳಿಗಾಂವಿ ಬಸವಣ್ಣ, ಕಟಗೇರಿ ಲಕ್ಕವ್ವ, ಮುಧೋಳದ ಸಯ್ಯದಸಾಹೇಬ, ತೇರದಾಳ ಪ್ರಭುಸ್ವಾಮಿ, ಮುಚ್ಚಂಡಿ ಧರೆಪ್ಪ, ಗೋಕಾವಿ ಸಿದ್ರಾಯ, ಪಡಸಲಗಿ ಭೂತಾಳಸಿದ್ಧ, ಜಂಬಗಿ ಕರಿಯವ್ವ, ಆಗೋಡಿ ಬಸವಯ್ಯ, ಗೆಣ್ಣೂರ ಲಕ್ಕವ್ವ ಹೀಗೆ ಹಲವಾರು ಗ್ರಾಮಗಳ ದೇವದೇತೆಗಳ ಹೆಸರುಗಳೊಂದಿಗೆ ಗುಣಗಾನ ಹರಕೆ, ಸ್ತುತಿ ಪದಗಳು ಬಹಳಷ್ಟಿವೆ. ಜೊತೆಗೆ ಒಡಪಿನ ಪದಗಳೂ ಕೆಲವೊಂದಿವೆ. ಅದರಲ್ಲೊಂದು

"ಗೇಣ ಗಿಡನಹುಟ್ಟಿ ಮಾಟೊಂಗಿಯನಾಗಿ
ಜಗತುಂಬ ಕಾಯಿ ಹೆಚ್ಚಾಗಿ ತೊದಲಬಾಗಿ
ಶಾಣ್ಯಾ ಎಲ್ಲ ಹುಡಗಾ ಒಡದ ಹೇಳೊ" [೫೩]

(ಸುಲಗಾಯಿ: ಕಡ್ಲಿಗಿಡ)

ಜನಪದರ ಬುದ್ಧಿಶಕ್ತಿ ಪರೀಕ್ಷೆಯ ಒಂದು ಮಾಪನವಾಗಿ ಒಗಟು ಬಳಕೆಯಾಗುತ್ತವೆ. "ಬದುಕಿನ ನಿಗೂಢತೆಯ ಪ್ರತಿನಿಧಿಗಳಂತೆ ಒಗಟು ನಿಗೂಢತೆಯನ್ನು ಶೋಧಿಸುವ ಕ್ರಮವಾಗಿವೆ."[೫೪] ಜನಪದರ ಬುದ್ಧಿಮತ್ತೆಯ ಪರೀಕ್ಷಕ ಬುದ್ಧಿಗೆ ಒಗಟು ಪ್ರಾತಿನಿಧಿಕಗಳಾಗಿವೆ.

"ಇಂದ ನಮ್ಮ ಕಾಮಣ್ಣ ಕೆಂದಗುದರಿಯನೇರಿ
ಗಂಧ ಒಳ್ಳೆಂದ ಎಲಿಒಳ್ಳೆ ಕಾಮಣ್ಣಾ
ಮಂದ್ಯಾಗ ನಿಂತ ನಗವಲ್ಲ" [೫೫]

ಹೋಳಿಹಬ್ಬದಲ್ಲಿ ಕಾಮಣ್ಣನ ಸ್ಥಿತಿ-ಗತಿ ವಿವರಿಸುವ ಪದಗಳೂ ಹಂತಿ ಪದಗಳಲ್ಲಿವೆ. 'ಗಂಧ' 'ಎಲಿ' (ವಿಳ್ಯದೆಲೆ) 'ಕುದುರೆ' ಈ ವಸ್ತುಗಳು ವಿಲಾಸಿ ಜೀವನದ ಪ್ರತೀಕಗಳಾಗಿದ್ದು, ಕಾಮದೇವನ ಪ್ರತೀಕಗಳು. ಶೃಂಗಾರರಸ ಸಂಕೇತಗಳಿವು ಸೂಚ್ಯವಾಗಿ ಬಂದಿವೆ.

. **"ಅಚ್ಚ ಆರ್‍ಯಾಗ ಹುಡುಗಿ ಹಚ್ಚ್ಯಾಳ ಕುಂಕುಮ**
ಮೆಟ್ಟಿ ಮಾಡ್ಯಾಳ ನಡು ಓಣಿ ಆಕಿ ಕಾಲಾಗ
ಬತ್ತಿ ಬಿದ್ದಾವ ಉಡದಾರ"[೫೬]

ಪದಗಳಲ್ಲಿ ಕೆಲವೊಂದು ಗ್ರಾಮಗಳಿಗೂ, ಕೆಲವೊಂದು ಕೋಮಿನವರಿಗೂ, ಮೂಗು ಮುಚ್ಚಿಸುವ ಕೊಳಚೆಯನ್ನು ಅಂಟಿಸಿದ್ದು ಕಂಡುಬರುತ್ತದೆ. ಜನಪದದ ಸುಸಂಸ್ಕೃತಿ ಮಂದಿರದಲ್ಲಿ ತಿಪ್ಪೆಯ ಗುಂಡಿಗೂ ಒಂದು ಸ್ಥಾನವುಂಟೆಂದರೆ, ಅದು ದುರ್ವಾಸನೆಗೆ ಎಡೆಯಾಗಬಾರದು. ಏಕೆಂದರೆ

---

೫೩ ಕಾಡು ಹೂಗಳು, ಜಿ.ಬಿ. ಖಾಡೆ, ಪುಟ – ೬೮

೫೪ ಕನ್ನಡ ಸಾಹಿತ್ಯ ಕೋಶ,ರಾಜಪ್ಪ ದಳವಾಯಿ, ಪುಟ–೪೬೨

೫೫. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ – ೪೪.

೫೬. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ – ೫೦

[illegible]

[illegible]

[illegible]

[illegible]

[illegible]

ಕೊಳಚೆಗಾಗಿ ಮುಖ ತಗ್ಗಿಸದ ಸಮಾಜವು ಕೊಳೆಯನ್ನು ಎತ್ತಿ ತೋರಿಸಿದ ಮಾತಿಗೆ ಮುಖ ಕೆಡಿಸಿಕೊಳ್ಳುವುದುಂಟು.

> "ತುಂಬಿದ ಕಣದಾಗ ರಂಬೇರು ಬರತಾರ
> ಚಂದಾಳದ ಗೊಂಬಿ ರಾಗೋಲ ಆಡಿದ
> ರಾಶಿ ರಾಜೇಕ ಸಂಪ ಜಗಜಂಪ"[೫೭]

ಚಂದಾಳ ಕಟ್ಟಿಗೆಯ ರಾಗೋಲನ್ನು ಇಲ್ಲಿ ವಿಶೇಷ ರೀತಿಯಲ್ಲಿ ಪೂಜೆಗೈಯ್ಯುತ್ತಾರೆ. ಕಾರಣ ಆ ರಾಗೋಲಿನಿಂದ ಹೊರಟ ರಾಶಿ ಜೋಳ, ರಾಜ್ಯಕ್ಕಷ್ಟೇ ಅಲ್ಲದೆ ಜಗತ್ತಿಗೂ ಸಂಪನ್ನೀಯುತ್ತದೆ ಎಂದು ರೈತ ಆಶಿಸುತ್ತಾನೆ. ರಾಶಿ ತುಂಬುವ ದಿವಸ ರಾಶಿಬೋನವೆಂದು ಹುಗ್ಗಿ ಮಾಡಿ ಮುತ್ತೈದೆಯರಿಗೆ ಊಟ ಮಾಡಿಸಿ, ನಂತರ ರೈತರು ಉಂಡು, ಜೋಳವನ್ನು ಚೀಲಗಳಲ್ಲಿ ತುಂಬುವ ಪದ್ಧತಿ ಬೆವಲನಾಡಿನಲ್ಲಿದೆ. ಜೋಳ ತುಂಬಿದ ಚೀಲಗಳನ್ನು ಬಂಡಿಯಲ್ಲಿ ಹೇರಿ ಎತ್ತುಗಳಿಗೆ ಬಣ್ಣ ಬಣ್ಣದ ಬಾಸಿಂಗ ಕಟ್ಟಿ ಜೂಲು ಹಾಕಿ ಕೊರಳಲ್ಲಿ ಗೆಜ್ಜೆ ಕಟ್ಟಿಕೊಂಡು, ಹಾಡುತ್ತಾ ರೈತರು ಹೊಲದಿಂದ ಗ್ರಾಮಕ್ಕೆ ಬರುವ ನೋಟವು ಕಣ್ಣಿಗೆ ಹಬ್ಬವನ್ನುಂಟು ಮಾಡಿ ಮನಸ್ಸಿಗೆ ಉಬ್ಬು ತರುತ್ತದೆ.

ಡೊಳ್ಳಿನ ಪದಗಳು:

ಜನಪದ ಹಾಡುಗಳನ್ನು ಪ್ರಧಾನವಾಗಿ ೧. ಹೆಂಗಸರ ಹಾಡುಗಳು ೨. ಗಂಡಸರ ಹಾಡುಗಳು ೩. ಮಕ್ಕಳ ಹಾಡುಗಳೆಂದು ವಿಂಗಡಿಸಬಹುದು. ಈಗಾಗಲೇ ನಾವು ಹೆಂಗಸರ ಹಾಡುಗಳಲ್ಲಿ ಬೀಸುವ ಹಾಡು, ಕುಟ್ಟುವ ಹಾಡು, ಕೋಲಿನ ಪದ, ಸೋಬಾನದ ಹಾಡು, ಮದುವೆ ಇತ್ಯಾದಿ ನೋಡಿದ್ದೇವೆ. ಗಂಡಸರ ಹಾಡುಗಳಲ್ಲಿ ಮುಖ್ಯವಾಗಿ ನಾವು ಹಂತಿ ಹಾಡು, ಹೋಳಿ ಹಾಡು, ಭಜನಿ ಹಾಡು, ಮೊಹರಂ ಹಾಡು, ಡೊಳ್ಳಿನ ಹಾಡು ಹೀಗೆ ಹತ್ತು ಹಲವಾರು ಪ್ರಕಾರಗಳು ಕಂಡುಬರುತ್ತವೆ. ಎಣಿಸಿ ಇಷ್ಟೇ ಇವೆ ಎಂದು ಹೇಳುವಂತಿಲ್ಲ. ಕ್ಷೇತ್ರಕಾರ್ಯ ಅಧ್ಯಯನ ಮತ್ತೆ ಮತ್ತೆ ಕೈಗೊಂಡಾಗ ಇನ್ನೂ ಹೊಸ ಹೊಸ ರೀತಿಯ ಹಾಡುಗಳು ದೊರೆಯುತ್ತವೆ ಎಂಬುದಕ್ಕೆ ಎರಡು ಮಾತಿಲ್ಲ. ಇನ್ನು "ಮಕ್ಕಳ ಹಾಡುಗಳಲ್ಲಿ ಮಾತ್ರ ಇಂತಹದೇ ಪ್ರಕಾರಕ್ಕೆ ಹಾಡುಗಳೆಂದು ಇದುವರೆಗೆ ಯಾವುದೇ ವಿದ್ವಾಂಸರು ವಿಂಗಡಿಸಿಲ್ಲ. ಯಾಕೆಂದರೆ ಮಕ್ಕಳ ಪದಗಳು ಪ್ರಮುಖವಾಗಿ ಗುಳ್ಳವ್ವನ ಆಚರಣೆಯ ಮತ್ತು ಆಟಗಳ ಸಂದರ್ಭದಲ್ಲಿ ಹಾಡುವ ಪದಗಳನ್ನು ಬಿಟ್ಟರೆ ಇವು ಮತ್ತೆ ಬೇರಾವ ಸಂದರ್ಭದಲ್ಲಿ ಹಾಡುವುದು ಕಂಡುಬರುವುದಿಲ್ಲ"[೫೮] ಹೀಗಾಗಿ ಅವುಗಳನ್ನು ಕೇವಲ ಗುಳ್ಳವ್ವನ ಪದಗಳು ಹಾಗೂ ಇತರ ಪದಗಳೆಂದು ಮಾತ್ರ ವಿಂಗಡಿಸಬಹುದಾಗಿದೆ. ಈ ಮೇಲಿನ ಮೂರು ವಿಧದ ಹಾಡುಗಳಲ್ಲಿ ಡೊಳ್ಳಿನ ಪದಗಳಿಗೆ ವಿಶಿಷ್ಟ ಸ್ಥಾನವಿದೆ. ಡೊಳ್ಳು ಕುರುಬ ಜನಾಂಗದವರಿಗೆ ಪರಂಪರೆಯಿಂದ ಪ್ರಾಮುಖ್ಯವಾಗಿ ಮೀಸಲಾಗಿರುವ ವಾದ್ಯ ಆದ್ದರಿಂದ ಡೊಳ್ಳಿನ ಹಾಡುಗಳ ಏಕನಾಮವು ಕೂಡ ಕುರುಬರದಾಗಿದೆ.

---

೫೭. ಕಾಡು ಹೂಗಳು, ಜಿ.ಬಿ. ಖಾಡೆ, ಪುಟ–೫೯

ಇತ್ತೀಚಿತ್ತಲಾಗಿ ಬೇರೆ ಜಾತಿ, ಬೇರೆ ಮತದವರು ಡೊಳ್ಳಿನ ಹಾಡುಗಳನ್ನು ಹಾಡುವ, ಹಾಡುಗಳನ್ನು ಹಟ್ಟಿಕೊಂಡು ಮಂಚೂಣಿಯಲ್ಲಿರುವುದನ್ನು ವಿವಿಧ ಮಾಧ್ಯಮಗಳ ಮೂಲಕ ಬೇರೆ-ಬೇರೆ ಪ್ರಸಂಗಗಳಲ್ಲಿ ಕೇಳುತ್ತಿದ್ದಾರೆ. ಆ ಬಗ್ಗೆ ಕುತೂಹಲ ಹೊಂದಿದ್ದಾರೆ. ಜೈನ, ಲಿಂಗಾಯತ, ಮುಸಲ್ಮಾನ ಮುಂತಾದ ಜಾತಿ-ಮತಗಳ ಡೊಳ್ಳು ಹಾಡುಗಾರರು ಅತ್ಯಂತ ಪ್ರಖ್ಯಾತರಾಗಿರುವುದೆ ಈ ಬಗೆಯ ಕುತೂಹಲಕ್ಕೆ ಮೂಲ ಕಾರಣ."[೫೯] ಅಂಥವರ ಮೂಲ ಜಾತಿ-ಮತಗಳ ಬಗ್ಗೆ ಅರಿತುಕೊಂಡ ಕೆಲವರಿಗಾದರೂ ಇವರೇಕೆ ಡೊಳ್ಳಿನ ಪದಗಳನ್ನು ಹಾಡುತ್ತಾರೆಂಬ ಗೊಂದಲವಾಗಿ ಕೂಡಿರಬಹುದು. ಡೊಳ್ಳಿನ ಹಾಡುಗಳ ಏಕಸ್ವಾಮಿತ್ವವೂ ಕೂಡಾ ಕುರುಬರದಾಗಿದೆಯೆಂಬ ಗ್ರಹಿಕೆ ಸರಿಯೇ ಅಥವಾ ತಪ್ಪೋ ಎಂಬ ಸಂಶಯವೂ ಅಂಥವರ ಮನದಲ್ಲಿ ಮೂಡಿರಬಹುದು. ಈ ಬಗೆಯ ಗೊಂದಲ ಮತ್ತು ಸಂಶಯಗಳ ನಿವಾರಣೆಯಾಗಿಯೇ. ಪ್ರೊ.ಜ್ಯೋತಿ ಹೊಸೂರ ಅವರು "ಬೇರೆ ಜಾತಿ ಮತ್ತು ಮತಗಳವರು ಡೊಳ್ಳಿನ ವಾದ್ಯಗಳನ್ನು ಹಾಡಿದರೂ ಅವರು, ಕುರುಬರ ಪರಂಪರೆಯ ಹುಡುಗಾರಿಕೆಯನ್ನು ಎಲ್ಲರೂ ಮುಖ್ಯವಾಗಿ ತಿಳಿದುಕೊಳ್ಳುವುದು ಅಗತ್ಯ. ಬೇರೆ ಜಾತಿ-ಮತಗಳ ಈ ಹಾಡುಗಾರರು ಕುರುಬರ ಪರಂಪರೆಯ ಬಗ್ಗೆ ಶಾಸ್ತ್ರ-ಪುರಾಣಗಳ ಬಗ್ಗೆ ತಮ್ಮಲ್ಲಿರುವ ಪಾಂಡಿತ್ಯ ಹಾಗೂ ವಿದ್ವತ್ತಿನ ಪ್ರದರ್ಶನ ಮತ್ತು ತಾವು ಹೊಂದಿರುವ ಧ್ವನಿ ರಮ್ಯತೆ ಹಾಡುಗಾರಿಕೆಯ ಚಾಲಾಕಿತನ ಅಲ್ಲದೇ ರಾಗ-ತಾಳಗಳಲ್ಲಿಯ ಏರಿಳಿತದ ಪ್ರದರ್ಶನಗಳ ಮೂಲಕ ಪ್ರಸಿದ್ಧಿಯನ್ನು ಪಡೆದುಕೊಳ್ಳುವ ಮೂಲ ಉದ್ದೇಶದವರಾಗಿರುತ್ತಾರೆಂಬುದು ಮಹತ್ವದ ವಾಸ್ತವ ಅಂಶ. ಯಾವುದೇ ಬಗೆಯಲ್ಲಿ ಯಾವುದೋ ಕಾರಣದಿಂದಾಗಿ ಕುರುಬರ (ಹಾಲುಮತದವರ) ಡೊಳ್ಳಿನ ಪದಗಳ ಹಾಡುಗಾರರೊಂದಿಗೆ ಒದಗಿಬಂದ ಸಂಪರ್ಕ ಹಾಗೂ ಸಂಬಂಧದ ಮೂಲಕವಾಗಿ ಅಂತವರು ಡೊಳ್ಳಿನ ಪದಗಳ ಹಾಡುಗಾರಿಕೆಯಲ್ಲಿ ತಮ್ಮ ಸಹಜ ಪ್ರೌಢಿಮೆಯ ಕಾರಣದಿಂದಾಗಿ ಪರಿಣಿತಿ ಪಡೆದವರಾಗಿ ಖ್ಯಾತರಾಗಿದ್ದಾರೆ"[೬೦] ಎಂಬುದು ಗಮನಾರ್ಹವಾಗಿದೆ.

ಕನ್ನಡ ಜನಪದ ಗೀತೆಗಳಲ್ಲಿ ಡೊಳ್ಳಿನ ಪದಗಳದು ಸಿಂಹಪಾಲು. ಡೊಳ್ಳಿನ ಪದಗಳು ಸಾಮಾನ್ಯವಾಗಿ ಪೌರಾಣಿಕ ವಸ್ತುಗಳನ್ನೇ ಒಳಗೊಂಡಿದೆ ಎಂದರೂ ಸಮಾಜ, ನಿಸರ್ಗ, ವ್ಯಕ್ತಿಗಳನ್ನು ಕುರಿತಾದ ಪದಗಳು ಇವೆ. ಪ್ರಧಾನವಾಗಿ ಪುರಾಣ ಕಥೆಗಳು, ನಡೆ-ನುಡಿಗಳು, ಧಾರ್ಮಿಕ ಪುಣ್ಯ ಪುರುಷರ ವೃತ್ತಾಂತಗಳು ಡೊಳ್ಳಿನ ಪದಗಳ ವಸ್ತು. ಈ ಪದಗಳಲ್ಲಿನ ಪುಣ್ಯ ಕಥೆಗಳು ನೀತಿ, ತತ್ವ, ಧರ್ಮವನ್ನು ಕೇಳಿ ಜನರು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡು ಆದರ್ಶಯುತ ಬಾಳನ್ನು ಬಾಳಬೇಕೆಂಬುದೇ ಈ ಪದಗಳ ಮೂಲ ಆಶಯ.

---

೫೮. ಡೊಳ್ಳಿನ ಪದಗಳು. ಡಾ. ಅರ್ಜುನ ಗೊಳಸಂಗಿ. ಪುಟ-೪.

೫೯. ಡೊಳ್ಳಿನ ಹಾಡುಗಳ ಸಮೀಕ್ಷೆ. ಪ್ರೊ. ಜ್ಯೋತಿ ಹೊಸೂರ. ಪುಟ-೧೦

೬೦. ಅದೇ. ಪುಟ-೧೦-೧೧.

೬೧. ಕಾಡು ಹೂಗಳು. ಪುಟ-೮೪.

ದೈವಭಕ್ತಿಗೆ ಇಲ್ಲಿ ಹೆಚ್ಚಿನ ಪ್ರಾಧಾನ್ಯತೆ ಇರುವುದರಿಂದ ಡೊಳ್ಳಿನ ಪದಗಳನ್ನು ಭಕ್ತಿ ಗೀತೆಗಳೆಂದು ಕರೆಯಬಹುದು. ಬಹುಪಾಲು ಹಾಡುಗಳು ಕುರುಬ ಕುಲ, ವೃತ್ತಿ, ದೈವದ ಸುತ್ತ ಹೆಣೆದಿರುವುದು ಕಂಡುಬರುತ್ತದೆ. ವಸ್ತುವಿನ ದೃಷ್ಟಿಯಿಂದ ವಿಶ್ಲೇಷಣೆಗೆ ಒಳಪಡಿಸಿದಾಗ ಅವುಗಳಲ್ಲಿ ಕಥನ ರೂಪಗಳೆ ಹೆಚ್ಚಾಗಿರುವುದು ಗೋಚರವಾಗುತ್ತದೆ.

ಮೂಲತಃ ವಿಶಿಷ್ಟವಾದ ಹಾಲುಮತ ಸಂಪ್ರದಾಯ ಪರಂಪರೆಯಲ್ಲಿ ಮಾತ್ರ ನಿರೂಪಿತಗೊಳ್ಳುತ್ತಿದ್ದ ಡೊಳ್ಳಿನ ಪದಗಳಲ್ಲಿ ಕಾಲಕ್ರಮೇಣ ಕಡಿಮೆ ಪ್ರಮಾಣದಲ್ಲಿಯಾದರೂ ನಾಗರಿಕತೆ, ನಿಸರ್ಗ ಮತ್ತು ಇತರ ಸಮಾಜದ ಚಿತ್ರಣ ಒಡಮೂಡಿ ಬಂದಿವೆ. ಉದಾಹರಣೆಗೆ ವೈದಿಕ ಸಂಪ್ರದಾಯಕ್ಕೆ ಸಂಬಂಧಿಸಿದ ಭಕ್ತ ಮಾರ್ಕಂಡೇಯ, ಋಷಿ ಜಮದಗ್ನಿ, ಕೌರವ ಪಾಂಡವರು, ಶಿವಶರಣರ ಚರಿತ್ರೆ, ಈಗಿನ ಹೆಣ್ಣುಮಕ್ಕಳ ನೀತಿಯುಕ್ತ ಮಾತುಗಳು, ನೀತಿ ಬೋಧ ಮುಂತಾದ ವಿಷಯಗಳುಳ್ಳ ಪದಗಳು ಬಹುತೇಕವಾಗಿ ಅನಂತರ ಹುಟ್ಟಿದವುಗಳಾಗಿವೆ.

ಡಾ. ಎಂ. ಎಸ್ ಸುಂಕಾಪೂರ ಅವರ ಜೀವನ ಜೋಕಾಲಿ ಭಾಗ–೬ರಲ್ಲಿ ವಿಂಗಡಿಸಿದಂತೆ ಅಧ್ಯಯನದ ದೃಷ್ಟಿಯಿಂದ ಡೊಳ್ಳಿನ ಪದಗಳನ್ನು ವಸ್ತುವನ್ನಾಧರಿಸಿ ಪ್ರಮುಖವಾಗಿ ೧. ಕಥನಗೀತೆಗಳು. ೨. ಚುಟುಕುಗಳೆಂದು ವಿಂಗಡಿಸಬಹುದು. ಡೊಳ್ಳಿನ ಪದಗಳಲ್ಲಿ ಕಥನ ಗೀತೆಗಳೇ ಅಧಿಕವಾಗಿರುವುದರಿಂದ ೧. ಪುರಾಣ ಪದಗಳು. ೨ ಪವಾಡ ಪದಗಳು. ೩. ನೀತಿ ಪದಗಳು. ೪. ಧರ್ಮದ ಪದಗಳು. ೫. ಚುಟುಕಗಳು ಎಂದು ವಿಂಗಡಿಸಬಹುದಾಗಿದೆ.

"ಖಿಳಿಗಾವಿ ಬಸವಣ್ಣ ನೆನದೇವೋ ಕಡಪಟ್ಟಿ ಬಸವಣ್ಣನೋ

ಕಡಪಟ್ಟಿ ಬಸವನ ನೆನದೇವೋ ಕೊಡೆಕಲ್ ಬಸವಣ್ಣನೋ"[೬೧]

ಗುರುವಿನ ಸ್ತುತಿಯಿಂದ ಪ್ರಾರಂಭವಾಗುವ ಡೊಳ್ಳಿನ ಪದಗಳೊಂದಿಗೆ ಹರಕೆ ಪದಗಳೂ ಕಾಣುವವು. ಖಿಳೆಗಾವಿ, ಕಡಪಟ್ಟಿ, ಬಸವಣ್ಣನ ನೆನೆಸಿ, ಪರ್ವತ ಮಲ್ಲ, ಪಾತಾಳ ಗಂಗೆ, ಗೌರಿ ಪರಮೇಶ್ವರನ ಸ್ತುತಿ ಇದೆ. ದೇವಾನುದೇವತೆಗಳನ್ನು ಕುರಿತು ಪೌರಾಣಿಕ ಕತೆ ಹೆಣೆದ ಪದಗಳ ರಾಶಿ ಲೆಕ್ಕಕ್ಕಿಲ್ಲದಷ್ಟಿವೆ. ಭಕ್ತ ಭೃಂಗೇಶ, ಮಾರ್ಕಂಡೇಯ, ಕಾಮದಹನ, ಜಮದಗ್ನಿಯ ಶಾಪ ಮೊದಲಾದ ಪದಗಳು ಈ ವರ್ಗಕ್ಕೆ ಸೇರುತ್ತವೆ.

ಧಾರ್ಮಿಕ ಪದಗಳಲ್ಲಿ ಯಾರು ಧರ್ಮವನ್ನು ರಕ್ಷಿಸುತ್ತಾರೋ ಅವರು ಧರ್ಮದಿಂದ ರಕ್ಷಣೆ ಪಡೆಯುತ್ತಾರೆಂಬಂತೆ ನಮ್ಮ ಕುರುಬರು ಧರ್ಮವಂತರಾಗಿ ಧರಣಿಯಲ್ಲಿ ಬದುಕು ಸಾಗಿಸಿದವರು. ಅಂತೆಯೇ ಸತ್ಯ, ಸದಾಚಾರ, ಸದ್ಗುಣ ಶುದ್ಧ ಭಕ್ತಿಗೆ ಕುರುಬರ ಧರ್ಮ ಹೆಸರಾದುದು. ಮಲ್ಲಿಗೆಯ ಮನದ ಮುಗ್ಧ ಸ್ವಭಾವದ ಕುರುಬರು ಕಪಟ ಮೋಸವನ್ನು ಕನಸಿನಲ್ಲಿಯೂ ಅರಿಯದವರು. ಅದಕ್ಕಾಗಿ ಹಳ್ಳಿಯಲ್ಲಿ ಅವರಿಗಿರುವ ಗೌರವ ಅಪಾರವಾದುದು. ಕುರುಬರು ತಮ್ಮ ಮತ ಧರ್ಮವನ್ನು ಕುರಿತು ಅನೇಕ ಪದಗಳನ್ನು ಹಾಡುತ್ತಾರೆ. ಅವುಗಳಲ್ಲಿ 'ಪದ್ಮಗೊಂಡ' 'ಅಮೋಘಸಿದ್ಧ' 'ರೇವಣಸಿದ್ಧ' ಮೊದಲಾದವುಗಳು ಮುಖ್ಯವಾಗಿವೆ. ಕುರುಬ ಎಲ್ಲದಕ್ಕೂ ಮೊದಲಿಗನು. ಅವನು ಸಾಮಾನ್ಯನಲ್ಲವೆಂದು ಜನರಲ್ಲಿ ನಂಬಿಕೆ ಈಗಲೂ ಇದೆ. ಸ್ವತಃ

ನಮ್ಮ ತಂದೆಯವರು ಪ್ರತಿದಿನ ಹೊಲಕ್ಕೆ ಹೋಗುವಾಗ ಕುರುಬನನ್ನು ನೋಡಿದರೆ ಆ ದಿನದ ಕಾರ್ಯಗಳೆಲ್ಲ ಯಶಸ್ವಿಗೊಂಡು ಉತ್ತಮ ಫಲ ನೀಡುವವೆಂಬ ಭರವಸೆ ಅವರಿಗಿತ್ತು. ಇಂದಿಗೂ ಅಂದರೆ ಮೊನ್ನೆ ಮೊನ್ನೆ ಚುನಾವನೆಗಳಾದಾಗ ಮೊದಲು ಎಲ್ಲ ಊರುಗಳಲ್ಲಿ ಕುರುಬರಿಂದ ಓಟು ಹಾಕಿಸುವುದನ್ನು ಕಂಡಿದ್ದೇವೆ. ಇದನ್ನು 'ಕುರುಬ ಮೊದಲಿಗ' ಎಂಬ ಪದದಲ್ಲಿ ನೋಡಬಹುದು.

"ಕುರುಬರಕಿಂತ ಮೊದಲ ಯಾವದಿಲ್ಲರಿ. ತಿಳಿದು ನೋಡರಿ
ನಿಮ್ಮ ಮನಕ ಹೊಸ ವರ್ಷ ಉಗಾದಿ ಪಾಡ್ಯೇಕ ಹೊಲದಾಗ
ಕುಂಟೆಯ ಹೂಡುದಕ ಮೊದಲ ಕುರುಬನ ಕುಂಟೆ ಹೋಗಲೆಂದು"[೬೨]

ಗ್ರಾಮಾಂತರ ಪ್ರದೇಶಗಳಲ್ಲಿ ಕುರುಬ ಸಮಾಜಕ್ಕೆ ಕೊಡುವ ಗೌರವ, ಕುರುಬರ ಬಗೆಗೆ ಇರಿಸಿಕೊಂಡ ಪೂಜ್ಯ ಭಾವನೆ, ನಂಬಿಗೆ ಎದ್ದು ಕಾಣುತ್ತದೆ. ಕುರಿಗಳು ಹೇಗೆ ಹುಟ್ಟಿದವು? ಸರದಿಯಂತೆ ದೇವಾನುದೇವತೆಗಳಲ್ಲಿ ಅವುಗಳನ್ನು ಕಾಯ್ದ ಬಗೆ ಮಹತ್ವಪೂರ್ಣವಾದ ವಿವರಣೆಯನ್ನು ಗುರುವಿನ ಮಾರ್ಗಪದದಲ್ಲಿ ಪ್ರಾರಂಭವಾಗುತ್ತವೆ. ಕುರಿಗಳು ನಮಗೆಲ್ಲ ಸಾಮಾನ್ಯ ಪ್ರಾಣಿಗಳೆಂದು ತೋರಿದರೆ ಕುರುಬರಿಗೆ ಜೀವ ಪ್ರಾಣ. ಅದಕ್ಕಾಗಿ ಅವುಗಳನ್ನು "ಬದುಕು"[೬೩] ಎಂದು ಕರೆಯುತ್ತಾರೆ. ಹಾಲುಮತದ ಪುರಾಣದ ಪ್ರಕಾರ ಒಮ್ಮೆ ಕೈಲಾಸದಲ್ಲಿ ಪಾರ್ವತಿ. ಪರಮೇಶ್ವರರು ಜೊತೆಯಲ್ಲಿ ಕುಳಿತಾಗ ಭೃಂಗೀಶನು ಬಂದು, ನಿಂತವನೇ ಒಂದೇ ಕೈಯಿಂದ ವಂದಿಸಿದನು. ಪಾರ್ವತಿ ಕುಪಿತಳಾಗಿ ಭೃಂಗಿಯನ್ನು ಕಾಡುತ್ತಾಳೆ. ಶಿವಕಾರುಣ್ಯದಿಂದ ಭೃಂಗಿ ಭಕ್ತ ಬದುಕಿ ಉಳಿಯುತ್ತಾನೆ. ದೇವತೆಗಳೆಲ್ಲ ಇದನ್ನು ಕಂಡು ಪಾರ್ವತಿಗೆ ಅಪಹಾಸ್ಯ ಮಾಡುತ್ತಾರೆ. ಕೋಪಾತೀರೇಕಳಾಗಿ ಗಿರಿಜೆ,

"ಮುಂದೆ ನಕ್ಕವರೆಲ್ಲ ಮೂಢಕುರಿನಾಗಿರಿ
ಹಿಂದೆ ನಕ್ಕವರೆಲ್ಲ ಆಡುಗಳೋ"[೬೪]

ಚಂದ್ರಧರನ ಸತಿ ಕೊಟ್ಟ ಶಾಪದಿಂದ ದೇವಾನುದೇವತೆಗಳೆಲ್ಲ ಕುರಿ, ಆಡು ಆಗಿ ಭೂಲೋಕದಲ್ಲಿ ಜನಿಸಿದರು. ಆ ಕುರಿಗಳು ಭೂಲೋಕಕ್ಕೆ ಬರಲು ದೇವ ಲೋಕದವರೆಲ್ಲ ಸರದಿಯಂತೆ ಕುರಿಗಳನ್ನು ಕಾಯುತ್ತಾರೆ. ಆ ಸರದಿ ಶಿವ ಪಾರ್ವತಿಯರಿಗೂ ತಪ್ಪಲಿಲ್ಲ. ಈರ್ವರು ಕುರಿ ಕಾಯಲು ಭೂಲೋಕಕ್ಕೆ ಬಂದು ನೆಲೆ ನಿಂತಾಗ ಶಿವನು ಆದಿಗೊಂಡನಲ್ಲಿಗೆ ಬಂದು ಐದು ಮೊಳ ಜಾಗ ಕೇಳುತ್ತಾನೆ. ಆ ಆದಿಗೊಂಡ ಯಾರೆಂದರೆ ಮುದ್ದಪ್ಪ ಮುದ್ದವ್ವರ ಮಗ. ಮುದ್ದಪ್ಪ ಮುದ್ದವ್ವ ಯಾರೆಂದರೆ, ಒಂದು ಸಲ ಪಾರ್ವತಿಯು ಭೂಲೋಕದ ಅಧಿಪತ್ಯಕ್ಕಾಗಿ ಒಬ್ಬ ಒಡೆಯನನ್ನು ನೇಮಿಸಲೆಂದು ಹರನಲ್ಲಿ ಪ್ರಾರ್ಥಿಸಿಕೊಳ್ಳಲು ಅದೇ ವೇಳೆಗೆ ಅವಳ ಎರಡು ಸ್ತನಗಳಿಂದ ಹಾಲು ಚಿಮ್ಮುತ್ತದೆ. ಪಾರ್ವತಿ ಅಲ್ಲಿಯೇ ಇದ್ದ ಎರಡು ಮುಷ್ಟಿ ಮಣ್ಣನ್ನು ತೆಗೆದುಕೊಂಡು ಆ ಹಾಲಲ್ಲಿ ಅದ್ದಿ ಮುದ್ದೆ ಮಾಡಿ ಗಂಡು ಹೆಣ್ಣೆಂಬ ಎರಡು ಗೊಂಬೆಗಳನ್ನು ಮಾಡುತ್ತಾಳೆ.

---

೬೨. ಕಾಡು ಹೂಗಳು. ಪುಟ–೮೮.

೬೩. ಇಗೋ ಕನ್ನಡ. ಪ್ರೊ. ಜಿ. ವೆಂಕಟಸುಬ್ಬಯ್ಯ. ಪುಟ–೨೮೬. "ಬದುಕು" ಅಂದರೆ ಜೀವನೋಪಾಯಕ್ಕೆ ಬೇಕಾದ ಉದ್ಯೋಗ ಇತ್ಯಾದಿ. ಚೆನ್ನಾಗಿ ಬಾಳು ಸ್ಥಿತಿವಂತನಾಗಿರು ಎಂದು ಅರ್ಥ.

೬೪. ಕಾಡು ಹೂಗಳು. ಪುಟ–೯೩.

"ಮೊಲೆಯ ಹಾಲಿನಿಂದಾ ಹುಟ್ಟಿ ಬಂದಾರಿವರು
ಹಾಲುಮತದವರಂತ ಕರೆದಿದ್ದಾರೋ
ಕುರಿಹಿಂಡ ಮರಿಹಿಂಡ ಕಾಯುತ ಬಂದಾರಿವರು
ಕುರುಬರು ಅಂತಾ ಇವರಿಗೆ ಅಂದಿದಾರೊ"[೬೫]

ಶಿವ ಆ ಎರಡು ಗೊಂಬೆಗಳಿಗೆ ಜೀವಕಳೆ ತುಂಬಿ ಮುದ್ದಪ್ಪ ಮುದ್ದಣ್ಣ ನಾಮಕರಣವಾಗಿ, ಅವರೀರ್ವರ ಮಗನೇ ಆದಿಗೊಂಡ ಅವಿರ್ಭವಿಸುತ್ತಾನೆ. ಈ ಆದಿಗೊಂಡನಿಂದ ದಾನ ಪಡೆದ ಸ್ಥಳದಲ್ಲಿ ತ್ರಿಶೂಲ ನೆಟ್ಟು ಶಿವನ ಗವಿಯೊಂದನ್ನು ನಿರ್ಮಿಸಿ ಕುರಿ ಹಿಂಡನ್ನು ಅದರೊಳಕ್ಕೆ ಹೋಗಿಸಿ ಬಾಗಿಲಿಗೆ ಮುಳ್ಳು ಕಂಟಿಯನ್ನು ಇಡುತ್ತಾನೆ. ಪಾರ್ವತಿಯು ತನ್ನ ನತ್ತನ್ನು ಕೀಲಿಯನ್ನಾಗಿ ಹಾಕುತ್ತಾಳೆ. ಇದೆ ವಿವರಣೆಯನ್ನು ಹಾಡಿನ ರೂಪದಲ್ಲಿ ಬಹು ಸುಂದರವಾಗಿ ನೀಡುತ್ತಾರೆ.

ಆದಿಗೊಂಡನ ಅಮರಗೊಂಡ, ಶಿವಗೊಂಡ, ಬೀರಗೊಂಡ, ಮೂರುಗೊಂಡ, ಮುದ್ದಗೊಂಡ, ಪದ್ಮಗೊಂಡ ಆರು ಜನ ಮಕ್ಕಳಲ್ಲಿ ಕಡೆಯವನಾದ ಪದ್ಮಗೊಂಡನು ಗಳೆ ಹೊಡೆಯಲೆಂದು ಹೊಲಕ್ಕೆ ಬಂದು ನೇಗಿಲು ಹೂಡುತ್ತಾನೆ. ಆಗ ಹುತ್ತ ಒಡೆದು ಭೂಮಿ ಬಾಯಿ ಬಿರಿಯುತ್ತದೆ. ನೇಗಿಲು ತಾಗಿ ಹುತ್ತ ಒಡೆಯಲು ಗವಿಯೊಳಗಿನ ಕುರಿಗಳೆಲ್ಲ ಹೊರಕ್ಕೆ ಬರತೊಡಗಿದವು. ಏನೋ ಅನಾಹುತ ಆಯಿತೆಂದು ಗಾಬರಿಯಾದ ಪದ್ಮಗೊಂಡನು ಮತ್ತೆ ಅವುಗಳನ್ನು ಒಳ ಹೊಡೆದು ಗವಿಬಾಗಿಲಿಗೆ ಮುಳ್ಳಿನ ಕಂಟಿಯನ್ನಿಟ್ಟು ಉರಿ ಹಚ್ಚುತ್ತಾನೆ.

"ಸುಟ್ಟಂತಾ ಕುರಿಗಳು ಕರಿಕುರಿ ಆದಾವು
ಬಿಟ್ಟಂತಾ ಕುರಿಗಳು ಎಲ್ಲಾ ಕುಂಗುರಿಯೋ"[೬೬]

ಅದರಲ್ಲಿ ಸಂಪೂರ್ಣ ಸುಟ್ಟವುಗಳು ಕರಿಯ ಕುರಿಗಳಾದವು. ಆಗ ಶಿವನು ಪ್ರತ್ಯಕ್ಷವಾಗಿ ಪದ್ಮಗೊಂಡನೊಂದಿಗೆ ಬೀರಲಿಂಗನನ್ನು ಜೊತೆಮಾಡಿ ಕುರಿಗಳನ್ನು ಕಾಯುತ್ತಾ ಬದುಕಿರೆಂದು ಹೇಳಿದನು. ಬೀರಲಿಂಗ ಕುಲದೇವರಾಗಿ ದೊರೆತನೆಂದು ಕುರುಬರ ಕುಲ ಮತ್ತು ಕುರಿಗಳ ಹುಟ್ಟಿನ ವೃತ್ತಾಂತವನ್ನೇ ಹೇಳುತ್ತವೆ. ಇದೇ ಭಾಗದಲ್ಲಿ ಇನ್ನೂ ಸಾಕಷ್ಟು ಪದಗಳು ಬರುತ್ತವೆ. ಹೀಗೆ ಕಥನ ಗೀತೆಗಳ ರೂಪದಲ್ಲಿರುವ ಡೊಳ್ಳಿನ ಪದಗಳು ಒಂದಲ್ಲ, ಎರಡಲ್ಲ ಅಸಂಖ್ಯವಾಗಿ ಸೃಷ್ಟಿಯಾಗಿವೆ. ಅದೇ ಕಥೆ ಮುಂದುವರೆದು ಪದುಮಣ್ಣನು ಸಾವಿರಾರು ಕುರಿಗಳನ್ನೆಲ್ಲ ಕಣ್ಣಾಗಿ ಕಂಡು ಚನ್ನಬಸವಗ ತಿಳಿಸಲು ಹೋದ. ಉಪ್ಪರಿಗೆಯ ಮೇಲೆ ನೋಡಿದಾಗ ಯಾರೂ ಇರಲಿಲ್ಲ. ಅನ್ನದಿಂದ ವಂಚಿತನಾಗಿ ಕುರಿಗಳನ್ನು ತನ್ನೊಡನೆ, ಅನ್ನದ ಚಿಂತೆಯಿಂದಾ ಇನ್ನೇನು ಮಾಡಲಿ ಅಂತಾ ನುಡಿದು; ಕುರಿಗಳ ಹಿಂಡಿನಿಂದ ಮರಿಗಳನ್ನು ಎಲ್ಲಾ ಕೊರಳಾಗ ಕಟ್ಟಿಕೊಂಡು ನಡೆದನು. ಒಂದು ರಾಕ್ಷಸಿಯ ಮನೆಯ ಕಂಡನು. ಆ ರಾಕ್ಷಸಿಯ ಮಗಳೊಬ್ಬಳು ಚೆನ್ನಮ್ಮ. ಅವಳಲ್ಲಿಗೆ ಹೋಗಿ ಅಗ್ನಿ ಕೊಂಡು ಅದರ ಬದಲಾಗಿ ಗಿಣ್ಣವನ್ನು ಕೊಡುವೆ ಎಂದು ಭಾಷೆ ಕೊಟ್ಟು, ಅಗ್ನಿ ತಂದು, ಗಿಣ್ಣ ಮಾಡಿ ಆಕೆಗೆ ಕೊಡಲು ಹೋದಾಗ ಆ ರಕ್ಕಸಿ ಬಂದಳು. ಆಹಾರ ಸೇವಿಸಿ ದೀರ್ಘ ನಿದ್ರೆಗೆ ಹೋದಳು.

---

೬೫. ಕಾಡು ಹೂಗಳು, ಪುಟ–೧೪೪.
೬೬. ಅದೇ, ಪುಟ–೧೬೨.

[illegible]

ಆಗ ಪದ್ಮಣ್ಣ ಮತ್ತು ಚೆನ್ನಮ್ಮ ಕುಣಿಯ ತೆಗೆದು ರಕ್ಕಸಿಯನ್ನು ಹುಗಿದು ಕಲ್ಲು ಮಣ್ಣು ಹಾಕಿದರು. ಆಗ ರಕ್ಕಸಿ ಪ್ರಾಣ ಬಿಡುವ ಸಮಯದಲ್ಲಿ,

"ಧಿಕ್ಕಾರ ಮಾಡಿ ರಕ್ಕಸಿ ಕುರಿಯಾ ಹಿಂಡಕ
ನಾನು ಶಿಕ್ಷೆ ಮಾಡದೆ ಇರಲಾರೆ ಅಂದಿದ್ದಾಳೋ
ಏಳು ಕೊಪ್ಪರಿಗೆ ಅನ್ನಾ ತಿನ್ನುವಂಥಾ ರಕ್ಕಸಿ
ತೋಳು ಆಗಿ ಧರಣಿ ಮ್ಯಾಲ ಜನಿಸಿದ್ದಾಳೋ
ಏಳುತ ಬೀಳುತ ಕುರಿಗಳ ತಿನ್ನುತ
ತೋಳ ರಕ್ಕಸಿ ಧರಣಿ ಒಳಗ ಮೆರದಿದ್ದಾಳೋ"[೭೭]

ಹೀಗೆ ರಕ್ಕಸಿ ಕೊಂದ ಕುರಿಗಳ ವೈರಿ ತೋಳ ಇರುವುದನ್ನು ಇಂದಿಗೂ ನಾವು ಕಾಣುತ್ತೇವೆ. ಪದ್ಮಣ್ಣ ಮತ್ತು ಚೆನ್ನಮ್ಮ ವಿನೋದದಿಂದ ಕಾಲ ಕಳೆದರು. ಬೀರೇಶ್ವರ ಮಹಿಮೆ ಸ್ತುತಿ ಕಥೆ ಹೀಗಿದೆ.

ಮಂದಾರ ಮುನೇಶ್ವರರಿಗೆ ಶಂಭುವಿನ ವರದಿಂದಾ ಬಿಲ್ಲಾಸುರ ಎಂಬ ಪುತ್ರ ಜನಿಸಿದನು. ಬಿಲ್ಲಾಸುರ ಉಗ್ರ ತಪ ಕೈಗೊಂಡು ಪಾರ್ವತಿ ಮನವೊಲಿಸಿ ಏನು ಬೇಕೆಂದು ಕೇಳಿದಾಗ ದೇವಿಗೆ ಜಗದೊಳಗಿನ ಜನರಿಂದ, ಸುರರಿಂದ, ರಾಕ್ಷಸರಿಂದ ಮರಣ ಆಗದಾಂಗ ಮಾಡೆಂದನು. "ಪರಮೇಶ್ವರ ಅಂಶ ಧರಿಗೆ ಬಂದಮ್ಯಾಲ ಮರಣಾ ಅವನಿಂದ ನನಗ ಬೇಕೆಂದನೋ". ತಥಾಸ್ತು ಎಂದ ದೇವಿ ಕೈಲಾಸಕ್ಕೆ ಹೋದಳು. ದೇವಿ ವರದಿಂದ ರವಿಚಂದ್ರ, ಇಂದ್ರ, ವಾಯು, ವರುಣ, ಯಮದೇವರನ್ನು ಸಹಿತ ಸರ್ವರನ್ನು ಗೆದ್ದು, ಎದುರು ಯಾರು ನಿಲ್ಲದಾಂಗ ಆಗಿದ್ದು ಎಲ್ಲಾ ಲೋಕವು ನಡುಗುತ ನಿಂತಿದ್ದವು.

ಬಿಲ್ಲಾಸುರನ ಹಾವಳಿ ಹೆಚ್ಚಾಗಿ ಶಂಕರನ ಮುಂದೆ ಅಗ್ನಿ, ಇಂದ್ರ, ಯಮ, ಹರಿ ಬ್ರಹ್ಮರೆಲ್ಲಾ ಕೂಡಿ ದೂರು ಸಲ್ಲಿಸಿದಾಗ ಉಗ್ರಗಣ್ಣಿನಿಂದ ವೀರಭದ್ರನಿಗೆ ಹುಟ್ಟಿಸಿದನು. ಅವನಾಜ್ಞೆಯಂತೆ ಬಿಲ್ಲಾಸುರನನ್ನು ಕೊಂದನು. ಆಗ ಆನಂದವಾಗಿ ಶಂಕರನು ವರವನು ಕೊಟ್ಟ ಕಳುಹಿಸಿದನು.

"ಭೂಲೋಕದೊಳಗ ನೀನು ವೀರದೇವರಾಗಿ
ಹಾಲುಮತದ ದೈವನಾಗಿ ಮೆರಿ ಅಂದಾನೋ"[೭೮]

ಸಿದ್ಧರಾಮನು ಮಲ್ಲಯ್ಯನ ಗಿರಿಗೆ ಹೋಗಿ ಆತನನ್ನು ಒಲಿಸಿಕೊಂಡ ಕಥೆ ಕೂಡಾ ಕಥನಕಾವ್ಯ ರೂಪದಲ್ಲಿ ಇಳಿದಿದೆ. ಒಮ್ಮೆ ಬ್ರಹ್ಮನ ಸತಿ ಸರಸ್ವತಿ ಕಂದನ ಸಲುವಾಗಿ ತಪಸ್ಸು ಮಾಡಿದಳು. ಆ ತಪಕ್ಕೆ ಮೆಚ್ಚಿ ಶಂಕರ ವರವ ಕೊಟ್ಟು ನಿನ್ನ ಉದರದಲ್ಲಿ ನನ್ನ ವಂಶರೂಪ ಹುಟ್ಟುವುದು. ಚೆನ್ನಾಗಿ ಜೋಪಾನ ಮಾಡು ಎಂದ. ಆ ಪ್ರಕಾರವಾಗಿ ಬೀರೇಶ ಜನಿಸಿದನು. ಆಗ ದೇವವಾಣಿಯಾಗಿ ನಿನ್ನ ಕಂದನಿಂದ ನಿನ್ನ ಜೀವಕ ಕಷ್ಟ ಇದೆ. ಎಂಬ ಶಬ್ದಗಳನ್ನು ಕೇಳಿ ಕೂಸನ್ನು ಅರಣ್ಯದಲ್ಲಿ ಬಿಟ್ಟು ಬರುವನು. ಆಗ ಗಿರಿಜಾರಮಣ ಬಂದು ಕಂದನ್ನ ನೋಡಿ ನಾಮಕರಣ ಮಾಡಿದನು.

---

೭೭. ಕಾಡು ಹೂಗಳು. ಪುಟ–೧೭೧.

೭೮. ಅದೇ. ಪುಟ–೧೪೨.

"ಹನ್ನೆರಡು ದಿವಸಕ ಕಂದಗ ಅವರೆಲ್ಲ

ಚೆನ್ನಾಗಿ ನಾಮಕರಣ ಮಾಡಿದ್ದಾರೋ"[೧೯]

ಇಂದಿಗೂ ನಮ್ಮಲ್ಲಿ ಗಂಡುಮಗುವಾದರೆ ೧೨ನೇ ದಿನಕ್ಕೆ, ಹೆಣ್ಣು ಮಗುವಾದರೆ ೧೩ ದಿನಕ್ಕೆ ನಾಮಕರಣ ಮಾಡುವ ಸಂಪ್ರದಾಯವಿದೆ. ಸರ್ವ ದೇವತೆಯರು ಕಂದನಿಗೆ ಮುದ್ದಿನ ಬೀರೇಶ ಅಂತ ಹೆಸರಿಟ್ಟರು. ಹೀಗೆ ಬೀರೇಶ ಕಾಡಲ್ಲಿ ಕಾಮದೇವನಿಂದ ಹಾಲು, ಗಾಳಿದೇವನಿಂದ ಒಂದು ಮರದ ಕೆಳಗೆ ತೊಟ್ಟಿಲಲ್ಲಾಡಿ ಬೆಳೆದನು. ಮರದ ನೆರಳಾಗ ಬೇರಾವ ಹೆಂಗಸರು ಕೇಳಿದರೆ ಗರ್ಭವು ಧರಿಸಲಿ ಅಂತ ವರವ ಕೊಟ್ಟನು ಶಂಕರ. ಆ ಮಗುವನ್ನು, ಮೇಘರಾಜ ಚಳಿಯನ್ನು ಓಡಿಸಿ, ಕೋಗಿಲ ಕೊಳಲನ್ನು ಊದಿ, ನರಿರಾಜ ಸೋಬಾನ ಹಾಡಿ ಬೆಳೆಸಿದರು.

ಆ ಗಿಡದ ಕೆಳಗೆ ಗಂಧರ್ವ ಸ್ತ್ರೀಯರು ನಿಂತಾಗ ಗರ್ಭ ಧರಿಸಿ, ಏನು ಮಾಡಲು ದಿಕ್ಕು ತೋಚದೆ ತಮ್ಮ ಹೊಟ್ಟೆಗಳನ್ನು ಸೀಳಿ ಹುಟ್ಟಿದ ಕೂಸುಗಳನ್ನು ನದಿಯಲ್ಲಿ ತೇಲಿಬಿಟ್ಟರು. ಆ ತೇಲಿಬಿಟ್ಟ ಮಕ್ಕಳನ್ನು ಚಾಮರಾಯನೆಂಬ ಕುರಿ ಕಾಯುವವ ನೋಡಿ ತನ್ನ ಮನೆಗೆ ಒಯ್ದು ಸಾಕಲಾರಂಭಿಸಿದ. ಅವರಿಗೆ

"ಮಾಯಿ ಮಾತಾಳ ಮಂಡಮ್ಮ ಲಕ್ಷ್ಮಿ

ಅಕ್ಕ ಮಾಯವ್ವನಂಥಾ ಕರೆದಿದ್ದಾರೋ"[೨೦]

ಅವರೆಲ್ಲ ತಮ್ಮ ತಂದೆಯೊಡನೆ ಕುರಿ ಕಾಯುವದಕ್ಕಾಗಿ ಹಳ್ಳದ ದಂಡೆಗೆ ಬಂದಾಗ ಗಿಡಕ್ಕೆ ಜೋತಾಡುವ ತೊಟ್ಟಿಲ ಮಗುವನ್ನು ನೋಡಿ ನನ್ನದು ನನ್ನದು ಎಂದು ಬಡಿದಾಡುತ್ತಿರುವಾಗ ಮಾಯವ್ವ, ಶಿವ ಯಾರ ಉಡಿಯಲ್ಲಿ ಹಾಕುವನೋ ಅವರ ಪುತ್ರ ಅಂದಾಗ, ಶಂಕರ ಪ್ರತ್ಯಕ್ಷನಾಗಿ ಅಕ್ಕ ಮಾಯವ್ವನ ಉಡಿಯಾಗ ಹಾಕಿದನು. ಹೀಗೆ ಬೀರೇಶನ ಹುಟ್ಟು ಮಹಿಮೆ ಮಾಡಿ ಬಂದಿದೆ. ಹೀಗೆ ಬೀರಪ್ಪ, ರೇವನಸಿದ್ಧ, ಮಲ್ಲಯ್ಯ, ಸಿದ್ಧರಾಮರ ಕಥನ ಗೀತೆಗಳು ಮೂಡಿವೆ. ಡೊಳ್ಳಿನ ಪದಗಳಲ್ಲಿ ದೇವಿ ಪದಗಳೂ ಇವೆ. ಮೊದಲಿಗೆ ವಿದ್ಯೆಯನ್ನು ಕರುಣಿಸುವ ಸರಸ್ವತಿಯ ಪದವಿದೆ.

"ಆದಿಗೆ ಸರಸ್ವತಿ ವಿದ್ಯೆಕ ಅಧಿಪತಿ ಕಾಗದ

ಮ್ಯಾಲ ನಿನ್ನ ಪ್ರಸನ್ನ ಮಾಡತಾರ

ಕವಿಜನಾ ನಿನ್ನ ವರ್ಣನಾನೊ"[೨೧]

ಸರಸ್ವತಿಯ ಉಡುಗೆ-ತೊಡುಗೆ, ವಾಹನ, ಮಹಿಮೆಗಳನ್ನು ಸಾರುವ ಪದವಾಗಿದ್ದು, ಅವಳನ್ನು ಸ್ತುತಿಸಿ ಮುಂದೆ ಸಾಗುವರು. "ವಿದ್ಯಾಬುದ್ಧಿ ಕಲಿಯುವದು ನೋಡರಿ ಶಕ್ತಿ ಅಂದಿಲ್ಲೇನೋ" ಎಂಬುದರಿಂದ ಆರಂಭವಾದ ಪದ್ಯ ಕಾಳಮ್ಮ, ಅಂಬಾದೇವಿ, ಶಾಂಭವಿ, ಶಂಕರಿ, ಲಕ್ಕವ್ವರ ಸ್ತುತಿಯಿಂದ ಮಹಿಮೆಯನ್ನು ಸಾರುವವು. ಇನ್ನೊಂದು ವಿಶೇಷ ಪದವಿದ್ದು, ಪಂಚಮುಖದ

---

೧೯. ಕಾಡು ಹೂಗಳು. ಪುಟ-೧೪೮.

೨೦. ಅದೇ. ಪುಟ-೧೫೩.

೨೧. ಅದೇ. ಪುಟ-೧೦೫.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಶಕ್ತಿಯು ಹುಟ್ಟಿ ಶಕ್ತಿಲಿಂದಾ ಪ್ರಾರಂಭವಾಗಿ ವಿಷ್ಣುವಿನ ಅವತಾರಗಳ ದೇವಿಶಕ್ತಿ ರೂಪದಲ್ಲಿ ಬಂದಿದ್ದವು ಎಂಬುದನ್ನು,

"ಮೋಹಿನಿ ಅಂತಾ ಅವತಾರ ತೊಟ್ಟ ದೈತ್ಯರಿಗೆ
ವಿಷಾ ಕುಡಿಸಿ ಬಿಟ್ಟ ದೇವ ದೇವತ್ಯಾರಿಗೆ
ಅಮೃತ ಕೊಟ್ಟಾ ಶಕ್ತಿಯು ಅವತಾರವ್ರೋ"[೭೨]

ಮಾಯವ್ವ ಮಾವಿನಹಣ್ಣು, ಬಾದಾಮಿ–ಬಾಳೆ, ಎಲ್ಲವ್ವ–ಹಲಸು, ಕಾಳಮ್ಮ–ನೀರಲ, ಬೌರಮ್ಮ–ಬಾರಿ. ಪ್ರಾಸಬದ್ಧವಾಗಿ ಹಲವು ಹಣ್ಣುಗಳ ಉಲ್ಲೇಖವಿದ್ದು ಆಯಾ ದೇವಿಗಳ ಹೆಸರುಗಳಿಗನುಗುಣವಾಗಿ ಮೂಡಿ ಬಂದಿವೆ. ದೇವಿಯರು ಅವತರಿಸಿದ ಗ್ರಾಮಗಳ ಹೆಸರುಗಳೊಂದಿಗೆ ಅವಳ ಮಹಿಮೆಯನ್ನು ಕೊಂಡಾಡುತ್ತ ಬಂದ ಈ ಪದಗಳು ಆಕರ್ಷಕವಾಗಿವೆ.

"ಅಡವೀಗಿ ಹೋಗವಲ್ಲ ಹಿಡಿಹುಲ್ಲ ತರವಲ್ಲ
ಇದ್ದದ ಹೈನಾ ಎಲ್ಲಾ ಉಣತೀನಂತಾನ
ನೋಡಕ್ಕ ನೋಡ ನಾ ಹ್ಯಾಂಗ ಮಾಡಲೇ
ಆತನಗೂಡ ಬಾಳೇ ಹ್ಯಾಂಗ ಮಾಡಲೇ"[೭೩]

ಗಂಡನ ಸೋಮಾರಿತನ, ವ್ಯಭಿಚಾರತೆ, ದುಂದುವೆಚ್ಚ. 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ' ಎಂಬಂತಹ ಗಂಡನ ಮೇಲಿನ ದೂರಿನ ಪದ ಇಲ್ಲಿದೆ. ಜೀವನದಲ್ಲಿ ಬಾಳಸಂಗಾತಿ ಒಳ್ಳೆಯವನಿದ್ದರೆ ಬಾಳು ಚೆನ್ನಾಗಿ ನಡೆಯುವುದು. ಇಂಥ ಗಂಡನ ಸಹವಾಸದಿಂದ ಜೀವನ ಹೇಗೆ ನಡೆಸಲಿ ಎಂದು ಪ್ರಶ್ನಿಸುತ್ತಾಳೆ. ಆಕೆಯ ಮನದಾಳದ ಮಾತುಗಳು ಹಾಸ್ಯ ರೂಪದಲ್ಲಿ ಮೂಡಿವೆ.

"ಪಂಚಮುಖಗಳಿಂದಾ ಪಂಚತತ್ವಗಳ ನಾಮು ಉತ್ಪತ್ತಿ
ಹೇಳತೀನಿ ತಿಳಿರಿ ಅಂದಾನೋ"[೭೪]

ಪಂಚಭೂತಗಳಾದ ಪೃಥ್ವಿ, ಆಪ್, ತೇಜ, ವಾಯು ಮತ್ತು ಆಕಾಶ ಇವು ಜೀವಿಗಳ ಬದುಕಿಗೆ ಪೂರಕವಾದವುಗಳಾಗಿವೆ. ಯಾವುದಾದರೂ ಇಲ್ಲವಾದರೆ ಜೀವಿಗಳು ಬದುಕಲು ಸಾಧ್ಯವಿಲ್ಲ. ಇವುಗಳ ಉತ್ಪತ್ತಿ ಜೊತೆಗೆ, ಗುರುವಿನ ಮಹಿಮೆ ಮೂಡಿಬಂದಿದೆ. ಪಂಚಭೂತಗಳ ಮಹತ್ವತೆ ಸಾರುತ್ತ ಅವುಗಳನ್ನು ಕಾಪಾಡುವ ಹೊಣೆ ಎಲ್ಲರಿಗಿದೆ, ಎನ್ನುವ ಪರಿಸರವಾದಿಗಳ ಮಾತು ಮರುಕಳಿಸುತ್ತಿದೆ. ಕಲುಷಿತಗೊಳ್ಳುತ್ತಿರುವ ಈ ಭೂತಗಳನ್ನು ಭೂತಮಾನವ ಹೆದರಿಸುತ್ತಿದ್ದಾನೆ. ಆದರೆ ಮುಂದೊಂದು ದಿನ ಅವನಿಗೆ ಆಘಾತ ತಪ್ಪಿದ್ದಲ್ಲ.

---

೭೨. ಕಾಡು ಹೂಗಳು. ಪುಟ–೧೧೬.

೭೩. ಅದೇ, ಪುಟ–೮೭.

೭೪. ಅದೇ, ಪುಟ–೯೯.

[illegible]

[illegible]

[illegible]

[illegible]

[illegible]

[illegible]

“ರಾಗ ಇದ್ದರ ಹಾಡು ಜ್ಞಾನ ಇದ್ದರ ಪದಾ
ಸ್ವಾಮಿ ಇದ್ದರ ಭಲಾ ಚಂದ ಅಂದಿನೋ
ಒಡಿಯಾ ಇದ್ದರ ಬಂಡಿ ಜಡಿಯಾ ಇದ್ದರ ಜೋಗಿ
ಹೆಡಿಯಾ ಇದ್ದರ ಸರ್ಪ ಚಂದ ಅಂದಿನೋ”[೭೫]

ಒಂದು ವಸ್ತುವಿನಿಂದ ಇನ್ನೊಂದು ವಸ್ತುವಿನ ಚೆಂದ ಹೆಚ್ಚುವುದು. ವಸ್ತುಗಳ ಶ್ರೇಷ್ಟತೆ ಪ್ರಾಸಬದ್ಧವಾಗಿ ಮೂಡಿ ಬಂದಿವೆ. ಈ ಪದಗಳನ್ನು ಗಮನಿಸಿದಾಗ “ಶಿವನೇ ಸರ್ವರೋಳುತ್ತಮಂ ಹರಾಹರಾ ಶ್ರೀ ಚೆನ್ನಸೋಮೇಶ್ವರಾ”[೭೬] ಶತಕದ ಪದಗಳು ನೆನಪಿಗೆ ಬರುವವು.

“ಮಣ್ಣ ಹಾಕಿ ಮನಿಗಿ ಬಂದಮ್ಯಾಲ ಕೇಳೋ ತಮ್ಮಾ
ಉಣ್ಣನು ಬರ್‍ರಂಬುದು ತಿಳಿ ಅಂದಿನೋ
ಹೆಣ್ಣು ಮಕ್ಕಳು ಅಳುದಿಲ್ಲ ಹಣಕ್ಕ ಅಳತಾರೋ
ತಮ್ಮಾ ಹಣಾ ಸಂಗಾಟ ಬರುದಿಲ್ಲ ತಿಳಿ ಅಂದಿನೋ”[೭೭]

ಜೀವನ ನಶ್ವರ, ಜೀವ ನೀರಿನ ಮೇಲಿನ ಗುಳ್ಳೆ ಇದ್ದ ಹಾಗೆ; ಯಾವಾಗ ಒಡೆದು ಹೋಗುವುದು ಯಾರೂ ಬಲ್ಲವರಿಲ್ಲ. ಇದ್ದ ಅವಧಿಯಲ್ಲೆ, ದೇವರ ಧ್ಯಾನ ಮಾಡಿದರೆ ಪುಣ್ಯ ಪ್ರಾಪ್ತಿಯಾಗುವುದು. ಜೀವನದಲ್ಲಿ ಕೇವಲ ಹಣ–ಆಸ್ತಿ ಸ್ಥಿರವಾದುದಲ್ಲ. ಹೋಗುವಾಗ ಯಾರೂ ಜೊತೆ ಬರಲಾರರು ಎಂಬ ತ್ರಿಕಾಲ ಸತ್ಯವನ್ನು ಪದ ಬಿಂಬಿಸಿದೆ. ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ಜೀವನದಲ್ಲಿ ಬರುವುದು. ಅಷ್ಟೈಶ್ವರ್ಯ ಸುಖ ಶಾಶ್ವತವಲ್ಲ. ಬರುವಾಗ ಬತ್ತಲೆ, ಹೋಗುವಾದ ಕೂಡ ಬತ್ತಲೆಯಾಗಿ ಹೋಗುವ ಮಾನವ ಜನನ ಮರಣದ ನಡುವಿನ ಸಂತೆಯಲ್ಲಿ ಹೇಗೆ ಇರಬೇಕು ಎನ್ನುವ ಜೀವನದ ವಿವರ ಪದ ಇಲ್ಲಿದೆ.

“ತಂದೆ ತಾಯಿ ಮಾತ ಕೇಳದ ಮನುಜಾ
ತಮ್ಮ ಮನಿಯಾಗ ಮಗಾ ಇದ್ದೇನ ಫಲಾ ಅಂದಿನೋ
ಗಾಣದ ಎತ್ತಿನಾಂಗ ಓಣಿ ಓಣಿ ತಿರಗಾವ
ಕೋಣೆನಂಥ ಮಗಾ ಫಲವೇನಂದಿನೊ”[೭೮]

ಇಂಥ ಹಲವು ವ್ಯಕ್ತಿಗಳ ಚಿತ್ರಣವಿದ್ದು, ಅಂಥ ವ್ಯಕ್ತಿಗಳು ಭುವಿ ಮೇಲೆ ಇದ್ದೂ ಇಲ್ಲದ ಹಾಗೆ ಎನ್ನುತ್ತಾ ಕೊನೆಗೆ ದೇವರನ್ನೂ ಕೂಡ ತರಾಟೆಗೆ ತೆಗೆದುಕೊಂಡದ್ದುಂಟು.

“ಬೇಡಿದಂತಾ ವರಗಳ ಕೊಡದದ ದೇವರು ತಮ್ಮಾ
ಗುಡಿಯಾಗ ಇದ್ದರ ಫಲವೇನಂದಿನೊ”[೭೯]

---

೭೫. ಕಾಡು ಹೂಗಳು ಪುಟ–೧೩೬.

೭೬. ಸೋಮೆಶ್ವರ ಶತಕ. ಪುಟ–೪

೭೭. ಕಾಡು ಹೂಗಳು. ಪುಟ–೧೪೨.

೭೮. ಅದೇ. ಪುಟ–೧೪೮.

೭೯. ಅದೇ. ಪುಟ–೧೪೮

ಉದಾತ್ತವಾದ ಆಧ್ಯಾತ್ಮಿಕ ಜೀವನವನ್ನು ರೂಢಿಸಿಕೊಳ್ಳುವುದು ಹೇಗೆಂಬುದನ್ನು ಶರಣರು, ದಾಸರು ಬೋಧಿಸಿದ ಹಾಗೆ ಡೊಳ್ಳಿನ ಪದಗಳೂ ಈ ತತ್ವನನ್ನು ಎತ್ತಿ ಹಿಡಿದಿವೆ.

"ಸುಮ್ಮ ಯಾತಕ ಕುಂತಿಯೋ ಒಣಾ ಚಿಂತಿ ಬಿಡೊ

ತಮ್ಮಾ ಏನಂತಿ ಮುತ್ತಿನ ಗುಂತಿ ಅಂದಿನೋ"[೬೦]

'ಚಿಂತೆ' 'ಚಿತೆ' ಇವೆರಡರ ನಡುವೆ ಅತ್ಯಲ್ಪ ವ್ಯತ್ಯಾಸವಿದ್ದರೂ ಅವುಗಳ ಅರ್ಥದಲ್ಲಿ ಸಾಮ್ಯವಿದೆ. 'ಚಿಂತೆ' ಜೀವಂತ ಮನುಜನನ್ನು ಸುಟ್ಟು ಹಾಕುವುದು. ಅದಕ್ಕೆ ಚಿಂತಿಸದೆ ಕಾಯಕದಲ್ಲಿ ಮನ ತೊಡಗಿಸಿಕೊಂಡು ಚಿಂತೆಯಿಂದ ದೂರವಿರಬೇಕೆಂಬ ಹಿತನುಡಿಯಿದೆ. ಅನೇಕ ಚಿಂತೆಗಳಿಂದ ಆವೃತ್ತವಾದ ಜೀವದ ದುಃಖವನ್ನು ಚಿತ್ರಿಸುತ್ತದೆ; ಅದಕ್ಕೆ ಎಚ್ಚರಿಕೆಯ ನುಡಿಗಳನ್ನು ಹೇಳುತ್ತಿದೆ. ಅಲ್ಲದೆ ಮಾಯೆಯ ಆಕರ್ಷಕ ರೂಪದ ಹಿಂದಿರುವ ನಶ್ವರತೆಯ ಕಟು ಸತ್ಯವನ್ನು ಹೇಳುತ್ತದೆ.

"ಸಜ್ಜನರ ಸಂಗಡ ಗೆಳೆತಾನ ಮಾಡಿದರ

ಬುದ್ಧಿ ಜ್ಞಾನ ನಿನಗ ಬರುದಣ್ಣಾ ನಿನ್ನ

ಮನಕ ತಿಳಿದ ನೀ ನಡಿಯಣ್ಣಾ"[೬೧]

ಅಜ್ಞಾನದ ಕರ್ಮಗಳು ಬಂಧನಕ್ಕೆ ಕಾರಣವಾಗುವವು. ಸಜ್ಜನರ ಸಂಗವ ಮಾಡಿ ಬುದ್ಧಿ ಜ್ಞಾನಗಳನ್ನು ಹೆಚ್ಚಿಸಿಕೊಂಡು, ತನಗಿಂತ ಬುದ್ಧಿವಂತರ ಕೂಡ ವಾದವನ್ನು ಮಾಡಬಾರದೆಂಬ ತಿಳಿವಳಿಕೆಯ ಮಾತುಗಳಿವೆ. ರೊಕ್ಕ (ಹಣ) ಏನೆಲ್ಲವನ್ನು ಮಾಡುವುದು. "ರೊಕ್ಕವೆರಡಕ್ಕು ದುಃಖ" ದಾಸರ ಪದ ನೆನಪಿಗೆ ಬರುವುದು. ಬಂಧು ಬಳಗವನ್ನು ಅರಿಯದೆ, ಮಾನವೀಯ ಮೌಲ್ಯ ಮರೆಸುವ ರೊಕ್ಕ, ಸೊಕ್ಕವನ್ನು ಹೆಚ್ಚಿಸಿ, ಮನುಷ್ಯನ ಬುದ್ಧಿಯನ್ನು ಆಧೀನವನ್ನಾಗಿ ಮಾಡಿಕೊಂಡು, ದಿಕ್ಕುಗಾಣದೆ ಮನಸ್ಸು ಹೊಯ್ದಾಡುವುದು. ಸೊಕ್ಕಿನ ಅಮಲಿನಲ್ಲಿ ಹೀನ ಹೆಲಸಕ್ಕಿಳಿಸುವುದು.ಹಣ ಸ್ಥಿರವಾದುದಲ್ಲ. ಒಳ್ಳೆಯ ಗುಣಗಳನ್ನು ರೂಢಿಸಿಕೊಂಡು, ಜೀವನ ನಡೆಸಬೇಕೆಂಬ ತಾತ್ಪರ್ಯ ಇಲ್ಲಿದೆ.

ಬೀರದೇವನನ್ನು ಪೂಜಿಸುವವರು ಮಾಂಸಾಹಾರಿ ಕುರುಬರಾದರೆ, ರೇವಣಸಿದ್ಧನ ಅರ್ಚಕ ಶುದ್ಧ ಶಾಖಾಹಾರಿ ಒಡೆಯರು. ಬೀರದೇವರು ಅವರ ವಾಸ್ತವತೆಗೆ, ಇರುವಿಕೆಗೆ, ಇಹಲೋಕಕ್ಕೆ ಸಮರ್ಥನೆಯಾದರೆ, ರೇವಣಸಿದ್ಧೇಶ್ವರ ಅವರ ಆದರ್ಶಕ್ಕೆ, ಪರಲೋಕಕ್ಕೆ ಸಂಕೇತ. ದೈವಸ್ವರೂಪನಾದ ರೇವಣಸಿದ್ಧನ ಪ್ರತಿನಿಧಿಗಳಾದ ಒಡೆಯರು ಕುರುಬ ಜನಾಂಗದಲ್ಲಿ ಹೊಂದಿರುವ ಸ್ಥಾನ ಮಾನಗಳು ವಿಶೇಷವಾಗಿವೆ.

ಕುರುಬ ಜನಾಂಗದ ಮುಖ್ಯ ಉದ್ಯೋಗ ಕುರಿ ಸಾಕಾಣಿಕೆಯಾದರೂ ಎಷ್ಟೋ ಜನ ಅವರಲ್ಲಿ ರೈತರೂ ಇದ್ದಾರೆ. ಒಂದು ಜಾತಿಯಾಗಿ ಕುರುಬರು ತಮ್ಮದೇ ವೈಶಿಷ್ಟ್ಯಗಳನ್ನು ಪಡೆದಿದ್ದಾರೆ. ಅನ್ಯ ಜಾತಿಗಳಲ್ಲಿ ತಮ್ಮವರೇ ಆದ ಗುರುಗಳಿರುವುದಿಲ್ಲ (ಉದಾ ಒಕ್ಕಲಿಗರು) ಆದರೆ ಕುರುಬರಲ್ಲಿ ಒಡೆಯರು ಎಂಬ, ಅದೇ ಜಾತಿಯಲ್ಲಿ ಉಪಜಾತಿ ಎಂದು ಹೇಳಬಹುದಾದ ಒಂದು

---

೬೦. ಕಾಡು ಹೂಗಳು, ಪುಟ–೬೦

೬೧. ಅದೇ, ಪುಟ–೧೨೪.

ವರ್ಗವು ಪುರೋಹಿತ ಸ್ಥಾನದಲ್ಲಿದ್ದುಕೊಂಡು ಕುರುಬರ ಎಲ್ಲ ಧಾರ್ಮಿಕ ವಿಧಿಗಳಿಗೆ ಬಾಧ್ಯರಾಗಿದ್ದಾರೆ. ಕುರುಬ ಜಾತಿಯೊಳಗಿನ ಒಡೆಯರ ಈ ಉಪಜಾತಿ ಭಾರತದಲ್ಲೇ ಅತ್ಯಂತ ವಿಶಿಷ್ಟವೆನ್ನಬಹುದಾದ ಒಂದು ವ್ಯವಸ್ಥೆಯನ್ನು ಹೊಂದಿದೆ. ಆ ಉಪಜಾತಿಯಲ್ಲಿ ಸ್ತ್ರೀಗೆ ದೊರಕಿರುವ ಸ್ಥಾನಮಾನಗಳು ವಿಶೇಷವಾದುವು. ಒಡೆಯರ ಹೆಂಡತಿ 'ಒಡೆಯರಮ್ಮ' (ಒಡೇರಮ್ಮ) ಭಾರತೀಯ ಸ್ತ್ರೀ ಸಮಾಜದ ಇತಿಹಾಸದಲ್ಲಿ ಮತ್ತು ಸಮಕಾಲೀನದಲ್ಲಿ ಅತ್ಯಪೂರ್ವ ಸ್ಥಾನವನ್ನು ಪಡೆದಿದ್ದಾಳೆ. "ಒಡೆಯರ ಜನಾಂಗ ಸಮಾಜಶಾಸ್ತ್ರಜ್ಞರ, ಮಾನವಶಾಸ್ತ್ರಜ್ಞರ ಮತ್ತು ಜಾನಪದ ಶಾಸ್ತ್ರಜ್ಞರ ಅಧ್ಯಯನಕ್ಕೆ ಬೆರಗಿನ ವಸ್ತುವಾಗಬಹುದು"[೮೨] ಎಂಬುದು ಗಮನಾರ್ಹವಾಗಿದೆ.

ಕುರುಬರ ನಂಬಿಕೆಯ ಪ್ರಕಾರ ಒಡೇರಮ್ಮ ಎಂದೂ ವಿಧವೆ ಆಗುವುದೇ ಇಲ್ಲ. ಏಕೆಂದರೆ ಮದುವೆ ಸಮಯದಲ್ಲಿ ಅವಳಿಗೆ ಮೈಮೇಲಿನ ಲಿಂಗದ ಜೊತೆಗೆ ವಾಸ್ತವವಾದ ಮದುವೆ ಆಗಿರುತ್ತದೆ. ಕೈಹಿಡಿದ ಗಂಡನಂತೆ, ಲಿಂಗವೂ ಅವಳ ಗಂಡನೇ. ಮಾನುಷ ಗಂಡ ತೀರಿಕೊಂಡರೂ ಮೈಮೇಲೆ ಲಿಂಗ ಇರುವುದರಿಂದ ಅವಳು ವಿಧವೆಯಾಗುವುದಿಲ್ಲ. ಗಂಡ ಸತ್ತ ಮೇಲೂ ಹಿಂದೂ ವಿಧವೆಯರಂತೆ ಅವಳು ಸೌಭಾಗ್ಯದ ಚಿಹ್ನೆಗಳನ್ನು ತೆಗೆದು ಹಾಕುವುದಿಲ್ಲ. ವಿಧವೆ ಒಡೇರಮ್ಮ ಹಿಂದಿನಂತೆಯೇ ಕುಂಕುಮ, ತಾಳಿ, ಬಳೆಗಳನ್ನು ಧರಿಸುತ್ತಾಳೆ, ಇನ್ನೂ ವಿಚಿತ್ರವೆಂದರೆ ವಿಧವೆಯಾಗಿದ್ದರೂ ಅವಳ ಹಿಂದಿನಂತೆಯೇ ಮದುವೆಗಳಲ್ಲಿ ಪೌರೋಹಿತ್ಯ ಮಾಡಬಹುದು. ಯಾವುದೇ ಮಂಗಲ ಕಾರ್ಯಕ್ಕೂ ಹೋಗಬಹುದು. ಮತ್ತು ಅವಳ ಬರವು ಅಮಂಗಲವೆಂದು ಯಾರೂ ಭಾವಿಸುವುದಿಲ್ಲ. 'ಶರಣ ಸತಿ, ಲಿಂಗ ಪತಿ' ವೀರಶೈವ ಮತ ನಂಬಿದ ತತ್ವ ಇಲ್ಲಿ ಅರ್ಥಪೂರ್ಣವಾಗಿ ಆಚರಣೆಗೊಳ್ಳುವುದು.

"ಹಿಂದೂ ಸಮಾಜದ ಬಹುತೇಕ ಎಲ್ಲ ಜಾತಿಗಳಲ್ಲಿ ಸ್ತ್ರೀಯಾದವಳು, ಅದರಲ್ಲೂ ವಿಧವೆ ತೀರ ಕನಿಷ್ಟಳು, ಅಮಂಗಳೆ, ಧಾರ್ಮಿಕ ವಿಧಿಗಳಿಗೆ ಅನರ್ಹಳು ಎಂಬ ಪ್ರಬಲ ನಂಬಿಕೆಗಳಿರುವಾಗ ಕುರುಬ ಪಂಗಡದ ಒಡೇರಮ್ಮ ಒಂದು ಉಜ್ವಲ ವಿನಾಯ್ತಿಯಾಗಿ ಕಂಗೊಳಿಸುತ್ತಾಳೆ."[೮೩] ಅವಳು ವಿದ್ಯಾವಂತೆಯಾಗಿದ್ದರೂ ತನ್ನ ಸಮಾಜದ ಧಾರ್ಮಿಕ ಸ್ಥಾನದ ಅರಿವಿರುವ ಆಕೆ ಉಳಿದ ಕುರುಬ ಹೆಂಗಸರಿಗಿಂತ ಹೆಚ್ಚು ಗಂಭೀರಳೂ, ಆತ್ಮವಿಶ್ವಾಸವಿರುವವಳೂ ಆಗಿ ಕಾಣುತ್ತಾಳೆ. ಇದೇ ಆಚರಣೆ ಎಲ್ಲ ವರ್ಗಗಳಲ್ಲಿ ಬಂದರೆ ಸಂಪೂರ್ಣ ಸಮಾನತೆ ಸ್ತ್ರೀ ಪಡೆಯಬಲ್ಲಳು.

ಡೊಳ್ಳಿನ ಪದಗಳಲ್ಲಿ ಒಗಟಿನ ಪದಗಳನ್ನೂ ಕಾಣುತ್ತೇವೆ. ಅವುಗಳಿಗೆ ಸವಾಲಿನ ಪದಗಳೆಂದೂ ಕರೆಯುತ್ತಾರೆ. ಇವು ಕನಕದಾಸರ ಮುಂಡಿಗೆಗಳನ್ನು, ಶರಣರ ಬೆಡಗಿನ ವಚನಗಳನ್ನು ಹೋಲುತ್ತವೆ. ಕನಕದಾಸರ ಪದಗಳನ್ನು ಹಾಗೂ ಈ ಒಗಟಿನ ಪದಗಳನ್ನು ಅಧ್ಯಯನ ಮಾಡಿದಾಗ ಶರಣ ದಾಸರ ಪ್ರಭಾವ ಡೊಳ್ಳಿನ ಪದಗಾರರ ಮೇಲೆ ಆಗಿದೆಯೋ, ಜನಪದ ಡೊಳ್ಳಿನ

೮೨. ಜನ-ಜನಪದ-ಜಾನಪದ. ಎಂ. ಚಿದಾನಂದಮೂರ್ತಿ. ಪುಟ-೧೫೬.

೮೩. ಅದೇ. ಪುಟ-೧೬೬.

ಪದಗಳ ಪ್ರಭಾವ ಇವರ ಮೇಲಾಗಿದೆಯೋ ನಿರ್ಧರಿಸುವುದು ಸ್ವಲ್ಪ ಕಷ್ಟದ ಕೆಲಸ. ಆದರೂ ಜನಪದ ಸಾಹಿತ್ಯಕ್ಕೆ ತುಂಬಾ ಪ್ರಾಚೀನತೆ ಇರುವುದರಿಂದ ಅದರಿಂದಲೇ ಶರಣರು ದಾಸರು ಪ್ರೇರಣೆ

[illegible]

ಪಡೆದಿರಬೇಕೆನಿಸುತ್ತದೆ. ಒಗಟಿನ ಪದಗಳನ್ನು ಹಾಡುವ ಸಂದರ್ಭ ಜಾತ್ರೆಯಲ್ಲಿ ಮಾತ್ರ. ಒಂದು ಮೇಳದವರು ಹಾಡು ಹಾಡುತ್ತ ಇನ್ನೊಂದು ಮೇಳದವರಿಗೆ ಹಾಡಿನ ಮೂಲಕ ಸವಾಲೆಸಗುತ್ತಾರೆ. ಇವರು ಹಾಕಿದ ಸವಾಲಿಗೆ ಬಂದ ಡೊಳ್ಳಿನ ಮೇಳದವರಲ್ಲಿ ಯಾವ ಮೇಳದವರಾದರೂ ಉತ್ತರಿಸಬಹುದು. ಇಲ್ಲವೆ ಇದಕ್ಕೆ ಪ್ರತಿಯಾಗಿ ತಾವೊಂದು ಅಂತಹ ಪದವನ್ನು ಅವರಿಗೆ ಹಾಕಬಹುದು. ಒಬ್ಬರ ಹಾಡಿಗೆ ಇನ್ನೊಬ್ಬರಿಂದ ಉತ್ತರ ಹೇಳದಿದ್ದಾಗ ಹಾಡಿದವರೇ ಉತ್ತರ ಕೊಡಬೇಕಾಗುತ್ತದೆ. ಹೀಗೆ ವಾದ, ಪ್ರತಿವಾದ ಹಾಡಿನ ಮೂಲಕ ನಡೆಯುವದರಿಂದ ಇವುಗಳನ್ನು 'ವಾದದ ಪದ'ಗಳೆಂದೂ ಕರೆಯುತ್ತಾರೆ.

"ಅನ್ನಪೂರ್ಣದೇವಿಯ ಗುಡಿಯಾಗ ನಾಯಿ ಹೊಕ್ಕಿತರಿ
ನಾಯಿ ಹೋಗಿ ಗುಡಿ ಒಳಗ ಎಣ್ಣಿ ಕಂಡೀತರಿ
ಆಗ ಒಂದ ನೊರಜ ಹೋಗಿ ಆ ನಾಯಿನ ತುಳದೀತರಿ
ಬೇಗದಿಂದಾ ಇಲಿ ಹೋಗಿ ಬೆಕ್ಕಿನ ನುಂಗೀತರಿ
ಊರಮುಂದಿನ ಹಳ್ಳ ನೋಡರಿ ಜಿಗದ ನಿಂತೀತರಿ
ಹಾರಿನಿಂತ ಸಮುದ್ರಕ ತೆಕ್ಕೆ ಬಿದ್ದ ನುಗಸತಿತ್ತರಿ"[೮೪]

ಇಂತಹ ಒಗಟಿನ ವಾದದ ಪದಗಳು ಡೊಳ್ಳಿನ ಮೇದವರಲ್ಲಿ ಅನೇಕ ಸಿಗುತ್ತವೆ. ಚುಟುಕುಗಳು ಡೊಳ್ಳಿನ ಪದಗಳಲ್ಲಿ ತುಂಬಾ ವಿಶಿಷ್ಟವಾದ ಪ್ರಕಾರಕ್ಕೆ ಸಂಬಂಧಿಸಿದವುಗಳು. ನೂರಾರು ಸಾಲುಗಳಿಂದ ಕೂಡಿದ ಡೊಳ್ಳಿನ ಪದಗಳ ರಾಶಿಯೊಂದೆಡೆ ಇದ್ದರೆ, ಚುಟುಕು ಪದಗಳ ರಾಶಿ ಇನ್ನೊಂದೆಡೆ. ಇವುಗಳನ್ನು, ಯಾವುದೇ ಪದಗಳನ್ನು ಹಾಡುವುದಕ್ಕೆ ಮೊದಲು ಮತ್ತು ಕೊನೆಗೆ ಹಾಡುತ್ತಾರೆ. ಇವು ಬಹುಪಾಲು ದ್ವಿಪದಿಯಲ್ಲಿರುತ್ತವೆ ಮತ್ತು ಚೌಪದಿಯಲ್ಲಿಯೂ ಇರಬಹುದು. ಗುರುವಿನ, ದೇವರ ಸ್ತೋತ್ರ ಹೇಳಿಯೇ ಪದವನ್ನು ಆರಂಭಿಸುವುದುಂಟು. ಇವುಗಳನ್ನು ಪಲ್ಲ, ಪಲ್ಲವಿ ಎನ್ನುವರು.

"ಕುರಿಹಿಂಡ, ಮರಿಹಿಂಡ ಕಾಯುತ ಬಂದಾರಿವರು
ಕುರುಬರು ಅಂತಾ ಇವರಿಗೆ ಅಂದಿದಾರೊ"[೮೫]

ಇವರು ಬಾಳಿದ್ದೇ ಹಾಡು, ಹಾಡಿದ್ದೇ ಬಾಳು. ಕುರಿಗಳನ್ನು ಕಾಯುತ್ತ ಗೊಂಡಾರಣ್ಯದಲ್ಲಿ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ತಿರುಗುವ ಕುರುಬರ ಬಾಳಿನ ಕಥೆಯೇ ಕೆಲವೊಮ್ಮೆ ಹಾಡಾಗಿ ಹೊಮ್ಮುತ್ತದೆ.

---

೮೪. ಕಾಡು ಹೂಗಳು. ಪುಟ–೧೧೧–೧೧೨.
೮೫. ಅದೇ, ಪುಟ–೧೩೦.

[illegible]

"ಉಂಡ ಉಂಡ ಮನಿ ಎಣಿಸುವುದ್ಯಾತಕೋ ತಮ್ಮಾ
ಕೊಂಡ ಕೊಂಡ ಜಗಳಾ ತಗೆಯಾದು ಯಾಕ ಅಂದಿನೋ
ಉಡಾ ಉಡಾ ಉಬ್ಬಿದಾಂಗ ಉಬ್ಬಬಾಡೋ
ಧಡಾಧಡಾ ಗ್ವಾಡಿ ಬಿದ್ದಾಂಗ ಅಂದಿನೋ"[೮೬]

ಎಂಬಲ್ಲಿ 'ಉಂಡ ಮನೆಗೆ ಎರಡು ಬಗೆಯದೆ, ತನ್ನ ತಾನೇ ಶ್ರೇಷ್ಠ ಎಂಬ ಉಬ್ಬಿನಿಂದ ಹಿಗ್ಗದೆ ಗುರುಧ್ಯಾನದಿಂದ ಮನುಜ ಜನ್ಮ ಮುಕ್ತಿ ಮಾಡಿಕೊಳ್ಳು ಎಂಬ ಹಲವಾರು ನೀತಿಯುತ ಪದಗಳಿವೆ.

ಮನೋರಂಜನೆಗಿಂತ ಮತಧರ್ಮ ಶ್ರದ್ಧೆಯದೇ ಅಧಿಕ ಪ್ರೇರಣೆಯಿಂದ ಹುಟ್ಟಿ ಬೆಳೆದ ಈ ಡೊಳ್ಳಿನ ಪದಗಳು ಮೂಲದಲ್ಲಿ ಪೌರಾಣಿಕ ಮತ್ತು ಮತಧರ್ಮ, ನೀತಿ, ಸಮಾಜ ವಿಡಂಬನೆ ಕುರಿತು ಹೆಚ್ಚಿನ ಪ್ರಮಾಣದಲ್ಲಿ ರಚನೆಗೊಳ್ಳುತ್ತಿದ್ದವು. ಸಾಹಿತ್ಯ ಜೀವನದ ಪ್ರತಿಬಿಂಬ. ಸಮಾಜಬಿಂಬ ಸಮಾಜ ಬದಲಾದಂತೆ ಸಾಹಿತ್ಯವೂ ಬದಲಾಗುವುದು ಅವಶ್ಯ ಮತ್ತು ಅನಿವಾರ್ಯ. ಹಾಗೆಯೇ ಡೊಳ್ಳಿನ ಪದಗಳೂ ಕೂಡ ವಸ್ತು, ವಿಷಯ, ಹಾಡಿನ ಶೈಲಿಯಿಂದ ತುಂಬಾ ಪರಿವರ್ತನೆಗೊಂಡಿವೆ. ನಿದರ್ಶನಕ್ಕಾಗಿ

"ಮಳಿರಾಜ ಬಂದಾಗ ಬೆಚ್ಚಾತ ಕಂಬಳಿ
ತಲಿಮ್ಯಾಲ ಸುತ್ತುವ ಪಾವಡಾತ ಕಂಬಳಿ
ರಾಜಪಂಡಿತರಿಗೆ ಉಲನ್‌ಕೋಟ ಜಾಕೀಟನಂತ ಕಂಬಳಿ"[೮೭]

ಡೊಳ್ಳಿನ ಮೇಳದವರು ಎಷ್ಟೇ ಪರಿಣಾಮಕಾರಿಯಾಗಿ ಹಾಡಿದರೂ ಕೇಳುಗರ ಆಸಕ್ತಿ ಕಡಿಮೆಯಾಗುತ್ತಲಿದೆ. ಅದಕ್ಕೆ ಕಾರಣ ಆಧುನಿಕ ಪ್ರಭಾವ, ದೂರದರ್ಶನ, ಚಲನಚಿತ್ರ ವಿದ್ಯುನ್ಮಾನ ಮಾಧ್ಯಮಗಳು. ಹೀಗಾಗಿ ಕುರುಬ ಜನಪದ ಕಲಾವಿದರೂ ಕೂಡಾ ತಮ್ಮ ಮೂಲ ವೃತ್ತಿ ಪ್ರವೃತ್ತಿಯಲ್ಲಿ ಬದಲಾವಣೆ ಕಂಡುಕೊಂಡಿದ್ದಾರೆ. ಹಿಂದಿನಂತೆ ಬೆಳಕು ಹರಿಯುವವರೆಗೆ ಅಲುಗಾಡದೆ ತಾಳ್ಮೆಯಿಂದ ಕುಳಿತು ಕೇಳುವ ಶ್ರೋತೃಗಳ ಸಂಖ್ಯೆ ಇಲ್ಲವೇ ಇಲ್ಲ. ಆಧುನಿಕ ವಿದ್ಯಾಭ್ಯಾಸದಿಂದಾಗಿ ಪದಗಳನ್ನು ಹಾಡುವವರ ಸಂಖ್ಯೆಯೂ ಕುಂಠಿತಗೊಳ್ಳುತ್ತಲಿದೆ. ಈ ಕಲೆ, ಸಂಸ್ಕೃತಿ, ಪರಂಪರೆ ಉಳಿಯಬೇಕೆಂದರೆ ನಾಡಿನ ವಿಶ್ವವಿದ್ಯಾಲಯಗಳು, ಜನಪದ ಅಕಾಡೆಮಿಯವರು ಈ ನಾಡಿನಾದ್ಯಂತ ಕ್ಷೇತ್ರಕಾರ್ಯ ಕೈಗೊಂಡು ಡೊಳ್ಳಿನ ಪದಗಳ ಧ್ವನಿಮುದ್ರಣ, ವ್ಹಿಡಿಯೊ ಚಿತ್ರೀಕರಣ ಮಾಡಿದರೆ, ಬಹುಶಃ ಮುಂದಿನ ಪೀಳಿಗೆಗೆ ಸಾಗಿಸಬಹುದಾದಿದೆ.

ಈ ಸಂಗ್ರಹದಲ್ಲಿ ೬೯ ಸಂಧಿಗಳಿವೆ. ಖಾಡೆಯವರ ಸಂಗ್ರಹ ಕಾರ್ಯದ ಅಪಾರ ಪರಿಶ್ರಮವನ್ನು ಗುರುತಿಸಬಹುದಾಗಿದೆ. ವೈವಿಧ್ಯಮಯ ವಸ್ತುವನ್ನು ಒಳಗೊಂಡ ಡೊಳ್ಳಿನ ಹಾಡುಗಳು ಹತ್ತು ಹಲವು ವಿಷಯವನ್ನು ನಿರೂಪಿಸುತ್ತವೆ. ಪರಂಪರಾಗತ ನಂಬಿಗೆ, ಶ್ರದ್ಧೆ, ಆಚರಣೆಗಳನ್ನೇ ಪ್ರತಿಪಾಸುತ್ತಿದ್ದರೂ ಒಂದು ಜನಾಂಗದ ಜೀವನ ವಿಧಾನವನ್ನು ಅರಿಯಲು ಈ ರಚನೆಗಳು ನೆರವಾಗುತ್ತವೆ.

---

೮೬. ಅದೇ. ಪುಟ-೧೩೫.
೮೭. ಅದೇ. ಪುಟ-೮೮.

[illegible]

[illegible]

[illegible]

[illegible]

[illegible]

ಖಾಡೆಯವರ ಕ್ಷೇತ್ರಕಾರ್ಯ ಪ್ರಶಂಸನೀಯ. ಆಧುನಿಕ ತಂತ್ರಜ್ಞಾನದ ವ್ಯವಸ್ಥೆಯಿಲ್ಲದ ಸಂದರ್ಭದಲ್ಲಿ ಅಂದರೆ ಸುಮಾರು ೫೦ ವರ್ಷದ ಹಿಂದೆ ಇವುಗಳನ್ನು ಸಂಗ್ರಹಿಸಿ, ಸಂಕಲನಗೊಳಿಸಿದ್ದನ್ನು ಗಮನಿಸಿದಾಗ, ಖಾಡೆಯವರ ಪರಿಶ್ರಮ, ಜೀವನಶ್ರದ್ಧೆ, ಜನಪದ ಪ್ರೇಮ ಎದ್ದು ಕಾಣುತ್ತದೆ.

ಒಟ್ಟಾರೆ ಪ್ರಸ್ತುತ ಸಂಕಲನದಿಂದ ಮುಖ್ಯವಾಗಿ ನಾಲ್ಕು ರೀತಿಯ ಜನಪದ ಪದ್ಯ ಸಾಹಿತ್ಯವನ್ನು ಸಂಕಲನಗೊಳಿಸಿದ್ದಾರೆ. ಬೀಸುವ ಪದಗಳು, ಕೋಲಾಟದ ಪದಗಳು, ಹಂತಿಯ ಪದಗಳು, ಹಾಗೆ ಡೊಳ್ಳಿನ ಪದಗಳು ಇದರಲ್ಲಿ ಸಮಾವೇಶಗೊಂಡಿವೆ. ಇದೊಂದು ಹವ್ಯಾಸಕ್ಕಾಗಿ ಮಾಡಿರುವ, ಆಸಕ್ತಿಕಾರಣವಾಗಿ ಮಾಡಿರುವ ಸಂಕಲನವಾಗಿರುವುದರಿಂದ ಇದರಲ್ಲಿ ಪ್ರೌಢ ಹಾಗೂ ಶಾಸ್ತ್ರೀಯ ಸಂಪಾದನಾ ಶಾಸ್ತ್ರದ ನಿಯಮಗಳನ್ನು ಕಾಣಲು ಸಾಧ್ಯವಿಲ್ಲ. ಸಂಪಾದನೆಗೆ ಬೇಕಾದ ಅಡಿಟಿಪ್ಪಣಿ ಸುದೀರ್ಘ ಪ್ರಸ್ತಾವನೆ, ಭಿನ್ನಪಾಠಗಳ ಪ್ರಸ್ತಾಪಗಳಿಲ್ಲ. ಕಾರಣ ಬಹಳ ಸರಳವಾಗಿದೆ. ಖಾಡೆಯವರು ಕಳೆದುಹೋಗಬಹುದಾದ ಜಾನಪದ ಸಂಪತ್ತನ್ನು ಸಂಗ್ರಹಿಸುವುದು ಅವರ ಉದ್ದೇಶವಾಗಿದೆ. ಶಾಸ್ತ್ರೀಯ ಶಿಸ್ತಿನ ಕಡೆಗೂ ಅವರ ಗಮನವಿಲ್ಲ. ಸಂಪಾದನೆಯ ಶಿಸ್ತು ಇಲ್ಲದೆ ಹೋದರೂ ಸಹ ಅಮೂಲ್ಯವಾದ, ಕಳೆದುಹೋಗಬಹುದಾದ ಜಾನಪದ ಗಂಗೋತ್ರಿಯನ್ನು ಸಂಕಲಿಸಿದ ಶ್ರೇಯಸ್ಸು ಶ್ರೀಯುತರದಾಗಿದೆ. ಜನಪದ ಸಂಕಲಿತ ಸಾಹಿತ್ಯದಲ್ಲಿ ಪ್ರಸ್ತುತ ಕೃತಿಗೊಂದು ಅನನ್ಯ ಸ್ಥಾನವಿದೆ. ಖಾಡೆಯವರ ಪರಿಶ್ರಮಕ್ಕೆ ತನ್ನದೇ ಆದ ಬೆಲೆ ಇದ್ದೇ ಇದೆ ಎಂಬುದನ್ನು ಮರೆಯಲಾಗದು.

೩.೧.೨. ಹಳ್ಳಿ ಹಬ್ಬಿಸಿದ ಹೂಬಳ್ಳಿ (ರಿವಾಯತ್ ಪದಗಳು)

ಮೊಹರಂ ಪದಗಳಿಗೆ 'ಕರಬಲಾ ಹಾಡು' 'ರಿವಾಯತ್ ಪದ'ಗಳೆಂದೂ 'ಜಂಗಿನಪದ'ಗಳೆಂದೂ 'ಅಲಾಯಿಪದ'ಗಳೆಂದೂ ಕರೆಯುವುದುಂಟು. ಜಂಗಿನ ಪದಗಳನ್ನು ಹಾಡುವವರು ನಾಲ್ಕು ಜನರಿದ್ದರೆ, ಹೆಜ್ಜೆ ಕುಣಿತ ಕುಣಿಯುವರು ಎಂಟು ಜನ ಇರುತ್ತಾರೆ. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಹಾಡಿಗನುಗುಣವಾಗಿ ತಾಳಲಯಬದ್ಧರಾಗಿ ಕುಣಿಯುತ್ತಾರೆ. ಮುಂದಿನವರು ಇವರು ಹಾಡಿದ್ದನ್ನೇ ಹಿಂದಿನವರು ಅದೇ ಪಲ್ಲವಿಯನ್ನು ಕೋಚೆತ್ತಿ ಹಾಡುತ್ತಾರೆ. ಹಾಡಲು ಸಭೆಯಲ್ಲಿ ಬಂದಮೇಲೆ ದೈವಕ್ಕೆ ಹಾಗೂ ಪರಮಾತ್ಮನಿಗೆ ತಮ್ಮ ವಂದನೆ ಸಲ್ಲಿಸುವ ರೂಢಿಯಿದೆ. ಖಾಡೆಯವರು ಕರ್ಬಲ್ ಪದಗಳನ್ನು ನಾಲ್ಕು ಭಾಗಗಳಾಗಿಸಿದ್ದಾರೆ. ಅವು ಹೀಗಿವೆ:

ಭಾಗ ೧: ಜಂಗಿನ ಪದಗಳು.
ಭಾಗ ೨: ಸವ್ವಾಲ ಪದಗಳು.
ಭಾಗ ೩: ಭಕ್ತಿ ಪದಗಳು.
ಭಾಗ ೪: ಹಿಂದೂ ಧರ್ಮದ ಪದಗಳು.

ಒಟ್ಟಿನ ಮೇಲೆ ಇದೊಂದು ಕರಬಲಾ ಪದಗಳ ಸಂಕಲನವಾಗಿದೆ.

[illegible]

[illegible]

[illegible]

[illegible]

ಭಾಗ ೧: ಜಂಗಿನ ಪದಗಳು:

ಖಾಡೆಯವರು ರಿವಾಯತ್ ಪದಗಳಲ್ಲಿ ನಾಲ್ಕು ಭಾಗಗಳನ್ನು ಮಾಡಿದ್ದು ಅದರಲ್ಲಿ ಮೊದಲನೆ ಭಾಗ ಜಂಗಿನ ಪದಗಳಿದ್ದು "ಜಂಗಿ ಎಂಬುದು ಪಾರಸಿ ಭಾಷೆಯ ಶಬ್ದ. ಇದು ಹಿಂದಿ ಮತ್ತು ಮರಾಠಿ ಭಾಷೆಗಳ ಮೂಲಕ ಕನ್ನಡಕ್ಕೆ ಬಂದಿದೆ. ಈ ಶಬ್ದಕ್ಕೆ ಜಂಗ ಎಂದರೆ ಯುದ್ಧ, ಜಂಗೀ, ಜಂಘೀ ಎಂದರೆ ಯುದ್ದಕ್ಕೆ ಸಂಬಂಧಿಸಿದ, ಪರಾಕ್ರಮದ, ಶೀಘ್ರ ಪರಿಣಾಮದ ಎಂದರ್ಥ. ಆದ್ದರಿಂದ ಜಂಗಿ ಕುಸ್ತಿ ಅನ್ನುವ ಪದ ಬಳಕೆಯಲ್ಲಿದ್ದು ಹಾಗೆಂದರೆ ಭಾರಿಯ ಶಕ್ತಿಯುಳ್ಳ ಪೈಲ್ವಾನರು ಮಾಡುವ ಕುಸ್ತಿ ಎಂದರ್ಥ"[೮೮] ಇವರು ಸಂಗ್ರಹಿಸಿದ ಜಂಗಿನ ಪದಗಳು ೫೦ ಇದ್ದು, ಮೊದಲಿಗೆ ಸರ್ವರಿಗೂ ನಮಸ್ಕಾರಗಳನ್ನು ತಿಳಿಸುವ ಪದಗಳಿವೆ. 'ದೈವಕ್ಕ ನಮ್ಮ ನಮಸ್ಕಾರ' ಪದದಲ್ಲಿ ಊರಿನ ಸರ್ವಜನರಾದ, ಗುರು ಹಿರಿಯರಿಗೆ, ಬೈರೋಗಿ ಜಂಗಮ, ಒಂದು ಲಕ್ಷ ಎಂಬತ್ತ ಸಾವಿರ ಶರಣ, ಜನನಿ, ಜನಕ, ಮಿತ್ರ ಹುಡುಗರಿಗೆ ಹೀಗೆ ಎಲ್ಲರಿಗೂ ನಮಸ್ಕರಿಸಿ, ಜಂಗಿನ ಪದಗಳೂ ಆರಂಭಗೊಳ್ಳುವವು.

"ದೈವಕೂಡಿರಿ ವಿನಯದಿಂದ ನಾನು ಮಾಡುವೆ ಸಲಾಮಾ
ಪೃಥ್ವಿಪಾಲ ಆದ ಶರಣಗ ಶಿರಬಾಗಿ ಮಾಡುವೆ ಸಲಾಮಾ
ಒಂದು ಲಕ್ಷ ಎಂಭತ್ತ ಸಾವಿರ ಶರಣರಿಗೆ ವಿನಯದಿಂದ ಮಾಡುವೆ ಸಲಾಮಾ"[೮೯]

ಸರ್ವಜನರಿಗೆ ನಮಸ್ಕರಿಸಿ ತದನಂತರ ಅಲ್ಲಾಹುವಿನ ಹೆಸರನ್ನು ನೆನೆದು ಪದಗಳ ಸುರಿಮಳೆ ಆರಂಭವಾಗುವದು.

"ಮೊದಲಿಗೆ ನೆನದೀನೋ ಅಲ್ಲಾನ ನಾಮಾ
ಪ್ರಥಮಕ ನೆನುವೇನೋ ಶಿವನ ಧ್ಯಾನಾ
ಮಲ್ಲೀಗಿ ಸಂಪಿಗಿ ಗುಲಾಬಿ ಕಸ್ತೂರಿ
ಚೆಂದಾಗಿ ಧರಿಸುವನಾ ಒಂದನೇ ಹೂಗಳ ನಾ
ನಾವು ಬೇಡುವೆವ್ರೋ ಕೊಡಬೇಕೋ ವರವನ್ನಾ"[೯೦]

ಪ್ರಥಮದಲ್ಲಿ ಶಿವ, ಅಲ್ಲಾಹುವಿನ ಧ್ಯಾನ ಮಾಡಿದಾಗಲೇ ಎಷ್ಟೊಂದು ಸೌಹಾರ್ದಯುವಾದ ಕಲ್ಪನೆ ಮೂಡುವುದು.

'ಚೈತ್ರಮಾಸ ನೀರನಿಲ್ಲದೆ ಬಿಸಲಬ್ಯಾಸಿಗಿ ಮದ್ದಿನಾ
ತಿರುತಿರುಗಿ ಹೆಸನಹುಸೇನಿ ನೀರಡಿಶ್ಯಾರೋ ಆದಿನ
ಕರದರೋ ತಮ್ಮ ತಂದೀನಾ ನೀರ ಬೇಡ್ಯಾರೊ ಅವನಾ

---

೮೮. ಇಗೋ ಕನ್ನಡ. ಜಿ. ವೆಂಕಟಸುಬ್ಬಯ್ಯ. ಪುಟ–೧೮೬.

೮೯. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ–೩.

೯೦. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ–೩.

[illegible]

ನೀರ ತರಲಾಕ ನಡೀತೋ ದಂಡ ತಿರಗುತ ಅಡವಿನ್ನಾ
ಒಂದ ಆಲದ ಗಿಡದ ಹೊಟ್ಟೆ ಒಳಗ
ಒಂದ ಸರಪ ಸತ್ತ ಆಗಿತ್ತೊ ಬಸದು ಒಂದೇ ಸವನಾ"[೯೧]

'ಮೌಲಾ ದೇವಲೋಕದ ಗಿಳಿಕೊಂದದ್ದು' ಕಥನ ಕಾವ್ಯದಲ್ಲಿ 'ಪ್ರತ್ಯಕ್ಷ ಕಂಡರೂ. ಪ್ರಮಾಣಿಸಿ ನೋಡು' ಗಾದೆಯಂತೆ, ಮೌಲಾ ಸಾರಾಸಾರ ವಿಚಾರಿಸದೆ ಗಿಳಿಯನ್ನು ಕೊಂದನು. ಮಕ್ಕಳನ್ನು ವಿಷಸರ್ಪದ ನೀರಿನಿಂದ ರಕ್ಷಿಸಲು ಹೋಗಿ ಗಿಳಿ ತನ್ನ ಪ್ರಾಣವನ್ನು ಕಳೆದುಕೊಂಡಿತು. ಯಾವುದೇ ಕಾರ್ಯ ಕೈಗೊಂಡರೂ ಸರಿಯಾಗಿ ಆಲೋಚನೆ ಮಾಡಿ ಮುಂದಿನ ಹೆಜ್ಜೆ ಇಡಬೇಕೆನ್ನುವ ತತ್ವನ್ನು ಕಟ್ಟಿ ಕೊಡುವುದು.

ಅಗಲಿದ ತನ್ನ ಕಂದನಿಗಾಗಿ ಗೋಳಾಡುವ ತಾಯಿಯ ಚಿತ್ರ 'ತಾಯಿಯ ಕರುಳು' ರೋಧಿಸುವ ಪರಿ ಮೂಡಿದೆ. ಅಗಲಿದ ತನ್ನ ಮಗುವಿನ ಶವದ ಮುಂದೆ ತಾಯಿ ಗೋಳಾಡುವುದನ್ನು ಕವಿ ತನ್ನ ಕಾವ್ಯದ ಹೊರಗೆ ನಿಂತು ಚಿತ್ರಿಸುತ್ತಾನೆ. ಕಾವ್ಯ ಕೇಳುಗರಲ್ಲಿ ಶೋಕ ಸ್ಥಾಯಿಯನ್ನು ಬಡಿದೆಬ್ಬಿಸಿದ ಕರುಣರಸವನ್ನು ಆಸ್ವಾದಿಸುವಂತೆ ಮಾಡುತ್ತದೆ.

"ದೈವಕ ಎನ್ನ ಮಗ ದಕ್ಕಲಿಲ್ಲಾ
ಖಾಲಿ ಬಿದ್ದಿತೋ ತೂಗು ತೊಟ್ಟಿಲಾ
ಜೋಗುಳ ಹಾಡಲಿ ನಾ ಇನ್ನ್ಯಾರ ಮ್ಯಾಲಾ"[೯೨]

"ಜನಪದ ಹಾಡು ಕೇಳುವುದರಿಂದ ಅಥವಾ ಜನಪದ ಕಾವ್ಯ ವಾಚನ ಮಾಡುವದರಿಂದ ಸಹೃದಯರಲ್ಲಿ ರಸನಿಷ್ಪತ್ತಿಯೇ ಆಗುವುದಿಲ್ಲವೆಂದು ಹೇಳುವ ಪಂಡಿತರಿಗೆ ಈ ಕಾವ್ಯ ಖಂಡಿಯವಾಗಿಯೂ ಸವಾಲಾಗಿ ನಿಲ್ಲುತ್ತದೆ. ವಾಸ್ತವಿಕ ಅನುಭವದ ಹಿನ್ನೆಲೆಯಲ್ಲಿಯೇ ರೂಪುಗೊಳ್ಳುವ ಕಾವ್ಯ. ಅಪ್ರತಿಮ ಎನ್ನುವಷ್ಟರ ಮಟ್ಟಿಗೆ ಬೆಳೆದು ನಿಲ್ಲುತ್ತದೆ"[೯೩] ಎಂಬುದು ಗಮನಾರ್ಹವಾದುದು.

"ಆಕಾಶ ಬಿದ್ದಾಂಗಾತ್ರಿ ತಲಿಯ ಮ್ಯಾಲಾ
ಹಾಲಾ ಕುಡಿಯೋ ಬಾಳಾ ಅಸ್ಕರಲಿ"[೯೪]

ಎನ್ನುವ ಸಾಲುಗಳಲ್ಲಿ 'ಮಗು ಸತ್ತಿದೆ' ಇನ್ನು ಮೇಲೆ ಆತ ಎಚ್ಚರಗೊಳ್ಳುವುದೇ ಇಲ್ಲ. ಎಂದು ಬಾಯಿ ಬಿಚ್ಚಿ ಆಡಿಕೊಳ್ಳಲು ಸಾಧ್ಯವಿಲ್ಲದಷ್ಟು ತಾಯಿಯ ಮನ ದಿಗಿಲುಗೊಂಡಿದೆ. ಆತ ಇನ್ನೂ ಜೀವದಿಂದಾನೆಂಬ ಭ್ರಮೆ ಉಳಿಸಿಕೊಂಡು ತನ್ನ ಮನಸ್ಸನ್ನು ತಾನೇ ಸಂತೈಸಿಕೊಳ್ಳುವ ಈ ನೋಟ. ಓದುಗರ ಕರುಳ ಬಳ್ಳಿಯನ್ನು ಅಲುಗಾಡಿಸುತ್ತದೆ. ಮಗುವಿನ ಅಗಲುವಿಕೆಯಿಂದ ತನಗೊದಗಿದ

---

೯೧. ಅದೇ. ಪುಟ–೨೪.
೯೨. ಅದೇ. ಪುಟ–೪೩.
೯೩. ಜನಪದ ಕಾವ್ಯ ಪ್ರಥಮ ವಿಮರ್ಶೆ. ಡಾ. ವೀರಣ್ಣ ದಂಡೆ. ಪುಟ–೬೩.
೯೪. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ–೪೩.

[illegible]

ದುಸ್ಥಿತಿಯನ್ನು ಹೇಳಿಕೊಳ್ಳುವ ಮಾತುಗಳು 'ತಾಯಿ' ತನ್ನ ಮಗುವಿನ ಜೊತೆಗೆ ಇರಿಸಿಕೊಂಡ ಭಾವನಾತ್ಮಕ ಬಾಂಧವ್ಯದ ಅಪರೂಪತೆಯನ್ನು ಎತ್ತಿ ತೋರಿಸುತ್ತದೆ. 'ಹೊಟ್ಯಾಗ ಹಚ್ಚಿದಾಂಗ ಹತ್ತಿದ ಉರಿ' 'ಬಡವಿ ಬಂಜೆಯಾಗಿ ಇದ್ದೆನಲ್ಲಾ' ಶವದ ಮುಂದೆ ಸತ್ತವನ ಗುಣಗಾನ ಮಾಡಿ ಪೂರ್ವದ ಸಂಗತಿಗಳನ್ನು ನೆನಪಿಸಿಕೊಳ್ಳುವದರಿಂದ ದುಃಖ ಎತ್ತಿ ಹಾಕುತ್ತದೆ. ತಾಯಿ ಮಗನ ಅವಿನಾಭಾವ ಸಂಬಧ ಸೂಚಿಸುತ್ತದೆ. 'ಹಾಲು ಕುಡಿಯೋ ಬಾಳಾ ಅಸ್ಕರಲಿ' ಎಂಬ ಮಾತು ತನ್ನ ಮಗನ ಸ್ಥಾನವನ್ನು ಇನ್ನಾರೂ ತುಂಬಲು ಸಾಧ್ಯವಿಲ್ಲವೆಂಬುದನ್ನು ಸಮರ್ಥವಾಗಿ ಹೇಳುತ್ತದೆ. ಮಗುವಿಗೆ ತಾನು ಹಾಲೂಡಿಸಬೇಕು, ಅದನ್ನು ಹೆಸರ್ಹಿಡಿದು ಬಾಯ್ತುಂಬ ಕರೆಯಬೇಕೆಂಬ ತಾಯ್ತನದ ಆಸೆಗಳು ಮೂಡಿಬಂದಿವೆ. ಅವಳ ಅರಿವಿನಿಂದ ಮೂಡಿಬಂದ ಗೋಳಾಟದ ಸಾಲುಗಳಾಗಿ, ಒಂದು ಶೋಕ ಕಾವ್ಯವಾಗಿ 'ತಾಯಿ ಕರುಳು' ಮೂಡಿಬಂದಿದೆ.

ಭಾಗ ೨: ಸವ್ವಾಲ್ ಪದಗಳು:–

ಈಗಾಗಲೇ ಹೇಳಿದಂತೆ ರಿವಾಯತ್ ಪದಗಳನ್ನು ಹಾಡುವಲ್ಲಿ ಎರಡು ಮೇಳಗಳು ಇರುತ್ತವೆ. ಆ ಮೇಳಗಳು ಹಲಗೆ ವಾದ್ಯದೊಡನೆ ಹೆಜ್ಜೆ ಕುಣಿತ ಕುಣಿಯುತ್ತಾ, ಲೇಜಿಮು ಬಾರಿಸುತ್ತ, ಕರಬಲಾ ಹಾಡು ಹಾಡುತ್ತಾ ಇರುವವರು. ಈ ಹಾಡುವ ಗುಂಪುಗಳಲ್ಲಿ ಸ್ಪರ್ಧೆ ಏರ್ಪಟ್ಟು ಒಳ್ಳೆಯ ಜಿದ್ದಾ–ಜಿದ್ದಿನಿಂದ ಒಬ್ಬರಿಗೊಬ್ಬರು ಒಂದು ಮ್ಯಾಳಿನವರು ಮತ್ತೊಂದು ಮೇಳಕ್ಕೆ "ಸವ್ವಾಲ್" (ಪ್ರಶ್ನೆ) ಹಾಕಿ, ಸವ್ವಾಲ್ ಪದಗಳನ್ನು ಹಾಡುತ್ತಿರುತ್ತಾರೆ. ಸವ್ವಾಲ್ ಪದಗಳ ಒಂದು ಮೋಡಿಯೇ ವಿಶೇಷವಾಗಿ ಮೂಡಿವೆ.

"ಆಕಾಶಮ್ಯಾಲೆ ಕೆರಿ ಒಂದ ಕಂಡಿನೋ
ಹಮ್ಮ ಚೌಕ ಎಷ್ಟಿತ್ತೊ ಗುಮ್ಮಾ
ಕಟ್ಟಿಟ್ಟ ಕುಂತಾರೋ ಕಾಯಾಮಾ
ಕೇಳುಕೊಡೋ ಅವರ ನಾಮಾ"[೯೫]

ಹಲವಾರು ಸವ್ವಾಲ್ ಪದಗಳನ್ನು ಎದುರಾಳಿಗಳಿಗೆ ಹಾಕಿದಾಗ ಎದುರಾಳಿಗಳೂ ಹಾಡಿನಲ್ಲೆಯೇ ಜವಾಬ (ಉತ್ತರ) ಕೊಟ್ಟು; ತಾವೂ ಮರುಸವಾಲ್ ಹಾಕುತ್ತಾರೆ. ಒದೊಂದು ಮೋಜಿನ ಪ್ರಸಂಗವಾಗಿ ಮನಕ್ಕೆ ಮನರಂಜನೆಯನ್ನುಂಟು ಒದಗಿಸುತ್ತದೆ. ವಿದ್ವತ್ತನ್ನು ಪರಿಚಯಿಸುತ್ತದೆ. ಕೆಲವೊಂದು ಇಂತಿವೆ. ಖಾಡೆಯವರ ಸಂಗ್ರಹದಲ್ಲಿ ಕೇವಲ ಸವಾಲ್ ಪದಗಳೇ ಇದ್ದು ಜವಾಬ್ ಪದಗಳನ್ನು ಹೇಳುವವರು ದೊರೆಕಿಲ್ಲವೆಂದು ಕಾಣುತ್ತದೆ. ೨೫ ಪದಗಳಲ್ಲಿ ಸವ್ವಾಲ ಪದಗಳು ಮೂಡಿಬಂದಿವೆ.

"ಮೂರು ಬುರಜಿನ ಹೆಸರಕೇಳೋ ಬ್ಯಾರೆ ಬ್ಯಾರೆ ಆದೆ
ಮಳಿಗಾಲ ಚಳಿಗಾಳ ಬ್ಯಾಸಿಗಿ ಮೂರು ಬುರುಜವಾಗಿದೆ
ಒಂದು ಬುರುಜಕ್ಕೆ ನಾಲ್ಕು ತಿಂಗಲ ಜತ್ತವಾಗಿದೆ"[೯೬]

---

೯೫. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ–೧೨೩

೯೬. ಅದೇ. ಪುಟ–೧೧೭.

[illegible]

[illegible]

[illegible]

[illegible]

[illegible]

‘ಪೃಥ್ವಿಯ ಪಂಚಾಂಗ’ ಪದದಲ್ಲಿ ಎಂಟು ದಿಕ್ಕು, ಪಂಚಭೂತಗಳು, ಕಾಲ, ತಿಂಗಳು, ಪಕ್ಷಿ, ನಕ್ಷತ್ರ, ತಿಥಿ, ಸರ್ವಪದಗಳ ವಿವರವಿದೆ. ಸೂರ್ಯ ಚಂದ್ರ–ನಕ್ಷತ್ರಾದಿಗಳ ವರ್ಣನೆ, ವಿವರಣೆ ಈ ಪದದಲ್ಲಿ ಸೊಗಸಾಗಿ ಮೂಡಿಬಂದಿದೆ.

“ತತ್ತಿ ತುಂಬಿ ಮ್ಯಾಲ ಹೇರಿ ಸಂದೂಕಾ
ಒಂದ ಒಂದ ತತ್ತಿ ಒಳಗ ಕಾಸ ಕಾಸ ಇದ್ದು
ಭವನಾಳಕಾ ತಪಾಸ ಮಾಡಿ ಹೇಳೋ ಲೆಕ್ಕಾ”[೯೭]

ಈ ಪದಗಳು ಅಲ್ಲಮ ಪ್ರಭುಗಳ ಬೆಡಗಿನ ವನಗಳನ್ನು ನೆನಪಿಗೆ ತರುವವು.

“ಉನಕಾನಾಮು ಬೋಲದಿನಾ
ಲಾಖುಡಗಾಲಿಶ್ಯಾತ ಜಾನಾ ನೀವೀನ್ನಾ
ಇರಾದಲ್ಲಿ ಬಾವಾಗೆ ಬುದ್ಧಿಕೊಟ್ರೋ ಭಗವಾನಾ
ಸುಕ್ಕ ಮಿನ್ನೆಕು ಜಾನಾ
ಮಮ್ಮದಸಾಬ ಸಾಂಗಲ್ಯಾಕ ವಿಚಾರಣಾ”[೯೮]

ಸವಾಲ್ ಪದಗಳಲ್ಲಿ ಉರ್ದು ಕನ್ನಡ ಹಾಗೂ ಮರಾಠಿ ಮಿಶ್ರ ಪದಗಳಿದ್ದು ವಿಶೇಷವಾಗಿ ರಚಿತಗೊಂಡವು. ಹಿಂದೂ–ಮುಸ್ಲಿಂ ಭಾವೈಕ್ಯದ ಜೊತೆಗೆ ಪದಗಳಲ್ಲಿ ಮೂರು ಭಾಷೆಗಳ ಪದಗಳು ಸಮ್ಮಿಳಿತಗೊಂಡು ಹಲವು ಬಣ್ಣದ

“ಮುಸಲ್ಮಾನ ಹಿಂದೂಗಳಲ್ಲಿ ಇರುವಂವ ಯಾಂವಾ?
ಪಶು ಪಕ್ಷಿ ಜೀವಿಗಳಲ್ಲಿ ಇರುವಂವ ಯಾಂವಾ?”[೯೯]

ಪುಷ್ಪಗಳಿಂದ ಕೂಡಿದ ಮಾಲೆ ಮನೋಹರವಾಗಿ ಕಣ್ಣಿಗೆ ಕಂಗೊಳಿಸುವಂತೆ ಈ ಪದಗಳು ಮನಕ್ಕೆ, ಕಣ್ಣಿಗೆ ಆನಂದವನ್ನೊದಗಿಸಿ, ತಮ್ಮ ಕಂಪನ್ನು ಎಲ್ಲೆಡೆ ಬೀರತೊಡಗಿವೆ. ‘ಇರುವ ಯಾಂವಾ?’ ತುಂಬಾ ವಿಶಿಷ್ಟವಾದ, ವಿಚಾರಯುತ ತತ್ವಯುತ ಪ್ರಶ್ನೆಗಳು ಇಲ್ಲಿ ಕೇಳುವಂತಿವೆ. ನಿಸರ್ಗ, ಶರಣರ ವಿಚಾರಗಳಲ್ಲಿ, ಪ್ರತಿಯೊಂದು ವಸ್ತುವಿನಲ್ಲಿ ಇರುವವ ಯಾಂವ ಎಂದು ಪ್ರಶ್ನಿಸಿ ಕೊನೆಗೆ, ಗುರುವಿನ ಮಹಿಮೆಯನ್ನರಿತು, ವರ್ಗಭೇದವನ್ನು ಅಳಿಸುವಲ್ಲಿ ಯಶಸ್ವಿಯಾಗಿದೆ. “ಸಾಂಬನ ಜಾತಿ ಯಾವುದಲೆ” ಪದಗಳಲ್ಲಿ ಸಮಾನತೆಯನ್ನು ಸಾರಿ ಸಾರಿ ಹೇಳುವ ಅರ್ಥಯುಕ್ತ ಮಾತುಗಳಿವೆ.

“ಮಾಡಬ್ಯಾಡ ಮಂಗಾಟಾ
ಮಂಗ್ಯಾನಂಗ ಹೊಡಸೀನ ಲಗಾಟಾ”
“ಕತ್ತಿಮರಿಮ್ಯಾಲ ಜೀನ ಹಾಕಿದರ
ಕುದರಿ ಆಗಬಲ್ಲದೇನೊ”[೧೦೦]

---

೯೭. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ–೧೩೩.

೯೮. ಅದೇ. ಪುಟ–೧೩೬.

೯೯. ಅದೇ. ಪುಟ–

೧೦೦. ಅದೇ. ಪುಟ–೫೨

[illegible]

[illegible]

[illegible]

[illegible]

[illegible]

[illegible]

ಹೀಗೆ ಹಲವು ಉದಾಹರಣೆಗಳನ್ನು ತೆಗೆದುಕೊಂಡು ಸವ್ವಾಲ ಹಾಕುತ್ತಾರೆ. ಬೇವು ತನ್ನ ಕಹಿಯನ್ನ ಬಿಡಲಾರದು. ಮೂಲ ಗುಣ ಸುಟ್ಟರೂ ಹೋಗಲಾರದು. ಅದನ್ನರಿತು ಜೀವನ ನಡೆಸಬೇಕು. ಹೀಗೆ ಸವ್ವಾಲ್ ಪದಗಳನ್ನು ರಾಶಿ ರಾಶಿಯಾಗಿ ಖಾಡೆಯವರು ಸಂಪಾದನೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಭಾಗ ೩. ಭಕ್ತಿ ಪದಗಳು:

ಎರಡನೆಯ ಭಾಗದಲ್ಲಿ ಭಕ್ತಿ ಪದಗಳಿದ್ದು ಪರಂಪರೆಯಿಂದ ಬಂದ ಧಾರ್ಮಿಕ ಶ್ರದ್ಧೆಯೇ ಹಳ್ಳಿಗರ ಬಾಳಿನ ಆಧಾರ. ಅದೇ ಅವರ ಜೀವನದ ಊರುಗೋಲು. ಜೀವನದಲ್ಲಿ ಬರುವ ಕಷ್ಟ ಸುಖಗಳಿಗೂ, ಒಳಿತು ಕೆಡುಕುಗಳಿಗೂ ಮೂಲಭೂತವಾದ ಕಾರಣಶಕ್ತಿಯೊಂದಿದೆ. ಅದರ ಇಚ್ಛೆಯಂತೆ ಇವೆಲ್ಲಾ ನಡೆಯುತ್ತವೆ. ಆ ಶಕ್ತಿಯ ವಿರುದ್ಧ ಹೋಗುವುದು ಸಾಧ್ಯವಿಲ್ಲ ಎಂಬುದು ಹಳ್ಳಿಗರ ಜೀವನದಲ್ಲಿ ರಕ್ತಗತವಾದ ತತ್ವ. ದೇವನನ್ನು ಅನೇಕ ರೂಪಗಳಲ್ಲಿ ಕಂಡು ಸತತ ಅವನ ಸಾನಿಧ್ಯವನ್ನು ಕಲ್ಪಿಸಿಕೊಳ್ಳುವ ಶಕ್ತಿ ಅವರಲ್ಲಿದೆ. ಅವರ ಧಾರ್ಮಿಕ ಶ್ರದ್ಧೆ, ಪ್ರಾರ್ಥನಾ ಸ್ತುತಿಗಳೂ ಇಲ್ಲಿವೆ.

"ಬಂತೊ ಮೋರಮು ರಾಜೇಕ ಪ್ರೇಮಾ
ಹಸನ ಹುಸೇನಿ ನಾಮಾ
ನೆನೆದವರ ಜಮಾ ತಿಂಗಳದ ಮುತ್ತಿನಾಂಗ
ಆತೋ ಪಾವನಾ"[೧೧೧]

ಮೊಹರಂ ತಿಂಗಳು ಉಪವಾಸ ಆಚರಿಸುವವರ ಜನ್ಮ ಪಾವನ ಆಗುವದಷ್ಟೇ ಅಲ್ಲದೆ ಪುಣ್ಯ ದಿನ ಎಂದು ಪ್ರತಿಯೊಬ್ಬ ಮುಸ್ಲಿಮರು ಭಾವಿಸುತ್ತಾರೆ. ಧರ್ಮ ಕಾರ್ಯ ಮುಸ್ಲಿಂ ಧರ್ಮಗುರುಗಳಿಂದ ಈ ದಿನ ಪ್ರಾರಂಭಿಸಲ್ಪಡುತ್ತವೆ. 'ಮೈಬೂಬ ಪ್ರಬಲಾ' ಕಥನ ಕಾವ್ಯದಲ್ಲಿ ಮೈಬೂಬ ಬಡವನಾದ ಮಕಬೂಲನ ಪ್ರಾಣವನ್ನು ಉಳಿಸಿದ ಘಟನೆ ಎಳೆಎಳೆಯಾಗಿ, ತಿಳಿತಿಳಿಯಾಗಿ ಮೂಡಿ ಬಂದಿದೆ. ಮಕಬೂಲ ಮೈಬೂಬ ಇಬ್ಬರೂ ಜೀವದ ಗೆಳೆಯರಿದ್ದು, ಚಿಣಿಪಣಿ ಆಟವನ್ನು ಆಡಿ, ಆಟವನ್ನು ಕೊಡದೇ ಮಕಬೂಲನ ಪ್ರಾಣ ಕಳೆದು ಹೋದಾಗ ಆಶ್ಚರ್ಯಕರ ರೀತಿಯಲ್ಲಿ ಆತನ ಪ್ರಾಣವನ್ನು ಮರಳಿ ಬರಿಸಿದ ಘಟನೆಯನ್ನು ವಿವರಿಸುವುದು. ಇಲ್ಲಿ ಇವನ ತಾಯಿಯ ಕರುಳಿನ ಕೂಗಿನ ಪದಗಳೂ ಕಾಣುವವು.

"ಅಳತಾರೋ ತಾಯಿ ತಂದಿ ಬಡಕೊಂಡ
ಎದಿ ಎದಿ ಸಂಭ ಮಾಡಿದ ಕೇಡಾ"[೧೧೨]

ಎಂಬಲ್ಲಿ 'ತಾಯಿ ಎದಿ ಎದಿ ಬಡಕೊಂಡ' ಮಾತಿನಲ್ಲಿ ಎಂಥವರ ಕರುಳು ಕಿತ್ತು ಬಂದಂತಾಗುವುದು. 'ಸತ್ತದ್ದು ಎಬ್ಬಿಶ್ಯಾರೋ ಮೈಬೂಬರ ಕಂಡಾರೋ ಜನರೆಲ್ಲಾ ಅಂದಿಗೆ

೧೧೧. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ–೬೦.
೧೧೨. ಅದೇ. ಪುಟ–೨೯.

[illegible]

[illegible]

[illegible]

[illegible]

[illegible]

[illegible]

[illegible]

ಮುಸಲಮಾನರಿಗೆ ಏನೂ ಭಯವಿಲ್ಲಾ' ಎಂಬಲ್ಲಿ ಅವರ ಪವಾಡವನ್ನು ನೋಡುವೆವು. ಹಾಗೆಯೇ 'ಫಕೀರನ ಪವಾಡ'ದಲ್ಲಿ ಫಕೀರನನ್ನು ಕಡಿದು ತುಂಡು ತುಂಡಾಗಿ ಮಾಡಿದ್ರೂ ದೈವೀ ಶಕ್ತಿಯಿಂದ ಮತ್ತೆ ವ್ಯಕ್ತಿ ರೂಪ ಧರಿಸುವನು.

'ಬೀಬಿ ಫಾತಿಮಾನ ಭಕ್ತಿ'ಯಲ್ಲಿ ಫಾತಿಮಾಳಿಗೆ ಫಕೀರನಿಗೆ ನೀಡಲು ಮನೆಯಲ್ಲಿ ಏನೂ ಇಲ್ಲದಾಗ ತನ್ನ ಸರವನ್ನು ನೀಡಿದ್ದು, ಭಕ್ತಿಗೆ ಮೆಚ್ಚಿ ಆ ಸರ ಮೀನಿನ ಮೂಲಕ ಅವಳೆಡೆಗೆ ಬರುವುದು. ಈ ಕಥೆಯ ವಿಸ್ತಾರವನ್ನು ನೋಡಿದಾಗ 'ಪುರಂದರದಾಸ' ಹೆಂಡತಿ ಮೂಗುಬಟ್ಟು ಕಥೆ ನೆನಪನ್ನು ತರುವುದು. ಹೀಗೆಯೇ 'ಬಸಿಮಿಲ್ಲಾ' ಕವನದಲ್ಲಿ ಶಿವಭಕ್ತೆಯಾದ್ದರಿಂದ ಎಲ್ಲ ಅಹಿತಕರ ಘಟನೆಗಳಿಂದ ಪಾರಾಗುವಳು.

"ಅಮೃತದ ಹಾಲಾ ಎತ್ತಿ ಕುಡಿದಾಳೋ ವಿಷವೆಲ್ಲಾ
ಹೊಟ್ಟಿಯಾಗ ಬೆಂಕಿ ಕಡಿದಾಂಗ ಚಕಮುಕಿ
ವಿಷಾ ಕುಡಿದರ ಸಾಯಲಿಲ್ಲ"[೧೦೩]

ಶಿವಭಕ್ತನ ಮಗಳೊಬ್ಬಳು ಮುಸಲಮಾನ ಮನೆಯೊಳು ಹಗಲೆಲ್ಲಾ ಹೋಗಿ ಅಲ್ಲಾನ ಧ್ಯಾನ ಮಾಡುವಾಗ, ತಂದೆ ಮಗಳಿಗೆ ವಿಷ ಬೆರೆಸಿ ಹಾಲಲ್ಲಿ ಹಾಕಿದ. ಸರ್ಪವನ್ನು ಪೆಟ್ಟಿಗೆಯಲ್ಲಿ ಹಾಕಿ ಕಡಿಸಲು ಪ್ರಯತ್ನಿಸಿದರೂ ಯಾವುದೂ ಯಶಸ್ವಿಯಾಗದೆ ಆಕೆಯ ದೃಢಭಕ್ತಿ ಮುಂದೆ ಸೋತು ಹೋದದ್ದು ಇಲ್ಲಿ ಚಿತ್ರಿತವಾಗಿದೆ.

ನಬಿಸಾಹೇಬರು ಬೆಕ್ಕಿನ ಮರಿಗಳಿಗೆ ಮರುಜೀವ ತುಂಬಿದ್ದು, ಲಗ್ನದ ಹಡಗು ಏಕಾಏಕಿ ಮುಳುಗಿದಾಗ ವಿಸ್ಮಯಕಾರಿಯಾಗಿ ಅದನ್ನು ಉಳಿಸಿದ್ದು, ಯಹೂದಿ ಹಿಗ್ಗಾಗಿದ್ದು. ಬೀಬಿ ಫಾತೀಮಾನ ಕಣ್ಣೀರು ಮುತ್ತಾಗಿ, ಅದನ್ನು ಮಾರಿ, ಮಾರಿದ ಮೇಲೆ ತಮ್ಮ ಮಕ್ಕಳಾದ ಹಸನ ಹುಸೇನರನ್ನು ಬಿಡಿಸಿಕೊಂಡು ಬಂದದ್ದು. ಇಲ್ಲಿ ಬಡತನದ ವಿರುದ್ಧ ಬಂಡಾಯ ಮೂಡಿ ಬಂದಿದೆ. ಶ್ರೀಮಂತರು ಬಡತನದಲ್ಲಿರುವವರನ್ನು ದುರುಪಯೋಗಪಡಿಸಿಕೊಳ್ಳುವುದೆಲ್ಲ ಸಮಾಜದಲ್ಲಿ, ಬಡತನದಿಂದ ಬಳಲುವ ಜನರ ಜೀವನ ಚಿತ್ರಣವೂ ಮೂಡಿ ಬಂದಿದೆ. ಬಡತನ ಸಮಾಜಕ್ಕೆ ಅಂಟಿದ ರೋಗ. ಹಾಜಿಸಾಹೇಬರಿಗೆ ಸುಳ್ಳು ಹೇಳಿದ ಶೆಟ್ಟಿಯ ಬಂಗಾರ, ಬೆಳ್ಳಿ ಮತ್ತು ರತ್ನಗಳೆಲ್ಲ ಕಲ್ಲು ಮಣ್ಣಾಗಿದ್ದವು. ಸುಳ್ಳು ಹೇಳಿದುದರ ಪಶ್ಚಾತ್ತಾಪವಾಗಿ ಮರಳಿ ಹಾಜೀಸಾಹೇಬರಲ್ಲಿ ಭಕ್ತಿ ಪೂರ್ವಕವಾಗಿ ಬೇಡಿಕೊಂಡಾಗ ಮಹಿಮೆಯಿಂದ ಮತ್ತೆ ಬೆಳ್ಳಿ ಬಂಗಾರವಾಗಿ ಅವರಿಗೆ ಗುಡಿ ಕಟ್ಟಿ, ಪ್ರತಿವರ್ಷ ಶೆಟ್ಟರು ಬಂದು ಹಾಜಿಸಾಹೇಬರ ಗುಡಿಗೆ ಬಂದು ಹೋಗುತ್ತಾರೆ.

ಶಿವಭಕ್ತಸಿರಿಯಾಳನ ಕಥೆಯ ಹಾಗೆ 'ಮಕ್ಕಿದಪಾಯಾ' ಗೀತೆಯಲ್ಲಿ ಮೆಕ್ಕಾದ ಪಾಯಾ ನಿಲ್ಲದೆ ಹೋದಾಗ ಜುಬ್ರಾಹಿಲ್ ಅರಸನು ತನ್ನ ಮಗನನ್ನೇ ಬಲಿ ಕೊಟ್ಟ ಪ್ರಸಂಗ. ದೇವರ ದಯದಿಂದ ಆತ ಮರುಜೀವ ಪಡೆದದ್ದು ಹಿಂದೂ ಮುಸ್ಲಿಂರಲ್ಲಿ ಒಂದೇ ತರಹ ದೇವರ ಮಹಿಮೆಗಳೆಲ್ಲ ಕಂಡುಬರುವುದು.

---

೧೦೩. ಅದೇ. ಪುಟ–೧೪೧.

[illegible]

[illegible]

[illegible]

[illegible]

[illegible]

"ಉಳಿದ ನನ್ನ ಆಯುಷ್ಯದಲ್ಲಿ

ಕೊಡುವೆನೋ ಅರ್ಧಪಾಲು"[೧೦೪]

'ಮಾಡತೀನಿ ಹೆಣ್ಣಿನ ಭಜನಿ' ಕಥನ ಕಾವ್ಯದಲ್ಲಿ ಸತಿ–ಪತಿ ಪ್ರೀತಿ ಎಂಥದ್ದು; ಇಂದಿನ ಯುಗದಲ್ಲಿ ಹೆಂಡತಿ ಸತ್ತು ವರ್ಷದಲ್ಲಿಯೇ ಮತ್ತೊಂದು ಮದುವೆಯಾಗಿ, ವರದಕ್ಷಿಣೆ ಪಡೆಯುವ ಗಂಡಂದಿರು ಇರುವಾಗ, ಈ ಜನಪದ ಕಾವ್ಯ ಪ್ರೇಮದ ಮಹಿಮೆಯನ್ನು ಸಾರುತ್ತದೆ. ಇಲ್ಲಿ ಪತಿ ತನ್ನ ಪತ್ನಿಯ ಸಲುವಾಗಿ ಹಗಲಿರುಳು ಅವಳ ಧ್ಯಾನದಲ್ಲಿಯೇ ಕುಳಿತಾಗ ದೇವರು ಪ್ರತ್ಯಕ್ಷನಾಗಿ ಅವನ ದುಃಖಕ್ಕೆ ಕಾರಣವನ್ನು ಕೇಳಿದನು. ಆಗ ಸತಿ ಸತ್ತಿದ್ದು, ಅವಳಿಗೆ 'ತನ್ನ ಜೀವದ ಅರ್ಧಪಾಲು' ಕೊಡುವುದಾಗಿ ಕೇಳಿಕೊಂಡನು. ಇಂಥ ಜನ ಸಿಗುವುದು ದುರ್ಲಭ.

ಭಾಗ ೪. ಹಿಂದೂ ಧರ್ಮದ ಪದಗಳು:

ಹಿಂದೂ ಧರ್ಮ ಎಂದಾಗ ಥಟ್ಟನೆ ನೆನಪಾಗುವುದು ಶಿವ, ಬ್ರಹ್ಮ, ವಿಷ್ಣು, ಮಹೇಶ್ವರ ರೂಪಗಳು. ಆ ದೇವರುಗಳ ಸ್ಮರಣೆ, ಮಹಿಮೆಯ ಜೊತೆಗೆ ರಾಷ್ಟ್ರೀಯ ನಾಯಕರುಗಳ ವ್ಯಕ್ತಿತ್ವ, ಹೋರಾಟ ಕಂಡುಬರುವುದು. 'ತೃಣಮಪಿ ನ ಚಲತಿ ತೇನ ವಿನಾ' ಎಂಬಂತೆ ಪರಮಾತ್ಮನ ದಯೆ ಇಲ್ಲದೆ ಒಂದು ಹುಲ್ಲು ಕಡ್ಡಿ ಅಲುಗದು ಎನ್ನುವುದನ್ನು ಮೊದಲ ಪದದಲ್ಲಿ ನೋಡುತ್ತೇವೆ.

"ಸರವ ಮಾತಿಗೆ ವರವನಾಗಾಂವ

ಅಣುರೇನದಟ್ಟ ಸಣ್ಣ ಇದ್ದಾನೋ ಭಗವಾನ

ಅವನ ಹೊರತ ಅಗಳಾಡುವುದಿಲ್ಲವೇನೇನಾ"[೧೦೫]

ಹೀಗೆ ಪರಮಾತ್ಮನ ಮಹಿಮೆಯನ್ನು ಸಾರಿ, 'ಪಾಂಡವರ ಲೀಲಾ' 'ಚಕ್ರಬಿಂಬದ ಕ್ವಾಟಿ' ಅಭಿಮನ್ಯು ಜನಿಸಿದ್ದು, ಕೀಚಕ ಸಂಹಾರ, ಅಭಿಮನ್ಯು ಹಾಗೂ ಅರ್ಜುನರಿಗೆ ದಿವ್ಯ ಅಸ್ತ್ರ ದೊರೆತದ್ದು, ಹೀಗೆ ಪೌರಾಣಿಕ ವಸ್ತುಗಳ ಹತ್ತು ಹಲವು ಕಥೆಗಳಿದ್ದು ವಿವರಣಾತ್ಮಕವಾಗಿ ಮೂಡಿಬಂದಿದೆ.

ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ಜಾಗೃತಿಗೊಂಡ ಭಾರತೀಯರು ಆಢಳಿತದಲ್ಲಿ ಸುಧಾರಣೆಗಳನ್ನು ತರುವಂತೆ ಸರಕಾರ ಒತ್ತಾಯಿಸಲು ೧೮೮೫ರಲ್ಲಿ ಕಾಂಗ್ರೆಸ್ ಸ್ಥಾಪಿಸಿ, ಸ್ವದೇಶಿ ಹಾಗೂ ಬಹಿಷ್ಕಾರ ಚಳುವಳಿ ಹುಟ್ಟು ಹಾಕುವ ಮೂಲಕ ರಾಷ್ಟ್ರೀಯ ಚಳುವಳಿಗೆ ನಾಂದಿಯಾಯಿತು. ಚಳುವಳಿಯ ನೇತೃತ್ವ ವಹಿಸಿಕೊಂಡ ಧುರೀಣರಾದ ಲೋಕಮಾನ್ಯ ಬಾಲಗಂಗಾಧರ ತಿಲಕ, ಸುಭಾಸ್‌ಚಂದ್ರ ಬೋಸ್, ಗಾಂಧೀಜಿ ಕುರಿತು ಹಲವಾರು ಜನರ ವ್ಯಕ್ತಿ ವಿಚಾರಗಳನ್ನು ಜನರಿಗೆ ತಿಳಿಸಿ ಆ ಚಳುವಳಿಯಲ್ಲಿ ಅವರೂ ಪಾಲ್ಗೊಳ್ಳುವಂತೆ ಕರೆ ಕೊಟ್ಟರು. ಗ್ರಾಮಾಂತರ ಪ್ರದೇಶಗಳಲ್ಲಿ ಜನರು ತಿಳಿಯಲು ಅಸಮರ್ಥರಾದುದರಿಂದ ರಾಷ್ಟ್ರೀಯ ಚಳುವಳಿಯಲ್ಲಿ ಆಸಕ್ತಿ ವಹಿಸಲಿಲ್ಲ.

---

೧೦೪. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ–೧೫೨.

೧೦೫. ಅದೇ. ಪುಟ–೧೫೩.

ಆಗ ಲಾವಣಿ, ರಿವಾಯತ್ ಪದಗಳು ಹಲವು ಬಗೆಯ ಜಾನಪದೀಯ ಲಯದಲ್ಲಿ ಜನರಿಗೆ ತಿಳಿಸಿದರು.

'ಟಿಳಕನ ಕಥೆ' ಪದದಲ್ಲಿ 'ಸ್ವರಾಜ್ಯ' ಬೇಡಿಕೆ ಒತ್ತಾಯಿಸಿ ಉಗ್ರ ಹೋರಾಟಕ್ಕಿಳಿದ ಟಿಳಕರನ್ನು ಸರಕಾರ ಬಂಧಿಸಿ (೧೯೦೮) ಆರು ವರ್ಷ ಮಂಡಾಲೆ ಜೈಲಿನಲ್ಲಿಟ್ಟಾಗ ಟಿಳಕರು 'ಗೀತಾ ರಹಸ್ಯ' ಬರೆದು ಕೀರ್ತಿಶೇಷರಾದ ಸಂಗತಿಯನ್ನು ವಿವರಿಸುವ ಮೂಲಕ ಅವರ ರಾಜಕೀಯ–ಧಾರ್ಮಿಕ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಸಿದ್ದಾರೆ.

"ದೇಶ ಕರ್ನಾಟಕದೊಳಗ ಟಿಳಕ ಹೇಳುವೆ ಜುಳಕ
ಇರುವದು ಪುಣೆ ಶಾರಾ ಪಿತೂರ ಮಾಡಿ ವೈದಾರ ಇಂಗ್ರೇಜರಾ
ಆಗ ವೈದಾರ ನೋಡ್ರಿ ಟಿಳಕನ್ನಾ ಮುಂಬೈಯಲ್ಲಿ ಜನ ಕಚೇರಿ ದರಬಾರ
ಅಲ್ಲಿ ಕೂಡ್ತೈತ್ರಿ ರಾಣಿ ಸರಕಾರ"[೧೦೬]

"ಗಾಂಧೀಜಿ ಕತ್ತಿ ಇಲ್ಲದೆ ಕರಬಲಾ ಮಾಡಿದವರು" ಶಿರ್ಷಿಕೆಯಂತೆ ಸತ್ಯ, ಅಹಿಂಸೆಗಳೆಂಬ ಆಯುಧಗಳನ್ನು ಹಿಡಿದು ಹೋರಾಟ ನಡೆಸಿದರು. ಅವರ ಜನ್ಮ, ತಂದೆ–ತಾಯಿ, ಗುರು ಹಾಗೂ ಹರಿಶ್ಚಂದ್ರ ನಾಟಕದ ಪ್ರಭಾವದಿಂದ ಸದಾ ಸತ್ಯ ಮಾತನಾಡಬೇಕೆಂಬ ಸಂಕಲ್ಪ, ಬ್ಯಾರಿಸ್ಟರ್ ಪದವಿ ಪಡೆಯುವದಕ್ಕಾಗಿ ಪರದೇಶಕ್ಕೆ ಹೊರಟಾಗ ಮದ್ಯ, ಮಾಂಸ, ಸಿಗರೇಟು, ಪರಸ್ತ್ರೀ ಮುಟ್ಟದಿರುವ ಬಗ್ಗೆ ಪ್ರಮಾಣ; ಪದವಿ ಪಡೆದು ಸ್ವದೇಶಕ್ಕೆ ಮರಳಿದಾಗ ವಕೀಲಿ ವೃತ್ತಿ ಆರಂಭ; ಕಕ್ಷಿದಾರನ ಖಟ್ಲೆ ಸಂಬಂಧ ದಕ್ಷಿಣ ಆಫ್ರಿಕೆಗೆ ಹೋದಾಗ ಅಲ್ಲಿನ ಸರಕಾರದ ವರ್ಣಭೇದ ನೀತಿಯಿಂದ ಭಾರತೀಯ ಮೂಲ ನಿವಾಸಿಗಳು ಅನುಭವಿಸುತ್ತಿದ್ದ ಕಷ್ಟಗಳನ್ನು ಪರಿಹರಿಸುವದಕ್ಕಾಗಿ ಗಾಂಧೀಜಿಯವರು ಪಣ ತೊಟ್ಟದ್ದನ್ನು ರಿವಾಯತ್ ಪದ ಮಾಡಿ ಹೇಳಿದ್ದಾರೆ.

"ದ್ಯಾಸ ಇಟ್ಟ ಕೇಳಿರಿ ದೈವಾ
ಕಾಸ ಮಾಡಿ ನಿಕುಲಾ
ಗಾಂಧೀಜಿಯವರ ಸರಿ ಯಾರಿಲ್ಲಾ
ಪೃಥ್ವಿಯ ಮೇಲಾ"[೧೦೭]

ಈ ರಚನೆಯಲ್ಲಿ ಮಹಾತ್ಮಾಜಿಯವರ ವ್ಯಕ್ತಿತ್ವ, ಸ್ವಾತಂತ್ರ್ಯ ಆಂದೋಲನ, ಅಸಹಕಾರ ಚಳುವಳಿ, ಸ್ವದೇಶಿ ಮಂತ್ರ, ರಕ್ತರಹಿತ ಕ್ರಾಂತಿ, ದೇಶ ವಿಮುಕ್ತಗೊಂಡ ಸಂಗತಿ, ಗಾಂಧೀಜಿ ಹುತಾತ್ಮರಾದ ಸಂಗತಿ ಮುಂತಾದವು ಇದರಲ್ಲಿ ಮಡುಗಟ್ಟಿವೆ. ಗಾಂಧೀಜಿಯವರ ಸಾವಿನೊಂದಿಗೆ ಮುಕ್ತಾಯವಾಗುವ ಈ ಹಾಡು ದುರಂತ ಗೀತೆಯಾಗಿ ಕರುಳು ಹಿಂಡುತ್ತದೆ. ಕನ್ನಡ ಶೋಕಗೀತೆಗಳಂತೆ ಓದುಗರನ್ನು ಆರ್ದ್ರಗೊಳಿಸುತ್ತದೆ. ಸಂಗ್ರಹಕಾರರ ಆಯ್ಕೆ ಇಲ್ಲಿ ವಿಶೇಷವಾಗಿ ಗಮನಿಸುವಂತಹುದು.

---

೧೦೬. ಹಳ್ಳಿ ಹಬ್ಬಿಸಿದ ಹೂಬಳ್ಳಿ ಪುಟ–೧೫೭.

೧೦೭. ಅದೇ. ಪುಟ–೨೦೯.

“ಕಾಳಗ ಮಾಡ್ಯಾಳೋ ಬಾಲಿ
ಕುರಿ ಹಿಂಡಿಗೆ ಹೊಕ್ಕಾಂಗ ಹುಲಿ
ಬಾಳ ಮಂದಿ ಶಿರಗೋಳ ಹರಿದಾಳೋ”[೧೦೮]

‘ಬೆಳವಡಿ ಮಲ್ಲಮ್ಮ’ಳ ಹೋರಾಟದ ಕಥೆ ಆರಂಭವಾಗುತ್ತದೆ. ಮರಾಠರ ಶಿವಾಜಿ ಸೈನಿಕರು ದಾಳಿ ಮಾಡಿದಾಗ ಧೈರ್ಯದಿಂದ ಹೋರಾಡಿದ ಪ್ರಸಂಗವಿದೆ. ಶಿವಾಜಿ ಮಹಾರಾಜ ಆಕೆಯ ಧೈರ್ಯವಂತಿಕೆಗೆ ಮೆಚ್ಚಿ ಎರಡು ಹಳ್ಳಿಯ ಉಂಬಳಿ ಕೊಟ್ಟದ್ದು ವಿವರವಿದೆ. ಈ ರೀತಿಯಾಗಿ ಗಾಂಧೀಜಿ, ಟಿಳಕ, ಮಲ್ಲಮ್ಮ, ಕಟ್ಟಿ ಚೆನ್ನಾ್ಯರ ಹೋರಾಟದ ಚಿತ್ರಣಗಳಿವೆ.

ದುರ್ವ್ಯಸನಗಳಿಗೆ ಬಲಿಯಾದವರು ಎಂಥ ಕೆಲಸವನ್ನೂ ಮಾಡಲು ಹೇಸಲಾರರು. ಕುಡಿತಕ್ಕೆ ಬಲಿಯಾದ ಇಬ್ಬರು ತಮ್ಮಂದಿರು, ತಮ್ಮ ಅಣ್ಣನ ಮಕ್ಕಳನ್ನು ಒಯ್ದು ಅವರ ಮೈಮೇಲಿದ್ದ ಆಭರಣಗಳನ್ನು ತೆಗೆದುಕೊಂಡು ತಮ್ಮ ಕುಡಿದತ ತೀಟೆಯನ್ನು ತೀರಿಸಿಕೊಂಡರಲ್ಲದೆ ಅಂಥ ಎಳೆ ಕಂದಮ್ಮಗಳನ್ನು ಕೊಂದುದನ್ನು ಓದಿದಾಗ, ಓದುಗನ ಕರುಳು ಕಿರಿಚಿಕೊಳ್ಳುತ್ತದೆ.

ಅಂಥ ದುರುಳರಿಗೆ ಫಾಸಿ ಶಿಕ್ಷೆ ಸರಕಾರ ಕೊಟ್ಟರೂ ಕೂಡ ಅಣ್ಣ, ತಮ್ಮಂದಿರ ಮೇಲಿನ ಮೋಹದಿಂದ ಬಿಡಿಸಿ ಶಿಕ್ಷೆಯಿಂದ ಮುಕ್ತಗೊಳಿಸುತ್ತಾನೆ.

“ಬ್ಯಾಡಂದ್ರ ಬಂದ್ರ್ಯೋ ತಮ್ಮಗೋಳರ್‍ಯಾ
ನನ್ನ ಬೆನ್ನ ಹತ್ತಿ ಅಣ್ಣಾ ಬರಬಾರದೇನೋ
ಕಾಕಾಗೋಳಿಗಿ ಕಕ್ಕಲಾತಿ ನಮ್ಮಪ್ಪನ
ತಮ್ಮಗೋಳ ಅಂತ ಬಂದೀವಿ ಬೆನ್ನಹತ್ತಿ”[೧೦೯]

ಬಾಲಕರೆಲ್ಲ ಪರಿಪರಿಯಾಗಿ ಬೇಡಿಕೊಂಡರೂ ಕರುಣೆ ಬಾರದೆ ಕತ್ತನ್ನು ತುಂಡರಿಸಿ ಅವರ ಮೈಮೇಲಿನ ‘ತೋಡೆ’ ‘ಸರಪಳಿ’ ‘ಮುತ್ತಿನ ಬಾವಲಿ’ ‘ಹರಳ ಹಚ್ಚಿದ ಉಂಗುರ’ ‘ಕಂಟೀಗೋಪ’ ಎಲ್ಲ ಆಭರಣಗಳನ್ನು ಉಚ್ಚಿಕೊಂಡು ತಮ್ಮಂದಿರು, ಮಕ್ಕಳನ್ನು ಕೊಂದರು. ತಮ್ಮ ಚಟವನ್ನು ತೀರಿಸಿಕೊಂಡ ಸತ್ಯಘಟನೆಯನ್ನು ‘ಮುದಗಾಂವಿ ದುರಂತ’ ಕವನದಲ್ಲಿ ಮುದಗಾಂವಿ ಊರಲ್ಲಿ ಆಗಿ ಹೋದ ಘಟನೆಯ ವಿವರವಿದೆ.

‘ಚಹಾದ ಮಹಿಮೆ’ ಒಂದು ವಿಶೇಷ ಪದ್ಯವಾಗಿದೆ. ಈ ಪದ್ಯ ರಚನೆಯಾದಾಗ ಚಹಾ ಕುಡಿಯುವುದೂ ಒಂದು ದುರಭ್ಯಾಸವಾಗಿತ್ತೆಂದು ಕಂಡು ಬರುತ್ತದೆ.

“ಬಂದ ಚ್ಯಾಪುಡಿ ಹಬ್ಬಿತೋ ಎಲ್ಲಾ ಕಡಿ
ಮೂರಮನಿ ಹಳ್ಳ್ಯಾಗ ಅಂಗಡಿ ಇಟ್ಟಾರಲ್ಲಾ
ತಿಂದಹಿಂಡಿಯ ಪುಡಿ ಕುಡುತಾರೋ ಚ್ಯಾಮಾಡಿ
ರಕ್ತವಡಿಸಿ ಮೈಯಾನ ಲಾಡಿ ಸೋತಾವಲ್ಲಾ”[೧೧೦]

೧೦೮. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ–೨೦೫.
೧೦೯. ಅದೇ, ಪುಟ–೧೯೧.
೧೧೦. ಅದೇ, ಪುಟ–೧೮೨.

[illegible]

ಕಲಿಯುಗದಲ್ಲಿ ಏನೇನೆಲ್ಲಾ ನಡೀತದೆ; ಚಹಾದ ಚಟ ಒಳ್ಳೆಯದಲ್ಲ ಆರೋಗ್ಯಕ್ಕೆ ಹಾನಿಕರವಾಗಿದ್ದು, ಮನುಷ್ಯನನ್ನು ಬಲಹೀನನ್ನಾಗಿ ಮಾಡಿ ಚಟಕ್ಕೆ ಹತ್ತಿ ಸಾಲಗಾರನಾಗಿ ಕಣ್ಣೀರು ಸುರಿಸುವ ಪರಿ ವಿವರಣೆಗೊಂಡಿದೆ. ದುಶ್ಚಟಗಳಿಗೆ ಬಲಿಯಾಗಬಾರದೆಂಬ ಪೂರ್ವನೀತಿ ಸತ್ವಭರಿತವಾದ ಮಾತನ್ನು ರಿವಾಯತ್ ಪದಗಳು ಹೇಳುವವು.

"ಒಣ ಬಿದರ ಮಣಸಂದೋ ಮಾವಗಷ್ಟಾ
ಮಾವ ಮಣಸಿದಾಗ ಮುರದ ಆತೋ ನಷ್ಟಾ"
ದೈವಕ ಕೈಮುಗದ ಹೇಳತೀವಪ್ಪ
ಒಣಬಿದರಿಗ್ಹೋಗಿ ಬೀಳಬ್ಯಾಡ್ರಿ ಗಂಟ"[೧೧೧]

ಹಾಕಿದ ಬ್ರಹ್ಮಗಂಟನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ; ಬಂದುದನ್ನು ಅನುಭವಿಸಬೇಕು; ಎಂಬ ನುಡಿ 'ಎಡವಟ್ಟ ಹೆಣ್ಣಾ'ದಲ್ಲಿದ್ದು, ಅಳಿಯ ಮಾವನ ಸಂಭಾಷಣೆ ಮೂಲಕ ಮೂಡಿದೆ. "ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗಲಾರದು" ಕಿರಿಯರಿದ್ದಾಗಲೇ ತಿದ್ದಿ, ಬುದ್ಧಿ ಹೇಳಬೇಕು ಎಂಬ ಸತ್ವವನ್ನು ಈ ಪದ್ಯದಲ್ಲಿ ಹೇಳುವುದು. 'ಮನವೆಂಬ ಮರ್ಕಟ'ದಲ್ಲಿ ಚಂಚಲ ಬುದ್ಧಿ ಮನುಷ್ಯನದು. ಅದನ್ನು ಹತೋಟಿಯಲ್ಲಿಟ್ಟುಕೊಂಡು ಕೆಲಸವನ್ನು ಮಾಡಬೇಕು. ಮನಸ್ಸು ನಮ್ಮ ಆಧೀನದಲ್ಲಿರಬೇಕೇ ಹೊರತು, ಮನಸ್ಸಿನ ಆಧೀನದಲ್ಲಿ ನಾವಿರಬಾರದು. ಚಂಚಲ ಬುದ್ಧಿಗೆ ಅಧಿಕಾರ ಕೊಟ್ಟರೆ ಮಂಗನಾಟ ಆಡೀತು, ಎಂಬ ಎಚ್ಚರಿಕೆಯ ಪದಗಳು ಇಲ್ಲಿವೆ.

"ಹಾದ್ದ ಬಿದ್ದಿತ್ರಿ ಬಂದ ಬ್ಯಾಡನ ಮ್ಯಾಲಾ
ಜೋಡಿಲೆ ಹ್ವಾದುವೋ ಎರಡು ಉಸಲಾ
ಕೊಲ್ಲುವವನಕ್ಕಿಂತ ಕಾಯುವ ಮೇಲಾ"[೧೧೨]

'ಕೊಲ್ಲಾವನಕ್ಕಿಂತ ಕಾಯಾಂವ ದೊಡ್ಡಾಂವ' ತುಂಬಾ ಸತ್ವಭರಿವಾಗಿ ನಿರೂಪಿತವಾಗಿದೆ. ಜೀವಿಸುವ ಹಕ್ಕು ಎಲ್ಲರಿಗೂ ಇದೆ. 'ನೀನೂ ಬಾಳು, ಇತರರನ್ನು ಬಾಳಲು ಬಿಡು' ಎಂಬ ಸಾರ್ವಕಾಲಿಕ ಮೌಲ್ಯವನ್ನು ತಿಳಿಸುತ್ತದೆ. ಇಲ್ಲಿ ಜೋಡಿ ಪಾರಿವಾಳ, ಹದ್ದು, ಬೇಡನ ಮೂಲಕ ಕಥಕಕಾವ್ಯವಾಗಿ ಹರಿದಿದೆ. 'ಬೇಡ' ತಾನೊಂದು ಬಗೆದರೆ ದೈವವೊಂದು ಬಗೆದಿತ್ತು.

"ಓಂ ನಾಂ ಅಕ್ಷರ ಇನ್ನಾ ಮಾಡುವೆ ನಿತ್ಯ ಧ್ಯಾನಾ
ಸಂಭಗ ಹುಟ್ಟಿತೋ ಕರುಣಾ ಮನಸಿನ ಕಲ್ಪನಾ
ಜಗಜ್ಯೋತಿಯ ವರಣಾ ಶಕ್ತಿಲಿಂದ ಆದಿತರಿ ಉತ್ಪನಾ ಕೇಳಿ ಸರುಜನಾ"[೧೧೩]

ಈ ಕಥೆಯನ್ನು ನೋಡಿದಾಗ ಕುವೆಂಪುರವರ ಮಹಾಕಾವ್ಯದ ಮುನ್ನುಡಿಯಾಗಿ ಬಂದ "ಶ್ರೀರಾಮಾಯಣ ದರ್ಶನಂ" ನುಡಿಗಳು ನೆನಪಿಗೆ ಬರುವವು.

---

೧೧೧. ಹಳ್ಳಿ ಹಬ್ಬಿಸಿದ ಹೂಬಳಿ. ಪುಟ-೭೬

೧೧೨. ಪರಿಸರ ಸಾಹಿತ್ಯ ಸಂಪದ. ಸಂ. ಡಾ. ಎಷ್. ವಾಯ್. ತಿಮ್ಮಾಪುರ. ಸ.ಜ. ನಾಗಲೋಟಿಮಠರ ಲೇಖನ. ಪುಟ-೮೧.

೧೧೩. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ-೧೬೪.

'ಓಂ' ಮತ್ತು 'ಓಂ ನಮಃ ಶಿವಾಯ' ಪದದ ಅರ್ಥ 'ಏಕ ಅಲ್ಲಾ ಹಜಾರ ನಾಮ'ದಲ್ಲಿ ಬಂದಿದೆ. ಭಾರತೀಯರ ಪ್ರಕಾರ ಜಗತ್ತಿನಲ್ಲಿ ಏನೂ ಇಲ್ಲದಾಗ, ಎಲ್ಲವೂ ಶೂನ್ಯವಾಗಿತ್ತು. ಶೂನ್ಯ ಅಂದರೆ 'ಏನೂ ಇಲ್ಲ' ಎಂದು ಒಂದು ಅರ್ಥವಾದರೆ, ಇನ್ನೊಂದು ಅರ್ಥ 'ಶಕ್ತಿ'. ಶೂನ್ಯ ಸಿಂಹಾಸನ ಎಂದರೆ ಶಕ್ತಿ ಸಿಂಹಾಸನ.

ಒಂದು ಸಲ ಶಕ್ತಿ ಸ್ಫೋಟಗೊಂಡಿತು. ಈ ಕ್ರಿಯೆಯನ್ನು ಭಾರತೀಯರು 'ಪ್ರಣವ' ಎಂದು ಕರೆದರು. ಪ್ರಣವದುತ್ಪತ್ತಿ ನಡೆದಾಗ ಭೀಕರ ಶಬ್ದವೊಂದು ಹುಟ್ಟಿತು. ಈ ಪ್ರಸಂಗವನ್ನು ಪಾಶ್ಚಿಮಾತ್ಯರು 'ಬಿಗ್‌ಬ್ಯಾಂಗ' (Bigbang) ಎಂದು ಹೇಳಿದರು. ಭಾರತೀಯರು ಈ ಶಬ್ದವನ್ನು 'ಓಂ' ಎಂದು ಕರೆದರು. ಪಾಶ್ಚಿಮಾತ್ಯರು ಬಿಗ್‌ಬ್ಯಾಂಗ ನಂತರ ಜಗತ್ತು ಹುಟ್ಟಿತು ಎಂದರೆ ಭಾರತೀಯರು 'ಓಂ'ಕಾರದಿಂದ ಪಂಚಮಹಾಭೂತಗಳು ಹುಟ್ಟಿದವು ಎನ್ನುವರು."[೧೧೪] ಎಂಬ ನಂಬಿಕೆ ಎಲ್ಲರಲ್ಲಿಯೂ ಇದೆ. ಜೊತೆಗೆ 'ಓಂ'ಕಾರದಿಂದ ಧ್ವನಿ ಹೊರಟಾಗ ಶಾರೀರಿಕ ಮತ್ತು ಮಾನಸಿಕವಾಗಿ ಆರೋಗ್ಯವನ್ನು ಉತ್ತಮಗೊಳಿಸುವುದು.

"ಮುಸಲ್ಮಾನ ಬ್ರಾಹ್ಮಣ ಶಿವಭಗತಂದು
ನ್ಯಾಯ ಕೇಳಿರಿನ್ನಾ
ನ್ಯಾಯ ಕೇಳಿರಿನ್ನಾ ನರಜಾತಿದು
ಒಬ್ಬರಿಗೊಬ್ಬರು ನಿಂದಾ ಆಡಿ
ಆದಾರೋ ಅಪಮಾನಾ"[೧೧೫]

'ಮಾನವ ಜಾತಿ ಒಂದೇ' ಸಾರ್ವಕಾಲಿಕ ಸತ್ಯವನ್ನು ಕಟ್ಟಿಕೊಟ್ಟಿದೆ. 'ದೇವನೊಬ್ಬ ನಾಮ ಹಲವು' ಎಂಬ ಮಾತಿನೊಂದಿಗೆ ಒಬ್ಬರಿಗೊಬ್ಬರ ನಿಂದೆ ಒಳಿತಲ್ಲ ನಾ ಶ್ರೇಷ್ಠ ಎಂದು ಹೇಳಿಕೊಂಡು ಬಡಿದಾಡುವ ಜನರಿಗೆ ತಿಳುವಳಿಕೆಯ ನುಡಿಗಳಿವು.

'ಬಡವನಿಗೆ ಒಲಿದು ಬಂದ ಭಾಗೀರಥಿ'ಯಲ್ಲಿ ಕಷ್ಟ ಪಟ್ಟವನಿಗೆ ಸುಖ ದೊರಕಿಯೇ ದೊರಕುವುದು. ನಮ್ಮ ಭಾವ ಶುದ್ಧವಾಗಿದ್ದರೆ ಭಾಗ್ಯದ ಬಾಗಿಲು ತಾನೇ ತಾನಾಗಿ ತೆರೆಯುತ್ತದೆ ಎಂಬುದು ನಮ್ಮ ಜಾನಪದರ ನಂಬಿಗೆಯಾಗಿದೆ. ಅದನ್ನೇ ಈ ರಚನೆಯಲ್ಲಿ ಸಾಂದ್ರವಾಗಿ ಕಟ್ಟಿಕೊಟ್ಟಿದ್ದಾರೆ.

ರಿವಾಯತ್‌ದಲ್ಲಿ ಮೂಡಿಬಂದ ಎಲ್ಲ ಪದಗಳಲ್ಲಿ ತುಂಬಾ ಮಾರ್ಮಿಕವಾಗಿ ಎಳೆಎಳೆಯಾಗಿ ಬಿಚ್ಚಿಕೊಂಡ ಒಂದು ಮಹತ್ವದ ಗೀತೆ 'ಕಲಿಕಾಲ'. ಕಲಿಯುಗದಲ್ಲಿ ಏನೇನಾಗುವುದೋ ಅದನ್ನು ತೊಳೆತೊಳೆಯಾಗಿ ಬಿಚ್ಚಿ ಕಥೆಮಾಡಿ ವಿವರಿಸುತ್ತದೆ.

"ಕಲಿಗಂಜಿ ಧರ್ಮ ಹ್ವಾದೋ ಅವಸರದಿಂದಾ
ಕಲಿಬಂತ ಅವನ ಹಿಂದಿಂದ"

---

೧೧೪. ಹಳ್ಳಿ ಹಬ್ಬಿಸಿದ ಹೂಬಳ್ಳಿ. ಪುಟ–೧೪೦.

೧೧೫. ಅದೇ, ಪುಟ–೧೭೪.

"ಕಲಿಯುಗದೊಳಗ ಖರೆ ಮನಶ್ಯಾನ ಅಲ್ಲ ಬಂದಾ
ಸುಳ್ಳ ಮಾತನಾಡುವವನ ಸಂಸಾರ ಚೆಂದಾ"[೧೧೬]

ಕಲಿಯುಗದಲ್ಲಿ ಆಗುವಂತಹ ಅನಾಹುತಗಳನ್ನು ಈ ಕಥೆಯಲ್ಲಿ ಸವಿಸ್ತಾರವಾಗಿ ಮೂಡಿದ್ದು, ಧರ್ಮ ಬಿಟ್ಟು ಅಡ್ಡದಾರಿ ಹಿಡಿಯುವ ಜನ ಈ ಕಲಿಕಾಲದಲ್ಲಿರುವುದನ್ನು ಚಿತ್ರಿಸಿದ್ದಾರೆ.

ಮೊಹರಂ ಪದಗಳಲ್ಲಿ ಕಥೆಗೆ ಸಂಬಂಧಿಸಿದ ಮುಖ್ಯ ಹಾಡುಗಳಿದ್ದು, ಅವುಗಳ ಜೊತೆಜೊತೆಗೆ ಇಸ್ಲಾಂ ಧರ್ಮದ ಮಹಾಪುರುಷರ ಜೀವನ ಮೌಲ್ಯಗಳ ಸುತ್ತಲೂ ಹೆಣೆದಿರುವ ಪವಾಡದ ಕಥೆಗಳು ಕೂಡ ಕಂಡುಬರುತ್ತವೆ. ಇಸ್ಲಾಂ ಕಥೆಗಳ ಮೇಲೆ ಹಿಂದೂ ಧರ್ಮದ ಕಥೆಗಳ ಪ್ರಭಾವ ಆಗಿರುವುದು ಕಂಡುಬರುವುದು.

'ಬೀಬಿ ಪಾತಿಮಾಳ ಭಕ್ತಿ ಪರೀಕ್ಷೆ' 'ಬಿಸಿಮಿಲ್ಲಾ' ಪದಗಳಲ್ಲಿ ಬಂದ ಕಥೆಗಳು 'ಶಿವಭಕ್ತಸಿರಿಯಾಳ' ಕಥೆಯನ್ನು ಹೋಲುತ್ತವೆ. 'ಮುವಲಾನ ಗರ್ವಭಂಗ'ಕ್ಕೂ 'ಭೀಮನ ಗರ್ವಭಂಗ'ಕ್ಕೂ ನಂಟು ಇರುವ ರೀತಿಯಲ್ಲಿಯೇ 'ಬಲಿಚಕ್ರನ ಸಂಹಾರ' ತೀರಾ ಹತ್ತಿರದ ಸಂಬಂಧ ಕಂಡು ಬರುತ್ತದೆ. ಇಷ್ಟಲ್ಲದೆ ಇಸ್ಲಾಂ ಪರಿಭಾಷೆಗೆ ಯಾವುದೇ ಸಂಬಂಧ ಇಟ್ಟುಕೊಳ್ಳದೆ ಹಾಡಲ್ಪಡುವ ಮೊಹರಂ ಪದಗಳೂ ಕೂಡ ಇವೆ. 'ಪತಿವೃತ ಧರ್ಮ' 'ಶಿವನೇ ಬಸವಾ ಬಸವಾನೇ ಶಿವಾ' ಮುಂತಾದವುಗಳನ್ನು ಇಲ್ಲಿ ಪ್ರಸ್ಥಾಪಿಸಬಹುದು.

ಮೂಲತಃ ಇಸ್ಲಾಂ ಸಂಸ್ಕೃತಿಯಿಂದ ಮೂಡಿ ಬಂದ ಪದಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವವು ಎದ್ದು ಕಾಣುತ್ತದೆ. ವೀರಶೈವ ಪರಿಭಾಷೆಯ ಹರ, ಶರಣ, ಮಾದೇವ, ಶಿವ ಮುಂತಾದ ಪದಗಳು ಇಲ್ಲಿ ಹೇರಳವಾಗಿ ಬಳಕೆಯಾಗಿವೆ. ಧರ್ಮ ಸಾಮರಸ್ಯದ ನೆಲೆಗಳನ್ನು ಇದರಲ್ಲಿ ಗುರುತಿಸಬಹುದು.

೩.೨. ಗದ್ಯ ಸಾಹಿತ್ಯ.

೩.೨.೧. ಬೆಳವಲ ಬೆಳಕು:

ಖಾಡೆಯವರ ೨೩ ಜಾನಪದ ಕಥೆಗಳ ಸಂಕಲನ ಇದಾಗಿದ್ದು, ೧೪೫ ಪುಟಗಳಲ್ಲಿ ವಿಸ್ತಾರವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಈ ಕೃತಿಯ ಪ್ರಕಾಶಕರು. ಕರ್ನಾಟಕ ರಾಜ್ಯೋತ್ಸವದ ರಜತೋತ್ಸವದ ಅಂಗವಾಗಿ 'ಬೆಳ್ಳಿ ಬಿಟ್ಟ ಬಳ್ಳಿ' ಎಂಬ ಹೆಸರಿನ ಒಂದು ಹೊಸ ಪ್ರಕಟಣಾ ಮಾಲೆಯನ್ನು ಹೊರತಂದಿತು. ಈ ಮಾಲೆಯಲ್ಲಿ ಸಂಶೋಧನೆ, ವಿಮರ್ಶೆ, ಮಹಾಪ್ರಬಂಧ ಮೊದಲಾದವನ್ನು ಪ್ರಕಟಿಸಲಾಗಿತ್ತು. ಇದೆ ಮಾಲೆಯಲ್ಲಿ "ಬೆಳವಲ ಬೆಳಕು" ಪ್ರಕಟವಾಗಿದ್ದು, ಜಿ.ಬಿ. ಖಾಡೆಯವರು ನೀಡಿದ್ದಾರೆ. ಗದ್ಯ ಸಾಹಿತ್ಯದಲ್ಲಿ ಅಜ್ಜಿ ಹೇಳಿದ ಕಥೆಗಳು, ಪ್ರಾಣಿ ಕಥೆಗಳು ಮತ್ತು ಒಗಟು, ಒಡಪು, ಗಾದೆ ಮೊದಲಾದವುಗಳು ಬರುತ್ತವೆ. ಜನಪದ ಕಥೆಗಳಲ್ಲಿ ಗೊಂದಲಿಗರು, ಕೀರ್ತನಕಾರರು, ಕಂಸಾಳೆಯವರು ಹೇಳುವ ಕಥೆಗಳು ಮತ್ತು ಕುರುಬ ಸಮಾಜದವರು ಜಾತ್ರೆ

---

೧೧೬. ಹಳ್ಳಿ ಹಬ್ಬಿಸಿದ ಹೂಬಳ್ಳಿ, ಪುಟ–೧೪೦.

[illegible]

ಉತ್ಸವಗಳಲ್ಲಿ ಡೊಳ್ಳಿನ ಮೇಳದೊಡನೆ ಬಂದು ಡೊಳ್ಳು ಬಾರಿಸಿ ದಣಿವಾರಿಸಿಕೊಳ್ಳುವಾಗ; ಜಾತ್ರೆಯಲ್ಲಿ ಕೂಡಿದ ಜನಸಂದನಿಯಲ್ಲಿ 'ಕಥೆ' ಹೇಳುತ್ತಾರೆ. ಪ್ರಸ್ತುತ ಈ ಕೃತಿಯಲ್ಲಿ ಬಿಜಾಪುರ ಜಿಲ್ಲೆಯ ಡೊಳ್ಳಿನ ಮೇಳದವರಿಂದ ಸಂಗ್ರಹಿಸಿದ ಕಥೆಗಳಿವೆ.

ಹಳ್ಳಿ ಹಳ್ಳಿಗಳಲ್ಲಿ ಕುರುಬ ಸಮಾಜದವರು ಹೆಗಲಿಗೆ ಡೊಳ್ಳು ಹಾಕಿಕೊಂಡು ಹಳ್ಳಿಗಳಲ್ಲಿ ಜರುಗುವ ಜಾತ್ರೆ ಉತ್ಸವಗಳಲ್ಲಿ ಭಾಗವಹಿಸಿ ಹಾಡು ಹಾಡಿ ಕಥೆ ಹೇಳುವ ಪರಿಪಾಠ ಇಟ್ಟುಕೊಂಡಿದ್ದಾರೆ. ಖಾಡೆಯವರು ಗ್ರಾಮಗಳಲ್ಲಿ ಜರುಗುವ ಅಮೋಘಸಿದ್ಧ, ಬೀರದೇವರು, ಸಿದ್ಧರಾಮೇಶ್ವರ ದೇವರು, ಕರಿಸಿದ್ಧ, ಬಿಳಿಸಿದ್ಧ ಹೀಗೆ ದೇವರುಗಳ ಹೆಸರಿನಲ್ಲಿ ಜರಗುವ ಜಾತ್ರೆ ಉತ್ಸವಗಳು ನಡೆಯುವ ಹಳ್ಳಿಗಳಿಗೆ ಹೋಗಿ ಕಥೆ ಹೇಳುವಾಗ ಕೇಳಿಕೊಂಡು ಸಂಗ್ರಹಿಸಿದ್ದಾರೆ. ಕೆಲವೊಂದು ಕಥೆಗಳನ್ನು ಹಲವು ವ್ಯಕ್ತಿಗಳನ್ನು ಸಂಪರ್ಕಿಸಿ ಕೇಳಿ ದಾಖಲಿಸಿದ್ದಾರೆ. ಜಾನಪದ ಕಥೆಗಳಲ್ಲೆಲ್ಲ ಶುದ್ಧ ಜನಪದ ನಿರೂಪಕನ ತಾಜಾ ಭಾಷಾಶೈಲಿಯನ್ನು ಜನಪದರಂತೆ ಶಿಷ್ಟ ಸಾಹಿತಿ ಬಳಸುವುದು ಸಾಧ್ಯವಿಲ್ಲ. ಆದ್ದರಿಂದಲೇ ಜನಪದ ನಿರೂಪಕನ ಭಾಷಾಪ್ರಯೋಗ, ನಿರೂಪಣಾಕ್ರಮ, ಆಶಯಗಳಿಗೆ ನಾವು ಹೆಚ್ಚು ನಿಗಾ ಕೊಡಬೇಕಾಗಿದೆ. ಜನಪದ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸುವಾಗ ಜಾನಪದದ ಮುಖ್ಯ ಧೋರಣೆಗಳನ್ನು ಮರೆತರೆ ಅಥವಾ ಉದ್ದೇಶಪೂರ್ವಕವಾಗಿ ಕೈಬಿಟ್ಟರೆ ಅಂತಹ ಸಂಗ್ರಾಹಕ ಅಷ್ಟಷ್ಟು ಸೋತನೆಂದೇ ನನ್ನ ಅಭಿಪ್ರಾಯ. ಅಂದರೆ ನಿರೂಪಕನ ಆಡು ಭಾಷೆಯಲ್ಲೇ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸುವುದು ಒಳ್ಳೆಯದು"[೧೧೭] ಈ ಕಾರ್ಯವನ್ನು ಖಾಡೆಯವರು ಸಮರ್ಥವಾಗಿ ಮಾಡಿದ್ದಾರೆ.

ಜಾನಪದ ಕಥೆಗಳಲ್ಲಿ ಕಾಲ ಕಾಲದ ನಂಬಿಕೆಗಳು, ಧಾರ್ಮಿಕ, ಸಾಮಾಜಿಕ ಮೌಲ್ಯಗಳು, ಪರಂಪರೆಯಲ್ಲಿನ ವಿವಿಧ ಪದ್ಧತಿಗಳು ಈ ಕಥೆಗಳ ಹೊಟ್ಟೆಯಲ್ಲಿ ತುಂಬಿಕೊಂಡಿರುತ್ತವೆ. ಇಲ್ಲಿ ಮನರಂಜನೆ ಮತ್ತು ನೀತಿಬೋಧೆ ಕಂಡು ಬಂದರೂ, ಆಳದಲ್ಲಿ ಅನ್ಯಾಯದ ವಿರುದ್ಧದ ಪ್ರತಿಭಟನೆಯ ಸಣ್ಣ ಎಳೆಗಳಿವೆ. ಅದನ್ನು ಮೀರಿ ಮೌಢ್ಯವನ್ನು ಸದಾ ರಕ್ಷಿಸಿ, ಹೊತ್ತು ತರುತ್ತಿರುವ ಕುರುಡ ನಿಷ್ಠೆ ಕೂಡ ಇದೆ. ಎಲ್ಲಕ್ಕೂ ಹೆಚ್ಚಾಗಿ ಎಲ್ಲೆ ಕಾಣದ ನಿರಾಶೆಯ ನಡುವೆ ಬೇರೆ ಕಡೆಗೆ ಮುಖವನ್ನು ಹುದುಗಿಸಿ, ಸುಖದ ದಿನಗಳನ್ನು ಕಲ್ಪಿಸಿಕೊಂಡು ನೆಮ್ಮದಿ ತಂದುಕೊಳ್ಳುವ ಕನಸುಗಾರಿಕೆ ಕಾಣುತ್ತದೆ. ಸರಳವಾಗಿರುವುದು ಜನಪದ ಕಥೆಯ ಮುಖ್ಯ ಲಕ್ಷಣ.

ಜನಪದ ಕಥೆಯನ್ನು ಯಾರು, ಎಲ್ಲಿಬೇಕಾದರೂ, ಯಾವಾಗ ಅಂದರೆ ಆಗ ಹೇಳಬಹುದು. ಆ ಕಥೆಗಳನ್ನು ಬಹುತೇಕ ಎಲ್ಲ ವರ್ಗದವರೂ ಹೇಳುತ್ತಾರೆ. ಚಾವಡಿಕಟ್ಟೆ, ಹೊಲ, ಹಗಲು, ರಾತ್ರಿ ಎಂಬ ಬೇಧವಿಲ್ಲದೆ ಅವುಗಳನ್ನು ಹೇಳುತ್ತಾರೆ. ಜನ ಕೇಳಿ ಸಂತೋಷಪಡುತ್ತಾರೆ. ರಾಜ, ರಾಣಿ, ದೇವತೆಗಳು, ದೆವ್ವಗಳು, ಮನುಷ್ಯರು, ಪ್ರಾಣಿಪಕ್ಷಿಗಳು ಮುಂತಾದವು ಇಲ್ಲಿ ಪಾತ್ರಧಾರಿಗಳಾಗಿ ಕಾಣಿಸಿಕೊಳ್ಳುತ್ತಾರೆ. "ಒಂದು ಊರಿನಲ್ಲಿ ಒಬ್ಬ ರಾಜಾ ಇದ್ದ......." ಈ ಧಾಟಿಯಲ್ಲಿ ಆರಂಭವಾದ ಕಥೆ ರಾಜಕುಮಾರ ರಾಜಕುಮಾರಿಯನ್ನು ಮದುವೆ ಮಾಡಿಕೊಂಡು

೧೧೭. ಜನಪದ ಕಥಾಸಂಗಮ, ಪುಟ-೭

ಅಲ್ಲಿ ಸುಖವಾಗಿದ್ದ. ನೀವು ಇಲ್ಲಿ ಸುಖವಾಗಿದ್ದೀರಿ" ಎಂಬ ವಾಕ್ಯದೊಡನೆ ಮುಕ್ತಾಯವಾಗುತ್ತದೆ. ಇನ್ನೊಂದು ಬಗೆಯೆಂದರೆ "ಹೀಂಗ ಒಂದು ಊರಿತ್ತು, ಆ ಊರಾಗ ಒಬ್ಬ ರಾಜಾ ಇದ್ದ" ಎಂದೇ ಜನಪದ ಕಥೆಗಳು (Folk Tales) ಪ್ರಾರಂಭವಾಗುತ್ತವೆ. ದೇಶಿ ಸಾಹಿತ್ಯ ಕೃತಿಗಳಾದ ವಡ್ಡಾರಾಧನೆ, ಪಂಚತಂತ್ರದ ಕಥೆಗಳು ಕೂಡ ಪ್ರಾರಂಭವಾಗುವದೂ ಒಂದು ದೇಶ, ಒಬ್ಬ ರಾಜನಿಂದಲೇ. "Once there was a king in a village" ಎಂದೇ ಪಾಶ್ಚಾತ್ಯ ಜನಪದ ಕಥೆಗಳೂ ಮೊದಲಾಗುತ್ತವೆ. ಹೀಗೆ ಒಂದು ಊರು, ಒಬ್ಬ ರಾಜನಿಂದ ಕಥೆಗಳು ಪ್ರಾರಂಭವಾಗುವುದು ಜಗತ್ತಿನ ಜಾನಪದ ಕಥೆಗಳ ಸಾರ್ವತ್ರಿಕ ಲಕ್ಷಣವಾಗಿದೆ. ಕಥೆ ಪ್ರಾರಂಭಿಸುವಲ್ಲಿ ಎಲ್ಲ ಜಾನಪದರು ಈ ರೀತಿ ಒಂದೇ ವಿಧದ ತಂತ್ರವನ್ನು ಅನುಸರಿಸುವುದು ಆಶ್ಚರ್ಯದ ಮತ್ತು ಕುತೂಹಲದ ವಿಷಯವಾಗಿದೆ.

"ಕತೆ ಚಾರಿತ್ರಿಕವೇ ಇರಲಿ, ಕಾಲ್ಪನಿಕವೇ ಇರಲಿ, ಘಟನೆ ಅದರ ಮುಖ್ಯ ಲಕ್ಷಣ. ಕತೆಯೆನ್ನುವುದೇ ಒಂದು ಘಟನೆ ಅಥವಾ ಘಟನಾವಳಿ. ಘಟನೆಯೆಂಬುದು ಸ್ಥಳ ಮತ್ತು ಕಾಲಗಳಿಂದ ಬದ್ಧವಾಗಿರುತ್ತದೆ; ಸ್ಥಳ ಮತ್ತು ಕಾಲ (Space and Time) ಇವೆರಡೂ ಛೇದಿಸುವಲ್ಲಿ ಘಟನೆ ಸಂಭವಿಸುತ್ತದೆ. ಆದುದರಿಂದ ಘಟನಾರೂಪದ ಕತೆಯನ್ನು ಬಿಚ್ಚುವುದಕ್ಕೋಸ್ಕರ ಜನಪದರು 'ಸ್ಥಳ' ಸೂಚನೆಗಾಗಿ "ಹೀಂಗ ಒಂದು ಊರು ಇತ್ತು" ಎಂಬ, 'ಕಾಲ' ಸೂಚನೆಗಾಗಿ "ಆ ಊರಾಗ ಒಬ್ಬ ರಾಜಾ ಇದ್ದ" ಎಂಬ ವಾಕ್ಯವನ್ನು ಬಳಸುವಂತಿದೆ"[೧೧೮] ಎಂಬುದನ್ನಿಲ್ಲಿ ಗಮನಿಸಬೇಕಾಗುವುದು.

ಜನಪದ ಕತೆಗಳ ಮನರಂಜನೆಯೇ ಮೌಲ್ಯ; ಅವುಗಳಿಗೆ ಯಾವುದೇ ಬದಲಾವಣೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಒದಗಿಸಿಕೊಡುತ್ತದೆ. ಕತೆ ಹೇಳುವ ವ್ಯಕ್ತಿ ಯಾವುದೇ ಹೆಸರು ಬಳಸಬಹುದು, ಬಳಸದಿರಬಹುದು; ಮಧ್ಯದ ಯಾವುದೇ ಘಟನೆಯನ್ನು ಬಿಡಬಹುದು; ಒಂದು ಕತೆಯ ಭಾಗವನ್ನು ಕೊಂಡೊಯ್ದು ಇನ್ನೊಂದು ಕತೆಗೆ ಕಸಿಮಾಡಿ ಸೇರಿಸಬಹುದು. ಈ ನಮ್ಯಗುಣ (Flexibility) ಜಾನಪದದ ಪ್ರಧಾನ ಲಕ್ಷಣವಾಗಿದೆ. ಮತ್ತು ಇದು ಜನದ ಕತೆಗಳಲ್ಲಿ ವರಿಷ್ಠ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತದೆ. "ಜನಪದ ಕತೆಗಳು ನಿಜವೇ ಎಂಬ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಅವೆಲ್ಲ ಕಲ್ಪಿತವೆಂದೇ ಜನರ ಭಾವನೆ ಅವು ನೂರಕ್ಕೆ ನೂರರಷ್ಟು ಲೌಕಿಕ (Secular).[೧೧೯] ಅವುಗಳಲ್ಲಿಯೂ ಜನರ ನೀತಿ ಶ್ರದ್ಧೆಯನ್ನು ಮತ್ತು ಮೌಲ್ಯ ಪ್ರಜ್ಞೆಯನ್ನು ಬೆಳೆಸುವಂತಹ ಕತೆಗಳೂ ಇರುತ್ತವೆ. ಸತ್ಯ, ಔದಾರ್ಯ, ವಿಶ್ವಾಸ, ಸ್ನೇಹ, ಪ್ರಾಮಾಣಿಕತೆ, ಶೌರ್ಯ, ಧೈವಭಕ್ತಿ, ವಿಷ್ಣಾಪಟ್ಯ, ಒಗ್ಗಟ್ಟು, ಬಂಧುಪ್ರೇಮ ಇವೇ ಮೊದಲಾದ ಉದಾತ್ತ ಮೌಲ್ಯಗಳನ್ನು ಅವು ಸಾಮಾನ್ಯವಾಗಿ ಪ್ರತಿಪಾದಿಸುತ್ತವೆ. ಉಜ್ವಲೀಕರಿಸುತ್ತವೆ. ಖಾಡೆಯವರ ಕತೆಗಳಲ್ಲೆಲ್ಲ ಈ ಮೌಲ್ಯಗಳು ಮೂಡಿ ಬಂದಿವೆ. ಅದಕ್ಕಾಗಿ ಖಾಡೆಯವರು ಕತೆ ಹೇಳುವ ಶೈಲಿ, ನಿರೂಪಿಸಿದ ಸಾಹಿತ್ಯವನ್ನು

---

೧೧೮. ಮಾರ್ಗ–೩. ಡಾ. ಎಂ. ಎಂ. ಕಲಬುರ್ಗಿ. ಪುಟ–೧೭೯.

೧೧೯. ಜನ–ಜನಪದ–ಜಾನಪದ. ಎಂ. ಚಿದಾನಂದಮೂರ್ತಿ. ಪುಟ–೬೫.

[illegible]

"ಜಾನಪದ ಜಟ್ಟಿ. ವಿಚಾರ ತುಂಬಿದ ಮಟ್ಟಿ
ಬರಹ ಮಾಡಲಿಲ್ಲ ಖೊಟ್ಟಿ
ಖಾಡೆಯುವರ ಕಥೆಗಳು ಎಲ್ಲರಿಗೂ ಸೀಪರಮಟ್ಟಿ"[೧೨೦]

ನಿರರ್ಗಳವಾಗಿ ಓದಿಸಿಕೊಂಡು ಹೋಗುತ್ತದೆ. "ತೆರಿಬೆರಿ ಸತ್ತಾಂವಾ" ಎಂಬುದರಲ್ಲಿ ತೆರಿಬೆರಿ ಎಂದರೆ "ಅರ್ಧಮರ್ಧ ಸತ್ತಾಂವಾ" ಎಂಥರ್ಥ.

ಕಥೆಯಲ್ಲಿ ಜಗತ್ತಿನಲ್ಲಿ ಸಂಸಾರ ಕ್ಷಣಿಕವಾದುದು. ಸ್ಥಿರವಾದುದಲ್ಲ. ಸತ್ತಾಗ ನಮ್ಮ ಜೊತೆಗೆ ಯಾರೂ ಬರಲಾರರು. 'ಬರುವಾಗ ಬೆತ್ತಲೆ, ಹೋಗುವಾಗ ಬೆತ್ತಲೆ' ಎಂದು ದಾಸರ ಪದದ ಹಾಗೆ; ಕಲ್ಲಣ್ಣ ಊರ ಮಂದಿ ಜೊತೆಗೆ ಜಿದ್ದು ಕಟ್ಟಿ ಅರ್ಧಮರ್ಧ ಸತ್ತು, ಮಣ್ಣು ಮಾಡುವಾಗ ಹೆಂಡತಿ ಬರದೇ ಹೋಗುತ್ತಾಳೆ. ಅವ್ವ ಮತ್ತು ಹೆಂಡತಿ ಹಣ ಮತ್ತು ಅನ್ನಕ್ಕಾಗಿ ಹಾತೊರೆಯುವ ಸ್ಥಿತಿಯನ್ನು ಕಾಣುತ್ತಾನೆ. ಸಂಸಾರ ನಿಸ್ಸಾರವಾದುದು. ಯಾವುದೂ ಶಾಶ್ವತವಲ್ಲ ಎಂಬುದನ್ನು ತಿಳಿಸುತ್ತದೆ. ಇದ್ದಾಗ ನಾಲ್ಕು ಜನರಿಗೆ ಸಹಾಯ ಉಪಕಾರದ ಕೆಲಸಗಳನ್ನು ಮಾಡಬೇಕೆನ್ನುವ ಪಾಠವನ್ನು ಹೇಳುವುದು.

"ಶೆಟ್ಟ್ಯಾನ ಮದುವೆ" ಪ್ರಸಂಗದಲ್ಲಿ 'ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು' ಗಾದೆಯಂತೆ; ನಮ್ಮ ಅಂತಸ್ತಿಗೆ ತಕ್ಕ ಹಾಗೆ ಮದುವೆ ಆಗಬೇಕು. ಅದು ಬಿಟ್ಟು ಕೈಗೆಟುಕದ ಗಗನ ಕುಸುಮಕ್ಕೆ ಕೈ ಹಾಕಿದರೆ, ಅದರ ದುಷ್ಪರಿಣಾಮವನ್ನು ನಾವೇ ಉಣಬೇಕಾಗುವುದೆಂಬ ನುಡಿಯು ಬಹು ಸ್ವಾರಸ್ಯಕರವಾಗಿ ಮೂಡಿಬಂದಿದೆ.

"ದಾಸಯ್ಯನ ದ್ವಾಸಿ" ಪ್ರಾಸಬದ್ಧವಾದ ಶೀರ್ಷಿಕೆಯಿರುವ ಈ ಕತೆಯಲ್ಲಿ ಕೆಂಚವ್ವನ ವ್ಯಭಿಚಾರಿತನ, ಆಕೆ ದಾಸಯ್ಯನಿಗೆ ಮಾಡಿದ ಮೋಸದಿಂದ, ದಾಸಯ್ಯ ಕೂಡ ಶಾನುಭೋಗರ ಹೆಂಡತಿಯ ಸಹಾಯದಿಂದ ಮುಯ್ಯಿಗೆ ಮುಯ್ಯಿ ತೀರಿಸಿಕೊಂಡನು. 'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಕ್ರಮ' ಇಲ್ಲಿದೆ. ದಾಸಯ್ಯ ಶ್ಯಾನುಭೋಗರ ವೇಷ ತೊಟ್ಟು ದೋಸೆ ತಿನ್ನುವ ತನ್ನಾಸೆಯನ್ನು ತೀರಿಸಿಕೊಂಡನು. ಅಷ್ಟೇ ಸಾಲದೆಂಬಂತೆ ಮೇಲೊಂದು ತೊಲಿವಾಲಿ ತೆಗೆದುಕೊಂಡು ಹೋದನು. ಇತ್ತ ಶಾನುಭೋಗ ತನ್ನ ವ್ಯಭಿಚಾರಿತನಕ್ಕೆ ತಕ್ಕ ಶಾಸ್ತಿ ಮಾಡಿಸಿಕೊಂಡನು. ಸಮಾಜದಲ್ಲಿ ಇಂಥ ಎಷ್ಟೋ ಜನರು ತಕ್ಕ ಶಾಸ್ತಿ ಪಡೆಯುವರು. ಅಂತಹದೇ ವಿಚಾರವನ್ನು "ನಿನ್ನ ತೆಲಿ ಮ್ಯಾಲ ಬಿದ್ದಾವ ಕೋಲು ಕೋಲು" ಕತೆಯಲ್ಲೂ ಕಾಣುತ್ತೇವೆ.

ಜನಪದ ಕತೆಗಳಲ್ಲಿ ಬರುವ ಪ್ರಸಂಗಗಳನ್ನು ಗಮನಿಸಿದಾಗ ಅಲ್ಲಲ್ಲಿ ಬಂಡಾಯದ ಗುಣ ಕಾಣಿಸತೊಡಗುತ್ತದೆ. ಸಮಾಜ ವ್ಯವಸ್ಥೆಯಲ್ಲಿ ಗಟ್ಟಿಗೊಂಡಿರುವ ಅಸಮಾನತೆಯನ್ನು ಹೊಡೆದೋಡಿಸುವಲ್ಲಿ "ಸೊರಗಕ್ಕ ಹೋಗಿ ಬಂದ ಮೇನಗಾರ" ಕತೆಯಲ್ಲಿನ ಆಶಯಗಳು ಕುತೂಹಲಕಾರಿಯಾಗಿವೆ. ಇಲ್ಲಿ ದುರ್ಬಲನಾದ, ದಿಕ್ಕಿಲ್ಲದವನಾದ ಮೇನಗಾರ, ಅರಸನಾಗುತ್ತಾನೆ. ಶೋಷಿತ ವ್ಯಕ್ತಿಯ ಸಹಾಯಕ್ಕಾಗಿ ಅತಿಮಾನುಷ ಶಕ್ತಿಗಳು ಸಹಾಯಕ್ಕಾಗಿ ಬರುತ್ತವೆ.

---

೧೨೦. ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು. ಪುಟ– vi

ದೇಸಾಯಿ, ಕುಲಕರ್ಣಿ ಶ್ರೀಮಂತ ಧಣಿಗಳು ಗೇಲಿ ಮಾಡುವುದು; ಹಲವಾರು ವಿಧದ ಸವಾಲುಗಳನ್ನೊಡ್ಡುವರು. ಇಲ್ಲೆಲ್ಲಾ ನಾವು 'ವ್ಯವಸ್ಥೆಯ ಅಸಮಾನತೆಯ ವಿರುದ್ಧ ನೇರವಾದ ಹೋರಾಟವಿರದಿದ್ದರೂ ಅಂತ ವ್ಯವಸ್ಥೆಯನ್ನು ಅಭದ್ರಗೊಳಿಸುವ ಪ್ರಯತ್ನಗಳು ಸ್ವಾಗತಾರ್ಹವಾಗಿವೆ."[೧೨೧] ಎಂಬುದು ಧ್ವನಿಪೂರ್ಣವಾಗಿದೆ.

"ರಾಮಣ್ಣ ರಾಕ್ಷಸ ಊಟಕ್ಕೆ ಆಹುತಿಯಾದಾ" ಕತೆಯಲ್ಲಿ ಸವತಿ ಮಕ್ಕಳ ಅಣ್ಣ ತಮ್ಮಂದಿರು ಜಗಳವಾಡಿ, ತಮ್ಮನಾದ ರಾಮಪ್ಪ ಎಲ್ಲವನ್ನೂ ಕಬಳಿಸಿ, ಭರಮಪ್ಪನಿಗೆ ಏನೂ ಸಿಗದ ಹಾಗೆ ಮಾಡಿದ. ಭರಮಪ್ಪ ಅಲಿಯುವ ಹಾಗಾಯಿತು. ಬಡತನದಲ್ಲಿ ಬೆಂದ ಭರಮಪ್ಪನ ಬಂಡಾಯ ಇಲ್ಲಿ ಗೋಚರವಾಗುತ್ತದೆ. ಭರಮಪ್ಪ ದಿನದಿನಕ್ಕೆ ಶ್ರೀಮಂತನಾಗಿ ಲಕ್ಷ್ಮಿ ಹೆಚ್ಚಾಗಿ, ರಾಕ್ಷಸನಂತೆ ವರ್ತಿಸತೊಡಗಿದ. ಹಣ ಮನುಜನನ್ನು ರಾಕ್ಷಸನನ್ನಾಗಿ ಮಾಡುತ್ತದೆ. ತನ್ನ ಸ್ವಂತ ಆಲೋಚನೆಯನ್ನು ಹಣದ ಮದದಿಂದ ಕಳೆದುಕೊಳ್ಳುತ್ತಾನೆ. 'ವಿನಾಶ ಕಾಲಕ್ಕೆ ವಿಪರೀತ ಬುದ್ಧಿ' ಎಂಬಂತೆ ರಾಮಪ್ಪ ಹಲವಾರು ಕೆಟ್ಟ ಆಲೋಚನೆಗಳನ್ನು ಮಾಡಿ ಅಣ್ಣನನ್ನು ಹಲವು ಕಷ್ಟಗಳಿಗೆ ಸಿಲುಕಿಸುತ್ತಾನೆ. ಒಳ್ಳೆಯ ವ್ಯಕ್ತಿ ಭರಮಪ್ಪ ಇನ್ನೇನು ಬಡತನದಿಂದ ಬೆಂದು ನಾಶವಾಗಬೇಕೆನ್ನುವಷ್ಟರಲ್ಲಿಯೇ ಅನಿರೀಕ್ಷಿತ ತಿರುವು ಕಾಣುತ್ತದೆ. ವನಕನ್ಯೆಯರು ಏಳು ಜನರು ಒಬ್ಬರಾದ ಮೇಲೊಬ್ಬರಂತೆ ಪ್ರತ್ಯಕ್ಷರಾಗಿ ಅವನಿಗೆ ಬೇಕಾದಂತಹ ವರಗಳನ್ನು ಕೊಡುತ್ತಾರೆ. ಅಂತ್ಯದಲ್ಲಿ ಉತ್ತಮ ಗುಣದವನಾದ ಭರಮಣ್ಣನಿಗೆ ಜಯ ದೊರಕಿ, ರಾಮಣ್ಣ ಹಾಕಿದ ಸರ್ವ ವಿಧದ ಪರೀಕ್ಷೆಗಳಲ್ಲಿ ಜಯಶಾಲಿಯಾಗುತ್ತಾನೆ. ಒಳ್ಳೆಯವರು ಸುಖವನ್ನು ಪಡೆಯುವಂತೆ ಭರಮಣ್ಣನಿಗೆ ಅಷ್ಟೈಶ್ವರ್ಯಗಳು ಪ್ರಾಪ್ತಿಯಾಗಿ ಕೊನೆಗೆ ಏಳು ಕನ್ಯಾಮನಿಗಳ ಅಣ್ಣಂದಿರಾದ ರಾಕ್ಷಸರ ಊಟಕ್ಕೆ ಆಹುತಿಯಾಗುತ್ತಾನೆ. ಎಲ್ಲವೂ ಇಲ್ಲಿ ತಾರ್ಕಿಕವಾಗಿ ಕೊನೆಯಾಗುತ್ತದೆ. ನಮ್ಮ ಹಳ್ಳಿಯವರ ಸರಳ ಮನಸ್ಸಿನಂತೆ ಜನಪದ ಕತೆಗಳ ತರ್ಕವೂ ಸರಳವಾಗಿರುತ್ತದೆ.

ಹಾಸ್ಯ ಪ್ರಧಾನವಾದ "ಬೀಗನ್ನ ಕಟ್ಟು ಗುಂಡ ಬಡಗ್ಯಾನ ತರ್ತನ" ಕತೆ ಕುತೂಹಲ ಹಾಗೂ ಮನರಂಜನೆ ನೀಡುತ್ತ ಬದುಕಿನ ವಿವಿಧ ಮಗ್ಗುಲುಗಳನ್ನು ಎಳೆಎಳೆಯಾಗಿ, ತಿಳಿತಿಳಿಯಾಗಿ ತೊಳಿತೊಳೆಯಾಗಿ ಬಿಚ್ಚಿಡುತ್ತಾ ಸಾಗುತ್ತವೆ. ಪ್ರಾದೇಶಿಕ ಸೊಗಡಿನೊಂದಿಗೆ, ಸಾಂಸ್ಕೃತಿಕ ಪರಂಪರೆಯ ವ್ಯಾಪಕತೆ ಹಾಗೂ ನೈತಿಕ ಸ್ತರಗಳನ್ನು ಬಿಂಬಿಸುವ ಉದ್ದೇಶವನ್ನು ಹೊಂದಿದೆ. ಇಲ್ಲಿ ಗಂಡ, ಹೆಂಡತಿ, ಮಗಳು, ಎತ್ತು, ಕ್ವಾಣ, ನಾಯಿ, ಹೀಗೆ ಎಲ್ಲರ ಹೆಸರು ಬದಲಾಗಿ ಅನುಕ್ರಮವಾಗಿ ತುಪ್ಪ, ಹುಗ್ಗಿ, ಹಡತರವ್ವ, ಬೀಗಾ, ಗುಂಡಬಡಗಿ, ಮುಕ್ಕಟ್ಯಾ ಎಂದು ಇಟ್ಟುಕೊಂಡಿದ್ದರು. ಹೆಸರುಗಳಿಂದ ಉಂಟಾದ ಗೊಂದಲವೇ ಕುತೂಹಲಭರಿತ ಸುಂದರ ಕತೆಯಾಗಿ ಚಿತ್ರಿತವಾಗಿದೆ. ಅಷ್ಟೇ ಅಲ್ಲದೆ ಅರ್ಥ ವೈರುಧ್ಯದಿಂದ ನವಿರಾದ ಹಾಸ್ಯವೂ ಹೊರಹೊಮ್ಮಿದೆ.

ಕಷ್ಟಗಳು ಕೇವಲ ಬಡತನದಲ್ಲಿದ್ದವರಿಗೆ ಮಾತ್ರ ಇರುವುದಿಲ್ಲ. ಅವು ರಾಜ-ರಾಣಿಯರನ್ನೂ ಬಿಟ್ಟಿಲ್ಲ. ಇಲ್ಲಿ ರಾಜಕುಮಾರ ವೈಭವದಲ್ಲಿ ಮುಳುಗಿ ಏಳಬೇಕಾದವನು

---

೧೨೧. ಬಂಡಾಯ ಜಾನಪದ. ಡಾ. ಬಸವರಾಜ ಸಬರದ ಪುಟ-೮.

ಭಿಕಾರಿಯಾಗಿ ತಿರುಗುತ್ತಾನೆ. ಸ್ಪುರದ್ರೂಪಿಯಾದ ರಾಣಿ ವಿಧಿವಿಲಾಸದಿಂದ ಸಾಧುವಿನ ಗೃಹಿಣಿಯಾಗಿ ಬದುಕುತ್ತ ಭಯ, ನೋವು, ನಿರಾಶೆ, ಅವಮಾನಗಳಲ್ಲಿ ದಿನವೂ ಬೇಯುತ್ತ ದಿನಗಳೆದಳು. ಸದ್ವ್ಯಕ್ತಿಗಳು ಕಷ್ಟವನ್ನೂ ದುಷ್ಟರು ವಿಜಯವನ್ನೂ ಪಡೆದು ಸುಖವನ್ನು ಅನುಭವಿಸುತ್ತಾರೆ. ಇದೆಲ್ಲ ಕತೆಯ ಮಧ್ಯ ಭಾಗದವರೆಗೆ. ಆ ಕಷ್ಟ ಬಂದಾಗ ಎದೆಗುಂದದೆ, ತಾಳ್ಮೆಯಿಂದ ಎದುರಿಸಿ, ಬದುಕು ನಡೆಸಬೇಕೆಂಬುದನ್ನು "ಅಂತರತಿ ಹಾರುವ ಕುದುರಿ"ಯಲ್ಲಿ ಕಾಣುತ್ತೇವೆ. ಇಲ್ಲಿ ವಿಧಿವಿಲಾಸ ಅನ್ನುವ ಪದವನ್ನು ಮಾನವ ತನ್ನ ತರ್ಕಕ್ಕೆ ನಿಲುಕದ್ದನ್ನು, ವಿಧಿಯ ತಲೆಗೆ ಕಟ್ಟುತ್ತಾನೆ. ಇದು ಅವನ ಅಸಹಾಯಕತೆಗೆ, ಅನಿವಾರ್ಯತೆಗೆ ನಿದರ್ಶನ ಎಂಬುದನ್ನು ನಾವು ನಾಗಚಂದ್ರನ 'ರಾಮಚಂದ್ರಚರಿತ ಪುರಾಣ'ದಲ್ಲೂ ಕಾಣುತ್ತೇವೆ. ಹಾಗೆಯೇ ವಿಧಿವಿಲಾಸ ಎಂಬುದನ್ನು ನಾವು ಜಾನಪದದ ಹಲವು ಕತೆಗಳಲ್ಲಿ ಕಾಣುತ್ತೇವೆ. ಇದನ್ನು ಕರ್ಮಫಲ ಎಂದೂ, ಕರ್ಮಫಲವನ್ನು ಅನುಭವಿಸುವುದು ತಪ್ಪದು ಎಂಥರ್ಥ.

"ಗೆಳೆತನವು (ಸ್ನೇಹ) ಒಂದು ವಿಚಿತ್ರವಾದ ಹತ್ತಿರದ ಸಂಬಧವನ್ನುಂಟು ಮಾಡುವುದು. ರಕ್ತ ಸಂಬಂಧವಲ್ಲದ ಗುರುತು. ರಕ್ತ ಸಂಬಂಧ ಮತ್ತು ಅದಕ್ಕಿಂತಲೂ ಹೆಚ್ಚಾಗಿ ಆತ್ಮೀಯತೆಯನ್ನೂ ಬಂಧುತ್ವವನ್ನೂ ತರುವಂಥದ್ದು"[೧೨೨] 'ಗೆಳೆಯನು ಎರಡನೆಯ ಹೆಂಡತಿ' (Friend is Second Wife) ಎಂದು ಹೇಳಲಾಗುತ್ತದೆ. ಪ್ರಾಣಿ ಲೋಕದ ಪ್ರಾಣಿಗಳಾಗಲಿ, ಮನುಷ್ಯಲೋಕದ ವ್ಯಕ್ತಿಗಳಾಗಲಿ ಒಬ್ಬರಿಗೊಬ್ಬರು ಪರಿಚಯ ಪಡೆದಾಗ, ಸಮಗುಣಗಳಿದ್ದಾಗ, ಆಪತ್ಕಾಲದಲ್ಲಿ ಸಹಾಯವಾದಾಗ ಲಾಭ ಉಂಟಾದಾಗ ಗೆಳೆತನ ಕೂಡುವುದು, ಸಹಜವೆನಿಸುವುದು. "ಹೊತ್ತಿಗಾಗುವವನೇ ಗೆಳೆಯ" "ಆಪತ್ಕಾಲಕ್ಕೆ ಆಗುವವನೇ ಬಂಧು" ಎಂಬ ನಾಣ್ಣುಡಿಯಂತೆ ರಾಜಕುಮಾರ, ಚಂದ್ರಸೇನ ಮಂತ್ರಿಮಗ ಶಶಿಕಾಂತನಿಗೂ ತುಂಬಾ ಗೆಳೆತನವಿತ್ತು. ಅವರೀರ್ವರಿಗೂ ಮದುವೆಯಾಯಿತು. ಒಮ್ಮೆ ರಾಜನ ಮಗ ಚಂದ್ರಸೇನ 'ಅಳಿಯತನಕೆ' (ಮೊದಲಬಾರಿ ಹೆಂಡತಿಯ ಮನೆಗೆ ಹೋಗುವ ಪದ್ಧತಿ) ಮಾವನೂರಿಗೆ ಹೋಗುವಾಗ ಆತನೊಡನೆ ಮಂತ್ರಿ ಮಗನೂ ಹೊರಟನು. ಕಾರಣ ಇಬ್ಬರೂ ಜೀವದ ಗೆಳೆಯರು. ನಡುದಾರಿಯಲ್ಲಿ ಹಾಲಕ್ಕಿಗಳು ಮಾತನಾಡುವ ಮಾತುಗಳ ಮೂಲಕ ಕತೆ ಮುಂದುವರೆಯುವುದು. ಹಾಲಕ್ಕಿ ಭಾಷೆ ಶಶಿಕಾಂತನಿಗೆ ಗೊತ್ತಿರುವುದರಿಂದ ಮುಂದೆ ರಾಜನ ಮಗನಿಗೊದಗಲಿರುವ ಆಪತ್ತುಗಳನ್ನೆಲ್ಲ ತಿಳಿದು ಅವುಗಳನ್ನು ಉಪಾಯದಿಂದ ಬಗೆಹರಿಸುತ್ತಾ ಇರುತ್ತಾನೆ. ಮಧ್ಯದಲ್ಲಿ ಆತನನ್ನು ಮತ್ತು ರಾಣಿಯನ್ನು ವಿಷಸರ್ಪದಿಂದ ಪ್ರಾಣವನ್ನುಳಿಸಲು ಹೋಗಿ ಆತನೇ ಆಪತ್ತಿನಲ್ಲಿ ಸಿಕ್ಕು, ರಾಜನಿಂದ ಮರಣದಂಡನೆಗೆ ಗುರಿಯಾಗುವನು. ಕೊನೆಗೆ ನಡೆದ ಘಟನೆಯನ್ನೆಲ್ಲ ಸವಿಸ್ತಾರವಾಗಿ ತಿಳಿಸಿ, ಹೆಜ್ಜೆ ಹೆಜ್ಜೆಗೂ ಆತನನ್ನು ಉಳಿಸಿದ್ದರಿಂದ ಹತ್ತು ಹಳ್ಳಿ ಬಹುಮಾನ ಕೊಟ್ಟು ಮಂತ್ರಿಯ ಕೆಲಸವನ್ನೂ ಶಶಿಕಾಂತನಿಗೆ ವಹಿಸಿ ತನ್ನ ಮಗನಿಗೆ ಪಟ್ಟಗಟ್ಟಿ ಸುಖದಿಂದ ರಾಜ್ಯವನ್ನಾಳುವನು.

---

೧೨೨. ಜಾನಪದ ಜಯಂತಿ. ನಿಂಗಣ್ಣ ಸಣ್ಣಕ್ಕಿ. ಪುಟ–೭೦.

ಮಿತೃತ್ವ ಕೆಟ್ಟಾಗ ಇಡೀ ಗೆಳೆತನದ ಅವಧಿಯನ್ನೆಲ್ಲಾ ಮೂರು ದಿನದ ಅವಧಿಯನ್ನಾಗಿ ಮಾಡಿ, ದ್ರೋಹ ಬಗೆದಂತಹ ರಾಜಕುಮಾರ ತನ್ನ ಅಧಿಕಾರ, ಸಿರಿವಂತಿಕೆಯಿಂದ ಆತನನ್ನು ದೂರಿಕರಿಸಿದ್ದರೂ, ಮಂತ್ರಿ ಮಗ ಆತನ ಪ್ರಾಣವನ್ನುಳಿಸಿದ. ಮಿತ್ರನಿಗಾಗಿ ಎಂಥ ಪರಿಸ್ಥಿತಿಯನ್ನೂ ಎದುರಿಸಿ ತನ್ನ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದ ಪ್ರಸಂಗ ಇಲ್ಲಿದೆ. ಅದಕ್ಕಾಗಿಯೇ 'ಮಿತ್ರದ್ರೋಹಿಯಾದವನಿಗೆ ಕಾಣುವವರೆಲ್ಲಾ ಶತ್ರುಗಳು' 'ಮಿತ್ರನಿಗೆ ಮರೆಮಾಡಬೇಡ; ಶತ್ರುವಿಗೆ ಹೊನೆಯಾಗಬೇಡ' ಎಂಬ ಗಾದೆಗಳು ಜನಪದ ಬೇರುಗಳಿಂದ ಅನುಭವಿಸಿ ಬಂದ ನಾಣ್ಣುಡಿಗಳಾಗಿರುವುದನ್ನು ನಾವು ಗಮನಿಸುವೆವು. "ಹಾಲಕ್ಕಿ ಶಕುಣ" ಶೀರ್ಷಿಕೆಯಡಿಯಲ್ಲಿ ಮೂಡಿ ಬಂದ ಈ ಕತೆಯಲ್ಲಿ ಪಕ್ಷಿಗಳು ಮಾನವರಂತೆ ಮಾತನಾಡಬಲ್ಲವು.

"ಅಜ್ಞಾನ ರಾಜಾ, ಅವಿವೇಕ ಮಂತ್ರಿ" ಕತೆಯಲ್ಲಿ 'ಯಥಾ ರಾಜಾ ತಥಾ ಪ್ರಜಾ' ಎನ್ನುವ ಹಾಗೆ ದೇಶವನ್ನಾಳುವವರು ಎಲ್ಲವನ್ನೂ ಅರಿತಿರಬೇಕು. ಇಲ್ಲದೆ ಹೋದರೆ ಆಡಳಿತ ಅಲ್ಲೋಲ ಕಲ್ಲೋಲವಾಗುವುದೆಂಬುದನ್ನು ಹಾಸ್ಯದ ಮುಖಾಂತರ ಮೂಡಿ ಬಂದಿದೆ. ಭರಮ್ಯಾ ಅನ್ನುವ ವ್ಯಕ್ತಿ ಮಾಡಿದ ಕಳ್ಳತನದ ತಪ್ಪನ್ನು ರಾಜ ಎತ್ತಿ ಹಿಡಿದು ಶಿಕ್ಷೆ ನೀಡದೆ ಹೋದದ್ದು ಇಂದಿನ ರಾಜಕೀಯ ಗದ್ದುಗೆ ಹಿಡಿದವರ ನಿದರ್ಶನ ಕೊಡುವಂತಿದೆ. ತಪ್ಪು ಮಾಡಿ, ಕೊಲೆ, ಸುಲಿಗೆ, ಅನ್ಯಾಯಗಳನ್ನು ಮಾಡಿದವರು ತಪ್ಪಿಸಿಕೊಳ್ಳಲು ಇಂಥ ರಾಜರುಗಳೇ ಕಾರಣ ಎಂಬುದನ್ನು ತುಂಬಾ ಮಾರ್ಮಿಕವಾಗಿ ತೋರಿಸಿ ಕೊಟ್ಟಿದ್ದಾರೆ. ಭರಮ್ಯಾ ಕಳ್ಳತನ ಮಾಡಿದ್ದಕ್ಕೆ ಶಿಕ್ಷೆ ವಿಧಿಸದೆ ಹೋದುದು, ಆತನ ಅಜ್ಞಾನಕ್ಕೆ ಹಿಡಿದ ಕನ್ನಡಿ. ಆತನ ಹೆಂಡತಿ ತನ್ನ ಗಂಡ ಮಾಡಿದ್ದು ತಪ್ಪೆಂದು ತಿಳಿಯದೇ ಆತನ ಪ್ರಾಣ ಹೋದದ್ದಕ್ಕಾಗಿ ಪರಿಹಾರ ಧನಕ್ಕಾಗಿ ಹೋರಾಟ ನಡೆಸಿದಳು. ಅಂದರೆ ತಮ್ಮ ತಪ್ಪನ್ನು ಮುಚ್ಚಿಕೊಂಡು ಇನ್ನೋರ್ವರು ಕೈಗೊಂಡ ಕಾರ್ಯಗಳೇ ತಪ್ಪೆಂದು ಬೊಂಬಾಟ ಮಾಡುವ ಜನ ಇಂದಿನ ಕಾಲದಲ್ಲಿ ಇದ್ದಾರೆ. ಇದನ್ನು ಜಾನಪದ ಕತೆಯಲ್ಲಿ ಎಂದೋ ಮೂಡಿಬಂದಂತಹ ಕತೆಯಲ್ಲಿ ಕಾಣುತ್ತೇವೆ. ಅಂದರೆ ಸಮಾಜದಲ್ಲಿ ಸರ್ವಕಾಲದಲ್ಲಿ ಇಂಥ ಜನರು ಕಂಡುಬರುವರು.

ಮಂತ್ರ, ತಂತ್ರ, ಬೂಟಾಟಿಕೆಯನ್ನು ನಂಬಿ ಮೋಸ ಹೋದ ಕಥೆ "ಮಾತಾಡು ಮಗಿಯೇ ಮಾತಾಡು'ನಲ್ಲಿದೆ ಮೋಸ ಹೋಗುವವರು ಎಲ್ಲಿಯವರೆಗೆ ಇರುವರೋ ಮೋಸ ಮಾಡುವವರು ಅಲ್ಲಿಯವರೆಗೆ ಇರುವರು. ಮಾತಿನಲ್ಲೇ ಮೋಡಿ ಮಾಡಿ ಹಲವಾರು ಜನರಿಗೆ ಕಾಮಣ್ಣ ಮೋಸ ಮಾಡಿದ್ದನು. ಕಡೆಗೆ ಅವರೆಲ್ಲ ಅವನ ಮೇಲೆ ದೂರು ಕೊಟ್ಟರು. ದೂರು ತೆಗೆದುಕೊಂಡ ಸಾಹೇಬನನ್ನೂ ಮಾತಿನ ಚಕಮಕಿಯಿಂದ ದುಡ್ಡಿನ ಆಸೆ ತೋರಿಸಿ, ಅವನ ಪರವಾಗಿಯೇ ನ್ಯಾಯ ಕೊಡುವ ಹಾಗೆ ಮಾಡಿದನು. ಕೊನೆಗೆ ದುಡ್ಡು ಸಿಗದೆ ಆ ಸಾಹೇಬ ಕೂಡ ಮೋಸ ಹೋಗುತ್ತಾನೆ. ಇಂಥ ಜನ ಅನಾದಿಕಾಲದಿಂದಲೂ ಇದ್ದಾರೆ. ಸಾರ್ವತ್ರಿಕವಾಗಿ ನಡೆದಂತಹ ಇಂಥ ಮೋಸಗಳು ದಿನದಿನಕ್ಕೆ ಹೆಚ್ಚುತ್ತಾ ಇವೆ. ದುಡಿಯದೆ, ದಣಿವಿಲ್ಲದೆ, ಮೋಸ ಮಾಡಿ, ವಂಚಿಸಿ, ಹಣ ಗಳಿಸುವ ಜನ ಸಮಾಜದಲ್ಲಿ ಹೆಚ್ಚಾಗಿದ್ದಾರೆ. ಅಂಥವರಿಂದ ದೂರ ಇದ್ದು, ಎಚ್ಚರಿಕೆಯ ಜೀವನವನ್ನು ನಡೆಸಬೇಕೆಂದು ಸತ್ವಯುತವಾದ ನುಡಿಯನ್ನು ಕಟ್ಟಿಕೊಡುವುದು. ನಮ್ಮನ್ನು

[illegible]

[illegible]

[illegible]

[illegible]

ವಂಚಿಸುವವರ ಹಿಡಿತದಿಂದ ಪಾರಾಗಬೇಕಾದರೆ ವಂಚನೆಯನ್ನು ಪ್ರಯೋಗಿಸಬೇಕು. ವಂಚಕರನ್ನು ವಂಚನೆಯಿಂದಲೇ ಎದುರಿಸುವದು ಒಂದು ರಾಜತಂತ್ರ. ಇದು ಪಂಚತಂತ್ರದ ನಾಲ್ಕನೆಯ ತಂತ್ರವಾಗಿದ್ದು, ಖಾಡೆಯವರ "ಸೊರಗಕ್ಕ ಹೋಗಿ ಬಂದ ಮೇನಗಾರ" ಕತೆಯಲ್ಲಿ ನಿರೂಪಣೆಗೊಂಡಿದೆ. ರಂಪಾವತಿ ಎಂಬ ಸ್ಪುರದ್ರೂಪಿ ಹೆಣ್ಣು ಮಗಳನ್ನು ಪಡೆಯಲು ದೇಸಾಯಿ ಮೇನಗಾರನಿಗೆ ಹಲವಾರು ವಿಧದ ಸವಾಲುಗಳನ್ನೊಡ್ಡಿ ಮೋಸ ಮಾಡಲು ಪ್ರಯತ್ನಿಸಿ, ಕೊನೆಗೆ ಆ ಜಾಲದಲ್ಲಿ ತಾನೇ ಸಿಕ್ಕು, ಒದ್ದಾಡಿ ಪ್ರಾಣ ನೀಗುವನು.

ಇದು ನೀತಿಪ್ರಧಾನವಾದ ಕತೆಯಾಗಿದ್ದು ಎಳೆಎಳೆಯಾಗಿ, ತಿಳಿತಿಳಿಯಾಗಿ ಹಲವು ವಿಧದ ಮೋಸತನದ ಬಿಡಿಕತೆಗಳಾಗಿ ಮೂಡಿಬಂದಿವೆ. ನಾಯಕನ ಪಾತ್ರದಲ್ಲಿ ಬರುವ ಮೇನಗಾರ ದೇಸಾಯಿಯ ಕುತಂತ್ರಕ್ಕೆ ಎದೆಗುಂದದೆ, ಸಮಯ ಸಂದರ್ಭಕ್ಕನುಸಾರವಾಗಿ ಚಾಣಾಕ್ಷತನದಿಂದ ಬುದ್ಧಿಯನ್ನುಪಯೋಗಿಸಿ, ಸಾರಾಸಾರ ವಿಚಾರಿಸಿ, ಜಾಣ್ಮೆಯಿಂದ ಉಪಾಯ ಕಂಡುಕೊಳ್ಳುವನು. ಮೌಢ್ಯತನವನ್ನು ದುಷ್ಕಾರ್ಯಗಳಿಗೆ ಬಳಸಿಕೊಳ್ಳುವ ಜನ ಹೆಚ್ಚು. ಅದರಿಂದ ಬಿಡುಗಡೆ ಹೊಂದಲು ಸಾಮಾನ್ಯ ಜ್ಞಾನ, ಜೀವನ ನಡೆಸಲು ಬೇಕಾದ ವಿವೇಚನಾ ಶಕ್ತಿ, ಯುಕ್ತಿ ಬೆಳೆಸಿಕೊಂಡರೆ ಮಾತ್ರ ಜೀವನಕ್ಕೆ ಸುಗಮ ದಾರಿ ಸಿಗುವುದು. ಜೀವನದಲ್ಲಿ ಮೊದಲು ಯಾರಿಗೂ ಮೋಸ ಮಾಡಬಾರದು. ಮತ್ತೊಬ್ಬರು ಮೋಸ ಮಾಡಿದರೆ ಅವರನ್ನು ಬಿಡಬಾರದು. ಇದು ಪರಮಾತ್ಮನ ನ್ಯಾಯ ಎಂಬುದನ್ನು ದಿಟಗೊಳಿಸಿದ್ದಾರೆ. ರೀತಿ, ನೀತಿ, ನಡತೆಗಳು ಸರಿಯಾಗಿ ಇರುವ ಮನೆಗೆ ಹೆಣ್ಣು ಮಕ್ಕಳನ್ನು ಕೊಡಬೇಕೆನ್ನುವ ನುಡಿಗಳು "ನಿಮ್ಮೂರ ನಡತೀನ ಹೀಂಗ ಐತಿ" ಎಂಬ ಕಥೆಯಲ್ಲಿದೆ.

ರಮ್ಯ ಕತೆಗಳಲ್ಲೊಂದಾದ "ಚಂದ್ರಪ್ಪಗೌಡರ ಚೆಂದುಳ್ಳಿ ಚೆಲುವಿ"ಯಲ್ಲಿ ಈರಪ್ಪ ಶೆಟ್ಟರ ಸೊಸೆ ಮೀನಾಕ್ಷಿ ತುಂಬಾ ಸುಂದರವಾಗಿದ್ದು, ಜಾರತನ ಮಾಡಿದ್ದಕ್ಕಾಗಿ ಶೆಟ್ಟಿ ತನ್ನ ಮಗನನ್ನು ತಪ್ಪಾಗಿ ತಿಳಿದು, ಹೊಡೆಸಿ ಕೊನೆಗೆ ಸೊಸೆಯ ಗುಟ್ಟು ರಟ್ಟಾದಾಗ ಮನದಲ್ಲಿ ಮರಗಿದ. 'ಬೆಳ್ಳಗಿರುವುದೆಲ್ಲ ಹಾಲಲ್ಲ' 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಬೇಕು. ಎಂಬ ನುಡಿಗಳ ಅರ್ಥ ಇಲ್ಲಿದ್ದು, 'ಅತ್ತಿ ಹಣ್ಣು ನೋಡಲು ತುಂಬಾ ಸುಂದರವಾಗಿದ್ದರೆ, ಒಳಗೆಲ್ಲ ಹುಳ ಭಾಳ ಆದಂತೆ' ಈ ಸೊಸೆ ಮೀನಾಕ್ಷಿ ತೋರಿಕೆಗೆ ಸದ್ಗುಣಿ, ಸಂಪನ್ನತೆ ಸುಂದರಿ ಇದ್ದರೂ, ಒಳಗೆಲ್ಲ ದುರ್ಗುಣಗಳು ಮನೆಮಾಡಿದ್ದವು. ತನ್ನ ಜಾರನನ್ನು ಕೂಡಿಕೊಳ್ಳಲು ಏನೆಲ್ಲ ಕತೆಗಳನ್ನು ಹೆಣೆದು ಮಾವನ ಕಣ್ಣಿಗೆ ಮಣ್ಣೆರಚಿ ಹೋಗುವಳು. ಅವಳಿಗೆ ತಕ್ಕ ಹಾಗೆ ಚಂದ್ರಪ್ಪಗೌಡ ಮತ್ತು ರಾಮಪ್ಪಗೌಡ ಮಾಡಿದ ನಾಟಕ ರಮ್ಯವಾಗಿ ಮೂಡಿಬಂದಿದೆ.

"ಗೋಧಿ ಕಾಳದಟ್ಟು ಹೆಂಗಸಾ" ಕತೆಯಲ್ಲಿ ಬೈಗುಳಗಳು ರೂಪದಲ್ಲಿ ಮೂಡಿದೆ. ಬೈಗುಳಗಳ ವಿಷಯ ಒಂದು ಲಘು ಹರಟೆಗೆ ಅಥವಾ ವಿನೋದ ಪ್ರಬಂಧಕ್ಕೆ ಸಾಮಗ್ರಿಯನ್ನು ಒದಗಿಸುವಂತೆ ಕತೆಗೆ ವಿನೋದ ರೂಪದಲ್ಲಿ ಬೈಗುಳಗಳ ಮೂಲಕ ಮೂಡಿ ಬಂದಿದೆ. ಬೈಗುಳಗಳಿಗೆ ಜನರ ಗಮನವನ್ನು ತನ್ನ ಕಡೆಗೆ ಸೆಳೆದುಕೊಳ್ಳುವ ಶಕ್ತಿಯಿದೆ. ಅವು ಒಂದು ರೀತಿಯಲ್ಲಿ ಪೆಟ್ರೋಲ್ ಇದ್ದಂತೆ ಎಂದೂ ವಿವರಿಸಬಹುದು. ಶುದ್ಧಿ ಮಾಡುವ, ಯಂತ್ರಗಳನ್ನು

[illegible]

[illegible]

[illegible]

[illegible]

ಓಡಿಸುವ, ಬೆಂಕಿ ಹತ್ತಿ ಎಲ್ಲವನ್ನೂ ಕ್ಷಣದಲ್ಲಿ ಸುಡುವ ಶಕ್ತಿಗಳು ಎರಡಕ್ಕೂ ಸಮಾನ. "ಬೈಗುಳನ್ನು ಭಾಷಿಕ ಹೊಡೆತ ಎನ್ನಬಹುದು. ಹೊಡೆತವು ದೈಹಿಕವಾದುದು. ತನಗೆ ಆಗದವನಿಗೆ ದೈಹಿಕವಾಗಿ ನೋವನ್ನುಂಟು ಮಾಡುವುದು; ಹೊಡೆತದ ಉದ್ದೇಶ. ತನ್ನ ಶತ್ರುವಿಗೆ ಮಾನಸಿಕವಾಗಿ ನೋವುಂಟು ಮಾಡುವುದು. ಬೈಗುಳವು ಹೊಡೆತಕ್ಕಿಂತ ಸೂಕ್ಷ್ಮವಾದುದು, ಸಂಕೀರ್ಣವಾದುದು ಮತ್ತು ನುಣುಚಿಕೊಳ್ಳಲು ಅವಕಾಶವೀಯುವಂತಹುದು."[೧೨೩] ಬೈಗುಳ ವ್ಯಕ್ತಿಯ, ತನ್ಮೂಲಕ ಸಮಾಜದ ಮಾನಸಿಕ ಅಸ್ವಸ್ಥತೆಗೆ ಒಂದು ಪರಿಣಾಮಕಾರಿ ಔಷಧವೂ ಕೂಡ ಆಗಬಲ್ಲದು. ಅದರ ಒಂದು ನೋಟ ಇಲ್ಲಿದೆ. "ಹಿಂತಾ ಊರಾಗ ಹೆಂತಾವರಿದ್ರಪಾ ಅಂದ್ರ ಅವಗಾಡ ಅರಸ ಇದ್ದಾ. ಅಡಮಟ್ಟು ಪರದಾನಿ (ಪ್ರಧಾನಿ) ಇದ್ದಾ. ಕುರಸಾಲ್ಯಾ ಕುಲಕರ್ಣಿ ಇದ್ದಾ. ಕುಲಕಂಟಗೌಡಾ ಇದ್ದಾ. ಪಡಶಂಟ ಪಂಚರಿದ್ರು. ಸುಡಗಾಡ ದೈವದವರಿಬ್ರು ಗಿಡಾ ಏರಿದ್ರು" ಹೀಗೆ ಆರಂಭವಾಗಿ ಕುಳಲಿ, ಮಳಲಿ, ಮುದ್ದಾಪುರ ಊರುಗಳ ಉಲ್ಲೇಖದಿಂದ ಹಾಸ್ಯದ ಮೂಲಕ ಕತೆ ಸಾಗಿಬರುವುದು.

'ವನರಾಜನ ಕಥೆ' ಶೀರ್ಷಿಕೆಯ ಹಾಗೆ ಒಬ್ಬ ರಾಜನ ಮಗ ಕಾಡಿನಲ್ಲಿ ಹುಟ್ಟಿ ಬೆಳೆದು ಜಯ ಗಳಿಸಿದಂತಹ ಕಥೆ ಇದಾಗಿದೆ. ರಾಜ ತನ್ನ ಪ್ರಜೆಗಳ ನೆಮ್ಮದಿಗೋಸ್ಕರ ಕಾಡಿಗೆ ಹೋಗಿ ತಪಸ್ಸಾಚರಣೆಯಿಂದ ಮಗು ಪಡೆದಿದ್ದರೂ, ವಿಧಿಯ ನಿಯಮದಂತೆ ಅದು ಹುಟ್ಟಿ ಅದಿಮೂರನೆಯ ದಿನಕ್ಕೆ ವನರಾಜನೆಂದು ಹೆಸರಿಟ್ಟು ಕಾಡಿಗೆ ಕಳುಹಿಸಿದರು. ಅರಮನೆಯಲ್ಲಿ ಬೆಳೆಯಬೇಕಾದಂತಹ ಕುವರ ಪ್ರಾಣಿಗಳೊಂದಿಗೆ ಬೆಳೆದನು. ಹಲವಾರು ಕಷ್ಟಗಳನ್ನು ಎದುರಿಸಿ, ವಿಧಿವಿಲಾಸದಿಂದ ಹುಲಿಯೊಡನೆ ಬಾಳುತ್ತ ಬೆಳೆದನು. ಸದ್ವ್ಯಕ್ತಿಗಳು ಕಷ್ಟವನ್ನು, ದುಷ್ಟರು ವಿಜಯವನ್ನು ಪಡೆದು ಸುಖವನ್ನು ಅನುಭವಿಸುವುದು ಕಥೆಯ ಮಧ್ಯ ಅಥವಾ ಕೊನೆ ಮುಟ್ಟುವ ಹಿಂದಿನ ಹೆಜ್ಜೆಯವರೆಗೆ. ಆದರೆ ಭಾರತೀಯ ಮನಸ್ಸು ಒಂದು ಸಂಗತಿಯನ್ನು ಮಾತ್ರ ಮತ್ತೆ ಮತ್ತೆ ಪುನರುಚ್ಚರಿಸುತ್ತ ಒಪ್ಪಿಕೊಂಡಿದೆ. ಅದೆಂದರೆ ಅಂತ್ಯದಲ್ಲಿ ಒಳ್ಳೆಯವರು ತಮ್ಮ ಒಳ್ಳೆಯತಕ್ಕೂ, ದುಷ್ಟರು ತಮ್ಮ ದೌಷ್ಟ್ಯಕ್ಕೂ ಉಚಿತವಾದ ಪ್ರತಿಫಲವನ್ನು ಪಡೆಯಲೇಬೇಕು. ತಮ್ಮ 'ಕರ್ಮ'ವನ್ನು ತಾವು ಉಣ್ಣಲೇಬೇಕು. ಕರ್ಮಫಲವನ್ನು ಅನುಭವಿಸಲೇಬೇಕು. ಇಲ್ಲಿ ಖೊಟ್ಟಿ ಹುಲಿ ಬೇಟೆಗಾರನಾದ ತಿಮ್ಮಣ್ಣನನ್ನು ಆನೆಯ ಕಾಲಿಗೆ ಕಟ್ಟಿಸಿ ಕೊಲ್ಲಿಸಿ ರಾಜ, ತನ್ನೆಲ್ಲ ರಾಜ್ಯವನ್ನು ವನರಾಜನ ಹೆಸರಲ್ಲಿ ಹಚ್ಚಿದನು. ಅವನಿಗೆ ಪಟ್ಟಗಟ್ಟಿ ತನ್ನ ಮಗಳನ್ನು ಕೊಟ್ಟು, ವಿಧಿಯಿಂದ ತನ್ನ ಅಪ್ಪ-ಅಮ್ಮನೊಂದಿಗೆ ಕೂಡಿ ಎರಡೂ ರಾಜ್ಯವನ್ನಾಳಿದನು. ವಿಧಿ ಪಾಂಡವರನ್ನೂ ಕೂಡ ವನವಾಸಕ್ಕೆ ಕಳುಹಿಸಿದ್ದು, ಯಾರನ್ನೂ ಬಿಡಲಾರದು. ಇನ್ನು ಸಾಮಾನ್ಯ ಜನರ ಪಾಡೇನು ಎಂಬುದು ಈ ವನರಾಜನ ಪ್ರಸಂಗದ ಮೂಲಕ ಬಿತ್ತರಗೊಂಡಿದೆ. ರೈಲು ಬಿಡುವುದರಲ್ಲಿ ಕೆಲವರು ನಿಷ್ಣಾತರಾಗಿರುತ್ತಾರೆ. ಇಂಥ ಜನರಿಗೆ 'ನೀರಲ್ಲಿ ಉರಿ ಎಬ್ಬಿಸುವ ಜನ' ಎಂತಲೂ ಕರೆಯುವರು. ಅಂಥದ್ದೊಂದು ಪ್ರಸಂಗ "ಸುಳ್ಳಿನ ಸರಪಳಿ"ಯಲ್ಲಿ ಬಂದಿದೆ. ಒಂದು ಸುಳ್ಳಿಗೆ ಹನ್ನೆರಡು ಸುಳ್ಳು ಹೆಣೆಯುವ ಪ್ರಸಂಗ ಇಲ್ಲಿದೆ.

---

೧೨೩. ಜನ-ಜನಪದ-ಜಾನಪದ. ಎಂ. ಚಿದಾನಂದಮೂರ್ತಿ. ಪುಟ-೩೧೩

[illegible]

"ಕೆಂಚಪ್ಪನ ದುರ್ದೈವ"ದಲ್ಲಿ ಆತ ಬೇಕಾದ ತಪ್ಪುಗಳನ್ನು ಮಾಡಿದರೂ ಜೈಲಿಗೆ ಹೋಗುವ ಯೋಗ ಬರಲಿಲ್ಲ. ಆತ ಜೈಲಿಗೆ ಹೋಗಿ ದುಡಿಯಲಾರದೆ ಆರಾಮ ಇರಬಹುದು. ಇರಾಕ ನೆರಳು, ಉಣಲು ಊಟ ಸಿಗುತ್ತದೆಂದು ಉಪಾಯ ಮಾಡಿದರೂ ದೈವ ಮಾತ್ರ ಬೇರೆಯದನ್ನೇ ಬಗೆಯಿತು. ತಾನೊಂದು ಬಗೆದರೆ ದೈವವೊಂದು ಬಗೆದಂತೆ ಕೆಂಚಪ್ಪನ ಸ್ಥಿತಿಯಾಯಿತು.

ಜೀವನದಲ್ಲಿ ಮುಂದೆ ಬರಲು ಬೇಕಾದ ಚಾಲಾಕಿತನ, ಮಾತುಗಾರಿಕೆ, ಕುಯುಕ್ತಿಗಳು ಕುರುಬನಲ್ಲಿ ಇಲ್ಲದೇ ಇರುವುದರಿಂದ ಎಷ್ಟೊಂದು 'ಅವಘಡ'[೧೨೪]ಗಳನ್ನೆದುರಿಸಬೇಕಾಯ್ತು. 'ಮಳ್ಳ ಕುರುಬ' ಹೆಸರಿಗೆ ತಕ್ಕಂತೆ ಮಳ್ಳ ಇದ್ದನು. ಮಳ್ಳ ಇದ್ದವರು ಜೀವನದಲ್ಲಿ ಮುಂದೆ ಬರಲಾರರು ಎಂಬುದನ್ನು ನೋಡುತ್ತೇವೆ. ಸ್ಪುರದ್ರೂಪಿ ಹೆಂಡತಿಗೆ ಆಸೆ ಪಟ್ಟು ಹಲವು ಕಷ್ಟಗಳನ್ನನುಭವಿಸಿದ. ಕಡೆಗೆ ಅವರೂಪಗೇಡಿ ಹೆಂಡ್ತೀನೇ ವಾಸಿ ಎಂಬ ತೀರ್ಮಾನಕ್ಕೆ ಬಂದ ದುರಗಪ್ಪನ ಕತೆ "ಅವರೂಪಗೇಡಿ ಹೆಂಡ್ತಿ"ಯಲ್ಲಿ ಮೂಡಿದೆ. ದೃಢಭಕ್ತಿಯಿಂದ ಏಕೋಭಾವದಿಂದ ಪೂಜೆ, ದಾನ, ಧರ್ಮ, ಮಾಡಿದವರಿಗೆ ಮಾತ್ರ ಪರಮಾತ್ಮ ಒಲಿಯುತ್ತಾನೆ ಎಂಬ ಸತ್ವಭರಿತ ಮಾತುಗಳು "ಏನಾರನ ಕತಿ"ಯಲ್ಲಿದೆ. ಈ ಕತೆಗಳು ಮೂಡಿ ಬಂದಾಗ ಸಮಾಜದಲ್ಲಿ ಧಾರ್ಮಿಕ ಶ್ರದ್ಧೆ, ದೈವೀ ಭಕ್ತಿ ಜನರಲ್ಲಿ ಗಾಢವಾಗಿತ್ತು ಎಂಬುದನ್ನು ಬಿಂಬಿಸುತ್ತದೆ. ಅತಿ ಆಸೆಗೆ ಒಳಪಡದೆ, ಇದ್ದುದರಲ್ಲೇ ತೃಪ್ತಿಪಡುವಂತಹ ಜೀವನ ತಮ್ಮದಾಗಬೇಕು ಎಂಬ ಸಾರ್ವಕಾಲಿಕ ಮೌಲ್ಯವನ್ನು ಸಾರುತ್ತದೆ.

---

೧೨೪. ಇಗೋ ಕನ್ನಡ. ಪ್ರೊ. ಜಿ. ವೆಂಕಟಸುಬ್ಬಯ್ಯ. ಪುಟ. ೩೩.
'ಅವಘಡ' ಇದು ಮಾರಿ ಶಬ್ದ. ಅವಘಡ್ ಸರಿಯಾದ ರೂಪ. ಇದಕ್ಕೆ ಬಿಕ್ಕಲಾದ, ಇಕ್ಕಟ್ಟಾದ, ಕಠಿಣವಾದ ಎಂಬ ಗುಣವಾಚಕದ ಅರ್ಥವಿದೆ.

ಅಧ್ಯಾಯ ನಾಲ್ಕು

ಸಂಗೋಪನ ಸಾಹಿತ್ಯ

ಅಧ್ಯಾಯ ನಾಲ್ಕು

ಸಂಗೋಪನ ಸಾಹಿತ್ಯ

ಹಿರಿಯರಿಂದ ಕೇಳಿದ ಆಟ ಬಯಲಾಟಗಳಲ್ಲಿ ನೋಡಿದ ಹಾಗೂ ಜನಪದ ಜನಾಂಗದಿಂದ ಅರಿತುಕೊಂಡ, ಬದುಕಿನಲ್ಲಿ ಕಂಡುಕೊಂಡಿರುವ ಒಟ್ಟು ಅನುಭವದ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿರುವ ಸಾಹಿತ್ಯವನ್ನು ಸಂಗೋಪನ ಸಾಹಿತ್ಯವೆಂದು ಹೇಳಬಹುದು. ಇದು ಸೃಜನಶೀಲ ಸಾಹಿತ್ಯವಲ್ಲ. ಆದರೆ ಅದರಷ್ಟೇ ಮೌಲಿಕವಾದ ಪ್ರಕಾರ. ನೋಡಿದ, ಕೇಳಿದ, ತಿಳಿದುಕೊಂಡ ಪ್ರಸಂಗಗಳಿಗೆ ಅಕ್ಷರ ರೂಪ ಕೊಟ್ಟು, ಹೊಸ ರೂಪದಲ್ಲಿ, ಹೊಸವಿನ್ಯಾಸದಲ್ಲಿ ಪ್ರಸ್ತುತಪಡಿಸಿರುವದಾಗಿದೆ. ಮೂಲವಸ್ತುವನ್ನು ಸಮಾಜದಿಂದಲೇ 'ಬಳುವಳಿ'ಯಾಗಿ ಪಡೆದು, ಅದಕ್ಕೆ ತನ್ನದೇ ಅಭಿವ್ಯಕ್ತಿ ನೀಡುವುದನ್ನು ಸ್ಥೂಲವಾಗಿ ಸಂಗೋಪನ ಸಾಹಿತ್ಯವೆಂದು ಕರೆಯುತ್ತಾರೆ. 'ಜನಪದ ಸಾಹಿತ್ಯ' ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಈ ಹಿನ್ನೆಲೆಯಲ್ಲಿ ಜಿ.ಬಿ. ಖಾಡೆಯವರ ಸಂಗೋಪನ ಸಾಹಿತ್ಯವನ್ನು ಪರಿಶೀಲಿಸಲಾಗುವದು.

ನೂರಾರು ಹಳ್ಳಿಗಳನ್ನು ಸುತ್ತುತ್ತಾ ಅಲ್ಲಿಯ ಜನರ ನಾಲಿಗೆಯ ಮೇಲೆ ಹರಿದಾಡುತ್ತಿದ್ದ ಸಾಹಿತ್ಯವನ್ನು ಕೇಳಿ, ನೇರವಾಗಿ ಬರೆದುಕೊಂಡು, ಅಳಿದುಹೋಗಬಹುದಾಗಿದ್ದ ಜನಪದ ಸಾಹಿತ್ಯವನ್ನು ಉಳಿಸಿ ಬೆಳೆಸಿವರಲ್ಲಿ ಜಿ.ಬಿ. ಖಾಡೆಯವರ ಪಾತ್ರ ಪ್ರಮುಖವಾದುದು.

ಜನಪದ ಸಾಹಿತ್ಯ ಸಂಕಲನ ಮತ್ತು ಜಾನಪದ ಕಲೆಗಳ ಬಗೆಗೆ ವಿಶೇಷ ಕಾಳಜಿ ಹೊಂದಿ ತಮ್ಮ ಜೀವಿತದುದ್ದಕ್ಕೂ ಜಾನಪದಕ್ಕಾಗಿ ತೊಡಗಿಸಿಕೊಂಡಿರುವ ಜಿ. ಬಿ. ಖಾಡೆಯವರು ಬಹು ಮುಖ್ಯವಾದ ಮೂರು ಕೃತಿಗಳನ್ನು ಸಂಕಲಿಸಿ ಕೊಟ್ಟಿದ್ದಾರೆ. ಜಾನಪದ ಸಾಹಿತ್ಯದ ಗೀಳು ಅವರನ್ನು ಜನಪದ ವ್ಯಕ್ತಿಯನ್ನಾಗಿ ಮಾಡಿತು. ಹೀಗಾಗಿ, ಜನಪದ ಸಂಗ್ರಹಣ, ಸಂಕಲನ, ಶ್ರಮಿಸಿದರು. ಅಧ್ಯಯನದ ಅನುಕೂಲಕ್ಕಾಗಿ ಅವರ ಸಾಹಿತ್ಯವನ್ನು ಸಂಕಲಿತ ಜನಪದ ಸಾಹಿತ್ಯ, ಸಂಗೋಪನ ಸಾಹಿತ್ಯವೆಂದು ಎರಡು ಪ್ರಮುಖ ವಿಭಾಗಗಳಾಗಿ ಮಾಡಿಕೊಳ್ಳಲಾಗಿದೆ. ಎರಡನೆಯ ವಿಭಾಗವಾದ ಸಂಗೋಪನ ಸಾಹಿತ್ಯದಲ್ಲಿ ಮುಖ್ಯವಾಗಿ ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು, ಗಂಡಸರಿಗೆ ಹೆರಿಗೆ ಬ್ಯಾನಿ ಎದ್ದಾಗ, ಮೂರು ಹೂಗಳು ಕೃತಿಗಳನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

[illegible]

[illegible]

[illegible]

[illegible]

[illegible]

೪.೧ ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು:

ಹಾಸ್ಯ ಸ್ವಭಾವದವರಾದ ಇವರು ತಮ್ಮ ಸುತ್ತ ಮುತ್ತಲಿನ ಪ್ರಸಂಗಗಳನ್ನು ಹಾಸ್ಯಮಯವಾಗಿ ಇಟ್ಟುಕೊಡುವಲ್ಲಿ ತುಂಬಾ ನಿಪುಣರು. ಇವರು ಕಂಡುಂಡ ಅನುಭವದ ಹಿನ್ನೆಲೆಗಳು ಅವರ "ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು" ಮೂಲಕ ಹೊರ ಬಂದವುಗಳಾಗಿವೆ. ಡಿ.ವ್ಹಿ.ಜಿಯವರ ಮಾತಿನಂತೆ ನಗುವು ಸಹಜ ಧರ್ಮವಾದರೂ ನಗುವವರು ಕಡಿಮೆ, ನಗಿಸುವವರು ಇನ್ನೂ ಕಡಿಮೆ, ನಗುತ ಕೇಳುವ ನಗುವವರು ಮತ್ತೂ ಕಡಿಮೆ.

ವಿಜ್ಞಾನ – ತಂತ್ರಜ್ಞಾನದ ಇಂದಿನ ದಿನಮಾನಗಳಲ್ಲಿ ನಗುವಿಗೆ ಬರಗಾಲ ಬಂದಿದೆ. ಶ್ರೀ ಜಿ.ಬಿ.ಖಾಡೆಯವರು ತಾವು ಕಂಡುಂಡ ಅನುಭವಗಳನ್ನು ವಿನೋದವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಇಪ್ಪತ್ತು ಹಾಸ್ಯ ಪ್ರಸಂಗಗಳನ್ನು ಕೈಗೆತ್ತಿಕೊಂಡು ಜೀವ ತುಂಬಿದ್ದಾರೆ. ಓದುಗರಿಗೆ ಸಾದರ ಪಡಿಸಿದ್ದಾರೆ. ಇಂದಿನ ಯಾಂತ್ರಿಕ ಯುಗದಲ್ಲೂ ಜಂಜಾಟದ ಬದುಕಿನಲ್ಲಿ ಜಿದ್ದಿನ ಜಗಳದಲ್ಲಿ ಹಗಳಿರುಳು ದುಡಿಯುತ್ತಾ ಹರಣ ಹಾರುವವರೆಗೂ ಚಿಂತಿಸಿದರೂ ಬದುಕು ಭಾರವಾಗಿದೆ. ಮಕ್ಕಳಿಂದ ಹಿಡಿದು ಮುದುಕರವರೆಗೂ ತಮ್ಮ ಕೆಲಸ ಕಾರ್ಯಗಳಲ್ಲಿ ಮಗ್ನರು. ನಿತ್ಯವೂ ಜೀವನದ ಹೋರಾಟ. ೨೦ರ ಹರೆಯದವರ ಮುಖದಲ್ಲಿ ನಗುವಿಲ್ಲ. ೭೦ರ ಸಮೀಪದಲ್ಲಿರುವ ಶ್ರೀಯುತ ಖಾಡೆಯವರು ತಾವೂ ನಕ್ಕು ನಮ್ಮನ್ನೂ ನಗಿಸುವ ಸಾಹಿತ್ಯ ಕೃತಿ ರಚಿಸಿದ್ದಾರೆ. ಕಂಪ್ಯೂಟರ್ ಚಾಲನೆ ಕಾಲದಲ್ಲಿ ಬಿಡುವು ಇಲ್ಲದ ಕೆಲಸ. ಮುಂಜಾನೆಯಿಂದ ಸಂಜೆವರೆಗೂ ದುಡಿಮೆ! ದುಡಿಮೆ! ದೇಹಕ್ಕೆ ಆಯಾಸವಾಗಿ ಮನಸ್ಸಿಗೆ ಉಲ್ಲಾಸ ಇಲ್ಲದಿದ್ದರೆ ಬದುಕಿದ್ದೂ ಸತ್ತಂತೆ ಸರಿ. ಅದಕ್ಕಾಗಿ ನಾವು ಸುಖ–ಸಂತೋಷದಿಂದ ಬಾಳಬೇಕಾದರೆ ನಗಬೇಕು, ನಕ್ಕು ನಗಿಸಬೇಕು. 'ನಗು' ಮನುಷ್ಯನ ಆಯುಷ್ಯವನ್ನು ಹೆಚ್ಚಿಸುತ್ತದೆ. ನಗು ಇಲ್ಲದ ಮನೆ ಮಸಣಕ್ಕೆ ಸಮ. 'ನಕ್ಕರೆ ಅದೇ ಸ್ವರ್ಗ' ನಮ್ಮ ದೇಹ ಆರೋಗ್ಯದಿಂದ ಉಳಿಯಬೇಕಾದರೆ ದಿನದಲ್ಲಿ ಒಮ್ಮೆಯಾದರೂ ನಗಲೇಬೇಕು. ನಕ್ಕು ನಗಿಸಿದರೆ ಅದೇ ಸ್ವರ್ಗಕ್ಕೆ ಸಮನಾದುದು. ಆದರೆ ನಗು ಯಾವ ಔಷಧಿ ಅಂಗಡಿಯಲ್ಲಿ ಸಿಗುವುದಿಲ್ಲ. ಅದು ನಮ್ಮಲ್ಲಿಯೇ ಹುಟ್ಟಬೇಕು. ನಗುವು ಒಂದು ದಿವ್ಯೌಷಧಿ. ನಗರ ಜೀವನದಲ್ಲಂತೂ ಹಾಸ್ಯಕ್ಕೆ ಕೊರತೆ ಇದೆ. ಈಗಿನ ಗಡಿ–ಬಿಡಿ ಯುಗದಲ್ಲಿ ನಗಲು ಪುರುಸೊತ್ತಿಲ್ಲ. ಸಂಸಾರ ಸಾಗರದಲ್ಲಿ ಇಳಿಯಬೇಕು. ಮುಳುಗದೆ ತೇಲುತ್ತಾ ಇರಬೇಕು. ಇಳೆ ಬಾನ್ಗಳಾಟದಲ್ಲಿ ನಗು–ನಗುತ್ತಾ ಮೈಮರೆತು ಧರೆಯ ಮೇಲೆ ಬದುಕು ಸಾಗಿಸಬೇಕು.

ವಿಕೃತ ಮನಸ್ಸು ಕುದಿಯುವ ಮನಸ್ಸೇ ಎಲ್ಲ ರೋಗಗಳಿಗೂ ಮೂಲ ಕಾರಣವೆಂದು ಮನಃ ತಜ್ಞರು ಹೇಳುತ್ತಾರೆ. ಪ್ರಸನ್ನ ಮನಸ್ಸೇ ಪ್ರಸಾದಿಕ ಮನಸ್ಸು. ಈ ಬದುಕು ತಿನಕಾಟ, ತಡಕಾಟ, ಗೋಣಗಾಟ, ಬೆದಕಾಟದಿಂದ ತುಂಬಿದರೆ ಬದುಕಿನ ಸಾರ್ಥಕತೆ ಕಾಣಲಾರೆವು. ಅದಕ್ಕಾಗಿ ಮನೋಆರೋಗ್ಯಕ್ಕೆ ನಗುವೇ ಸೂಕ್ತ ಔಷಧಿ. ನಾಲ್ಕಾರು ದಶಕಗಳ ಹಿಂದೆ ಅವಿಭಕ್ತ ಕುಟುಂಬಗಳಿದ್ದು ಒಕ್ಕಟ್ಟು ಮನೆ ಮಾಡಿ, ಪ್ರೀತಿ ಬಾಂಧವ್ಯ, ಆತ್ಮೀಯತೆಗಳು ನೋಡಲು ಸಿಗುತ್ತಿದ್ದವು. ಇಂದು ಅಂಥ ಕುಟುಂಬಗಳು ಕಡಿಮೆಯಾಗಿ ತಾನು, ತನ್ನ ಹೆಂಡತಿ, ಹಾಗೂ

[illegible]

[illegible]

[illegible]

ಮಕ್ಕಳಿಗೆ ಸೀಮಿತವಾಗಿವೆ. ಇವರನ್ನು ಬಿಟ್ಟು ಉಳಿದವರೆಲ್ಲ ಪರಕೀಯರಾಗುತ್ತಿದ್ದಾರೆ. ಇಂಥ ಕುಟುಂಬಗಳಲ್ಲಿದ್ದ ನಾವುಗಳೆಲ್ಲ ಪ್ರೀತಿ–ವಿಶ್ವಾಸ ಕಳೆದುಕೊಂಡಿರುವದರಿಂದ ಪ್ರತಿಯೊಂದು ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಳ್ಳುವ ಹಠದಿಂದಲೇ ನಮಗೆ ರಕ್ತದೊತ್ತಡ, ಸಿಹಿಮೂತ್ರ ರೋಗಗಳು ಕಾಣಿಸಿಕೊಂಡಿರಬಹುದು. ಅದಕ್ಕಾಗಿಯೇ ಇರಬೇಕು ಇಂದು ಹಣವನ್ನು ತೆತ್ತು ನಗಬೇಕಾದ ಪ್ರಸಂಗ ಬಂದಿದೆ. ನಗರಗಳಲ್ಲಿ 'ನಗು(ವ)ಸಂಘ' "Laughing Club"ಗಳು ತಲೆಯೆತ್ತಿವೆ. ಎಂಥ ವಿಪರ್ಯಾಸ! ಅದಕ್ಕೆ ಉತ್ತರವೆಂಬಂತೆ ಜಿ.ಬಿ. ಖಾಡೆಯವರ ಈ ಹಾಸ್ಯ ಪ್ರಸಂಗಗಳು ಕೈ ದೀವಿಗೆಯಾಗಲಿವೆ.

ಹಾಸ್ಯವೆಂಬುದು ಶಾರೀರಿಕ ಮತ್ತು ಮಾನಸಿಕ ಕ್ರಿಯೆಗಳೆರಡಕ್ಕೂ ಸಂಬಂಧಪಟ್ಟದ್ದು. ಹಾಸ್ಯ ದಣಿದ ದೇಹಕ್ಕೆ ವಿಶ್ರಾಂತಿಯನ್ನು ನೊಂದ ಮನಸ್ಸಿಗೆ ನೆಮ್ಮದಿಯನ್ನು ಮತ್ತು ತುಕ್ಕು ಹಿಡಿದ ಸಮಾಜಕ್ಕೆ ಉತ್ತೇಜನ ಕೊಡುವಂತಹುದು. ದುಃಖದಿಂದ ಕೂಡಿದ ಇಂದಿನ ಸಮಾಜವನ್ನು ಸುಖದತ್ತ ಕೊಂಡೊಯ್ಯುವಲ್ಲಿ ನಗೆಯ ಜವಾಬ್ದಾರಿ ಹೆಚ್ಚಾಗಿದೆ. ನಗು ಎಲ್ಲರಿಗೂ ಬೇಕು. ಅಳು ಯಾರಿಗೂ ಬೇಡ. ಆದರೆ ನಗು–ಅಳುಗಳೆರಡೂ ಬೆಳಕು ನೆರಳುಗಳಂತೆ ಸದಾ ನಮ್ಮೊಂದಿಗೆ ಒಟ್ಟಾಗಿ ಇರುವಂಥಹವುಗಳು. ನಗು–ಅಳುಗಳ ಸಮನ್ವಯವೇ ನಿಜವಾದ ಬದುಕು. ಕಾರಣ ಸೊಗಸಾದ ಬದುಕಿಗೆ ನಗು ಅಳುಗಳೆರಡೂ ಬೇಕಾಗುತ್ತದೆ. "A Smile is the Shortest Distance between two People" ಎಂದು ದಾರ್ಶನಿಕರು ಹೇಳಿದ ಹಾಗೆ ಸ್ನೇಹ, ಪ್ರೇಮ, ವಿಶ್ವಾಸಗಳಂತಹ ಮಾನವೀಯ ಮೌಲ್ಯಗಳನ್ನು ಪರಸ್ಪರರು ಬೆಳೆಸಿಕೊಳ್ಳಬೇಕಾದರೆ ನಗೆ ಅತ್ಯಂತ ಅವಶ್ಯವಾಗಿದೆ. ಖಾಡೆಯವರ ಹಾಸ್ಯ ಪ್ರಸಂಗಗಳಲ್ಲಿ ಲೇಖಕರ ಸಿಹಿ–ಕಹಿ ಅನುಭವಗಳ ಸತ್ಯ ಘಟನೆಳಾದ್ದರಿಂದ ನಿರಂತರವೂ ಚಿರನೂತನ. ಜನಸಾಮಾನ್ಯರ ಆಡುಭಾಷೆಯಲ್ಲಿ ಹೃದಯ ಸ್ಪರ್ಶಿಯಾಗಿ ಹೆಣೆಯಲ್ಪಟ್ಟ ಈ ಇಪ್ಪತ್ತು ಪ್ರಸಂಗಗಳ ಪುಷ್ಪಮಾಲೆ ಸಾಹಿತ್ಯ ಕ್ಷೇತ್ರದ ದಿವ್ಯ ಕೊಡುಗೆಯಾಗಿದೆ. ನಾಡಿನ ಉದ್ದಗಲಕ್ಕೂ ಓದುಗರ ಮನಸೆಳೆದು ಕಂಪು ಹರಡುತ್ತಲಿವೆ. ಖಾಡೆಯವರು ಭಾಷೆ ಬಳಸುವುದರಲ್ಲಿ ಪ್ರವೀಣರು. ಕಥಾವಸ್ತು, ಕಥೆ ಹೇಳುವ ಶೈಲಿ ನಿರೂಪಿಸಿದ ಸಾಹಿತ್ಯವನ್ನು ನಿರರ್ಗಳವಾಗಿ ಓದಿಸಿಕೊಂಡು ಹೋಗುತ್ತದೆ. ವಾಸ್ತವಿಕ ಘಟನೆಗಳನ್ನು ಚಿತ್ರಿಸುವಾಗ ಓದುಗ ಬೇರೆಯಾಗಿರದೆ, ಘಟನಾ ಜೀವಿಯೇ ತಾನಾಗಿರುತ್ತಾರೆ.

"ಇವತ್ತು ಪುರಾಣ ಎಲ್ಲಿಗೆ ಬಂದೈತಿ" ಎನ್ನುವ ಕಥೆ, ಕಥೆಗೆ ತಕ್ಕ ಚಿತ್ರ, ಚಿತ್ರದೊಳಗಿನ ಭಾವನೆ, ಭಾವನೆಗೆ ತಕ್ಕ ಭಾಷೆ ಬಳಕೆಯಿಂದ ಕಥಾ ಸೌಂದರ್ಯದೊಂದಿಗೆ ಜೀವಂತಿಕೆ ಮೂಡಿ ಬಂದಿದೆ. ಸಂಪೂರ್ಣ ವಿಷಯವನ್ನು ತಿಳಿಯಲಾರದೇ ಅರ್ದಂಬರ್ಧ ತಿಳಿದುಕೊಂಡರೆ ಆಗುವ ಅನಾಹುತವನ್ನು ಈ ಕಥೆಯಲ್ಲಿ ಒಡಮೂಡಿಸಿದ್ದಾರೆ. ರಾಮಾಯಣ ಕಥೆ ಕೇಳಿದವನ ಗತಿ ಏನಾಯಿತು ಎಂಬುದೂ ತಿಳಿದು ಬರುವುದು. ಅಸಲಿ ಗ್ರಾಮ್ಯ ಭಾಷೆ, ಕೆಲವೊಂದು ಶಬ್ದಗಳು ಕನ್ನಡ ಶಬ್ದಕೋಶದಿಂದಲೂ ಕಡಿಮೆಯಾಗುತ್ತಿರುವಾಗಲೂ ಪ್ರಯೋಗಿಸಿದ್ದಾರೆ.

[illegible]

"ಇವರನ್ನ ಬಿಟ್ಟ ಇವರ್‍ಯಾರು" ಕಣ್ಣುಮುಚ್ಚಾಲೆ ಆಟದಲ್ಲಿ ಕೇಳುವ ಈ ಶಬ್ದ, ಖಾಡೆ ಅವರ ಕೈಯಲ್ಲಿ ಸಿಕ್ಕು ಕಥೆಯಾಗಿದೆ. ಈ ಕಥೆಯಲ್ಲಿ ಶಿಕ್ಷಣ ಇಲಾಖೆಯಲ್ಲಿ ಏನೆಲ್ಲವೂ ನಡೆಯುತ್ತದೆ ಎಂಬುದನ್ನು ತಿಳಿಸುವ ಪ್ರಯತ್ನವಾಗಿದೆ. ಪೂರ್ಣ ಓದಿದ ಮೇಲೆ ವ್ಯಥೆನೂ ಆಗಿ, ನಿಜವಾಗಿ ಹೇಳಬೇಕೆಂದರೆ ಹಾಗಾಗಬಾರದಾಗಿತ್ತಲ್ಲ ಅಂತ ಕರುಣೆ ಹುಟ್ಟಿಸುವಲ್ಲಿ ಈ ನಾಟಕ ಸಫಲವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಇಂದಿನ ನಾಟಕಗಳು ಅತಿಯಾದ ಅವ್ಯವಸ್ಥೆಯಿಂದ ಕೂಡಿಕೊಂಡಿರುತ್ತವೆ; ಎಂಬುದು ತೀರ ಸಾಮಾನ್ಯವಾದುದು ಎಂಬುದನ್ನು ಹೇಳುವಲ್ಲಿ 'ಅಪರೂಪದ ಅತಿಥಿಗಳು' ಕತೆ ನಿಜಕ್ಕೂ ಅಪರೂಪ.

ಯಾರೂ ಊಹಿಸಲೂ ಸಾಧ್ಯವಾಗದ ಸಹಜ ಸುಂದರ ಭಾವನೆ ವ್ಯಕ್ತವಾಗಿದೆ. ಹಾಗೆಯೇ 'ಶೂರ್ಪಣಕಿಯ ಮೂಗು ಕೊಯ್ದಾಗ' ಮತ್ತು 'ಭಿಮನ ಪಾತ್ರಧಾರಿ ಬಂಡಿಯಲ್ಲಿ ಕಂಡಾಗ' ಎಂಬ ಪ್ರಸಂಗಗಳು ಹಳ್ಳಿಗಳಲ್ಲಿ ಆಗುವ ನಾಟಕದಲ್ಲಿನ ಅನಾಹುತಗಳನ್ನು ವ್ಯಕ್ತಪಡಿಸುತ್ತವೆ. ಈ ಪ್ರಸಂಗಗಳಿಂದ ಎಂಥವರಿಗೂ ನಗು ಬಂದೇ ಬರುವುದು. ಆದರೆ ಇತ್ತೀಚಿನ ನಾಟಕಗಳು ಮೂಲ ಉದ್ದೇಶಗಳಿಂದ ಎಷ್ಟು ದೂರ ಉಳಿದಿವೆ ಎಂಬುದನ್ನು ಅಲ್ಲಿ ನಡೆದ ಸನ್ನಿವೇಶಗಳಿಂದ ಸ್ಥೂಲವಾಗಿ ವಿವರಿಸಿ ನೆನಪಿಸಿದ್ದಾರೆ.

'ಗಣೇಶನ ಪವಾಡ' ಕಥೆ ಓದಿದಾಗ ಗಹಣತೆಯಿಂದ ಇದ್ದರೂ ಆಸೆ ಯಾರನ್ನೂ ಬಿಟ್ಟಿಲ್ಲ ಎಂಬ ತ್ರಿಕಾಲ ಸತ್ಯವನು ತಿಳಿಸುತ್ತದೆ. ಇಂದಿನ ಯುಗದಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧ ಎಂತಹುದು ಎಂಬುದನ್ನು "ಸಾಲಿ ಸುಟ್ಟಿತು" ವಿಡಂಬನಾ ಕಥೆಯಲ್ಲಿ ನಿರೂಪಿಸಲ್ಪಟ್ಟಿದೆ. ಹಾಗೆಯೇ "ಸಾಲಿ ಸಾಹೇಬರ ಕೋಳಿ ಊಟ" ಎಂಬ ಇನ್ನೊಂದು ಬರಹ ಅಧಿಕಾರಿಗಳು ಮತ್ತು ಶಿಕ್ಷಕರ ಸಂಬಂಧ ಎಂಥಹುದು ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ಒಂದು ಹಾಸ್ಯ ಕಥೆಯಾಗಿ, ವಿಡಂಬನೆಯಾಗಿ, ಎಚ್ಚರಿಕೆಯಾಗಿ, ನೀತಿಮಾತಾಗಿ ಮೌಲ್ಯ ಮರೆಯಾಗಬಾರದು ಎನ್ನುವ ಕಳಕಳಿ ಇಲ್ಲಿ ಧ್ವನಿತವಾಗಿದೆ.

"ಪಂಚರಲ್ಲಿ ಪರಮೇಶ್ವರ" ಎಂಬ ಶೀರ್ಷಿಕೆಯ ಬರಹದಲ್ಲಿ ಗ್ರಾಮದ ಜನರಿಗೆ ಅದರಲ್ಲೂ ಬಡವರಿಗೆ, ನಿರ್ಗತಿಕರಿಗೆ ಅನ್ಯಾಯವಾದಾಗ, ನ್ಯಾಯ ಒದಗಿಸಿಕೊಡುವಂತಹ ವ್ಯವಸ್ಥೆ ಕೂಡ ಎಷ್ಟೊಂದು ಅನ್ಯಾಯದಿಂದ ಹಾಗೂ ಅವೈಜ್ಞಾನಿಕತೆಯಿಂದ ಕೂಡಿರುತ್ತದೆ ಎಂಬುದನ್ನು ಕನ್ನಡಿಸಿದ್ದಾರೆ. ಇಂತಹ ಸ್ಥಿತಿ ಇಂದಿನ ಹಲವು ಗ್ರಾಮೀಣ ಪ್ರದೇಶಗಳಲ್ಲಿ ಮುಂದುವರೆದಿರುವುದು ವಿಪರ್ಯಾಸದ ಸಂಗತಿಯಾಗಿದೆ.

"ಹೆಡ್ ಮಾಸ್ತರನ ತಲೆ ಬೋಳಿಸಿದ್ದು" ಎಂಬಲ್ಲಿ ಬರುವ ವಿನೋದ ಪ್ರಸಂಗ ಸಮಯೋಚಿತ ಮತ್ತು ತಾತ್ಕಾಲಿಕ ಬುದ್ಧಿಗೆ ಹಿಡಿದ ಕನ್ನಡಿಯಂತಿದೆ. ಹೆಡ್ ಮಾಸ್ತರನ ತಲೆಯೊಳಗಿನ ರತ್ನ ತೆಗೆಯಲು ನಡೆಸಿದ ಪ್ರಾಮಾಣಿಕ ಪ್ರಯತ್ನ ಮುಂಧೋರಣೆ ಇರುವ ಎಂಥವರನ್ನೂ ಮಂದರನ್ನಾಗಿಸುತ್ತದೆ.

ಬಹು ಸಂಖ್ಯಾತ ಸಾಹಿತಿಗಳು ಅತ್ಯಲ್ಪ ಬರೆದು ಹೆಚ್ಚು ಪ್ರಚಾರತೆ ಮತ್ತು ಕೀರ್ತಿ ಗೌರವ ಬಹುಮಾನಗಳನ್ನು ಬಯಸುತ್ತಾರೆ ಎಂಬುದನ್ನು, "ಸಂಗಣ್ಣನ ಸಾಹಿತ್ಯದ ಹುಚ್ಚು" ಎಂಬ ಲೇಖನದಿಂದ ಅರಿಯಬಹುದಾಗಿದೆ. "ಜತ್ತ ಗ್ರಾಮದ ಪೋಲಿಸ್ ಕಸ್ಟಡಿಯಲ್ಲಿ" ಹಾಗೂ "ನಾಯಿ ಕಡಿಸಿಕೊಂಡಿದ್ದು" ಈ ಬರಹಗಳು ಲೇಖಕರು ಜಾನಪದ ಸಂಗ್ರಹಣೆಯ ಕಾರ್ಯದಲ್ಲಿ ತೊಡಗಿದಾಗ ಆದ ಅನುಭವಗಳಾಗಿದ್ದು ಅವರ ಅನುಭವದ ಮೂಸೆಯಿಂದ ಬಂದಿದ್ದು ಹೆಚ್ಚು ಸ್ವಾಭಾವಿಕವಾಗಿದೆ. ಅಲ್ಲಿ ಅವರು ಅನುಭವಿಸಿದ ಕಷ್ಟಗಳ ನೈಜ ಚಿತ್ರಣಗಳಿವೆ.

"ಸಾಹಿತ್ಯ ಎಂದರೆ ಕೇವಲ ಚಿಂತಿಸುವುದೊಂದೆ ಅಲ್ಲ, ಬದುಕಿಗೆ ಭರವಸೆ ತುಂಬಿ, ಬೇಸರಿಕೆಯಾದರೆ ಆಸರಾಗುವ, ಚಿಂತೆ ಬಿಡಿಸುವ ವಿನೋದ ಪದ ಸಾಹಿತ್ಯ ನವ್ಯ ನವ ನವೀನವಾದುದು"[೧]. "ಮೂಗನಿಗೆ ಬಾಯಿ ಬಂದಾಗ" ಕತೆ ಓದಿದಾಗ ಕಾವ್ಯದಲ್ಲಿ ಕಲ್ಪನಾ ದರ್ಶನ, ನಾಟಕದಲ್ಲಿ ರಸದರ್ಶನ ಆದರೆ, ಶ್ರೀ ಖಾಡೆಯವರ ಕಲೆ ರಸನಿಮಿಷಗಳು ಹಾಸ್ಯ ದರ್ಶನದೊಂದಿಗೆ ಗ್ರಾಮೀಣ ಬದುಕಿನ ದರ್ಶನ ಮೂಡಿಸುತ್ತವೆ.

> "ಗೋಳಗುಮ್ಮಟ ಮಾತ ಗದ್ದರಿಸಿ ಕೇಳ್ಯಾವ
> ಖಾಡೆಯವರು ಬರೆದ ಕಥೆಗಳೊಳಗ, ಓದುವಾಗ
> ನಕ್ಕು-ನಕ್ಕು ಹೊಟ್ಟೆ ಹುಣ್ಣಾತ"[೨]

ಎಂಬುದು ಖಾಡೆಯವರ ಹಾಸ್ಯಕ್ಕೆ ಬರೆದ ವ್ಯಾಖ್ಯಾನವಾಗಿದೆ.

ಜೀವನಾನುಭವದ ಆಳ, ಮಾತು ನಿರರ್ಗಳ, ಅಪರೂಪದ ಕೃತಿ. ಕೆಲವೊಂದು ಶಬ್ದಗಳು ಓದುವಾಗ ಅಶ್ಲೀಲ ಅನಿಸಿದರೂ ಅಸಲಿ ಎನ್ನುವುದು ಮಾತ್ರ ಸರಿ. ಭಾಷೆ ಬದಲಿಸಿದರೆ ಭಾವನೆ, ಗಟ್ಟಿತನ ಕಮ್ಮಿಯಾದೀತು ಎನ್ನುವ ಕಳಕಳಿ ಲೇಖಕರಿಗಿದ್ದಂತಿದೆ. ಖಾಡೆಯವರು ಬರೆದ ೨೦ ಹಾಸ್ಯ ಕಥೆಗಳು ವೈವಿಧ್ಯಮಯವಾಗಿ ಬಂದಿವೆ. ಭಾವನೆಗೆ ತಕ್ಕ ಗ್ರಾಮ್ಯ ಭಾಷೆ ಬಳಕೆಯಿಂದ ಕಥಾ ಸೌಂದರ್ಯದೊಂದಿಗೆ, ಜೀವಂತಿಕೆ ಮೂಡಿ ಬಂದಿದೆ. ನಿಷ್ಕ್ರೀಯಗೊಂಡ ಇಂದಿನ ಸಮಾಜವನ್ನು ಕ್ರಿಯಾಶೀಲ ಹಾಗೂ ಆನಂದಮಯ ಸಮಾಜವನ್ನಾಗಿ ಮಾಡುವಲ್ಲಿ ಈ ಹಾಸ್ಯ ಪ್ರಸಂಗಗಳು ಪ್ರಯೋಜನಕಾರಿಯಾಗಿವೆ. ಅಲ್ಲದೆ ಇದೊಂದು ಸಾಹಿತ್ಯಾಸಕ್ತರಿಗೆ ಅಷ್ಟೆ ಅಲ್ಲ ಸಾರಸ್ವತ ಲೋಕಕ್ಕೆ ಒಂದು ಕೊಡುಗೆಯಾಗಿದೆ. ಎಂದು ಹಾರೈಸಿದ್ದಾರೆ. ಆಶಯ, ಅಕ್ಷರ, ವಿದ್ಯೆಯ ಜೊತೆಗೆ ವಿನೋದ ಸಾಹಿತ್ಯ ಜರೂರ ಬೇಕಾಗಿದೆ. ಅವಶ್ಯಕತೆಗೆ ಅನುಸರಿಸಿ ಹಾಸ್ಯ ಪ್ರಸಂಗಗಳು ಕಥಾ ಹೊತ್ತಿಗೆ ಹೊರಬಂದಿರುವುದು ನಮ್ಮೆಲ್ಲರಿಗೆ ಒಂದು ಸಂತಸ ವಿಷಯ.

> "ಹಾಸ್ಯ ಪ್ರಜ್ಞೆ ಹಸಿರಾಗಲಿ
> ಸಾಹಿತ್ಯ ಉಸಿರಾಗಲಿ
> ಚಿಂತನ, ಚಿರನೂತನವಿರಲಿ"[೩]

---

೧). ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು. ಪುಟ-೬೫

೨. ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು. ಪುಟ-vi

೩. ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು. ಜಿ. ಬಿ. ಖಾಡೆ. ಪುಟ viii

೪.೨. ಗಂಡಸರಿಗೆ ಹೆರಿಗೆ ಬ್ಯಾನಿ ಎದ್ದಾಗ

ಜನಪದ ಕಥಾ ಸಂಗ್ರಹ ಇದಾಗಿದ್ದು ಜಾನಪದದ ಬಗ್ಗೆ ಅಪಾರವಾದ ಕಾಳಜಿ ಉಳ್ಳ ಜಿ.ಬಿ. ಖಾಡೆ ಹಳ್ಳಿಗಳಲ್ಲಿ ನೌಕರಿ ಮಾಡುತ್ತಿರುವಾಗಲೆ ರೈತಾಪಿ ಜನರ ಒಡನಾಡಿಗಳಾದರು. ಜನಪದರ ಸಂಗಾತಿಗಳಾದರು. ತಾವು ಹೆಚ್ಚಿಗೆ ಕಲಿಯದಿದ್ದರೂ ಸತತವಾಗಿ ಲೇಖಕರ ಸಂಪರ್ಕದಿಂದ, ಸಾಹಿತ್ಯ ಅಧ್ಯಯನದಿಂದ, ಸಾಹಿತ್ಯವನ್ನು ಬಳಸಿಕೊಂಡರು ಮತ್ತು ಬೆಳಸಿದರು.

ಜಾನಪದ ಕಥೆಗಳ ಮೂಲ ಉದ್ದೇಶ ಮನರಂಜನೆಯಾಗಿದೆ. ಮಗಳ ಮನೆಯಲ್ಲಿ ಕೊರತೆ ಕಂಡು ಬಂದಾಗ ತಂದೆ ತನ್ನ ಮನೆಯಿಂದ ಅವಳಿಗೆ ಬಂಡಿ ತುಂಬಿ ವಸ್ತುಗಳನ್ನು ಕಳುಹಿಸುವಂತೆ ಈ ಲೋಕದ ತಂದೆ, ದೇವರು; ತನ್ನ ಮಕ್ಕಳಿಗಾಗಿ ಕತೆಗಳನ್ನು ಬಂಡಿ ತುಂಬಿ ಕಳಿಸಿದನೆನ್ನುವ ಕಲ್ಪನೆಯು ಮನೋಹರವಾಗಿದೆ. ಅಷ್ಟೆ ಪರಿಪೂರ್ಣವಾಗಿದೆ.

ಜೀವನವನ್ನು ಸರಳಗೊಳಿಸಿ ನೋಡುವ ಹಳ್ಳಿಗರ ಮುಗ್ಧ ಮನಸ್ಸು, ಬಗೆಬಗೆಯಾಗಿ ಕೆಲಸ ಮಾಡುತ್ತದೆಯೆಂಬುದಕ್ಕೆ ಜಾನಪದ ಕತೆಗಳು ಶ್ರೇಷ್ಠ ನಿದರ್ಶನಗಳಾಗಿವೆ. ಜನಪದ ಕಥೆಗಳ ರಚನೆಯು ಮನಸ್ಸಿನಷ್ಟೆ ಸರಳ. ಆಶಯಗಳ ಅದಲು ಬದಲಿನಿಂದ ಅಥವಾ ಅವುಗಳ ವಿವಿಧ ಜೋಡಣೆಯಿಂದ ಹೊಸ ಕಥೆಗಳು ಸೃಷ್ಟಿಯಾಗುವುದು ಸುಲಭವೆನಿಸುವುದು. ಕಥೆಗಳ ಬಂಧ, ಭಾಷೆ ಮತ್ತು ಕೆಲವೊಮ್ಮೆ ನುಡಿಗಟ್ಟುಗಳು ಒಂದು ರೀತಿ ನಿರ್ದಿಷ್ಟವಾಗಿರುವದರಿಂದ ಅಂತಹ ಕಥೆಗಳನ್ನು ಕಟ್ಟುವರಿಗೂ ಅಷ್ಟು ಶ್ರಮ ಆಗಲಿಕ್ಕಿಲ್ಲ. ಜಾನಪದ ಕತೆಗಳನ್ನು ಸಾಕಷ್ಟು ಕೇಳಿದ, ತಕ್ಕ ಮಟ್ಟಿನ ಕಲ್ಪಕ ಶಕ್ತಿಯಿರುವ ಜಿ. ಬಿ. ಖಾಡೆ ಸುಲಭವಾಗಿ ಒಂದು ಹೊಸ ಕತೆಯನ್ನು ನಿರ್ಮಾಣ ಮಾಡಬಲ್ಲರು.

"ಜಾನಪದ ಜಟ್ಟಿ, ವಿಚಾರ ತುಂಬಿದ ಮಟ್ಟಿ
ಬರಹ ಬಾಳ ಗಟ್ಟಿ ಮಾಡಲಿಲ್ಲ ಖೊಟ್ಟಿ
ಖಾಡೆಯವರ ಕಥೆಗಳು ಎಲ್ಲರಿಗೂ ಸೀಪರಮಟ್ಟಿ"[೪]

ನಗುವು ಪ್ರತಿಯೊಬ್ಬ ಮನುಜನ ನೈಸರ್ಗಿಕ ಕ್ರಿಯೆ. ಹಾಸ್ಯ ಹಾಗೂ ಲಾಸ್ಯ ಮನುಷ್ಯನ ನೆಮ್ಮದಿಗಾಗಿ ಕನ್ನಡ ನಾಡಿನ ಜನ ನಕ್ಕು ನಲಿಯುತ ಜಿ. ಬಿ. ಖಾಡೆ ಅವರು ತಮ್ಮ ಸೇವೆಯಲ್ಲಿ ನಡೆದು ಹೋದಂತಹ, ಅವರು ಅನುಭವಿಸಿದಂತಹ ಅನುಭವಗಳನ್ನು "ಗಂಡಸರಿಗೆ ಹೆರಿಗೆ ಬ್ಯಾನಿ ಎದ್ದಾಗ" ಎಂಬ ಜನಪದ ಹಾಸ್ಯ ಕತೆಗಳಲ್ಲಿ ಹೇಳಿದ್ದಾರೆ. ಇದರಲ್ಲಿ ಬರುವ ಕೆಲವು ಹಾಸ್ಯ ಕಥೆಗಳು ಜನಪದ ಸಾಹಿತ್ಯದ ಕ್ಷೇತ್ರಕಾರ್ಯದ ನೈಜ ಅನುಭವಗಳಾಗಿವೆ. ಈ ಹಾಸ್ಯ ಪ್ರಸಂಗಗಳನ್ನು ಅವರು ಅತಿಥಿಗಳಾಗಿ ಭಾಷಣದಲ್ಲಿ ಹೇಳಿದಾಗ ಸಭಿಕರೆಲ್ಲ ನಗೆಗಡಲಲ್ಲಿ ತೇಲುವುದುಂಟು. ಹಾಗೆ ನಗೆ ಪ್ರಸಂಗಗಳನ್ನು ಹೇಳುತ್ತಿರಲಾಗಿ ಕೆಲವು ಸಾಹಿತ್ಯ ಮಿತ್ರರು ಇವರಿಗೆ

---

೪. ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು. ಪುಟ– vi

[illegible]

[illegible]

[illegible]

[illegible]

‘ಈ ಹಾಸ್ಯ ಪ್ರಸಂಗಗಳನ್ನು ನೀವೇಕೆ ಬರೆದಿಡಬಾರದು? ನೀವು ಗತಿಸಿದ ನಂತರ ಅವು ಕೂಡ ನಿಮ್ಮೊಡನೆ ನಶಿಸಿ ಹೋಗುತ್ತವೆ’ ಅಂತ ದುಂಬಾಲು ಬಿದ್ದಾಗ ಈ ಹಾಸ್ಯ ಕಥೆಗಳು ಉದ್ಭವವಾದವು.

ನಿಸರ್ಗದ ವಿರುದ್ಧ ಹೋರಾಡಲು ಯಾರಿಗೂ ಸಾಧ್ಯವಿಲ್ಲ. ಏಕೆಂದರೆ ಹುಟ್ಟು, ಸಾವು, ಬದುಕು, ಸೃಷ್ಠಿ ಎಲ್ಲವೂ ನಮಗೆ ನಿಸರ್ಗ ನೀಡಿದ ದೇಣಿಗೆ. ಆದರೆ ಒಮ್ಮೆ ನಮ್ಮ ದೇಶದ ಹೆಣ್ಣು ಮಕ್ಕಳು ನಿಸರ್ಗದ ವಿರುದ್ಧ ಹೋರಾಡಿ, ಅಪಜಯ ಹೊಂದಿದ ಸಂಗತಿಯನ್ನು ‘ಗಂಡಸರಿಗೆ ಹೆರಿಗೆ ಬ್ಯಾನಿ ಎದ್ದಾಗ’ ಎನ್ನುವ ಶೀರ್ಷಿಕೆಯ ಕಥೆಯಲ್ಲಿ ನಿರೂಪಿತವಾಗಿದೆ. ಇಲ್ಲಿ ಗಂಡು, ಹೆಣ್ಣಿನ ಸಂಬಂಧಗಳಲ್ಲಿ ‘ಪ್ರೇಮ’ ಬಹು ಮುಖ್ಯವಾದುದು. ಇದಕ್ಕಿಂತ ಬಹು ಮುಖ್ಯವೆಂದರೆ ಹೆಣ್ಣಿಗೆ ತನ್ನ ಗಂಡನ ಬಗ್ಗೆ ಇರುವ ನಿಷ್ಠೆ ಬಹು ಮುಖ್ಯ. ಇಂಥ ತತ್ವವನ್ನು ವಿವರಿಸುತ್ತ ವ್ಯಭಿಚಾರಿತನ ಇಂದಿನ ಸಮಾಜದಲ್ಲಿ ಇರುವುದನ್ನು ಹಾಸ್ಯ ಮತ್ತು ಪೌರಾಣಿಕ ಕಥೆಯ ಮೂಲಕ ನಿರೂಪಿತವಾಗಿದೆ. ಈ ಕಥೆಯನ್ನು ಸಂಪೂರ್ಣವಾಗಿ ಓದಿದಾಗ ನಮಗೆಲ್ಲ ಜನ್ನನ ‘ಯಶೋಧರ ಚರಿತೆ’ ಘಟ್ಟಣೆ ನೆನಪಾಗದೆ ಇರಲಾರದು.

‘ಹೆಂಡತಿಗೆ ಅಂಜದ ಗಂಡು ಹುಲಿ’ ಯಲ್ಲಿ ಎಲ್ಲರೂ ಅಮ್ಮವರ ಗಂಡಂದಿರೇ ಇದ್ದು, ಮನೆಯಲ್ಲಿ ಇಲಿಯಾಗಿದ್ದುಕೊಂಡು, ಬೀದಿಯಲ್ಲಿ ಹುಲಿಯಾಗಿ ಮೆರೆಯುವ ಗುಂಡಣ್ಣನ ಕಥೆ ಸ್ವಾರಸ್ಯಕರವಾಗಿ ಮೂಡಿಬಂದಿದೆ.

‘ಗೆಳೆತನ’ ಪ್ರಸಂಗದಲ್ಲಿ ಮಿತ್ರತ್ವದ ವಿಶ್ವಾಸತೆ, ದ್ರೋಹ, ಸತ್ಯ, ಒಗ್ಗಟ್ಟು ಮೊದಲಾದ ಮೌಲ್ಯಗಳನ್ನು ಸಾಮಾನ್ಯವಾಗಿ ಪ್ರತಿಪಾದಿಸುತ್ತ ಅಲ್ಲಿ ತಾನು, ತನ್ನ ಗೆಳೆಯ ಒಗ್ಗಟ್ಟಿನಿಂದ ಬಂದು, ಅಪಾಯದಿಂದ ಪಾರಾಗಬಹುದಾಗಿತ್ತು. ಆದರೆ ಇಬ್ಬರೂ ಸ್ವಾರ್ಥತನದಿಂದ ಮಿತ್ರನಿಗೆ ದ್ರೋಹ ಬಗೆದ ಗೆಳೆಯರಿಬ್ಬರೂ ಕಳ್ಳರ ಪಾಲಾಗಿ, ತಮ್ಮ ಹಣವನ್ನೆಲ್ಲ ಕಳೆದುಕೊಂಡು ನಿರ್ಗತಿಕರಾದರು. ಸ್ವಾರ್ಥತನ ಒಳ್ಳೆಯದಲ್ಲ. ಇಬ್ಬರ ಜಗಳ ಮೂರನೆಯವನಿಗೆ ಲಾಭ ಎಂಬಂತೆ ತಮ್ಮಲ್ಲಿದ್ದ ಸಂಪತ್ತನ್ನೆಲ್ಲ ಮಿತ್ರದ್ರೋಹದಿಂದ ಕಳೆದುಕೊಂಡ ಪ್ರಸಂಗ ತಿಳಿಸಿ, ಸಮಾಜಕ್ಕೆ ಉತ್ತಮ ಮೌಲ್ಯವನ್ನು ನೀಡುತ್ತದೆ. ಗೆಳೆಯ ಗೆಳೆಯನಿಗಾಗಿ ಪ್ರಾಣ ನೀಗುವುದುಂಟು. ಆದರೆ ಮೈತ್ರಿ ಕೆಟ್ಟಾಗ ಮಿತ್ರದ್ರೋಹಿಯಾಗಿ ದುಃಖಾಂತಕ್ಕಿಂತ ಆಘಾತವನ್ನುಂಟು ಮಾಡುತ್ತದೆ.

ಇಂದಿನ ಸಮಾಜದಲ್ಲಿ ದೈವಿ ಸ್ವರೂಪಿ ಸ್ವಾಮಿಗಳ ಬದಲಾಗಿ, ಕಪಟ ವೇಷಧಾರಿ ಸ್ವಾಮಿಗಳನ್ನು ಬಯಲಿಗೆಳೆಯುವ, ಮೂಢ ನಂಬಿಕೆಗಳನ್ನು ದೂರ ಮಾಡುವ ತಂತ್ರ “ಯಾವುದು ಹೌದು ಅದು ಅಲ್ಲ, ಯಾವುದು ಅಲ್ಲ ಅದು ಹೌದು” ಕಥೆಯಲ್ಲಿ ವಿಡಂಬನಾತ್ಮಕವಾಗಿದೆ. ಗ್ರಾಮ್ಯ ಜನರನ್ನು ಮೋಸಗೊಳಿಸುವ, ಸುಲಿಗೆಗೊಳಿಸುವ ಹಲವಾರು ವೇಷಗಳನ್ನು ಧರಿಸುವ ಸ್ವಾಮಿಗಳಿರುವುದನ್ನು ತಿಳಿಸಿ. ಅದರಿಂದ ದೂರವಿರುವ ಎಚ್ಚರಿಕೆಯನ್ನು ನೀಡಿದ್ದಾರೆ.

[illegible]

ಚುನಾವಣೆ ಭರಾಟೆ, ಗೆಲುವಿಗೋಸ್ಕರ ಏನೆಲ್ಲ ಕಸರತ್ತು ಮಾಡುವ ಕಥೆ ಇಲ್ಲಿದೆ. ಪುರಸಭೆ ಪ್ರೆಸಿಡೆಂಟ್ ಆಗುವ ಆಸೆಯಿಂದ ತನ್ನೆಲ್ಲ ಸಂಪತ್ತನ್ನು ಕಳೆದುಕೊಂಡು ಬೀದಿ ಪಾಲಾಗುವ ನಿಂಗಣ್ಣನ ಜೀವನವನ್ನು "ಮೂರನೆಯ ಹೋಟು ಯಾರದು?" ಎನ್ನುವ ಕಥೆಯಲ್ಲಿ ಮೋಜಿನ ನಿರೂಪಣೆಯಾಗಿದೆ. ಚುನಾವಣೆ ಏನೆಲ್ಲಾ ಅನಾಹುತಗಳನ್ನು ಮಾಡುತ್ತದೆಂಬುದನ್ನು ಇಲ್ಲಿ ಕಂಡರಿಸಿದ್ದಾರೆ.

ಅಪ್ರಭುದ್ಧ, ಸಂಪೂರ್ಣತ್ವವನ್ನು ಪಡೆಯದ ಇಬ್ಬರು ತರುಣರು ಒಬ್ಬ ತರುಣಿಯ ಮೇಲೆ ಮಾಡಿದ ಕುಚೇಷ್ಟೆಯಿಂದ ಆದ ಫಜೀತಿಯನ್ನು "ಟೆಲಿಗ್ರಾಂ ತಂದ ಫಜೀತಿ"ಯಲ್ಲಿ ಕಾಣುತ್ತೇವೆ. ತಾರುಣ್ಯದಲ್ಲಿ ಅವಮಾನಕ್ಕೆ ಒಳಗಾಗುವ, ತರುಣರ ಸ್ಥಿತಿ ಮೂಡಿದೆ. ಇನ್ನು "ಉಂಡು ಹೋದಾ, ಕೊಂಡು ಹೋದಾ" ಕಥೆಯಲ್ಲಿ ಮೋಸ ಮಾಡುವ ಜನ ಇಂದಿನ ಯುಗದಲ್ಲಿ ಹೆಚ್ಚಾಗಿ ಕಂಡು ಬರುವರು. ಅವರಿಂದ ಎಚ್ಚರಿಕೆಯಿಂದ ಇರಬೇಕೆಂಬುದನ್ನು ತಿಳಿಸುವುದರೊಂದಿಗೆ 'ಹಾಲಿನ ಪಾಲು ಹಾಲಿಗೆ, ನೀರಿನ ಪಾಲು ನೀರಿಗೆ' ಎಂಬಂತೆ ಈ ಕಥೆಯಲ್ಲಿ ಅದರೊಂದಿಗೆ 'ಜಿಪುಣರ ಪಾಲು ಹೆರವರಿಗೆ' ಎಂಬುದು ನಿರೂಪಿತವಾಗಿದೆ. "ಹೇಳುವುದು ಪುರಾಣ; ತಿನ್ನುವುದು ಬದನೆಕಾಯಿ" ಯಲ್ಲಿ ಹೇಳುವುದೊಂದು ಮಾಡುವುದೊಂದು ಸಮಾಜದ ಜನರ ಸುತ್ತ ಹೆಣೆದ ಕಥೆಯಾಗಿದೆ. ವಿಡಂಬನಾತ್ಮಕವಾಗಿ ಬಂದಿದ್ದು, ನಾಚಿಗೆಗೆಟ್ಟವರು, ರಾಜಕಾರಣಿಗಳು ಎಂಥ ಕೆಲಸಕ್ಕೂ ಹೇಸದವರು. ತಾವು ಮಾಡಿದ್ದನ್ನೇ ಶ್ರೇಷ್ಠವೆಂದು ಬಡಾಯಿ ಕೊಚ್ಚಿಕೊಳ್ಳುವ ಜನರ ಕುರಿತಾಗಿದೆ. ಈ ಕಥೆಯನ್ನು ಓದಿದಾಗ ಕಣವಿಯವರ ವಿಡಂಬನಾತ್ಮಕ ಕವಿತೆಗಳು ನೆನಪಾಗುವವು.

"ಕಥೆ ಹೇಳವರ, ಕರಬಲ್ಲ ಹಾಡವರ,
ಬೀರಬಲ್ಲನ ಬುದ್ಧಿ ಬೆಳಸು ಖಾಡೆಯವರಿಗೆ
ಕರದ ಕೊಟ್ಟಾರ ಬಹುಮಾನ"[೫೫]

ಖಾಡೆಯವರ ಕಥೆಗಳಲ್ಲಿ ನೀತಿ ಶ್ರದ್ಧೆಯನ್ನು ಮತ್ತು ಮೌಲ್ಯ ಪ್ರಜ್ಞೆಯನ್ನು ಬೆಳೆಸುವಂತಹ ಕಥೆಗಳು ಮೂಡಿಬಂದಿವೆ. ಸತ್ಯ, ಔದಾರ್ಯ, ವಿಶ್ವಾಸ, ಸ್ನೇಹ, ಪ್ರಾಮಾಣಿಕತೆ, ಶೌರ್ಯ, ದೈವಭಕ್ತಿ ಹತ್ತು ಹಲವು ಉದಾತ್ತ ಮೌಲ್ಯಗಳನ್ನು ಅವು ಸಾಮಾನ್ಯವಾಗಿ ಪ್ರತಿಪಾದಿಸುತ್ತವೆ. ಉಜ್ವಲೀಕರಿಸುತ್ತವೆ.

ಖಾಡೆಯವರು ರಚಿಸಿದ ಕಥೆಗಳು ಜನಜೀವನದ ನೈತಿಕ ಪ್ರಜ್ಞೆಯನ್ನು ಮನರಂಜನೆಯ ಮೂಲಕ, ಜನರಿಗೆ ಗೊತ್ತಿಲ್ಲದ ರೀತಿಯಲ್ಲಿ ತಿದ್ದುವದನ್ನು ನಾವು ಮರೆಯುವಂತಿಲ್ಲ. ಜನಪದ ಕಥೆಯನ್ನು ಯಾರು, ಎಲ್ಲಿಬೇಕಾದರೂ, ಯಾವಾಗ ಎಂದರೆ ಆಗ ಹೇಳಬಹುದು. ಆ ಕಥೆಗಳನ್ನು ಬಹುತೇಕ ಎಲ್ಲ ವರ್ಗದವರು ಹೇಳುತ್ತಾರೆ. ಎಲ್ಲ ಜನಪದ ಕಥೆಗಳು ಹರ್ಷಾಂತಗಳು. ನಮಗೆ ತಿಳಿದ ಮಟ್ಟಿಗೆ ದುಃಖಾಂತಗಳಾದ ಕಥೆಗಳು ಇಲ್ಲ. ಮನರಂಜನೆಯೇ ಮುಖ್ಯವಾದ ಉದ್ದೇಶವುಳ್ಳ ಜನಪದ ಕಥೆಗಳಲ್ಲಿ ದುಃಖಾಂತಕ್ಕೆ ಸ್ಥಾನವಿಲ್ಲ. ಮನರಂಜನೆಯೇ ಮೌಲ್ಯವಾದದ್ದು. ಯಾವುದೇ

---

೫೫. ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು ಜಿ.ಬಿ. ಖಾಡೆ ಪುಟ vii

ಬದಲಾವಣೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಒದಗಿಸಿಕೊಡುತ್ತವೆ. ನಮ್ಮ ಗುಣ ಜಾನಪದದ ಪ್ರಧಾನ ಲಕ್ಷಣವಾಗಿದೆ.

೪.೩. ಮೂರು ಹೂಗಳು: {ನಾಟಕ ಸಂಕಲನ}

"ನಾಟಕ ನೋಡುವುದು ಬರಿಯ ಮನರಂಜನೆಗಲ್ಲ. ನಾಟಕವು ಮೆದುಳಿಗೆ ಚುರುಕಾಗಿ ಕೆಲಸ ಕೊಡಬೇಕು ಜನರ ಆಷಾಢಭೂತಿತನವನ್ನು ಸೋಗುಗಳನ್ನು ಬಯಲಿಗೆಳೆದು, ಸಮಾಜದ ವ್ಯವಸ್ಥೆಯಲ್ಲಿರುವ ಅನ್ಯಾಯದ ಮುಸುಕನ್ನು ಎಳೆದು ಹಾಕಬೇಕು, ಜನ ಸಮಾಜದ ವ್ಯವಸ್ಥೆಯನ್ನು ಕುರಿತು ಯೋಚನೆ ಮಾಡುವಂತೆ ನಾಟಕಕಾರ ನಾಟಕವನ್ನು ಬರೆಯಬೇಕು"[೬]. ಎಂಬ ಜಾರ್ಜ್ ಬರ್ನಾಡ್ ಷಾರ ಹೇಳಿಕೆಯಂತೆ ಜಿ. ಬಿ. ಖಾಡೆಯವರು ೧೯೯೮ರಲ್ಲಿ 'ಮೂರು ಹೂಗಳು' ಎಂಬ ಮಹತ್ವಪೂರ್ಣವಾದ ಮೂರು ನಾಟಕಗಳನ್ನು ರಚನೆ ಮಾಡಿಕೊಟ್ಟಿದ್ದಾರೆ ಅವುಗಳೆಂದರೆ,

೧. ಮಕ್ಕಳ ಕಂಟ್ರೋಲ

೨. ಬಲೆಗೆ ಬಿದ್ದ ಕಳ್ಳರು

೩. ಅಜ್ಞಾನಿ ರಾಜಾ ಅರಹುಚ್ಚ ಮಂತ್ರಿ.

೪.೩.೧. ಮಕ್ಕಳ ಕಂಟ್ರೋಲ:

ಒಂದು ಸಣ್ಣ ಗ್ರಾಮ. ಆ ಗ್ರಾಮದಲ್ಲಿ ನಿಂಗಪ್ಪ ಹೆಸರಿನ ಕೂಲಿಕಾಗಾರನಿಗೆ ಎರಡು ಎಕರೆ ಒಣ ಬೇಸಾಯ ಜಮೀನು ಇರುತ್ತದೆ. ನಿಂಗಪ್ಪ ಲಗ್ನವಾದ ಮೇಲೆ ತನ್ನ ಎರಡು ಎಕರೆ ಜಮೀನಿನಲ್ಲಿ ಬೇಸಾಯ ಮಾಡುತ್ತಾ ಹೆಂಡತಿಯೊಡನೆ ಜೀವನ ನಡೆಸುತ್ತಾ ಸುಖವಾಗಿರುತ್ತಾನೆ. ಮುಂದೆ ವರ್ಷಕ್ಕೊಂದರಂತೆ ಐದು ವರ್ಷಗಳಲ್ಲಿ ಐದು ಮಕ್ಕಳು ಹುಟ್ಟುತ್ತವೆ. ಈಗ ನಿಂಗಪ್ಪನಿಗೆ ಸಂಸಾರ ಸಾಗಿಸಿಕೊಂಡು ಹೋಗುವುದು ಕಷ್ಟವಾಯಿತು. ಗಂಡ–ಹೆಂಡತಿಯರಿಬ್ಬರೂ ಕೂಲಿ ಕೆಲಸ ಮಾಡಿದರೂ ಮಕ್ಕಳ ಹೊಟ್ಟೆ–ಬಟ್ಟೆಗೆ ಸಾಕಾಗುತ್ತಿರಲಿಲ್ಲ. ಬೆತ್ತಲೆ ಅಡ್ಡಾಡುವ ಮಕ್ಕಳು ಖಾಯಿಲೆಗೆ ಬಿದ್ದರೆ ಆಸ್ಪತ್ರೆಗೆ ತೋರಿಸಲು ಆಗುತ್ತಿರಲಿಲ್ಲ. ಒಂದೆರಡು ಮಕ್ಕಳು ಮೈಲಿ ಬೇನೆಗೆ ತುತ್ತಾಗಿ ಮರಣ ಹೊಂದುತ್ತವೆ. ತನ್ನ ಬಡತನದ ತಾಪತ್ರಯಕ್ಕಾಗಿ ಇದ್ದ ಎರಡು ಎಕರೆ ಜಮೀನನ್ನು ಮಾರಾಟ ಮಾಡುತ್ತಾನೆ. ಮತ್ತೆರಡು ವರ್ಷಗಳಲ್ಲಿ ಇಬ್ಬರು ಮಕ್ಕಳು ಜನಿಸುತ್ತವೆ. ಸಂಸಾರ ಸಾಗಿಸುವುದು ಇನ್ನೂ ದುಸ್ತರವಾಗುತ್ತದೆ. ಬಡತನವನ್ನು ಎದುರಿಸಲಿಕ್ಕಾಗದೇ ಒಂದು ದಿವಸ ತಮ್ಮ ಮಕ್ಕಳಿಗೆ ವಿಷ ಹಾಕಿ ತಾವೂ ವಿಷ ಕುಡಿದು ಮರಣ ಹೊಂದುತ್ತಾರೆ. ಇದೊಂದು ದುರಂತ ನಾಟಕವಾಗಿದ್ದು, ಇದರಿಂದ ಸಮಾಜಕ್ಕೆ ಒಂದು ನೀತಿಯ ಪಾಠವನ್ನು ಹೇಳುತ್ತದೆ.

"ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ" ಸರಕಾರದವರು ಸಂದೇಶ ಸಾರುವರು. ಈ

೬. ಸಾಹಿತ್ಯ ಜ್ಞಾನದೀಪಮಾಲೆ. ಸಂಪಾದನೆ ಪ್ರೊ. ಎಲ್.ಎಸ್. ಶೇಷಗಿರಿರಾವ್. ಪುಟ – ೧೯೯

ವೇಳೆಯಲ್ಲಿ ಈ ಕುಗ್ರಾಮಕ್ಕೆ 'ರೂಪಾ' ಎಂಬ ದಾದಿ (nurse) ಬಂದು ಸರಕಾರದ ಕುಟುಂಬ ಯೋಜನೆ ಮಹತ್ವವನ್ನು ಜನರಿಗೆ ಮನದಟ್ಟು ಮಾಡಿ ಕೊಡುತ್ತಾರೆ. ಜೊತೆ–ಜೊತೆಗೆ ಕೂಲಿಕಾರ ನಿಂಗಪ್ಪನ ದೃಷ್ಟಾಂತ ಕೊಟ್ಟು ಇಡೀ ಊರಿಗೆ ಊರೇ ಹೆಚ್ಚು ಮಕ್ಕಳನ್ನು ಪಡೆದ ದಂಪತಿಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿ, ಆ ಗ್ರಾಮವನ್ನು ಮಾದರಿ ಗ್ರಾಮ ಮಾಡುತ್ತಾರೆ.

ಮಕ್ಕಳ ಕಂಟ್ರೋಲ ನಾಟಕವನ್ನು ಆಗಿನ ಕಾಲದಲ್ಲಿ ಅಂದರೆ ೧೯೬೮ರಲ್ಲಿ ಸರ್ಕಾರದವರು ಕುಟುಂಬ ಯೋಜನೆ ಪ್ರಚಾರದ ಸಲುವಾಗಿ ಜಮಖಂಡಿ ತಾಲೂಕಿನ ಎಲ್ಲ ಹಳ್ಳಿಗಳಲ್ಲಿ ರಂಗ ಕಲಾವಿದರಿಂದ ನಾಟಕ ಮಾಡಿಸಿರುತ್ತಾರೆ.

ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿದ್ದ ಭಾರತ ಮೊದಲ ಸ್ಥಾನ ಪಡೆಯುವಲ್ಲಿ ಎರಡು ಮಾತಿಲ್ಲ. ಅದಕ್ಕಾಗಿ ಸರಕಾರ ಇಂಥ ಯೋಜನೆ, ನಾಟಕಗಳಿಂದ ಜನಸಂಖ್ಯೆ ನಿಯಂತ್ರಣ ಮಾಡಲು ಜನರಿಗೆ ಅರಿವಳಿಕೆ ನೀಡಲು ಸಹಕಾರವನ್ನುಂಟು ಮಾಡಿತ್ತು.

೪.೩.೨. ಬಲೆಗೆ ಬಿದ್ದ ಕಳ್ಳರು:

ಇದೊಂದು ಹೈದ್ರಾಬಾದ ಸಂಸ್ಥಾನದಲ್ಲಿ ನಡೆದು ಹೋದ ಘಟನೆ, ಆಗಿನ ಕಾಲದಲ್ಲಿ ಈ ಸಂಸ್ಥಾನಕ್ಕೆ 'ಮೊಗಲಾಯಿ'ಎಂದು ಕರೆಯುತ್ತಿದ್ದರು. ನವಾಬನು ಆಡಳಿತ ಮಾಡುತ್ತಿದ್ದನು. ಈ ಸಂಸ್ಥಾನದ ಒಂದು ಹಳ್ಳಿಯಲ್ಲಿ ಶೀನಪ್ಪ ಕುಲಕರ್ಣಿ ಹೆಸರಿನ ವತನದಾರ ಇರುತ್ತಾನೆ. ಆತ ಆಗರ್ಭ ಶ್ರೀಮಂತನಾಗಿದ್ದು; ಅವನ ಹಣವನ್ನು ದೋಚಲು ಮೂರು ಜನ ಕಳ್ಳರು ಒಂದು ರಾತ್ರಿ ಎಂಟು ಘಂಟೆಯ ಸಮಯದಲ್ಲೇ ತೆರೆದ ಬಾಗಿಲಿನಿಂದ ಒಳಹೊಕ್ಕಿರು. ದನದ ಹಟ್ಟಿಯಲ್ಲಿ ಅಡಗಿಕೊಂಡು ಕುಳಿತರು. ಇದನ್ನು ಶೀನಪ್ಪನು ನೋಡುತ್ತಾನೆ. ಈಗಲೇ ಕೂಗಿದರೆ ಕಳ್ಳರು ಶೀನಪ್ಪನನ್ನು ಹೊಡೆದು ಬಡಿದು ಹಣ ಲಪಟಾಯಿಸಿಕೊಂಡು ಹೋಗುತ್ತಿದ್ದರು. ಆದರೆ ಚಾಣಾಕ್ಷನಾದ ಶೀನಪ್ಪನು ಕಳ್ಳರನ್ನು ಹಿಡಿದು ಕೊಡಲು ಒಂದು ಉಪಾಯ ಹೂಡುತ್ತಾನೆ. ಮನೆಯಲ್ಲಿ ಶೀನಪ್ಪ ಹಾಗೂ ಅವನ ಹೆಂಡತಿ ಇಬ್ಬರೇ ಇದ್ದು; ಇವರಿಗೆ ಸಂತಾನ ಭಾಗ್ಯ ಇದ್ದಿರಲಿಲ್ಲ. ಮಕ್ಕಳು ಇರಲಾರದ್ದಕ್ಕೆ ಆ ದಂಪತಿಗಳಿಗೆ ದೊಡ್ಡ ಚಿಂತೆಯಾಗಿ ಕಾಡುತ್ತಿರುತ್ತದೆ. ಇದನ್ನೇ ನೆಪ ಮಾಡಿಕೊಂಡು ಸೀನಪ್ಪ ಒಂದು ತಂತ್ರ ಹೂಡುತ್ತಾನೆ.

ದಂಪತಿಗಳು ಊಟ ಮುಗಿಸಿ, ಮುಂದಿನ ಬಾಗಿಲನ್ನು ಭದ್ರಪಡಿಸಿ ಮಲಗಿಕೊಳ್ಳುತ್ತಾರೆ. ಆಗ ಶೀನಪ್ಪ ಹೆಂಡತಿಗೆ, "ಏ ಶೀಲಾ ನೀನು ಈಗ ಮೂರು ತಿಂಗಳ ಬಸುರಿ ಅಗಿರುವೆ ಇದಕ್ಕೇನಂತಿ?" ಅಂದಾಗ,

ಶೀಲಾ: ಏನ್ರೀ ನಿಮಗೆ ಹುಚ್ಚು ಹಿಡಿದೈತೇನು? ನಾನೆಲ್ಲಿ ಬಸುರಿ ಇದ್ದೇನೆ, ಸುಳ್ಳ ಸುಳ್ಳ ಹೇಳಬ್ಯಾಡ್ರಿ.

ಶೀನಪ್ಪ: ಥೂ ಖೋಡಿ ಈಗ ನಿನಗ ಐದು ತಿಂಗಳು ನಿನ್ನ ತವರು ಮನೆಯವರು ಕಳ್ಳ ಕುಬಸಾ ಮಾಡಲಿಕ್ಕೆ ಬಂದಿದ್ದಾರೆ. ಹೊರಗ ನೋಡು ಸವ್ವಾರಿ ಎತ್ತಿನ ಗಾಡಿಗಳು ಬಂದು ನಿಂತಿವೆ.

ಶೀಲಾ: ನಿಮಗೆ ಹುಚ್ಚು ಹಿಡಿದಿದ್ದೆ ನಿಜವಾಯಿತು. ಯಾಳೇ ಆಗೇದ ಸುಮ್ಮನೇ ಮಲಕೊಳ್ರಿ.

ಶೀನಪ್ಪ: ಶೀಲಾ ನೀನು ಎಂಥ ಹುಚ್ಚಿ ಅದಿಯೇ. ಈಗ ನಿನಗೆ ಒಂಭತ್ತು ತಿಂಗಳು ತುಂಬಿದೆ. ಇನ್ನೊಂದು ವಾರದಲ್ಲಿ ಗಂಡು ಮಗು ಹುಟ್ಟುತ್ತದೆ. ಆಗ ಹೆಂಡತಿಗೆ ದಿಗಿಲು ಹಿಡಿಯುತ್ತದೆ. ಮಕ್ಕಳು ಇಲ್ಲಾ ಎಂಬ ಚಿಂತೆಯು ನನ್ನ ಗಂಡನ ತಲೆ ಕೆಡಿಸಿದೆ ಎಂದು ಮನದಲ್ಲಿ ಅಂದುಕೊಳ್ಳುತ್ತಾಳೆ. ಅದೇ ಪ್ರಕಾರ ಅಡಗಿ ಕುಳಿತ ಕಳ್ಳರೂ ಕೂಡ ಶೀನಪ್ಪನಿಗೆ ಮಕ್ಕಳು ಇರಲಾರದಕ್ಕೆ ಹುಚ್ಚು ಹಿಡಿದಿದೆ. ನಿದ್ರೆ ಬರುವವರೆಗೆ ಹೀಗೆ ಬಡಬಡಿಸುತ್ತಾನೆ. ನಿದ್ರೆಗೆ ಜಾರಿದ ಮೇಲೆ ಮನೆಯಲ್ಲಿದ್ದ ಬಂಗಾರ, ಹಣ ದೋಚಬಹುದೆಂದು ಕಾಯುತ್ತಾ ಕುಳಿತರು.

ಶೀನಪ್ಪ: ಹ ಹ್ಹ ಹ್ಹಾ ಅಂತ ಜೋರಾಗಿ ನಗುತ್ತಾ, ಶೀಲಾ ನಿನ್ನ ತವರು ಮನೆಯವರು ಕೂಸಿಗೆ ನಾಮಕರಣ ಮಾಡಲು ಬಂದಿದ್ದಾರೆ. ಆಗ ಶೀಲಾಳಿಗೆ ತನ್ನ ಗಂಡನಿಗೆ ನಿಜವಾಗಿ ಹುಚ್ಚು ಹಿಡಿದಿದೆ ಹೂಂ ಅನ್ನುತ್ತಾ ಸುಮ್ಮನೆ ಇರುತ್ತಾಳೆ.

ಶೀನಪ್ಪ: ಮಗುವಿಗೆ ಯಾವ ಹೆಸರು ಇಡೋಣ

ಶೀಲಾ: ಶ್ರೀಕೃಷ್ಣ ಅಂತಾ ಇಡ್ರಿ

ಶೀನಪ್ಪ: ಛೇ,ಛೇ ಹುಚ್ಚಿ, ಹಳೇ ಹುಚ್ಚಿ, ನಾವು ಇರುವುದು ಹೈದ್ರಾಬಾದ ನವಾಬನ ಸಂಸ್ಥಾನದ ಹಳ್ಳಿಯಲ್ಲಿ. ಆದ್ದರಿಂದ ನಮ್ಮ ಹಿಂದೂ ಧರ್ಮದ ಹೆಸರು ಬೇಡಬೇ ಬೇಡ 'ಅಮೀನಸಾಬ' ಅಂತಾ ಮುಸ್ಲಿಮರ ಹೆಸರು ಇಡೋಣ.

ಶೀಲಾ: 'ಹಾಗೇ ಆಗಲಿ ಎಂದು ಉತ್ತರಿಸುತ್ತಾಳೆ. ಇಷ್ಟೆಲ್ಲ ನಾಟಕ ಮಾಡುತ್ತಿರಲಾಗಿ ರಾತ್ರಿ ೨ ಗಂಟೆ ಆಗಿರುತ್ತದೆ.

ಶೀನಪ್ಪ: "ಏ, ಶೀಲಾ ನಿನ್ನ ಮಗಾ ಅಮೀನಸಾಬ ಈಗ ದೊಡ್ಡವನಾಗಿದ್ದಾನೆ. ಕಾಲೇಜಿಗೆ ಹೋಗಿ ಡಿಗ್ರಿ ಮುಗಿಸಿಕೊಂಡು, ನೌಕರಿಯಲ್ಲಿ ಸೇರಿಕೊಂಡಿದ್ದಾನೆ. ಅದು ಪೋಲಿಸ್ ಇಲಾಖೆಯಲ್ಲಿ ಫೌಜದಾರ ಆಗಿದ್ದಾನೆ. ನಮ್ಮ ನಸೀಬ ಭಾಳ ಛಲೋ ಐತಿ" ಎಂದು ನಗಲಾರಂಭಿಸಿದನು.

ಆಗ ಶೀವಪ್ಪನ ಹೆಂಡತಿ ಗಾಬರಿಯಾದಳು. ಗಂಡನಿಗೆ ಪಕ್ಕಾ ಹುಚ್ಚು ಹಿಡಿದಿದೆ. ಬೆಳಿಗ್ಗೆ ಹುಚ್ಚರ ಆಸ್ಪತ್ರೆಗೆ ಒಯ್ಯುವ ಯೋಚನೆ ಮಾಡುತ್ತಾಳೆ. ಕಳ್ಳರು ಕೂಡ ಹಾಗೇ ತಿಳಿದುಕೊಳ್ಳುತ್ತಾರೆ. ಅಷ್ಟರಲ್ಲಿ

ಶೀನಪ್ಪ: ಏ! ಏ! ಶೀಲಾ, ನಿನ್ನ ಮಗ ಫೌಜದಾರ ಆಗಿ ಇದೇ ಊರಿಗೆ ಬಂದಿದ್ದಾನೆ. ಆದ್ದರಿಂದ ಈ ನಮ್ಮ ಮನೆಯ ಕಿಟಕಿಯಲ್ಲಿ ಹಣಿಕಿ ಹಾಕಿ, ನಿನ್ನ ಮಗನನ್ನು ಕರೆದುಬಿಡು. ಬಂದು ಬಿಡುತ್ತಾನೆ ಎಂದನು. ಗಂಡನ ಒತ್ತಾಯಕ್ಕೆ ಮಣಿದು ನಿರ್ವಾಹವಿಲ್ಲದೆ ಕಿಟಕಿಯಲ್ಲಿ ಇಣಿಕಿ

ಶೀಲಾ: ನನ್ನ ಮಗ ಅಮೀನಸಾಬ, ಬಾರಪೋ ಬಾರಪೋ ಎಂದು ಹೀಗೆ ನಾಲ್ಕಾರು ಬಾರಿ ಕರೆಯುತ್ತಾಳೆ. ಅದೇ ಓಣಿಯಲ್ಲಿ ಅದೇ ವೇಳೆಗೆ ಗಸ್ತಿ ತಿರುಗುತ್ತಿದ್ದ ಅಮೀನಸಾಬನು ಕೂಡಲೇ ಎಂಟ್ಹತ್ತು ಪೋಲಿಸ್ ಪೇದೆಗಳೊಂದಿಗೆ, 'ಕುಲಕರ್ಣಿ ಮನ್ಯಾಗ ಯಾರೋ ಕರೀತಾರ ಬರ್‍ರ್ಯೋ ಎಂದು' ಓಡುತ್ತಾ ಬಂದೇ ಬಿಡುತ್ತಾನೆ. ಆಗ ಶೀನಪ್ಪ ಎದ್ದು ಹೋಗಿ ಬಾಗಿಲು ತೆರೆದು ದನದ ಹಟ್ಟಿಯಲ್ಲಿ ಅಡಗಿ ಕುಳಿತ ಕಳ್ಳರನ್ನು ತೋರಿಸುತ್ತಾನೆ. ಆ ಕಳ್ಳರನ್ನು ಬೇಡಿ ಹಾಕಿ ಹಿಡಿದುಕೊಂಡು

ಹೋಗುತ್ತಾರೆ. ಆಗಿನ ಕಾಲದಲ್ಲಿ ಹೈದ್ರಾಬಾದ ಸಂಸ್ಥಾನದಲ್ಲಿ ಫೌಜದಾರನಿಗೆ 'ಅಮೀನಸಾಬ' ಅನ್ನುತ್ತಿದ್ದರು. ಹೀಗೆ ಸಮಯಕ್ಕೆ ಸರಿಯಾಗಿ ತನ್ನ ಬುದ್ಧಿಯನ್ನು ಉಪಯೋಗಿಸಿ, ತೆನಾಲಿರಾಮನ ಹಾಗೆ ತನ್ನ ಸಂಪತ್ತನ್ನು ಉಳಿಸಿಕೊಂಡನು. ಆಪತ್ತು ಒದಗಿದಾಗ ಎದೆಗುಂದದೇ ಉಪಾಯದಿಂದ ಪಾರಾಗಬೇಕೆಂಬುದನ್ನು ತಿಳಿಸುವುದು.

೪.೩.೩. ಅಜ್ಞಾನಿ ರಾಜಾ – ಅರಹುಚ್ಚ ಮಂತ್ರಿ:

ಇದೊಂದು ಹಾಸ್ಯಭರಿತ ಜಾನಪದ ನಾಟಕ ಖಾಡೆಯವರು ಸಂಗ್ರಹಿಸಿದ ಒಂದು ಜನಪದ ಕಥೆಯ ಆಧಾರಿತವಾಗಿದೆ.

ಒಂದೂರಿನಲ್ಲಿ ಒಬ್ಬ ರಾಜ. ಆತ ಅಜ್ಞಾನಿ ತಿಳಿವಳಿಕೆ ಕಡಿಮೆ ಇರುವುದು. ಇವನು ಮಾಡಿದ್ದೇ ಕಾಯ್ದೆ, ಆಡಿದ್ದೇ ಆಟ ಅಂದಂತೆ; ಇವನಿಗೊಬ್ಬ ಅರಹುಚ್ಚ ಮಂತ್ರಿ ಇರುತ್ತಾನೆ. ಅವನ ರಾಜ್ಯದಲ್ಲಿ ಪ್ರತಿಯೊಂದು ವಸ್ತು; ಆಹಾರ ಧಾನ್ಯ ಗೃಹ ಉಪಯೋಗಿ ವಸ್ತುಗಳು ಒಂದು ದುಡ್ಡಿಗೆ ಒಂದರಂತೆ ಮಾರಾಟವಾಗುತ್ತಿರುತ್ತವೆ. ಅಂದರೆ ಒಂದು ದುಡ್ಡಿಗೆ ಕಿಲೋ ಬೆಲ್ಲ, ಒಂದು ದುಡ್ಡಿಗೆ ಒಂದು ಎಮ್ಮೆ, ಒಂದು ಆಕಳು, ಒಂದು ದುಡ್ಡಿಗೆ ಒಂದು ಚೀಲ ಜೋಳ ಹೀಗೆ ಎಲ್ಲವೂ ಒಂದೇ ದುಡ್ಡಿನ ವ್ಯಾಪಾರ ಇರುತ್ತದೆ. ಇವನ ರಾಜ್ಯದಲ್ಲಿ ಒಬ್ಬ ಬಡವ ಹೊಟ್ಟೆಗೆ ಇರಲಾರದಕ್ಕೆ ಕಳ್ಳತನ ಮಾಡಿ ಸಿಕ್ಕಿ ಬೀಳುತ್ತಾನೆ. ರಾಜಭಟರು ಅವನನ್ನು ಹಿಡಿದುಕೊಂಡು ಬಂದು ಅಜ್ಞಾನಿ ರಾಜನ ಮುಂದೆ ನಿಲ್ಲಿಸುತ್ತಾರೆ. ಆಗ ರಾಜ ಮತ್ತು ಮಂತ್ರಿ ಇಬ್ಬರೂ ಕೂಡಿ ಈ ಬಡ ಕಳ್ಳನಿಗೆ ಗಲ್ಲುಶಿಕ್ಷೆ ಕೊಡಲು ಆದೇಶ ಮಾಡುತ್ತಾರೆ. ಅದೇ ಪ್ರಕಾರ ಕಳ್ಳನನ್ನು ಗಲ್ಲಿಗೆ ಏರಿಸುವ ಸಮಯದಲ್ಲಿ ಒಬ್ಬ ದೀಡ ಪಂಡಿತ ಬರುತ್ತಾನೆ. ಅವನೂ ಕೂಡ ಮಹಾನ ದಡ್ಡನಾಗಿದ್ದು, ಗಲ್ಲಿಗೆ ಏರಲು ಸಿದ್ದನಾಗಿ ನಿಂತ ಕಳ್ಳನನ್ನು ದಿಟ್ಟಿಸಿ ನೋಡುತ್ತಾನೆ ನೋಡಿ ರಾಜನಿಗೆ,

"ಮಹಾರಾಜರೇ, ಈ ಬಡ ಕಳ್ಳ ಸೊರಗಿ ಸೊರಗಿ ಕಸಬರಗಿ ಕಡ್ಡಿ ಆಗಿದ್ದಾನೆ. ಇಂಥ ಸೊಣಕಲು ಮನುಷ್ಯನನ್ನು ಗಲ್ಲಿಗೆ ಏರಿಸಿದರೆ ರಾಜ್ಯಕ್ಕೆ ಅನಾಹುತವಾಗುತ್ತದೆ. ಆದ್ದರಿಂದ ತಿಂದು ತಿಂದು ಕೊಬ್ಬಿದ ಕೋಣದಂತೆ ಇರುವ ದೊಡ್ಡ ಮನುಷ್ಯನನ್ನು ತಂದು ಗಲ್ಲಿಗೆ ಏರಿಸಿದರೆ ರಾಜ್ಯಕ್ಕೆ ಸುಖವಾಗುತ್ತದೆ. ಕಾರಣ ಇವನನ್ನು ಬಿಟ್ಟು ಬಿಡ್ರಿ" ಎಂದು ಹೇಳುತ್ತಾನೆ.

ರಾಜ ಈ ಪಂಡಿತನ ಮಾತಿಗೆ ಮನ್ನಣೆ ಕೊಟ್ಟು ಆ ಬಡ ಕಳ್ಳನನ್ನು ಬಿಟ್ಟು ಬಿಡುತ್ತಾನೆ. ಆದರೆ ಗಲ್ಲಿಗೆ ಏರಿಸಲು ಕೋಣದಂತ ದೊಡ್ಡ ಮನುಷ್ಯ ಊರಲ್ಲಿ ಎಲ್ಲಿಯೂ ಸಿಗುವುದಿಲ್ಲ. ರಾಜಭಟರು ಹುಡುಕಿ ಸುಸ್ತಾಗಿ ಊರ ಹೊರಗೆ ಇರುವ ಆಶ್ರಮಕ್ಕೆ ಬರುತ್ತಾರೆ. ಆ ಆಶ್ರಮದ ಗುಡಿಸಲಲ್ಲಿ ಇಬ್ಬರು ಸಾಧುಗಳು ಇರುತ್ತಾರೆ. ಅವರು ಊರಲ್ಲಿ ಬಿಕ್ಷೆ ಎತ್ತಿ, ಆಹಾರವನ್ನು ತಿಂದು ತೇಗಿ ಗೂಳಿಗಳಂತೆ ಉಬ್ಬಿ ಹೋಗಿರುತ್ತಾರೆ. ರಾಜಭಟರು ಇವರಿಬ್ಬರನ್ನೂ ಹಿಡಿದುಕೊಂಡು ಬಂದು ರಾಜನ ಮುಂದೆ ನಿಲ್ಲಿಸುತ್ತಾರೆ; ಇವರಿಬ್ಬರಲ್ಲಿ ಗಲ್ಲಿಗೆ ಯಾರನ್ನು ಏರಿಸುವುದು ಎಂದು ವಿಚಾರ ಮಾಡುತ್ತಿರಲಾಗಿ, ಒಬ್ಬ ಸಾಧು ಮುಂದೆ ಬಂದು,

"ನನ್ನನ್ನು ಗಲ್ಲಿಗೆ ಏರಿಸಿ" ಎಂದನು. ಕೂಡಲೆ ಮತ್ತೊಬ್ಬ ಸಾಧು ಮುಂದೆ ಬಂದ "ನನ್ನನ್ನು ಗಲ್ಲಿಗೇರಿಸಿ" ಎನ್ನುತ್ತಾನೆ. ಹೀಗೆ ಇಬ್ಬರೂ ಸಾಧುಗಳಲ್ಲಿ ನನಗೆ ತನಗೆ ಎಂದು ದೊಡ್ಡ ಜಗಳವೇ ಪ್ರಾರಂಭವಾಗುತ್ತದೆ. ಆಗ ರಾಜ ಆಶ್ಚರ್ಯಚಕಿತನಾಗಿ ಕೇಳುತ್ತಾನೆ "ನಿಮಗೆ ಸಾವಿನ ಭಯ ಇಲ್ಲವೆ? ಗಲ್ಲಿಗೆ ಏರುವ ಸಲುವಾಗಿ ನಾನು–ತಾನು ಅಂತಾ ಜಗಳಾಡುತ್ತಿದ್ದೀರಿ" ಅಂದಾಗ, ಒಬ್ಬ ಸಾಧು ಮುಂದೆ ಬಂದು ಹೇಳುತ್ತಾನೆ.

"ಮಹಾರಾಜರೇ ಈ ಗಲ್ಲಿಗೆ ಏರುವದರಿಂದ ಸತ್ತ ಕೂಡಲೆ ಒಂದು ವರ್ಷದಲ್ಲಿ ಈ ರಾಜ್ಯದ ಸಿಂಹಾಸನಕ್ಕೆ ರಾಜನಾಗುತ್ತಾನೆ. ಆದ ಕಾರಣ ನಾನೇ ರಾಜ ಆಗಬೇಕು ಅಂತಾ ನಾನು, ತಾನು ರಾಜ ಆಗಬೇಕು ಅಂತಾ ಅವನು; ಹೀಗೆ ನಾವು ಜಗಳಾಡಲು ಹತ್ತಿದ್ದೇವೆ, ಕಾರಣ ನನಗೆ ಗಲ್ಲು ಶಿಕ್ಷೆ ಕೊಡಿ" ಅಂದನು.

ಅಜ್ಞಾನಿ ರಾಜ "ಹುಚ್ಚು ಮುಂಡೆ ಮಕ್ಕಳಿರ್‍ಯಾ ನಾನು ಅಂಥ ದಡ್ಡ ಅಂತಾ ತಿಳಿದುಕೊಂಡಿದ್ದೀರೇನು ನನ್ನ ರಾಜ್ಯಕ್ಕೆ ನಾನೇ ರಾಜ ಆಗುವವನು, ನನ್ನ ಸಿಂಹಾಸನ ನನಗೇ ಉಳಿಯಬೇಕು. ಕಾರಣ ಈಗ ನನ್ನನ್ನೇ ಗಲ್ಲಿಗೆ ಏರಿಸಿ ಬಿಡ್ರಿ" ಎಂದು ಸಾರ್ವಜನಿಕರಲ್ಲಿ ಬೇಡಿಕೊಂಡು ಗಲ್ಲಿಗೆ ಏರುತ್ತಾನೆ.

ಸಾಧುಗಳೀರ್ವರೂ ಚಿಕಿತ್ಸಕ ಬುದ್ಧಿಯಿಂದ ಸಾವಿನ ದವಡೆಯಿಂದ ಪಾರಾದರು. ಅಜ್ಞಾನಿ ರಾಜ ತನ್ನ ಪ್ರಾಣ ಕಳೆದುಕೊಂಡನು. ವೃತ್ತಿಯಲ್ಲಿದ್ದಾಗ ಆದ ಘಟನೆಗಳನ್ನು, ನೋಡಿದ ವಸ್ತುಗಳನ್ನು ಮೂಲವನ್ನಾಗಿ ಇಟ್ಟುಕೊಂಡು ಏಕಾಂತ ನಾಟಕಗಳನ್ನು ರಚಿಸಿದ್ದಾರೆ. ಇದರಲ್ಲಿ ಅವರ ಸೋಪಜ್ಞತೆಯನ್ನು ಕಾಣುತ್ತೇವೆ. ಹಲವು ದೃಷ್ಟಾಂತಗಳ ಮುಖಾಂತರ ಜನರ ಮನ ಪರಿವರ್ತಿಸಲು ನಾಟಕ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಿಸಿಕೊಂಡು, ಜನರ ತಿಳಿವಳಿಕೆಯನ್ನು ಎತ್ತರಿಸಲು ಮಾಡಿದ ಪ್ರಯತ್ನ ಪ್ರಶಂಸನೀಯವಾಗಿದೆ.

ಸಂಗೋಪನ ಸಾಹಿತ್ಯಕ್ಕೆ ತನ್ನದೇ ಆದ ಸ್ಥಾನಮಾನವಿದೆ. ವಸ್ತು, ವಿಷಯ, ಘೋಷಣೆಗಳನ್ನು ಸಮಾಜದಿಂದಲೇ ತೆಗೆದುಕೊಂಡಿದ್ದರೂ ಅದನ್ನು ಅತ್ಯಂತ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ. ಜನರ ಮನ ಮುಟ್ಟುವಂತೆ ಖಾಡೆಯವರು ಮಾಡಿರುವ ಕಾರ್ಯ ಅಭಿನಂದಾರ್ಹವಾದುದು.

ಅಧ್ಯಾಯ ಐದು

ಜಿ. ಬಿ. ಖಾಡೆಯವರ ಸಾಹಿತ್ಯ ಪರಿಶೀಲನೆ ಮತ್ತು ಪರಾಮರ್ಶೆ

ಅಧ್ಯಾಯ ಐದು

ಜಿ. ಬಿ. ಖಾಡೆಯವರ ಸಾಹಿತ್ಯ ಪರಿಶೀಲನೆ ಮತ್ತು ಪರಾಮರ್ಶೆ

ಜಿ.ಬಿ. ಖಾಡೆಯವರ ಸಂಕಲಿತ ಜನಪದ ಸಾಹಿತ್ಯವನ್ನು ಇದರಲ್ಲಿ ವಿವೇಚಿಸಲಾಗುವುದು. ಸಂಕಲಿತ ಜನಪದ ಸಾಹಿತ್ಯದಲ್ಲಿ ಪದ್ಯ ಸಾಹಿತ್ಯ ಹಾಗೂ ಗದ್ಯ ಸಾಹಿತ್ಯವೆಂದು ವಿಭಜಿಸಿಕೊಂಡು ಪರಿಶೀಲಿಸಲಾಗುವುದು. ಕನ್ನಡ ಸಂಕಲಿತ ಜನಪದ ಸಾಹಿತ್ಯದ ಹಿನ್ನೆಲೆಯಲ್ಲಿ ಖಾಡೆಯವರ ಸಾಹಿತ್ಯವನ್ನು ಪರಾಮರ್ಶೆಗೆ ಎತ್ತಿಕೊಳ್ಳಲಾಗಿದೆ. ಹಾಗೆಯೇ ಅವರ ಇನ್ನೊಂದು ಮುಖ್ಯ ಭಾಗವಾದ ಸಂಗೋಪನ ಸಾಹಿತ್ಯವನ್ನು ಪರೀಶೀಲಿಸಿ ಪರಾಮರ್ಶೆಗೊಳಪಡಿಸಲಾಗುವುದು.

೫.೧. ಸಂಕಲಿತ ಜನಪದ ಸಾಹಿತ್ಯ:

ಪದ್ಯ ಸಾಹಿತ್ಯ: ಜನಪದ ಸಾಹಿತ್ಯವನ್ನು ಮುಂದಿನ ಜನಾಂಗಕ್ಕೆ ಉಳಿಸಿಕೊಡುವುದರ ಸಲುವಾಗಿ ಖಾಡೆಯವರು ನಸುಕಿನಲ್ಲಿ ಎದ್ದು, ಬೀಸುಕಲ್ಲಿನ ಹಾಡುಗಳನ್ನು, ಸುಗ್ಗಿಯ ಕಾಲದಲ್ಲಿ ರಾತ್ರಿಇಡೀ ಜಾಗರಣೆಯಿದ್ದು ಹಂತಿಯ ಪದಗಳನ್ನು, ಜಾತ್ರೆ ಉತ್ಸವ ಆಚರಣೆ ಸಂದರ್ಭದಲ್ಲಿ ಕೋಲಿನ ಪದಗಳನ್ನು, ಹಬ್ಬಹರಿದಿನ ಸಂದರ್ಭದಲ್ಲಿ ಡೊಳ್ಳಿನ ಪದಗಳನ್ನು ಆಸಕ್ತಿಯಿಂದ ಶ್ರಮವಹಿಸಿ ಒಂದೆಡೆ ಒಗ್ಗೂಡಿಸಿದ್ದಾರೆ. ಹೀಗೆ ಒಗ್ಗೂಡಿಸಿದ ಜನಪದ ಸಾಹಿತ್ಯವನ್ನು ಅಕ್ಷರ ರೂಪಕ್ಕೆ ಅಚ್ಚು ಹಾಕಿಸಿದ್ದಾರೆ. ಇದರಲ್ಲಿ ಪದ್ಯ ಸಾಹಿತ್ಯವಾಗಿ 'ಕಾಡು ಹೂಗಳು' 'ಹಳ್ಳಿ ಹಬ್ಬಿಸಿದ ಹೂಬಳ್ಳಿ' ಮುಖ್ಯವಾಗಿವೆ.

೫.೧.೧. ಕಾಡು ಹೂಗಳು:

ಇದರಲ್ಲಿ ಮುಖ್ಯವಾಗಿ ಬೀಸುವ ಪದಗಳು, ಕೋಲಿನ ಪದಗಳು, ಹಂತಿ ಪದಗಳು ಮತ್ತು ಡೊಳ್ಳಿನ ಪದಗಳು ಹೀಗೆ ನಾಲ್ಕು ಭಾಗಗಳಾಗಿವೆ. "ಕಾಡು ಹೂಗಳು ಶ್ರೀ ಜಿ. ಬಿ. ಖಾಡೆಯವರು ಸಂಗ್ರಹಿಸಿ ಸಂಪಾದಿಸಿ ಕೊಟ್ಟಿರುವ ವಿಜಾಪುರ ಜಿಲ್ಲೆಯ ಜನಪದ ಗೀತೆಗಳ ಸಂಕಲನ, ಜಾನಪದದ ಬಗ್ಗೆ ಶ್ರೀ ಜಿ. ಬಿ. ಖಾಡೆಯವರಿಗಿರುವ ಆಸಕ್ತಿ ಅಭಿಮಾನಗಳಿಗೆ ಈ ಸಂಕಲನ ಸಾಕ್ಷಿಯಾಗಿದೆ. ಪ್ರಾದೇಶಿಕ ಸಾದೃಶ್ಯ ವೈದೃಶ್ಯಗಳನ್ನು ಅರಿತುಕೊಳ್ಳಲು ಈ ಕೃತಿ

ಸಹಾಯವಾಗುವುದು."[೧] ಜೀ.ಶಂ. ಪರಮಶಿವಯ್ಯನವರ ಈ ಮಾತುಗಳು ಈ ಸಂಕಲನದ ವಿಶೇಷತೆಗೆ ಸಾಕ್ಷಿಯಾಗಿವೆ. ಖಾಡೆಯವರ ವ್ಯಕ್ತಿತ್ವ ಹಾಗೂ ಕಾಡು ಹೂಗಳು ಪುಸ್ತಕದ ಸತ್ವನ್ನೂ ಕೂಡ ವಿವರಿಸುತ್ತವೆ.

ಪ್ರಸ್ತುತ ಕೃತಿಗೆ ಮುನ್ನುಡಿ ಬರೆಯುತ್ತ ಡಾ. ಹಾ.ಮಾ. ನಾಯಕ ಅವರು "ಕಾಡು ಹೂಗಳು ಬಿಜಾಪುರ ಜಿಲ್ಲೆಯ ಜನಪದ ಗೀತೆಗಳ ಸಂಕಲನ"[೨] ಎಂದು ಹೇಳಿರುವುದು ಕೃತಿಯ ಪ್ರಾದೇಶಿಕತೆಗೆ ನಿದರ್ಶನವಾಗಿದೆ. ಈ ಸಂಕಲನದ ಬೀಸುವ ಪದಗಳು ವಿಶೇಷತೆಯಿಂದ ಕೂಡಿವೆ. ಹಲಸಂಗಿ ಗೆಳೆಯರ ಬಳಗವು ಗರತಿಯರ ಹಾಡನ್ನು ಈಗಾಗಲೇ ಪ್ರಕಟಿಸಿದ್ದರೂ ಈ ಪದ್ಯಗಳು ಕುತೂಹಲದಿಂದ ಓದಿಸಿಕೊಳ್ಳುತ್ತವೆ.

ಹಲಸಂಗಿ ಪರಿಸರದ ಹಾಡುಗಳು ಇಂಡಿ ತಾಲೂಕಿನ ಸುತ್ತಮುತ್ತಲಿನ ಗರತಿಯರ ಹಾಡುಗಳಾದರೆ, ಜಿ.ಬಿ ಖಾಡೆಯವರ ಸಂಕಲನದ ಹಾಡುಗಳು ಜಮಖಂಡಿ ತಾಲೂಕಿನ ಪ್ರಾದೇಶಿಕ ವಿಶೇಷತೆಗಳನ್ನೊಳಗೊಂಡಿವೆ. ವಸ್ತು ಒಂದೇ ಆದರೂ ಹೇಳಿದ ರೀತಿ ಭಿನ್ನವಾಗಿದೆ. ಸ್ತುತಿ ಪದ್ಯಗಳಲ್ಲಿ ದೇವರ ಸ್ತುತಿ ಬದಲಾಗಿದೆ. ಕೆಲ ಪದ್ಯಗಳು ವಿಭಿನ್ನವಾಗಿಯೂ ಬಂದಿವೆ.

ಆಧುನಿಕ ಜೀವನದಲ್ಲಿ ಹಿಟ್ಟಿನ ಗಿರಣಿಗಳು ಬಂದಿರುವದರಿಂದ ಬೀಸುವ ಕಲ್ಲು ಇತಿಹಾಸಕ್ಕೆ ಸಂದಿದೆ. ಬೀಸುಕಲ್ಲಿನ ಹಾಡುಗಳು ಗತ ಇತಿಹಾಸದ ಮರೆತ ಪುಟಗಳಾಗಿವೆ. ಇಂದು ಇಂತಹ ಹಾಡುಗಳನ್ನು ಹೇಳುವವರೇ ಇಲ್ಲವಾಗಿದ್ದಾರೆ. ಈ ವಿಷಯವನ್ನು ಮನಗಂಡ ಖಾಡೆಯವರು ಸಂಕಲಿಸಿದ ಕಾರ್ಯ ಎಷ್ಟು ಮಹತ್ತರವೆಂಬುದು ಅರಿವಾಗುತ್ತದೆ.

ಬೀಸುಕಲ್ಲಿನ ರೀತಿಯಲ್ಲಿಯೇ ಹಂತಿ ಪದಗಳು ಕಣ್ಮರೆಯಾಗಿವೆ. ಅದಕ್ಕೆ ಆಧುನಿಕ ಕೃಷಿ ಪದ್ಧತಿಯೇ ಕಾರಣವಾಗಿವೆ. ಖಾಡೆಯವರು ಸಂಗ್ರಹಿಸಿದ ಹಂತಿ ಪದಗಳಲ್ಲಿ ಅಖಂಡ ವಿಜಾಪುರ ಜಿಲ್ಲೆಯ ಪ್ರಾದೇಶಿಕ ಸೊಬಗನ್ನು, ದೇಶಿಯ ಸೊಗಡನ್ನೂ ಗುರುತಿಸಬಹುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಬಂದಿರುವ ಹಂತಿ ಪದಗಳಂತೆಯೇ ಈ ಪದಗಳೂ ಇವೆ. ಅಲ್ಪ-ಸ್ವಲ್ಪ ವ್ಯತ್ಯಾಸ ಬಿಟ್ಟರೆ ದೊಡ್ಡ ಪ್ರಮಾಣದ ವ್ಯತ್ಯಾಸಗಳಿಲ್ಲ. ಕಾರಣ ರೈತಾಪಿ ಜನಾಂಗದ ಬದುಕು, ರಾಶಿ ಮಾಡುವ ಕ್ರಮ, ಒಂದೇ ಆಗಿರುವುದರಿಂದ ಹಾಡುಗಳು ಸಹಜವಾಗಿ ಒಂದೇ ರೀತಿಯಾಗಿವೆ. ರೈತರ ಸುಗ್ಗಿಯ ಸಂಭ್ರಮ ಸಡಗರವನ್ನಿಲ್ಲಿ ಗುರುತಿಸಬಹುದಾಗಿದೆ.

ಈ ಸಂಕಲನದಲ್ಲಿ ಏಳು ಕೋಲಿನ ಪದಗಳಿವೆ. ಕರ್ನಾಟಕದ ಎಲ್ಲ ಕೋಲಿನ ಪದಗಳಂತೆ ಈ ಸಂಗ್ರಹದ ಪದಗಳು ಇವೆ. ಗ್ರಾಮದೇವತೆ, ಊರಿನ ಹೆಸರು ಬಿಟ್ಟರೆ ಉಳಿದ ಅಂಶಗಳೆಲ್ಲ ಯಥಾವತ್ತಾಗಿ ಬಂದಿವೆ.

ಈ ಸಂಕಲನದ ಕೊನೆಯ ಪದ್ಯ ಸಾಹಿತ್ಯವೆಂದರೆ ಡೊಳ್ಳಿನ ಪದಗಳು. ಇದರಲ್ಲಿ ೬೯ ಸಂಧಿಗಳಿವೆ. ೧೧೫ ಪುಟಗಳಷ್ಟು ವ್ಯಾಪ್ತಿಯಲ್ಲಿದೆ. ಡೊಳ್ಳಿನ ಪದಗಳದೇ ಒಂದು ಪ್ರತ್ಯೇಕ

---

೧. ಕಾಡು ಹೂಗಳು. ವಿಭಾಗ ಸಂಪಾದಕರ ಮಾತು ಪುಟ ೮.

೨. ಕಾಡು ಹೂಗಳು. ಮುನ್ನುಡಿ. ಪುಟ ೬

ಪುಸ್ತಕವನ್ನು ಮಾಡುವಷ್ಟು ದೊಡ್ಡ ಸಂಗ್ರಹವಿದು. ಈ ಕೃತಿಯ ಕುರಿತಾಗಿ ಜಾನಪದ ವಿದ್ವಾಂಸರಾದ ಶ್ರೀ ಜ್ಯೋತಿ ಹೊಸೂರ ಅವರು "ಡೊಳ್ಳಿನ ಹಾಡುಗಳನ್ನು ಪರಿಶೀಲಿಸಿದಾಗ ಈ ಸಂಧಿ ಕ್ರಮದ ರೀತಿಯನ್ನು ಪರಿಗಣಿಸಿದಾಗ ಇಲ್ಲಿಯ ಪದಗಳೆಲ್ಲ ಒಂದೇ ದೀರ್ಘ ಕಾವ್ಯದ ಭಾಗಗಳೆಂಬ ನಿರ್ಣಯಕ್ಕೆ ಬರಲೇಬೇಕಾಗುತ್ತದೆ, ಬರಲೇಬೇಕೆಂದು ಅನಿಸುತ್ತದೆ. ಆದರೆ ಪದಗಳನ್ನೆಲ್ಲ ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ಪದಗಳಲ್ಲಿಯ ವಿಷಯ ಬೇರೆಬೇರೆಯಾಗಿ ಇರುವುದು ಸ್ಪಷ್ಟವಾಗಿರುತ್ತದೆ. ಹೀಗಾಗಿ ಇಲ್ಲಿ ಬೇರೆ ಬೇರೆಯಾಗಿರುವ ಹಲವು ಹಾಡುಗಳನ್ನು ಸಂಕಲನಗೊಳಿಸಲಾಗಿದೆಯೆಂದು ನಿರ್ಣಯಿಸಬೇಕಾಗುತ್ತದೆ. ಇದಲ್ಲದೆ ಯಾವುದೇ ಕ್ರಮ ಇಲ್ಲವೆ ವಿಶೇಷ ವಿವರಣೆಗಳಿಲ್ಲದೆ ನಡುನಡುವೆ 'ಮಾರ್ಗಪದ' ಮತ್ತು 'ಗುರುವಿನ ಮಾರ್ಗಪದ' ಎಂದು ಬರೆದಿದ್ದಾರೆ. 'ಮಾರ್ಗಪದ' ಎಂಬ ಪರಿಭಾಷೆ ಡೊಳ್ಳಿನ ಹಾಡುಗಳಲ್ಲಿ ವಿಶೇಷತೆ ಪಡೆದಿದ್ದರೂ ಸಂಪಾದಕನು ಆ ಬಗ್ಗೆ ಸರಿಯಾಗಿ ಅರಿತುಕೊಂಡಿಲ್ಲವೆಂಬುದು ಈ ಕ್ರಮದಿಂದ ಖಚಿತಗೊಳ್ಳುತ್ತದೆ.

ಹೆಚ್ಚು ಪುಟಗಳ ಡೊಳ್ಳಿನ ಹಾಡುಗಳನ್ನು ಸಂಗ್ರಹಿಸಿಕೊಡುವ ಕಾರ್ಯ ಮಾಡಿರುವ ಖಾಡೆಯವರು ಅವುಗಳನ್ನು ಸರಿಯಾದ ಕ್ರಮದಲ್ಲಿ ಅಳವಡಿಸುವ ಕಾರ್ಯ ಮಾಡದಿರುವುದು ಡೊಳ್ಳಿನ ಹಾಡುಗಳ ಸಂಪ್ರದಾಯದ ಸರಿಯಾದ ರೀತಿ-ನೀತಿ ಗ್ರಹಿಸದಿರುವುದು ದೊಡ್ಡ ಕೊರತೆಗಳಾಗಿವೆ. ಡೊಳ್ಳಿನ ಹಾಡುಗಳ ಬಗೆಗಿನ ವಿವರ ಪೂರ್ಣವಾದ ಪ್ರಸ್ತಾಪನೆಯೊಂದಿದ್ದರೆ, ಇದೊಂದು ಮೌಲಿಕ ಸಂಗ್ರಹವಾಗುತ್ತಿತ್ತು."[೩] ಈ ಅಭಿಪ್ರಾಯವು ಜಿ.ಬಿ. ಖಾಡೆಯವರಿಗೆ ಡೊಳ್ಳಿನ ಹಾಡುಗಳ ಸರಿಯಾದ ಪರಿಕಲ್ಪನೆ ಇಲ್ಲದಿರುವುದು ತಿಳಿಸುತ್ತದೆ. ಖಾಡೆಯವರು ಶಾಸ್ತ್ರೀಯವಾಗಿ ಸಂಪಾದಿಸಿಲ್ಲ. ವಿಸ್ತೃತವಾದ ಪ್ರಸ್ತಾವನೆಯೂ ಇದಕ್ಕಿಲ್ಲವೆಂಬ ಆಕ್ಷೇಪವಿದೆ. ಆದರೆ ಖಾಡೆಯವರ ಹಿನ್ನೆಲೆಯನ್ನು ನೋಡಿದಾಗ ಅವರ ಹವ್ಯಾಸವನ್ನು ಗಮನಿಸಿದಾಗ ಅವರ ವೃತ್ತಿಯನ್ನು ಪರಿಗಣಿಸಿದಾಗ ಇದು ದೋಷವಾಗಿ ಕಾಣುವುದಿಲ್ಲ. ಮಿತಿಗಳಾಗಿ ಕಾಣುತ್ತವೆ.

ಅವರ ಪ್ರಾಮಾಣಿಕತೆಗೆ ನಿದರ್ಶನವಾಗಿದೆ. ಸಂಗ್ರಹಕಾರರ ವಯಸ್ಸು, ತಾವು ದಾಖಲಿಸಿದ ವರ್ಷ ಇವೆರಡೂ ಅಂಶಗಳು ಖಚಿತ ಮಾಹಿತಿಯನ್ನು ತಿಳಿಸುತ್ತವೆ. ಸ್ಥಳವನ್ನು ನಮೂದಿಸಿರುವುದು ಪ್ರಾದೇಶಿಕತೆಯನ್ನು ಗುರುತಿಸಲು ನೆರವಾಗುತ್ತದೆ. ಸಾಮಾನ್ಯವಾಗಿ ಸಂಗ್ರಹಗಾರ ಮೂಲ ಮಾಹಿತಿದಾರರನ್ನು ಪುಸ್ತಕದ ಕೊನೆಯಲ್ಲಿ ಹೆಸರಿಸುತ್ತಾರೆ. ಆದರೆ ಖಾಡೆಯವರು ಕೃತಿ ಆರಂಭದಲ್ಲಿ ಈ ವಿವರ ನೀಡಿದ್ದು, ವ್ಯಕ್ತಿತ್ವದ ಸರಳ ಮತ್ತು ಸೌಜನ್ಯಕ್ಕೆ ಸಾಕ್ಷಿಯಾಗಿದೆ. ಹಾಗೆಯೇ ಮಾಹಿತಿದಾರರಿಗೆ ನೀಡಿದ ಪ್ರಾಶಸ್ತ್ಯವನ್ನು ಕೂಡ ಗುರುತಿಸಬಹುದು. ಕೃತಿಯ ಕೊನೆಯಲ್ಲಿ ಅರ್ಥಕೋಶವನ್ನು ನಿಡಿರುವುದು ಓದುಗರಿಗೆ ಉಪಯೋಗವಾಗಿದೆ.

ಖಾಡೆಯವರ ಈ ಸಂಕಲಿತ ಸಾಹಿತ್ಯವು ಕಳೆದು ಹೋದ ಗ್ರಾಮೀಣ ಪರಿಸರದ ಜನಾಂಗದ ಬದುಕನ್ನು ದಾಖಲಿಸುತ್ತದೆ. ಪ್ರಾದೇಶಿಕ ಅಧ್ಯಯನಕಾರರಿಗೆ ಇದೊಂದು ಅಮೂಲ್ಯ ಆಕರವಾಗಿದೆ. ಕಳೆದ ಶತಮಾನದ ಜನಾಂಗದ ಜೀವನ ವಿಧಾನವನ್ನು ಈ ಕೃತಿ ಕಟ್ಟಿಕೊಟ್ಟಿರುವುದು

---

೩. ಡೊಳ್ಳಿನ ಹಾಡುಗಳ ಸಮೀಕ್ಷೆ, ಜ್ಯೋತಿ ಹೊಸೂರ. ಪುಟ. ೨೪-೨೫.

[illegible]

ವಿಶೇಷವಾಗಿದೆ. ಅದಕ್ಕಾಗಿಯೇ ಡಾ. ಎಮ್. ಎಮ್. ಪಡಶೆಟ್ಟಿಯವರು "ಜಿ.ಬಿ. ಖಾಡೆಯವರ ಕಾಡು ಹೂಗಳು ಎಂಬ ಸಂಗ್ರಹವು ಭೌಗೋಲಿಕ ಮಿತಿಯನ್ನು ಹಾಕಿಕೊಂಡು ಬಿಜಾಪುರ ಸುತ್ತಮುತ್ತ ಸಂಗ್ರಹ ಮಾಡಿದ್ದರಿಂದ ಭಾಷೆ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಬಲು ಸಹಾಯಕಾರಿಯಾಗಿ ನಿಲ್ಲುತ್ತದೆ."[೪]

೫.೧.೨. ಹಳ್ಳಿ ಹಬ್ಬಿಸಿದ ಹೂಬಳ್ಳಿ:

ಇದೊಂದು ರಿವಾಯತ್ ಪದಗಳ ಸಂಕಲನ. ಮುಸ್ಲಿಂ ಬಾಂಧವರು ಮೊಹರಂ ಹಬ್ಬದಲ್ಲಿ ಹಾಡುವ ಪರಂಪರಾಗತ ಪದಗಳನ್ನು ಇದರಲ್ಲಿ ಸಂಕಲಿಸಲಾಗಿದೆ. ಮುಸ್ಲಿಂ ಜನಾಂಗದ ನಂಬಿಕೆ, ಸಂಪ್ರದಾಯ, ಆಚರಣೆ ಐತಿಹ್ಯ ಮುಂತಾದವುಗಳನ್ನು ವಿವರಿಸುವ ಪದ್ಯಗಳಿಲ್ಲಿವೆ. ಕರ್ಬಲಾ ಪದಗಳು ಕನ್ನಡ ಜಾನಪದ ಸಾಹಿತ್ಯದ ಒಂದು ಭಾಗವಾಗಿವೆ. ಹಿಂದೂ–ಮುಸ್ಲಿಂರ ಬಾಂಧವ್ಯದ ಗುರುತಾಗಿ ಆಚರಿಸುವ ಮೊಹರಂ ಹಬ್ಬದಲ್ಲಿ ಮುಸ್ಲಿಂ ಧರ್ಮಕ್ಕೆ ಸಂಬಂಧಪಟ್ಟ ವಿಶೇಷ ಅಂಶಗಳನ್ನು ಪ್ರಸ್ತಾಪಿಸಲಾಗಿದೆ. ಅದೂ ಅಲ್ಲದೆ ಯುದ್ಧದ ಸಂದರ್ಭ, ರಾಮಾಯಣ, ಮಹಾಭಾರತ ಕತಾ ಪ್ರಸಂಗಗಳು, ಗಾಂದೀಜಿಯಂತಹ ಚಾರಿತ್ರಿಕ ವ್ಯಕ್ತಿಗಳು ಈ ಹಾಡುಗಳ ವಸ್ತುವಾಗಿದ್ದಾರೆ. ಖಾಡೆಯವರು ಜಂಗಿನ ಪದಗಳು, ರಿವಾಯತ್‌ದಲ್ಲಿ ಭಕ್ತಿ ಪದಗಳು, ರಿವಾಯತ್‌ದಲ್ಲಿ ಸವ್ವಾಲ ಪದಗಳು, ರಿವಾಯತ್‌ದಲ್ಲಿ ಹಿಂದೂ ಧರ್ಮದ ಜಾನಪದಗಳು ಹೀಗೆ ನಾಲ್ಕು ವಿಭಾಗಗಳಲ್ಲಿ ಪ್ರಸ್ತುತ ಪುಸ್ತಕವನ್ನು ಸಂಕಲಿಸಿದ್ದಾರೆ. ಗೀತೆಗಳ ಕೆಳಭಾಗದಲ್ಲಿ ಪದಗಳನ್ನು ಹೇಳಿದ ಕವಿಗಳ ಹೆಸರುಗಳು ಮೂಡಿಬಂದಿವೆ. ಹಾಲಿಗೇರಿಯ ಸಣ್ಣನಾಯ್ಕ ಕವಿ, ತೊದಲಬಾಗಿ ರಾಮಣ್ಣ ಕವಿ, ಬಾಗಲಕೋಟೆಯ ಲಕ್ಷ್ಮಣಸಿಂಗ ಕವಿ, ಇಂಚಗೇರಿ ನಬಿಸಾಹೇಬ ಧೂಲಾ ಕವಿ, ತೊದಲಬಾಗಿ ಬಿಸಿಮಿಲ್ಲಾ ಕವಿಗಳ ಹೆಸರಿನೊಂದಿಗೆ ಊರುಗಳ ದೇವರ ಹೆಸರುಗಳೂ ಕೂಡ ಉಲ್ಲೇಖಗೊಂಡಿವೆ. ಮೊದಲ ಭಾಗದಲ್ಲಿ ೫೦, ಎರಡನೇ ಭಾಗದಲ್ಲಿ ೪೧, ಮೂರನೇಯ ಭಾಗದಲ್ಲಿ ೨೫, ನಾಲ್ಕನೇಯ ಭಾಗದಲ್ಲಿ ೪೬ ಹೀಗೆ ಒಟ್ಟು ೧೬೨ ಹಾಡುಗಳನ್ನು ಈ ಕೃತಿಯಲ್ಲಿ ಸಂಕಲಿಸಿದ್ದಾರೆ.

ಅರಿಕೆಯಲ್ಲಿ ಖಾಡೆಯವರು ಜಾನಪದ ಕುರಿತಾಗಿ ಪ್ರಾದೇಶಿಕ ರೀತಿಯಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಪ್ರಸ್ತುತ ಸಂಕಲನ ಕುರಿತಾಗಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಮೊಹರಂ ಎಂದರೇನು? ಮೊಹರಂ ಹಬ್ಬದ ವಿಶೇಷತೆಯನ್ನು ಹಿಂದೂ ಮುಸ್ಲಿಂ ಧಾರ್ಮಿಕ ಐಕ್ಯತೆಯನ್ನು, ಅದಕ್ಕೆ ಅಲಾಹಿ ಹಬ್ಬವೆಂದು ಕರೆಯುವುದನ್ನು ಸಕಾರಣವಾಗಿ ವಿವರಿಸಿದ್ದಾರೆ. ಇಸ್ಲಾಂ ಧರ್ಮದ ರೀತಿ ರಿವಾಜುಗಳನ್ನು ಹೇಳಿದ್ದಾರೆ. ಮೊಹರಂ ಹಬ್ಬದ ಹಿನ್ನೆಲೆಯನ್ನು ವಿವರಿಸಿದ್ದಾರೆ. ಕರಬಲಾ ಪದಗಳನ್ನು ಹಾಡುವ ಸಂದರ್ಭವನ್ನು ಹೇಳಿದ್ದಾರೆ. "ಹಾಡುವ ಮ್ಯಾಳಗಳಲ್ಲಿ ಸ್ಪರ್ಧೆ ಏರ್ಪಟ್ಟು ಒಳ್ಳೆಯ ಜಿದ್ದಿನಿಂದ ಒಬ್ಬರಿಗೊಬ್ಬರು ಒಂದು ಮ್ಯಾಳಿನವರು ಮತ್ತೊಂದು ಮ್ಯಾಳಕ್ಕೆ ಸವಾಲ್ ಹಾಕಿ ಪದಗಳನ್ನು ಹಾಡುತ್ತಿರುತ್ತಾರೆ.

---

೪. ದಾಂಗುಡಿ. ಪುಟ–೬೯.

ಸವಾಲ್ ಮೋಡಿಯೇ ಒಂದು ರೀತಿ"[೫] ಹಾಗೇಯೇ "ಜಂಗಿನ ಹಾಡುಗಳನ್ನು ಹಾಡುವಾಗ ಮುಸ್ಲಿಂ ಬಾಂಧವರ ಯುದ್ಧವೇ ಕಣ್ಮುಂದೆ ಕಟ್ಟಿದಂತಾಗಿ ಮೈಯೆಲ್ಲ ವಿದ್ಯುತ್ ಸಂಚಾರವಾಗುತ್ತದೆ" ಈ ಎರಡೂ ಅಂಶಗಳು ಈ ಸಂಗ್ರಹದ ಮಹತ್ವವನ್ನು ವಿವರಿಸುತ್ತವೆ. ಸಂಗ್ರಹದ ಕಾಲಕ್ಕೆ ಹಾಡಿದವರು ಹೇಳಿದಂತೆ ಕೃತಿಕಾರರ ಹೆಸರುಗಳನ್ನು ದಾಖಲಿಸಿದ್ದಾರೆ. ಮುಂದೆ "ಇವರೆಲ್ಲ ಕವಿಗಳ ಜನ್ಮ ಸ್ಥಳ ವಗೈರೆ ತಿಳಿದಿರುವುದಿಲ್ಲ "ಎಂದೂ ಕೂಡಾ ಹೇಳಿದ್ದಾರೆ. ಇದು ಅವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ. ಹಳ್ಳಿ ಹಬ್ಬಿಸಿದ ಹೂಬಳ್ಳಿ ಕನ್ನಡಕ್ಕೆ ಒಂದು ಅಪರೂಪ ಕೃತಿ. ರಿವಾಯತ್ ಪದಗಳು ಮುಸ್ಲಿಂ ಧರ್ಮಕ್ಕೆ ಸಂಬಧಿಸಿರುವುದರಿಂದ ಕನ್ನಡದಲ್ಲಿ ಈ ರೀತಿ ಕೃತಿ ರಚನೆಯಾಗುವುದು ಅಪರೂಪವಾಗಿದೆ. ಗ್ರಾಮೀಣ ಜನಾಂಗದಲ್ಲಿರುವ ಹಾಡುಗಳನ್ನು ಸಂಗ್ರಹಿಸಿ, ಹೊರತಂದಿರುವುದು ಜಾನಪದ ಸಾಹಿತ್ಯಕ್ಕೆ ಮಹತ್ತರ ಕೊಡುಗೆಯಾಗಿದೆ. ಮುನ್ನುಡಿಯಲ್ಲಿ ಡಾ. ಹಂ.ಪ. ನಾಗರಾಜಯ್ಯ ಅವರು "ಅಪೂರ್ವ ಸಾಮಗ್ರಿಯನ್ನು ತುಂಬಿಕೊಂಡಿದ್ದರೂ ಕರ್ಬಲಾ ಹಾಡುಗಳತ್ತ ಜಾನಪದ ಆಸಕ್ತ ದೃಷ್ಟಿ ವಿಶೇಷವಾಗಿ ಹರಿದಿಲ್ಲ. ಜನ ಸಂಪರ್ಕವನ್ನು ವಿಶೇಷವಾಗಿ ಹೊಂದಿರುವ ಮತ್ತು ಜಾನಪದದ ಬಗೆಗೆ ಮೂಲಭೂತ ಕಾಳಜಿ ತಿಳುವಳಿಕೆ ಹೊಂದಿರುವ ಜಿ.ಬಿ ಖಾಡೆಯವರು ಕರ್ಬಲಾ ಪದಗಳನ್ನು ಚೆನ್ನಾಗಿ ಸಂಗ್ರಹಿಸಿದ್ದಾರೆ."[೬]

ಈ ಮಾತುಗಳು ಕರ್ಬಲ್ ಹಾಡುಗಳು ಅಪೂರ್ವ ಸಾಮಗ್ರಿ ಹೊಂದಿರುವುದನ್ನು ಜಾನಪದ ಆಸಕ್ತರ ದೃಷ್ಟಿ ಅತ್ತ ಹರದಿಲ್ಲದಿರುವುದನ್ನು ಹೇಳುತ್ತವೆ. ಇಂಥ ಅಪೂರ್ವವಾದ ಸಾಹಿತ್ಯವನ್ನು ಖಾಡೆಯವರು ಸಂಕಲಿಸಿರುವುದು ವೈಶಿಷ್ಟ್ಯವಾಗಿದೆ. ಜಾನಪದ ವಿದ್ವಾಂಸರು ಅಷ್ಟಾಗಿ ಗಮನಿಸದಿರುವ ಕ್ಷೇತ್ರವನ್ನು ಖಾಡೆಯವರು ಗುರ್ತಿಸಿ, ಸಂಗ್ರಿಹಿಸಿ ಕೊಟ್ಟಿರುವುದು ಅವರ ಕುರಿತಾಗಿ ವಿಶೇಷ ಗೌರವವುಂಟಾಗುತ್ತದೆ. "ಕರ್ಬಲಾ ಪದಗಳ ಸಂಗ್ರಹಣೆ ಕಾರ್ಯ ಮತ್ತು ಅವುಗಳನ್ನು ಕುರಿತಂತೆ ಜನಮನದಲ್ಲಿರುವ ನಂಬಿಕೆ, ತಮಗೆ ತೋರಿಬಂದ ವಾಸ್ತವ ವಿಚಾರದ ವಿವರಗಳನ್ನು ಖಾಡೆಯವರು ಕೊಟ್ಟಿದ್ದಾರೆ. ಈ ಎಲ್ಲ ದೃಷ್ಟಿಯಿಂದ ಜಿ.ಬಿ. ಖಾಡೆಯವರ ಹಳ್ಳಿ ಹಬ್ಬಿಸಿದ ಹೂಬಳ್ಳಿ ಉಪಯುಕ್ತ ಕೃತಿ"[೬] ಯಾಗಿದೆ. ಈ ಮಾತಿಗಳು ಹಳ್ಳಿ ಹಬ್ಬಿಸಿದ ಹೂಬಳ್ಳಿ ಕೃತಿಯ ಮಹತ್ವವನ್ನು ಸಾರುತ್ತದೆ.

ಕೃತಿಯ ಆರಂಭದಲ್ಲಿ ಪರಿವಿಡಿಯಿದೆ. ಹಾಡುಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆ ದಾಖಲಿಸಿರುವುದು ಮತ್ತು ಭಾಗಗಳನ್ನು ಮಾಡಿರುವುದು ಅದಕ್ಕೆ ಹೊಂದುವಂತೆ ಹಾಡುಗಳನ್ನು ಸೇರಿಸಿರುವುದು ಅಧ್ಯಯನ ಆಸಕ್ತರಿಗೆ ಅನುಕೂಲವಾಗಿದೆ. ಎಂಟು ಜನ ಹಾಡುಗಾರರಿಂದ ಸಂಗ್ರಹಿಸಿದ ಮಾಹಿತಿಯನ್ನು ಆರಂಭದಲ್ಲಿ ನೀಡಿದ್ದಾರೆ. ಕ್ರಮವಾಗಿ ಹೆಸರು, ವಯಸ್ಸು, ಸ್ಥಳ ಮತ್ತು ಕಾಲ ಇವುಗಳನ್ನು ದಾಖಲಿಸಿರುವುದು ಹೆಚ್ಚು ಖಚಿತತೆಗೆ ನಿದರ್ಶನವಾಗಿದೆ. ಜಾನಪದ ಅರ್ಥಕೋಶವನ್ನು ಆರಂಭದಲ್ಲಿ ವಿವರಿಸಿದ್ದಾರೆ.

---

೫. ಹಳ್ಳಿ ಹಬ್ಬಸಿದ ಹೂಬಳ್ಳಿ ಮುನ್ನುಡಿ, ಪುಟ–೩

೬. ಅದೇ ಪುಟ–೪

[illegible]

[illegible]

ಇದರಿಂದ ಮುಸ್ಲಿಂ ಪಾರಿಭಾಷಿಕ ಪದಗಳು, ಗ್ರಾಮೀಣ ಪರಿಸರದಲ್ಲಿ ಬಳಕೆಯಲ್ಲಿರುವ ಪದಗಳು ಮೊದಲಾದವುಗಳನ್ನು ಅರ್ಥೈಸಿಕೊಂಡು ಕೃತಿಯನ್ನು ಪ್ರವೇಶಿಸಲು ಸರಳವಾಗುತ್ತದೆ. ಜಿ.ಬಿ. ಖಾಡೆಯವರು ತಮಗಿರುವ ತಿಳಿವಳಿಕೆಯ ಹಿನ್ನೆಲೆಯಲ್ಲಿ, ತಮ್ಮ ಕಾಲದ, ತಮ್ಮ ಪರಿಸರದ ಹಿನ್ನೆಲೆಯಲ್ಲಿ ಪ್ರಸ್ತುತ ಪುಸ್ತಕವನ್ನು ಸಂಕಲಿಸಿದ್ದಾರೆ. ಇದರಲ್ಲಿ ಗ್ರಂಥ ಸಂಪಾದನೆಯ ಲಕ್ಷಣಗಳನ್ನು ಅರಸುವುದು ಸೂಕ್ತವಲ್ಲ. ಶಿಷ್ಟ ಗ್ರಂಥಸಂಪಾದನೆಯ ಪರಿಕಲ್ಪನೆಯೇ ಬೇರೆ. ಜನಪದ ಸಾಹಿತ್ಯದ ಸಂಪಾದನೆಯ ಪರಿಕಲ್ಪನೆಯೇ ಬೇರೆ. ನವೋದಯ ಕಾಲದಲ್ಲಿ ಶಿಷ್ಟ ಸಾಹಿತ್ಯದ ಗ್ರಂಥಸಂಪಾದನೆಯ ಪರಿಕರಗಳೊಂದಿಗೆ ಜಾನಪದ ಸಾಹಿತ್ಯದ ಸಂಪಾದನೆ ಮಾಡಿದವರ ಎಡವಟ್ಟುಗಳು ಕಣ್ಣುಮುಂದಿವೆ. ಹೀಗಿರುವಾಗ ಶಿಷ್ಟ ಸಂಪಾದನೆ ಜಾನಪದ ಸಂಪಾದನೆಯ ಶಾಸ್ತ್ರೀಯ ತಿಳುವಳಿಕೆಗಳಿಲ್ಲದೆ ಹಳ್ಳಿಗನ ಮುಗ್ಧ ಸ್ವಭಾವದಿಂದ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸುವ ಪ್ರಾಮಾಣಿಕ ಕಾರ್ಯವನ್ನಿಲ್ಲಿ ಕಾಣಬಹುದು. ಕಳೆದು ಹೋಗಬಹುದಾಗಿದ್ದ ಜನಪದ ಸಾಹಿತ್ಯವನ್ನು ಉಳಿಸಬೇಕೆಂಬ ಕಾಳಜಿ ಇಲ್ಲಿ ಎದ್ದು ಕಾಣುತ್ತದೆ.

೫.೨. ಜನಪದ ಗದ್ಯ ಸಾಹಿತ್ಯ:–

ಖಾಡೆಯವರ ಸಂಕಲಿತ ಸಾಹಿತ್ಯದಲ್ಲಿ ಗದ್ಯ ಸಾಹಿತ್ಯವೂ ಒಂದಾಗಿದೆ. ಜನಪದ ಗದ್ಯಸಾಹಿತ್ಯದಲ್ಲಿ ಪುರಾಣ ಕಥೆಗಳು, ರಾಜ ಮಹಾರಾಜರ ಕಥೆಗಳು, ಯಕ್ಷ ಕಿನ್ನರ ಕಥೆಗಳು, ರಾಕ್ಷಸ ಕಥೆಗಳು, ಅಜ್ಜಿ ಕಥೆಗಳು, ಒಗಟು–ಒಡಪುಗಳು, ಗಾದೆ ಮಾತು, ಪಡೆನುಡಿಗಳು ಗದ್ಯ ಸಾಹಿತ್ಯದಲ್ಲಿ ಸಮಾವೇಶಗೊಳ್ಳುತ್ತವೆ. ಗೊಂದಲಿಗರು, ಕೀರ್ತನಕಾರರು, ಡೊಳ್ಳಿನವರು, ಕಂಸಾಳೆಯವರು ಮುಂತಾದವರು ಹೇಳುವ ಕಥೆಗಳಲ್ಲಿ, ಕತೆಯಿದ್ದರೂ ಅವು ಜನಪದ ಕಥೆಗಳಲ್ಲ. ಅವೆಲ್ಲ ಪದ್ಯ ಸಾಹಿತ್ಯದ ಬೇರೆ ಬೇರೆ ರೂಪಗಳಾಗಿವೆ. ಜನಪದ ಗದ್ಯ ಸಾಹಿತ್ಯವೆಂದರೆ ಅಪ್ಪಟವಾದ ಗದ್ಯವೇ ಆಗಿದೆ. ಕಥೆ ಹೇಳುವುದು, ಕಥೆ ಕೇಳುವುದು ಆದಿ ಮಾನವನಿಂದ ಬಂದಿರುವ ಬಳುವಳಿಯಾಗಿದೆ. ಜಿ.ಬಿ.ಖಾಡೆಯವರು ಜನಪದರು ಹೇಳುತ್ತ ಬಂದಿರುವ ಕಥೆಗಳನ್ನು ಒಂದೆಡೆ ಸಂಕಲಿಸಿದ್ದಾರೆ. ಅವುಗಳನ್ನು ಈ ರೀತಿಯಾಗಿ ಅರಿಯಬಹುದಾಗಿದೆ.

೫.೨.೧. ಬೆಳವಲ ಬೆಳಕು:–

ಜನಪದ ಸಾಹಿತ್ಯದ ಹವ್ಯಾಸಿ ಸಂಗ್ರಹಕಾರರಾದ ಜಿ. ಬಿ. ಖಾಡೆಯವರು ಪದ್ಯ ಸಾಹಿತ್ಯದಂತೆಯೇ ಗದ್ಯ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಬೆಳವಲ ಬೆಳಕು ಅವರ ಗದ್ಯ ಸಾಹಿತ್ಯಕ್ಕೆ ಉತ್ತಮ ಉದಾಹರಣೆಯಾಗಿದೆ.

ಪ್ರಸ್ತುತ ಈ ಕೃತಿಯಲ್ಲಿ ೨೩ ಜನಪದ ಕಥೆಗಳಿವೆ. ಬಿಜಾಪುರ ಜಿಲ್ಲೆಯ ಡೊಳ್ಳಿನ ಮೇಳದವರಿಂದ ಈ ಕಥೆಗಳನ್ನು ಸಂಗ್ರಹಿಸಿದ್ದಾರೆ. ಒಂದೆರೆಡು ಹೊಸ ಮಾದರಿಗಳನ್ನು ಬಿಟ್ಟರೆ ಉಳಿದೆಲ್ಲ ಕಥೆಗಳು ಈಗಾಗಲೇ ಪ್ರಕಟವಾಗಿರುವ ಜಾನಪದ ಸಂಕಲನದಲ್ಲಿ ಬೆಳಕು

[illegible]

[illegible]

[illegible]

[illegible]

[illegible]

ಕಂಡಿರುವಂಥವೇ. ಆದರೂ ಕೆಲವು ವಿಶಿಷ್ಟ ಬೆಳವಣಿಗೆಯನ್ನು ಪಡೆದುಕೊಂಡಿರುವವು. ಅದೇ ವಸ್ತು ಹೊಸ ಹೊಸ ಬಣ್ಣಗಳನ್ನು ಪಡೆದಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಬಿಜಾಪುರದ ಆಡು ಭಾಷೆ ಕಥೆಗಳಿಗೆ ಹೊಸ ಮೆರಗು ಕೊಟ್ಟಿದೆ. ಆ ಪ್ರದೇಶದ ಭಾಷಾವೈಶಿಷ್ಟ್ಯ, ನುಡಿಗಟ್ಟು, ಮಾತಿನ ವರಸೆಗಳನ್ನು ಅಧ್ಯಯನ ಮಾಡುವುದಕ್ಕೆ ಈ ಸಂಕಲನ ಬಹು ಉಪಯುಕ್ತವಾಗಿದೆ. ಆ ಪ್ರದೇಶದ ಸಾಂಸ್ಕೃತಿಕ ವೈಶಿಷ್ಟ್ಯಗಳು ಇಲ್ಲಿ ಪ್ರತಿಬಿಂಬಿಸಿವೆ. ಜೊತೆಗೆ ಪ್ರಸ್ತುತ ಕತೆಗಳೆಲ್ಲ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಪಾಠಗಳನ್ನು ಹೆಚ್ಚಾಗಿ ಪ್ರತಿನಿಧಿಸುತ್ತವೆ. ಅಲ್ಲದೆ ಶುದ್ಧ ಜಾನಪದ ಸತ್ವ, ಆಡುನುಡಿಯ ಸೊಗಸು, ನಿರೂಪಣಾ ಧಾಟಿ ಇವುಗಳನ್ನು ಮೈಗೂಡಿಸಿಕೊಂಡು ಕಲಾತ್ಮಕವಾಗಿ ನಿರೂಪಿತವಾಗಿರುವುದು ಇಲ್ಲಿನ ಕತೆಗಳ ವೈಶಿಷ್ಟ್ಯವಾಗಿದೆ. ಈ ಎಲ್ಲ ದೃಷ್ಟಿಯಿಂದ ಬೆಳವಲದ ಬೆಳಕು ಗಮನಾರ್ಹವಾಗಿದೆ."[೭]

ಖಾಡೆಯವರು ಈ ಕತೆಗಳನ್ನು ಸಂಗ್ರಹಿಸಲು ಹಳ್ಳಿಗಳಲ್ಲಿ ಜರುಗುವ ಅಮೋಘಸಿದ್ಧ, ಬೀರದೇವರು, ಸಿದ್ಧರಾಮೇಶ್ವರ ದೇವರು, ಕರಿಸಿದ್ಧ, ಬಿಳಿಸಿದ್ಧ ಹೀಗೆ ದೇವರುಗಳ ಹೆಸರಿನಲ್ಲಿ ಜರುಗುವ ಜಾತ್ರೆ ಉತ್ಸವಗಳು ನಡೆಯುವ ಹಳ್ಳಿ ಹಳ್ಳಿಗಳಿಗೆ ಹೋಗಿ ಕತೆ ಹೇಳುವಾಗ ಕೇಳಿಕೊಂಡು ಪ್ರಸ್ತುತ ಸಂಕಲನವನ್ನು ಸಿದ್ಧಪಡಿಸಿದ್ದಾರೆ. ಇವು ಜಾನಪದ ಕತೆಗಳು, ಇದಕ್ಕೆ ರಚನಾಕಾರರುಗಳ ಹೆಸರುಗಳಿರುವುದಿಲ್ಲ.

ತಲೆಮಾರಿನಿಂದ ತಲೆಮಾರಿಗೆ ಮುಂದುವರೆದುಕೊಂಡು ಬಂದಿವೆ. ಕಿವಿಯಿಂದ ಕಿವಿಗೆ, ಬಾಯಿಯಿಂದ ಬಾಯಿಗೆ ಹರಿದು ಬರುವಾಗ ಸಾಕಷ್ಟು ಬದಲಾವಣೆಗಳನ್ನು ಪಡೆದಿವೆ. ಅಕ್ಷರ ರೂಪದಲ್ಲಿ ಅಚ್ಚಾದಾಗ ಸ್ಥಿರ ಪಠ್ಯಗಳಾಗಿ ನಿಲ್ಲುತ್ತವೆ. ಖಾಡೆಯವರು ಮೌಖಿಕ ಪರಂಪರೆಯಲ್ಲಿರುವ ಜನಪದ ಕಥೆಗಳನ್ನು ಅತ್ಯಂತ ಜಾಗರೂಕತೆಯಿಂದ ಸಂಗ್ರಹಿಸಿದ್ದಾರೆ. ಈ ಕಥೆಗಳಲ್ಲಿ ನೀತಿಯಿದೆ, ಜಾಣ್ಮೆಯಿದೆ, ಕೌಶಲ್ಯವಿದೆ, ತತ್ವಗಳಿವೆ, ಹಾಸ್ಯ ಮನರಂಜನೆಗಳಿವೆ, ಸಮಾಜಕ್ಕೆ ಸಂದೇಶಗಳಿವೆ, ವಾಸ್ತವ ಬದುಕಿನಲ್ಲಿ ಸಮಕಾಲೀನ ಸಮಾಜದಲ್ಲಿ ಯಾವುದು ಅಸಾಧ್ಯವೋ ಅದು ಜಾನಪದ ಕಥಾ ಸಾಹಿತ್ಯ ಲೋಕದಲ್ಲಿ ಸಾಧ್ಯವಾಗುತ್ತದೆ. ಎಷ್ಟೋ ಸಾರಿ ಜನಪದರು ಕಣ್ಮುಂದೆ ಜರುಗುವ ಘಟನೆಗಳನ್ನೇ ಯಕ್ಷ ಕನ್ನರ ಕಥೆಗಳಾಗಿ ಪರಿವರ್ತಿಸುತ್ತಾರೆ. ಕಥೆಗಳಲ್ಲಿ ಸತ್ಯ, ಪ್ರಾಮಾಣಿಕತೆ, ಧರ್ಮ, ನ್ಯಾಯ–ನೀತಿಗಳಿಗೆ ಗೆಲುವಾಗುತ್ತದೆ. ಅಸತ್ಯ, ಅಧರ್ಮ, ಅನ್ಯಾಯ, ಅಪ್ರಾಮಾಣಿಕತೆಗಳಿಗೆ ಸೋಲಾಗುತ್ತದೆ. ಜಾನಪದ ಕಥೆಗಳಲ್ಲಿ ಹೆಣ್ಣು ಜಾಣ್ಮೆಯ ಸಂಕೇತವಾಗಿ,ಯಕ್ಷಿಯಾಗಿ, ಮೋಹಿನಿಯಾಗಿ, ಅಡುಗೂಲಜ್ಜಿಯಾಗಿ ಚಿತ್ರಿತವಾಗಿದ್ದಾಳೆ. ಎಂತಹ ಕಡು ಕಷ್ಟಗಳನ್ನು ಸುಲಭವಾಗಿ ಪರಿಹರಿಸುವ ಮಾಂತ್ರಿಕ ಶಕ್ತಿಯು ಹೆಣ್ಣೆ ಆಗಿದ್ದಾಳೆ. ಜಾನಪದರು ವಾಸ್ತವದಲ್ಲಿ ಯಾವುದು ಅಸಾಧ್ಯವೊ ಅಂತಹ ಅಂಶಗಳನ್ನು ಜನಪದ ಕಥಾ ಸಾಹಿತ್ಯದಲ್ಲಿ ಸಾಧ್ಯವಾಗಿಸಿರುವುದು ವಿಶೇಷವಾಗಿದೆ. ಈ ಆಶಯದ ಕಥೆಗಳು ಬೆಳವಲ ಬೆಳಕಿನಲ್ಲಿವೆ. ಕಥೆಗಳು ಹೆಚ್ಚಾಗಿ ಜನಪದೀಯ ನಂಬಿಕೆಯನ್ನು ಪರಂಪರಾಗತ ಸಮಾಜದ

೭. ಬೆಳವಲ ಬೆಳಕು ಮುನ್ನುಡಿಯಲ್ಲಿ ಪುಟ – ೩

ಬದುಕನ್ನು ಚಿತ್ರಿಸುವುದರಿಂದ ಸಮಕಾಲೀನ ಚಿತ್ರಣವಾಗಲಿ, ಭವಿಷ್ಯತ್ತಿಗೆ ಮಾರ್ಗಸೂಚಿಯಾಗಲಿ ಇವುಗಳಿಂದ ಲಭಿಸುವುದಿಲ್ಲ. ಮೂಢನಂಬಿಕೆಗಳ ವಿಜೃಂಭಣೆ ಜಡ ಆಚರಣೆಗಳ ವೈಭವೀಕರಣ ಈ ಕಥೆಗಳಲ್ಲಿ ಹಾಸುಹೊಕ್ಕಾಗಿದೆ. ದುಡ್ಡು, ದುಡ್ಡಿನ ಮಹತ್ವ ಹಾಗೂ ದುಡ್ಡಿನ ಹಿಂದೆ ಬಿದ್ದ ಜನಾಂಗ ಇವೆಲ್ಲ ಅಂಶಗಳು ಕೆಲ ಕಥೆಗಳಲ್ಲಿವೆ. ಆಧುನಿಕ ಸಂದರ್ಭಗಳಲ್ಲಿ ಹಣ, ಅಧಿಕಾರ ಅಟ್ಟಹಾಸದ ಸಂಕೇತವಾಗಿ ಕೂಡ ಇಲ್ಲಿಯ ಕೆಲ ಕಥೆಗಳು ನಿಲ್ಲುತ್ತದೆ. ಇಲ್ಲಿಯ ರಾಜನ ಕಥೆಯಲ್ಲಿ ಅರಸ ಅಜ್ಞಾನಿಯಾದರೆ, ಮಂತ್ರಿಗಳ ದುರಾಡಳಿತ, ದುರ್ವರ್ತನೆ ಯಾವ ತಾರಕಕ್ಕೇರುತ್ತದೆ ಎಂಬ ಅಂಶದ ನಿರೂಪಣೆ ಇದೆ. ಸಮಕಾಲೀನ ಸಂದರ್ಭದಲ್ಲಿ ರಾಜಕಾರಣಿಗಳ ಬೂಟಾಟಿಕೆಗಳನ್ನು ಬಯಲಿಗೆಳೆಯುವ, ಮಂತ್ರಿಗಳ ಅಜ್ಞಾನ, ಆಡಳಿತಶಾಹಿಯ ಅಟ್ಟಹಾಸ ಮತ್ತು ಅಧಿಕಾರಿಗಳ ಸ್ವೇಚ್ಛಾಚಾರ ಇವೆಲ್ಲವುಗಳಿಗೆ ಜನಪದ ಕಥೆ ಕನ್ನಡಿ ಹಿಡಿಯುತ್ತದೆ.

ಕಥೆಗಳು ಜನಜೀವನದ ನೈತಿಕ ಪ್ರಜ್ಞೆಯನ್ನು ಮನರಂಜನೆಯ ಮೂಲಕ ಜನರಿಗೆ ಗೊತ್ತಿಲ್ಲದ ರೀತಿಯಲ್ಲಿ ತಿದ್ದುವದನ್ನು ನಾವೆಲ್ಲ ಮರೆಯುವ ಹಾಗಿಲ್ಲ. ಇಷ್ಟಾದರೂ ಜನಪದ ಕಥೆಗಳ ಮೂಲ ಪ್ರಚೋದನೆ ಮತ್ತು ಪ್ರಧಾನ ಉದ್ದೇಶ ಮನರಂಜನೆಯೇ ಆಗಿದೆ. ಈ ಕಥೆಗಳಿಗೆಲ್ಲ ನಿರ್ಧಿಷ್ಟ ಕಾಲ, ದೇಶಗಳ ಬಂಧನವಿಲ್ಲ; ಕಥೆ ಯಾವುದೇ ದೇಶದಲ್ಲಿ, ಕಾಲದಲ್ಲಿ ನಡೆದಿರಬಹುದು. ಅಲ್ಲಿ ಬರುವ ಪಾತ್ರಗಳೆಲ್ಲ ಬರಿಯ ಮಾದರಿಗಳು. ಜನರಿಗೆ ಹೆಸರುಗಳು ಕೇವಲ, ಅನಗತ್ಯ. "ಜಾನಪದ ಕಥೆಗಳು ಸಮಾಜದ ಕೆಳ ವರ್ಗದವರಲ್ಲಿಯೇ ಹೆಚ್ಚು ಎಂಬುದನ್ನು, ಪರ್ಯಾಯವಾಗಿ ನಾಗರಿಕತೆ ಹೆಚ್ಚಿದಂತೆ ಮೇಲು ವರ್ಗದವರಲ್ಲಿ ಅವು ಕಡಿಮೆಯಾಗುತ್ತಿವೆ"[೮] ಎಂಬ ಚಿದಾನಂದಮೂರ್ತಿಯವರ ಮಾತು ಗಮನಾರ್ಹವಾದುದು. ಇದಕ್ಕಾಗಿ ಒಂದು ಕಥೆಯೂ ಉಂಟು. ಈಚಿನ ವರ್ಷಗಳಲ್ಲಿ ಜನಪದ ಶಾಸ್ತ್ರದ ಅಧ್ಯಯನಕ್ಕೆ ಪ್ರಚೋದನೆ, ಪ್ರೋತ್ಸಾಹಗಳು ಸಿಕ್ಕು ಅದೊಂದು ಗಂಭೀರವಾದ ಅಧ್ಯಯನದ ಶಿಸ್ತಾಗಿದೆ. ಆ ಕ್ಷೇತ್ರದಲ್ಲಿ ನೂರಾರು ಸಂಕಲನಗಳು ಹೊರಬರುತ್ತಿವೆ. ಜಾನಪದ ವಾಙ್ಮಯವು ಸಮಾಜಶಾಸ್ತ್ರಜ್ಞರಿಗಲ್ಲದೆ ಮನೋವಿಜ್ಞಾನಿಗಳಿಗೂ ಒಳ್ಳೆಯ ಅಧ್ಯಯನ ವಸ್ತು. ಪ್ರಸ್ತುತ ಕಥೆಗಳೆಲ್ಲ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಜಾನಪದ ಸತ್ವ, ಆಡು ನುಡಿಯ ಸೊಗಸು, ನಿರೂಪನಾ ಧಾಟಿ ಮುಂತಾದವುಗಳನ್ನು ಮೈಗೂಡಿಸಿಕೊಂಡು ಕಲಾತ್ಮಕವಾಗಿ ನಿರೂಪಿತವಾಗಿರುವುದು ಇಲ್ಲಿನ ಕಥೆಗಳ ವೈಶಿಷ್ಟ್ಯವಾಗಿದೆ. ಹೀಗಾಗಿ ಈ ಎಲ್ಲಾ ದೃಷ್ಟಿಯಿಂದ "ಬೆಲವಲ ಬೆಳಕು" ಗಮನಾರ್ಹವಾದ ಕೃತಿಯಾಗಿದ್ದು ಕನ್ನಡದ ಸಂಕಲಿತ ಗದ್ಯ ಸಾಹಿತ್ಯದಲ್ಲಿ ವಿಶಿಷ್ಟ ಕೃತಿಯಾಗಿದೆ.

ಜಿ.ಬಿ. ಖಾಡೆಯವರು "ಕನ್ನಡ ನಾಡಿನಲ್ಲಿ ರಾಶಿ ರಾಶಿಯಾಗಿ ದೊರೆಯುವ ಜನಪದ ಸಾಹಿತ್ಯವೂ ಈಗ ನಶಿಸಿ ಹೋಗಹತ್ತಿದೆ. ಅಳಿಗಾಲವಾಗಿ ಹೋಗುತ್ತಿರುವ ಇಂಥ ಅಮೂಲ್ಯ ಸಾಹಿತ್ಯವನ್ನು ಸಂಗ್ರಹಿಸಿ, ಕಾಯ್ದು ಕಾಪಾಡಿಕೊಳ್ಳುವ ಹೊಣೆ ಪ್ರತಿಯೊಬ್ಬ ಕನ್ನಡಿಗನ ಆದ್ಯ

---

೮. ಜನ–ಜನಪದ–ಜಾನಪದ, ಎಂ. ಚಿದಾನಂದಮೂರ್ತಿ, ಪುಟ ೨೧೩

ಕರ್ತವ್ಯವಾಗಿದೆ. ಇದು ನಮ್ಮ ಮುಂದಿನ ಪೀಳಿಗೆಗೆ, ನಾಡಿನ ನಂದಾದೀಪವಾಗುವುದರಲ್ಲಿ ಸಂದೇಹವಿಲ್ಲ" ಎಂದಿರುವುದು ಅವರ ಜಾನಪದ ಸಾಹಿತ್ಯ ಸಂಗ್ರಹದ ಪ್ರಾಮಾಣಿಕ ಕಾಳಜಿಗೆ ನಿದರ್ಶನವಾಗಿದೆ. ಕಥೆಗಳನ್ನು ಹೇಳಿದವರನ್ನು ಅರಿಕೆಯಲ್ಲಿ ಸ್ಮರಿಸಿದ್ದಾರೆ.

ಪರಿವಿಡಿಗೆ ಮೊದಲು ಕತೆ ಹೇಳಿದವರ ಹೆಸರು, ವಯಸ್ಸು, ಸ್ಥಳ, ಕಾಲ ಮುಂತಾದವುಗಳನ್ನು ವಿವರಿಸಿದ್ದಾರೆ. "ಇಲ್ಲಿ ಸಂಗ್ರಹಿಸಿದ ಕೃತಿಗಳನ್ನು ಯಾರು ರಚಿಸಿದವರು ಎಂಬುದರ ಬಗ್ಗೆ ಎಲ್ಲಿಯೂ ದಾಖಲೆ ಇರುವುದಿಲ್ಲ. ಇವೆಲ್ಲ ಅಜ್ಜ ಮುತ್ತಜ್ಜರಿಂದ ಮಹಾ ಕೊಡೆಗೆಯಾಗಿ ಬಂದ ದೇಣಿಗೆಗಳು. ಭಗವಂತನ ಅಂತರಾಳದ ಹೊರದೂಡಲ್ಪಟ್ಟ ಮುತ್ತು ರತ್ನಗಳು" ಎನ್ನುವಲ್ಲಿ ಜನಪದ ಕಥೆಗಳಿಗೆ ರಚನೆಕಾರರಿಲ್ಲ. ಅವು ತಲೆಮಾರುಗಳಿಂದ ಹರಿದು ಬಂದ ಜ್ಞಾನ ಸಂಪತ್ತೆಂಬುದನ್ನು ಮನಗಂಡಿದ್ದಾರೆ. ಅದಕ್ಕಾಗಿಯೇ ಮುಂದಿನ ಜನಾಂಗಕ್ಕಾಗಿ ಉಳಿಸಲು ಪರಿಶ್ರಮದಿಂದ ಸಂಗ್ರಹಿಸಿದ್ದಾರೆ. ಅವರ ಸಂಗ್ರಹ ಕಾರ್ಯ ಈ ದಿಶೆಯಲ್ಲಿ ಸಾರ್ಥಕವಾಗಿದೆ.

೩.೩. ಸಂಗೋಪನ ಸಾಹಿತ್ಯ:-

ನಮ್ಮ ಜಪದಪರಲ್ಲಿ ಚಿರಪರಿಚಿತವಾಗಿರುವ ಪ್ರಸಂಗ, ದೃಶ್ಯ, ನಗೆಚಟಾಕಿ, ವಕ್ರೋಕ್ತಿ, ವಿಡಂಬನೆಗಳು, ಕೆಲವು ವಿಶಿಷ್ಟ ಘಟನೆಗಳು ಪ್ರಚಾರದಲ್ಲಿವೆ. ಅವುಗಳಿಗೆ ಖಾಡೆಯವರು ಅಕ್ಷರ ರೂಪ ತೊಡಿಸಿದ್ದಾರೆ. ತಾವು ಕೇಳಿದ, ನೋಡಿದ, ಅನುಭವಿಸಿದ ಪ್ರಸಂಗಗಳನ್ನೆ ಅಭಿವ್ಯಕ್ತಿಸಿದ್ದಾರೆ. ಇಂತಹ ಬರಹಕ್ಕೆ ಸಂಗೋಪನ ಸಾಹಿತ್ಯವೆಂದು ಕರೆಯುವುದು ವಾಡಿಕೆ. ಇದು ಸಂಗ್ರಹ, ಸಂಪಾದನೆ, ಸಂಕಲನಗಳಿಗಿಂತ ಭಿನ್ನವಾಗಿದೆ. ಆದ್ದರಿಂದ ಇದನ್ನು ಪ್ರತ್ಯೇಕವಾಗಿ ಅಧ್ಯಯನಿಸಲಾಗಿದೆ. ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು, ಗಂಡಸರಿಗೆ ಹೆರಿಗೆ ಬ್ಯಾನಿ ಎದ್ದಾಗ ಹಾಗೂ ಮೂರು ಹೂಗಳು ಈ ಸಂಗೋಪನ ಸಾಹಿತ್ಯಕ್ಕೆ ಮಾದರಿಯಾಗಿದೆ.

೩.೩.೧. ನಕ್ಕು ನಗಿಸುವ ಹಾಸ್ಯ ಪ್ರಸಂಗ:

ಜಿ.ಬಿ ಖಾಡೆಯವರು ತಮ್ಮ ನಡುವೆ ನಡೆದ ಎಂತಹ ಪ್ರಸಂಗವನ್ನು ಹಾಸ್ಯಕ್ಕೆ ತಿರುಗಿಸಿಕೊಂಡು ನಕ್ಕು-ನಗಿಸುವ ಕಲೆಯನ್ನು ಕರಗತ ಮಾಡಿಕೊಂಡವರು. ಅವರೇ ಹೇಳುವಂತೆ ಇಲ್ಲಿರುವ ಪ್ರಸಂಗಗಳನ್ನು ಹಳ್ಳಿಗರೊಡನೆ ಬೆರೆತಾಗ, ಕಟ್ಟೆ ಮೇಲೆ ಕೂತು ಹರಟೆ ಹೊಡೆಯುವಾಗ ಚಿಮ್ಮುವ ಹಾಸ್ಯಚಟಾಕಿ, ಉಕ್ಕಿದ ನಗೆ ಬುಗ್ಗಿಗಳು ಇಲ್ಲಿ ಅಕ್ಷರರೂಪ ತಾಳುವವು.

'ಇವತ್ತು ಪುರಾಣ ಎಲ್ಲಿಗೆ ಬಂದೈತಿ' 'ಇವರನ್ನ ಬಿಟ್ಟ ಇವರ್‍ಯಾರು' 'ಏನ್ರಪಾ ನಾ ಹೇಳೂದ ಎಲ್ರಿಗೂ ತಿಳಿತ' 'ಸಾಲಿ ಸಾಹೇಬರ ಕೋಲಿ ಊಟ' 'ಇದೇನ ಮೊಗಲಾಯಿ ಮಾಡಿಯೇನ' 'ಪುರಾಣ ಹೆಂಗಿತ್ತು' 'ಹಾಲ ಬರ್ತಾವ ಊಟಾ ಬಂದ್' 'ಹೆಡ್ ಮಾಸ್ತರರ ತಲೆ ಬೋಳಿಸಿದ್ದು' 'ಸಾಲಿ ಸುಟ್ಟಿತು' 'ಭೀಮನ ಪಾತ್ರಧಾರಿ ಗೊಬ್ಬರ ಬಂಡಿಯಲ್ಲಿ ಕಂಡಾಗ', ಇವು ಈ

ಸಂಕಲನದ ಕೆಲವು ಶೀರ್ಷಿಕೆಗಳು. ಈ ಶೀರ್ಷಿಕೆಗಳನ್ನು ಓದುತ್ತಿದ್ದಂತೆ ವಿಚಿತ್ರ ಅನುಭವ ಉಂಟಾಗುತ್ತದೆ. ಹಾಸ್ಯದ ಝುಲಕೊಂದು ಹರಿಯುತ್ತದೆ. ಮೇಲೆ ಪ್ರಸ್ತಾಪಿಸಿದ ಶೀರ್ಷಿಕೆಗಳೊಂದಿಗೆ ಒಟ್ಟು ೨೦ ರಚನೆಗಳು ಇದರಲ್ಲಿವೆ. ಡಾ. ಪ್ರಕಾಶ. ಗ. ಖಾಡೆ ಇದನ್ನು ಸಂಪಾದಿಸಿದ್ದಾರೆ. ಕೃತಿಯ ಹೆಸರೇ ಸೂಚಿಸುವಂತೆ ಇಲ್ಲಿನ ರಚನೆಗಳಲ್ಲಿ ಹಾಸ್ಯ ಹಾಸುಹೊಕ್ಕಾಗಿದೆ. ನವಿರಾದ ವಿಡಂಬನೆಯಿದೆ. ವಾಸ್ತವಕ್ಕೆ ಕನ್ನಡಿ ಹಿಡಿಯುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಜರುಗುವ ನಾಟಕಗಳು ಅವ್ಯವಸ್ಥೆಯ ಆಗರಗಳಾಗಿರುತ್ತವೆ. ಮೂಲ ಉದ್ದೇಶಗಳಿಂದ ದೂರ ಸರಿದು ಹಾಸ್ಯ ಉಣಿಸಲು ಹೋಗಿ ಅಪಹಾಸ್ಯಗಳಾಗಿ ಅವುಗಳೇ ಒಂದು ಹಾಸ್ಯ ಪ್ರಸಂಗವಾಗಿ ಹೊರಹೊಮ್ಮುವವು. ಗ್ರಾಮೀಣ ಜನಾಂಗಕ್ಕೆ, ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ ಅನ್ಯಾಯವಾದಾಗ ನ್ಯಾಯ ದೊರಕುವುದಿಲ್ಲ. ನ್ಯಾಯದ ಹೆಸರಲ್ಲಿ ಅನ್ಯಾಯವಾಗುತ್ತದೆ. ನ್ಯಾಯ ದಾನದ ವಿಧಾನ ಎಷ್ಟು ಅವೈಜ್ಞಾನಿಕವಾಗಿರುತ್ತದೆ. ಜನಾಂಗ ಮೂಢನಂಬಿಕೆಯಲ್ಲಿ ಸಿಕ್ಕು ತೊಳಲಾಡುತ್ತದೆ. ಇತ್ಯಾದಿ ಅಂಶಗಳು ಇಲ್ಲಿವೆ. ಸಮಕಾಲೀನ ಸಂದರ್ಭದಲ್ಲಿ ಕೆಲವು ಸಾಹಿತಿಗಳು ಬರೆದದ್ದು ಕಡಿಮೆ, ಪ್ರಚಾರ ಗಿಟ್ಟಿಸಿದ್ದು ಬಹಳ ಈ ಅಂಶವನ್ನೆತ್ತಿಕೊಂಡು ಬರೆದ ಲೇಖನ ಮೊನಚಿನಿಂದ ಕೂಡಿದೆ. ಖಾಡೆಯವರ ಸೂಕ್ಷ್ಮ ನಿರೀಕ್ಷಣಾ ಶಕ್ತಿಗಿದು ಸಾಕ್ಷಿಯಾಗಿದೆ.

'ಸಾಲಿ ಸುಟ್ಟಿತು' ಗುರು ಶಿಷ್ಯರ ಸಂಬಂಧವನ್ನು ಹೇಳಿದರೆ, 'ಸಾಲಿ ಸಾಹೇಬರ ಕೋಳಿ ಊಟ' ಶಿಕ್ಷಕರ ಮತ್ತು ಅಧಿಕಾರಿಗಳ ಸಂಬಂಧವನ್ನು ವಿಡಂಬಿಸುತ್ತದೆ. ಇವೆರಡೂ ರಚನೆಗಳು ಇಂದಿನ ಭ್ರಷ್ಟ ಶಿಕ್ಷಣ ವ್ಯವಸ್ಥೆಯನ್ನು ಬೊಟ್ಟು ಮಾಡಿ ತೋರಿಸುತ್ತವೆ. ಪೋಲಿಸ್ ಕಸ್ಟಡಿಯಲ್ಲಿ ಒಂದು ದಿನ, ನಾಯಿ ಕಡಿಸಿಕೊಂಡಿದ್ದು, ಇವೆಡರಲ್ಲಿ ಲೇಖಕರ ಸ್ವಾನುಭವವೇ ಹರಳುಗಟ್ಟಿವೆ. ವ್ಯಕ್ತಿಯೊಬ್ಬ ಮತ್ತೊಬ್ಬರನ್ನು ನೋಡಿ ಅಪಹಾಸ್ಯ ಮಾಡುವುದು ಸಾಮಾನ್ಯ. ಆದರೆ ತನ್ನನ್ನು ತಾನು ಲೇವಡಿಸಿಕೊಳ್ಳುವದು ತೀರ ಅಪರೂಪ. ತನ್ನನ್ನು ತಾನು ಹಾಸ್ಯ ಮಾಡಿಕೊಳ್ಳುವ ವ್ಯಕ್ತಿಗೆ ಎದೆಗಾರಿಕೆ ಬೇಕಾಗುತ್ತದೆ. ಸೂಕ್ಷ್ಮ ಸಂವೇದನಾಶೀಲತೆ– ವಿಚಕ್ಷಣ ಮತಿಗಳು ಮಾತ್ರ ತಮ್ಮನ್ನು ತಾವು ಹಾಸ್ಯ ಮಾಡಿಕೊಂಡು ಲೇವಡಿಗೆ ತಾವಾಗಿಯೆ ಒಳಗಾಗುವರು. ಇದು ಲೇಖಕರ ಆರೋಗ್ಯಕಾರಿ ನಿಲುವಿಗೆ ನಿದರ್ಶನವಾಗಿದೆ.

ಈ ಕೃತಿಯಲ್ಲಿ ನಗೆಯ ಪ್ರಸಂಗಗಳನ್ನು ಹಲವು ನಿಟ್ಟಿನಲ್ಲಿ ನೋಡುತ್ತೇವೆ ಹಾಸ್ಯ ಆರೋಗ್ಯಕಾರಿ ವ್ಯಕ್ತಿಯ ಲಕ್ಷಣ. ಆಧುನಿಕ ಒತ್ತಡದ ಬದುಕಿನಲ್ಲಿ ತತ್ತರಿಸಿ ಹೋಗುತ್ತಿರುವ ಮಾನವನಿಗೆ ಹಾಸ್ಯ ಒಂದು ದಿವ್ಯ ಔಷಧವಾಗಿದೆ. ನಗುನಗುತ್ತ ಇರುವ ವ್ಯಕ್ತಿ ಚೈತನ್ಯಶಾಲಿಯಾಗಿರುತ್ತಾನೆ. ಅಂಥವರ ಆಯುಷ್ಯ ವೃದ್ಧಿಸುತ್ತದೆ ಎಂಬ ವೈದ್ಯರ ಅಭಿಪ್ರಾಯವನ್ನು ಅನುಲಕ್ಷಿಸಿದಾಗ ಈ ಕೃತಿಯ ಮಹತ್ವ ಮನದಟ್ಟಾಗುತ್ತದೆ.

೫.೩.೨. ಗಂಡಸರಿಗೆ ಹೆರಿಗೆ ಬ್ಯಾನಿ ಎದ್ದಾಗ:

ಜಿ.ಬಿ. ಖಾಡೆಯವರ ಮತ್ತೊಂದು ಸಂಗೋಪನ ಸಾಹಿತ್ಯ. ಲೇಖಕರು ಇವುಗಳನ್ನು ಜಾನಪದ ಹಾಸ್ಯ ಕತೆಗಳೆಂದು ಕರೆದಿದ್ದಾರೆ. ಇದರಲ್ಲಿ ಒಟ್ಟು ೧೫ ಕತೆಗಳಿವೆ. ಗ್ರಾಮೀಣ ಬದುಕಿನಲ್ಲಿ ಜರುಗಿದ ಹಾಸ್ಯ ಪ್ರಸಂಗಗಳನ್ನೆ ಜಾನಪದೀಯ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ. "ನನ್ನ ಸ್ವಂತಿಕೆ ಇದರಲ್ಲಿ ಎಳ್ಳು ಕಾಳಿನಷ್ಟು ಇರುವುದಿಲ್ಲ. ಇಲ್ಲಿ ಮೂಡಿ ಬಂದ ಪಾತ್ರಗಳಿಗೆ ಬಣ್ಣ ಬಳಿದು, ಅಕ್ಷರ ರೂಪ ಕೊಟ್ಟು ನಿಮ್ಮ ಮುಂದೆ ವೇದಿಕೆಯ ಮೇಲೆ ತಂದು ನಿಲ್ಲಿಸಿದ್ದೇನೆ" ಮಾತುಗಳು ಲೇಖಕರ ಪ್ರಾಮಾಣಿಕತೆಗೆ ಸಾಕ್ಷಿಯಾಗಿವೆ. "ನಾನು ಬರೆದ ಹಾಸ್ಯ ಸಂಕಲನದಲ್ಲಿ ಮೂಡಿದ ಪಾತ್ರಗಳು ಗ್ರಾಮೀಣ ಪ್ರದೇಶದಿಂದ ಬಂದವುಗಳು. ನಿರ್ಮಾಪಕರೂ ಕೂಡ ಗ್ರಾಮೀಣರು. ಕ್ಯಾಮರಾಮನ್ ಕೂಡಾ ಗ್ರಾಮೀಣ ಪ್ರದೇಶದವರೆ. ಆದರೆ ಇಲ್ಲಿ ನಾನು ಮಾತ್ರ ಕೇವಲ ನಿರ್ದೇಶಕನಾಗಿ ಕೆಲಸ ಮಾಡಿರುತ್ತೇನೆ. ಇಲ್ಲಿ ದಾಖಲಿಸಿದ ೧೫ ಕಥನಗಳನ್ನು ಗ್ರಾಮೀಣ ಪ್ರದೇಶದ ಜನರೇ ಹೇಳಿದ್ದಾರೆ" ಎಂಬುದು ಮೇಲಿನ ಅಭಿಪ್ರಾಯಕ್ಕೆ ಪೂರಕವಾಗಿದೆ. ಇಲ್ಲಿ ಮೂಡಿದ ಪಾತ್ರಗಳು ಚಿತ್ರಿಸಿದ ಸನ್ನಿವೇಶಗಳು ಹಳ್ಳಿ ಹಳ್ಳಿಗಳ ದೃಶ್ಯಗಳಾಗಿವೆ. ಜಾನಪದ ಕಥನಗಳು ಎಂದು ಶೀರ್ಷಿಕೆ ಇಟ್ಟಿದ್ದರೂ ಇವು ಕೇವಲ ಕಾಲ್ಪನಿಕ ರಚನೆಗಳಾಗಿವೆ. ಇದರ ಹಿಂದಿನ ಉದ್ದೇಶ ಸ್ಪಷ್ಟವಾಗಿದೆ. ನಕ್ಕು ನಗಿಸಬೇಕು. ಬಿಗುಮಾನದಿಂದ ಕೂಡಿದ ಮಾನವನ ಮುಖ ನಗೆ ಮಲ್ಲಿಗೆಯಾಗಿ ಅರಳಬೇಕೆಂಬ ಹಿರಿಯಾಸೆ ಈ ರಚನೆ ಹಿಂದಿದೆ.

ಜೀವನವನ್ನು ಸರಳಗೊಳಿಸಿ ನೋಡುವ ಹಳ್ಳಿಗರ ಮುಗ್ಧ ಮನಸ್ಸು ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಇಲ್ಲಿಯ ಕೆಲ ರಚನೆಗಳು ನಿದರ್ಶನವಾಗಿವೆ. ಇಲ್ಲಿಯ ಕೆಲವು ಕಥೆಗಳು ಜನಪದ ಸಾಹಿತ್ಯ ಸಂಗ್ರಹದ ಕಾಲಕ್ಕೆ ಘಟಿಸಿದ ಘಟನೆಗಳೇ ಕಥೆಗಳಾಗಿ ಮಾರ್ಪಟ್ಟಿವೆ. ಪ್ರಕೃತಿಯ ಮೇಲೆ ಪ್ರಭುತ್ವವನ್ನು ಸಾಧಿಸಿದೆನೆಂಬುವದು ಕೇವಲ ಭ್ರಮೆ. ನಿಸರ್ಗ ಸರ್ವಶ್ರೇಷ್ಠ. ನಿಸರ್ಗಸ ವಿರುದ್ಧ ಹೋರಾಡಿದರೂ ಜಯ ಲಭಿಸದು. ಬದುಕನ್ನು ಪ್ರಕೃತಿದತ್ತವಾಗಿ ಸ್ವೀಕರಿಸಬೇಕೆಂದು ಹೇಳುವ ಆಶಯ ಇಲ್ಲಿದೆ.

ಹೆಂಡತಿಗೆ ಗುಲಾಮನಾದರೂ ಹಾದಿ ಬೀದಿಯಲ್ಲಿ ಫೋಜು ಕೊಡುವ ಸ್ವಾರಸ್ಯಕರ ಕಥೆ ವಿಡಂಬನಾತ್ಮಕವಾಗಿ ಮೂಡಿದೆ. ಗೆಳೆತನದಲ್ಲಿ ಪ್ರೀತಿ, ವಿಶ್ವಾಸ, ಒಗ್ಗಟ್ಟು ಮುಖ್ಯ. ವ್ಯಕ್ತಿ ಸ್ವಾರ್ಥಿಯಾದರೆ ಗೆಳೆಯರಿಬ್ಬರಿಗೂ ಹಾನಿ ಎಂಬ ಆಶಯ ನಿರೂಪಿಸುವ ಕಥೆಗಳು ಇಲ್ಲಿವೆ. ಸ್ವಾಮಿಗಳು, ಮಠಾಧೀಶರು, ಸಮಾಜ ಸುಧಾರಕರಾಗಿರದೆ ಭಕ್ತಿಯನ್ನೇ ಬಂಡವಾಳವಾಗಿಸಿಕೊಂಡು ಮೌಢ್ಯವನ್ನೆ ಪೋಷಿಸಿ ಸಮಾಜದ ಕಂಟಕವಾಗಿರುತ್ತಾರೆ. ಅಂತಹ ಕಪಟ ಸನ್ಯಾಸಿಗಳ ಎಡಬಿಡಂಗಿತನವನ್ನು ಬಯಲಿಗೆಳೆಯುವ ಪ್ರಸಂಗವಿದೆ. ಚುನಾವಣೆಯ ಭರಾಟೆ, ರಾಜಕೀಯ ಕಸರತ್ತು ಗೆಲ್ಲಲು ಅನುಸರಿಸುವ ವಾಮಮಾರ್ಗ ಎಲ್ಲವೂ ಇಲ್ಲಿವೆ. ಇಂತಹ ಪ್ರಸಂಗಗಳು ಸಮಕಾಲೀನ ಸಮಾಜದ ರಾಜಕೀಯ ವಿದ್ಯಮಾನಕ್ಕೆ ನಿದರ್ಶನಗಳಾಗಿವೆ. ಖಾಡೆಯವರ ಕಥೆಗಳಲ್ಲಿ ನೀತಿ, ಶ್ರದ್ಧೆಯನ್ನು, ಮೌಲ್ಯ ಪ್ರಜ್ಞೆಯನ್ನು ಬೆಳೆಸುವಂತಹ ಕಥೆಗಳೂ ಇವೆ. ಸತ್ಯ, ಸ್ನೇಹ, ವಿಶ್ವಾಸ,

[illegible]

ಔದಾರ್ಯ, ಪ್ರಾಮಾಣಿಕತೆ, ಶೌರ್ಯ, ದೈವಭಕ್ತಿ ಇತ್ಯಾದಿ ಹತ್ತು ಹಲವು ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಬದುಕನ್ನು ಉಜ್ವಲಗೊಳಿಸುವ ಆಶಯ ಹೊಂದಿದ ರಚನೆಗಳು ಸಾಹಿತ್ಯ ರಚಿಸಲು ಬೆನ್ನು ತಟ್ಟಿ ಹುರಿದುಂಬಿಸುತ್ತ ಹಲವಾರು ಮಹನೀಯರು ಪ್ರೋತ್ಸಾಹಿಸಿದ್ದಾರೆ.

೫.೩.೩. ಮೂರು ಹೂಗಳು:–

ಇದು ಸಂಗೋಪನ ಸಾಹಿತ್ಯದ ಮತ್ತೊಂದು ಕೃತಿಯಾಗಿದೆ. ಇದೊಂದು ಮೂರು ಏಕಾಂಕ ನಾಟಕಗಳ ಗುಚ್ಛವಾಗಿದೆ. ಖಾಡೆಯವರ ಕಥೆ ಹಾಸ್ಯ ಪ್ರಸಂಗಗಳನ್ನು ಸಂಗೋಪನ ಸಾಹಿತ್ಯವಾಗಿ ಪರಿವರ್ತಿಸಿಕೊಂಡದ್ದೆ, ನಾಟಕವನ್ನೂ ಒಗ್ಗಿಸಿಕೊಂಡಿರುವುದು ಕುತೂಹಲಕಾರಿ ಅಂಶಗಳಾಗಿವೆ. ಅವುಗಳನ್ನಿಲ್ಲಿ ಪರಿಶೀಲಿಸಲಾಗುವುದು. ಇದರಲ್ಲಿ ಮಕ್ಕಳ ಕಂಟ್ರೋಲ್ ಕುಟುಂಬ ಕಲ್ಯಾಣದ ಸಂದೇಶವನ್ನು ಸಾರುವ ಏಕಾಂಕದ ನಾಟಕ. ಒಂದು ಕಾಲದಲ್ಲಿ ರಾಜಕೀಯ ಸ್ಲೋಗನ್ ಆಗಿದ್ದ 'ಆರತಿಗೊಂದು ಕೀರತಿಗೊಂದು' ಎಂಬುದನ್ನಿದು ಪ್ರತಿಪಾದಿಸುತ್ತದೆ. 'ಚಿಕ್ಕ ಕುಟುಂಬ, ಚೊಕ್ಕ ಕುಟುಂಬ'. 'ಚಿಕ್ಕ ಸಂಸಾರ, ಚೊಕ್ಕ ಸಂಸಾರ' ಮುಂತಾದವುಗಳ ಆಶಯವೇ ಈ ನಾಟಕದ ವಸ್ತುವಾಗಿದೆ. ಗ್ರಾಮಲೆಕ್ಕಿಗರಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಸರ್ಕಾರಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜನಮಾನಸದಲ್ಲಿ ಬಿತ್ತುವ ಆಶಯದಿಂದ ಈ ನಾಟಕ ರಚಿತವಾಗಿದೆ. ವೃತ್ತಿ ಅನುಭವವು ಈ ಪ್ರವೃತ್ತಿಯಲ್ಲಿ ನುಸುಳಿಸುವುದನ್ನು ಗುರುತಿಸಬಹುದಾಗಿದೆ.

ಹಲವು ದೃಷ್ಟಾಂತಗಳ ಮುಖಾಂತರ ಜನರ ಮನ ಪರಿವರ್ತಿಸಲು ನಾಟಕವನ್ನು ಮಾಧ್ಯಮವನ್ನಾಗಿ ಪರಿಣಾಮಕಾರಿಯಾಗಿ ಖಾಡೆಯವರು ಬಳಸಿಕೊಂಡಿದ್ದಾರೆ. ಇದರಲ್ಲಿ ಅವರ ಸೋಪಜ್ಞತೆಯನ್ನು ಕಾಣಬಹುದು. ವಸ್ತು ವಿಷಯ ಘೋಷಣೆಗಳನ್ನು ಸಮಾಜದಿಂದಲೇ ತೆಗೆದುಕೊಂಡಿದ್ದರೂ ಅದನ್ನು ಅತ್ಯಂತ ಪರಿಣಾಮಕಾರಿಯಾಗಿ ಅಬಿವ್ಯಕ್ತಿಸಿದ್ದಾರೆ. ಜನರ ತಿಳುವಳಿಕೆಯನ್ನು ಎತ್ತರಿಸಲು ಮಾಡಿದ ಪ್ರಯತ್ನ ಪ್ರಶಂಸನೀಯವಾಗಿದೆ. ವಸ್ತು, ತಂತ್ರ, ವಿನ್ಯಾಸ ಮತ್ತು ಶೈಲಿಯ ದೃಷ್ಟಿಯಿಂದ ಈ ರಚನೆ ಉತ್ಕೃಷ್ಟವಾಗಿರದಿದ್ದರೂ ಸಮಾಜಕ್ಕೆ ನಿರ್ಧಿಷ್ಟ ತತ್ವವನ್ನು ರವಾನಿಸುವಲ್ಲಿ ಈ ಕೃತಿ ಯಶಸ್ವಿಯಾಗಿದೆ. ಅನಕ್ಷರಸ್ಥ ಸಮಾಜದಲ್ಲಿ ವೈಜ್ಞಾನಿಕ ದೃಷ್ಟಿಕೋನ ಸಮಕಾಲೀನ ತಿಳುವಳಿಕೆ ಮೂಡಿಸುವುದರಿಂದ ಪ್ರಸ್ತುತ ಕೃತಿ ಗಮನಾರ್ಹವೆನಿಸುತ್ತದೆ.

'ಬಲೆಗೆ ಬಿದ್ದ ಕಳ್ಳರು' ನಾಟಕ ಹೈದರಾಬಾದ ಸಂಸ್ಥಾನದಲ್ಲಿ ನಡೆದುಹೋದ ಘಟನೆಯೊಂದರ ಚಿತ್ರಣ. ಮೊಗಲಾಯಿ ಆಳಿಕೆಯಲ್ಲಿ ಜರುಗಿದ ಒಂದು ಘಟನೆಯನ್ನೇ ಖಾಡೆಯವರು ನಾಟಕವಾಗಿ ಪರಿವರ್ತಿಸಿಕೊಂಡಿದ್ದಾರೆ. ಮನೆಗೆ ಕಳ್ಳರು ನುಗ್ಗಿದಾಗ ಮನೆಯ ಯಜಮಾನ ತೋರುವ ಜಾಣತನ, ಕಳ್ಳರಿಂದ ದೋಚಿಕೊಳ್ಳದೆ ಅವರನ್ನೇ ಗಾಳವಾಗಿಸಿಕೊಂಡ ಕುತೂಹಲಕಾರಿ ದೃಶ್ಯವಿದೆ. ಈ ಘಟನೆಯು ತೆನಾಲಿ ರಾಮಕೃಷ್ಣನ ಕಥೆಯನ್ನು ನೆನಪಿಸುತ್ತದೆ. ನಾಟಕ ರಚನೆ ಆಕರ್ಷಕವಾಗಿದೆ. ಸತ್ಯ ಮತ್ತು ವಾಸ್ತವ ಘಟನೆಯನ್ನೆ ಹಾಸ್ಯ ಪ್ರಸಂಗವಾಗಿ ರೂಪಿಸಿ ಏಕಾಂಕ ನಾಟಕವನ್ನಾಗಿಸಿದ್ದು ಜಿ.ಬಿ. ಖಾಡೆಯವರ ಪ್ರತಿಭೆಗೆ ಸಾಕ್ಷಿಯಾಗಿದೆ. ತಾವು ಕೇಳಿದ

ಪ್ರಸಂಗಗಳಿಗೆ ಅಕ್ಷರ ರೂಪ ಕೊಟ್ಟು ವೇದಿಕೆ ಮೇಲೆ ನಿಲ್ಲಿಸಿ ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿಕೊಂಡಿರುವುದು ಲೇಖಕನ ಜಾಣ್ಮೆಗೆ ಉತ್ತಮ ನಿದರ್ಶನವಾಗಿದೆ. ವಸ್ತುವಿನ ದೃಷ್ಟಿಯಿಂದ, ಆಶಯ ದೃಷ್ಟಿಯಿಂದ, ಶ್ರೇಷ್ಠವಾಗಿರದಿದ್ದರೂ, ಸಂಕಟದಲ್ಲಿ ತೋರುವ ಜಾಣ್ಮೆ ಮತ್ತು ಸಮಯಪ್ರಜ್ಞೆ ಎಂಥವರಿಗೂ ಮಾರ್ಗದರ್ಶಿಯಾಗಬಲ್ಲುದು. ಇದು ಖಾಡೆಯವರು ನೀಡಿದ ಕಾಣಿಕೆಯಾಗಿದೆ. ಮನುಷ್ಯನಿಗೆ ವ್ಯವಹಾರ ಜ್ಞಾನ ಕಷ್ಟಕ್ಕೆ ಕುಗ್ಗಿ ಹೋಗದೆ ಧೈರ್ಯದಿಂದ ಎದುರಿಸಬೇಕೆಂಬ ಆಶಯ ಈ ಕೃತಿಯ ರಚನೆಯ ಹಿಂದಿದೆ. ಲೇಖಕರ ಆಶಯ ಉದಾತ್ತವಾಗಿರುವುದರಿಂದ ಸ್ವೀಕಾರಾರ್ಹವಾಗಿದೆ. ಹಾಸ್ಯಕ್ಕಾಗಿ ಹಾಸ್ಯವಿರದೆ ನೀತಿ ತತ್ವವನ್ನು ಸಾರುವುದು ವಿಶೇಷತೆಯಾಗಿದೆ.

'ಅಜ್ಞಾನಿ ರಾಜಾ ಅರೆಹುಚ್ಚ ಮಂತ್ರಿ' ಇದು ಚಿರಪರಿಚಿತವಾಗಿರುವ ಚೌಪಟ ರಾಜಾ ಕಥೆಯ ಪಡಿಯಚ್ಚಿನಂತೆಯೆ ಇದೆ. ಹಿಂದಿ ನಾಟಕದಲ್ಲಿ, ಬೇಂದ್ರೆಯವರ 'ಸಾಯೋ ಆಟ' ನಾಟಕದಲ್ಲಿ ಇರುವಂತೆಯೇ ಇಲ್ಲಿಯ ಘಟನೆಯಿದೆ. ರಾಜಾ ಅಜ್ಞಾನಿಯಾಗಿದ್ದರೆ, ಮಂತ್ರಿ ಅರೆಹುಚ್ಚನಾಗಿದ್ದರೆ ಎಂತಹ ಅನಾಹುತ ಸಂಭವಿಸಬಹುದೆಂಬುದಕ್ಕೆ ಇದೊಂದು ಉದಾಹರಣೆಯಾಗಿದೆ. ಕಳ್ಳನಿಗೆ ಆಗಬೇಕಾದ ಶಿಕ್ಷೆ ಅರಹುಚ್ಚ ಮಂತ್ರಿಯಿಂದ ತಪ್ಪುತ್ತದೆ. ಜಾಣನಾದ ವ್ಯಕ್ತಿ ತನ್ನದಲ್ಲದ ತಪ್ಪಿಗೆ ಗಲ್ಲುಗಂಬ ಏರಬೇಕಾಗುತ್ತಿತ್ತು. ಆ ವ್ಯಕ್ತಿ ತೋರಿದ ಸಂಯಮ, ಪ್ರದರ್ಶಿಸಿದ ಜಾಣ್ಮೆ, ಆತನ ಸಮಯಪ್ರಜ್ಞೆ ಅವರನ್ನು ಉಳಿಸುತ್ತದೆ.

ಬುದ್ದಿಗೇಡಿಯಾದ ಅರಸ ತನಗೆ ತಾನೆ ಬಲಿಯಾಗುತ್ತಾನೆ. ಎಂಬುದನ್ನು ಈ ಏಕಾಂಕ ವಿವರಿಸುತ್ತದೆ. ಇಲ್ಲಿಯ ವಿಶೇಷತೆಯೆಂದರೆ ಯಾವುದೇ ಒಂದು ದುರಂತ ಸಂಭವಿಸಿದಾಗ ಮನುಷ್ಯ ಸ್ತಂಭೀಭೂತನಾಗುತ್ತಾನೆ, ದಿಗ್ಭ್ರಮೆಗೊಳ್ಳುತ್ತಾನೆ. ಆದರೆ ಇಲ್ಲಿ ಅರಸ, ಸತ್ತವನು ಮುಂದಿನ ರಾಜನಾಗುತ್ತಾನೆ ಎಂಬ ಭ್ರಮೆಯಿಂದ ತಾನೇ ಗಲ್ಲುಗಂಭವನೇರಿದ್ದು ಮೋಜಿನ ಪ್ರಸಂಗವಾಗಿದೆ. ದುರಂತದಲ್ಲಿಯೂ ಹಾಸ್ಯ ಚಿಮ್ಮುತ್ತದೆ. ಅರಸನ ಸಾವಿಗೆ ಶೋಕಿಸುವ ಬದಲು ಜನರಲ್ಲಿ ನಗೆ ಕಾರಂಜಿ ಚಿಮ್ಮುತ್ತದೆ. ಸಾವಿನಲ್ಲಿಯೂ ನಗಬಹುದು ಎನ್ನುವುದಕ್ಕೆ ಈ ರಚನೆ ಮಾದರಿಯಾಗಿದೆ.

ಸಂಕಲಿತ ಸಾಹಿತ್ಯ ಮತ್ತು ಸಂಗೋಪನ ಸಾಹಿತ್ಯಕ್ಕೆ ತನ್ನದೇ ಆದ ಸ್ಥಾನವಿದೆ. ಗ್ರಂಥ ಸಂಪಾದನಾ ಶಾಸ್ತ್ರ ವಿದ್ವತ್ ವಲಯದಲ್ಲಿ ಅಪಾರ ಗೌರವ ಮತ್ತು ಮನ್ನಣೆಗೆ ಪಾತ್ರವಾಗಿದೆ. ಗ್ರಂಥ ಸಂಪಾದನೆ ವಿದ್ವತ್ತಿಗೆ ಒರೆಗಲ್ಲೆಂದು ಪರಿಗಣಿಸಲಾಗುತ್ತದೆ. ಅಧ್ಯಯನದ ಶಿಸ್ತು, ಸೈದ್ಧಾಂತಿಕ ಚೌಕಟ್ಟು, ಅನ್ಯ ಜ್ಞಾನಗಳ ಶಿಸ್ತು, ಬಹುಶ್ರುತತೆ, ಅಗಾಧ ಪ್ರತಿಭೆ, ಅಪಾರ ಪಾಂಡಿತ್ಯ ಇವೆಲ್ಲವೂ ವಿದ್ವತ್ ವಲಯದ ಸ್ವತ್ತಾಗಿವೆ. ಆದರೆ ಹಳ್ಳಿಯ ಸರಳ, ಮುಗ್ಧ, ಸಹಜ ವ್ಯಕ್ತಿಗೆ ಇವೆಲ್ಲ ಎಟುಕುವಂತಹುಗಳಲ್ಲ. ಏಕೆಂದರೆ ಉನ್ನತ ಅಧ್ಯಯನದ ಅವಕಾಶವಿಲ್ಲದ ಕಾರಣ ಸಾಹಿತ್ಯದ ಪರಿಸರದ ಆಚೆಯಲ್ಲಿರುವ ನಿರಕ್ಷರಕುಕ್ಷಿಗಳ ನಡುವೆ ಬದುಕಿನ ತಾಪತ್ರಯಗಳ ಸುಳಿಯಲ್ಲಿ ಸಿಕ್ಕ ವ್ಯಕ್ತಿ ತನ್ನ ಸ್ವ-ಸಂತೋಷಕ್ಕಾಗಿ ಸಂಕಲಿತ ಸಾಹಿತ್ಯವನ್ನು ಹಾಗೂ ಸಂಗೋಪನಾ ಸಾಹಿತ್ಯವನ್ನು ಕಟ್ಟಿಕೊಳ್ಳುತ್ತಾನೆ. ತನ್ನ ಸ್ವ-ಸಂತೋಷಕ್ಕಾಗಿ ಹಾಗೂ ತಾನು ಕಂಡುಕೊಂಡದ್ದನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳುವುದಕ್ಕಾಗಿ ಈ ಕಾರ್ಯವನ್ನು ಮಾಡುತ್ತಾನೆ. ಇದೆಲ್ಲಕ್ಕಿಂತ ಹೆಚ್ಚಾಗಿ ಒಂದು ಜನಾಂಗದ

[illegible]

ಸಂಪತ್ತು ಅಳಿದುಹೋಗುವದೆಂಬ ಕಳವಳದಿಂದ ಅದನ್ನು ಉಳಿಸಕೊಳ್ಳಬೇಕೆಂಬ ಹಂಬಲದಿಂದ ಮುಂದಿನ ಜನಾಂಗಕ್ಕೆ ನೆರವಾಗಲಿ ಎಂಬ ಆಶಯದಿಂದ ಕಟ್ಟಿಕೊಡುವುದಿದೆಯಲ್ಲಾ ಅದು ತುಂಬಾ ಮಹತ್ತರವೆನಿಸುತ್ತದೆ. ಇಂತಹ ಮಹತ್ತರ ಕಾರ್ಯವನ್ನು ವೃತೋಪಾದಿಯಲ್ಲಿ ನಿರ್ವಹಿಸಿದವರು ಶ್ರೀಯುತ ಜಿ.ಬಿ. ಖಾಡೆಯವರು.

ವಿದ್ವತ್ ವಲಯದ ಕೃತಿಗಳು ಚರ್ಚೆಗೊಳಗಾಗುತ್ತವೆ. ಸಂಗ್ರಹ, ಸಂಪಾದನೆಗಳು ಗಮನ ಸೆಳೆಯುತ್ತವೆ. ಆದರೆ ಸಂಕಲಿತ ಸಾಹಿತ್ಯ ಮತ್ತು ಸಂಗೋಪನ ಸಾಹಿತ್ಯಗಳೆರಡೂ ಉಪೇಕ್ಷೆಗೊಳಗಾದವುಗಳು. ಅಂತಹ ಉಪೇಕ್ಷಿತ ಸಾಹಿತ್ಯವನ್ನು ಅಧ್ಯಯನಿಸುವುದು ಮತ್ತು ಅವುಗಳಿಗೂ ಕೂಡ ಸಾಹಿತ್ಯಿಕ ನ್ಯಾಯವನ್ನು ಒದಗಿಸುವುದು ಈ ಪ್ರಬಂಧದ ಆಶಯವಾಗಿದೆ.

ಕನ್ನಡ ಸಂಕಲಿತ ಜಾನಪದ ಸಾಹಿತ್ಯದಲ್ಲಿ ಖಾಡೆಯವರ ಪದ್ಯ ಸಾಹಿತ್ಯ ಹಾಗೂ ಗದ್ಯ ಸಾಹಿತ್ಯದ ಕೃತಿಗಳೆರಡೂ ಗಮನಾರ್ಹವಾದವುಗಳಾಗಿವೆ. ಸಂಗೋಪನ ಸಾಹಿತ್ಯವು ವಿಶೇಷತೆಯನ್ನೊಳಗೊಂಡಿದೆ. ಈ ಸಾಹಿತ್ಯವು ಅಧ್ಯಯನದ ಕಕ್ಷೆಯಿಂದ ಹೊರಗುಳಿಯಬಾರದೆಂಬ ಆಶಯದಿಂದ ಇದನ್ನಿಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಆಧುನಿಕ ವಿದ್ಯಮಾನಕ್ಕೆ ಹಾಗೂ ನಾಗರಿಕತೆಯ ಹೊಡೆತಕ್ಕೆ ಸಿಕ್ಕ ಮಾನವನ ಜೀವನ ಜರ್ಜರಿತವಾಗಿದೆ. ಜಾಗತೀಕರಣ ಸಂದರ್ಭದಲ್ಲಿ ಬದುಕು ಛಿದ್ರವಾಗಿದೆ. ಪರಂಪರಾಗತ ನಂಬಿಕೆಗಳು ಪಲ್ಲಟಗೊಂಡಿವೆ. ಅವಿಭಕ್ತ ಕುಟುಂಬಗಳು ಕಣ್ಮರೆಯಾಗಿವೆ. ಜಾನಪದೀಯ ಬದುಕು ಆಧುನಿಕ ವಿದ್ಯಮಾನಗಳಿಗೆ ಸ್ಪಂಧಿಸುವಲ್ಲಿ ವೈಫಲ್ಯಗೊಂಡಿದೆ. ಇಡೀಯಾಗಿ ನಗರೀಕರಣಗೊಳ್ಳದೆ, ಮುಂಚಿನ ಪರಂಪರಾಗತವಾದ ನಂಬಿಕೆಯನ್ನು, ಆಚಾರ ವಿಚಾರ ಸಂಪ್ರದಾಯಗಳನ್ನು ಉಳಿಸಿಕೊಳ್ಳಲಾಗದೆ ಎಡಬಿಡಂಗಿಗಳಾಗಿವೆ. ಇತ್ತ ಪೂರ್ತಿ ನಗರವೂ ಅಲ್ಲದ, ಅತ್ತ ಇಡಿಯಾಗಿ ಹಳ್ಳಿಯಾಗಿಯೂ ಉಳಿದ ಸಂಕೀರ್ಣ ರೀತಿಯಲ್ಲಿ ಜನಪದ ಬದುಕಿದೆ. ಇಂಥ ದ್ವಂದ್ವ ಹಾಗೂ ಸಂಕೀರ್ಣ ಬದುಕಿನ ಸಂದರ್ಭದಲ್ಲಿ ಜನಪದ ಸಾಹಿತ್ಯವು ಕೂಡ ಡೋಲಾಯಮಾನವಾಗಿದೆ. ವಿದ್ವತ್‌ಲೋಕದಿಂದ ಪುರಸ್ಕಾರಗೊಳ್ಳದೆ, ಸಾರಾಸಗಟಾಗಿ ತಿರಸ್ಕರಿಸಲೂ ಸಾಧ್ಯವಾಗದೆ ಇನ್ನೊಂದು ರೀತಿಯ ಬಿಕ್ಕಟ್ಟನ್ನು ಎದುರಿಸುತ್ತಲಿದೆ.

ಆಧುನಿಕ ಕನ್ನಡ ಸಾಹಿತ್ಯ ವಲಯದಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಜನಪದ ಸಾಹಿತ್ಯದ ಸಂಗ್ರಹ ಸಂಪಾದನೆಗಳಂತಹ ಕಾರ್ಯ ಆರಂಭವಾಯ್ತು. ಶಿಷ್ಟ ಸಾಹಿತ್ಯದ ಮಾನದಂಡನೆಗಳನ್ನೇ ಬಳಸಿ ಜಾನಪದವನ್ನು ಸಂಗ್ರಹಿಸುವ, ಸಂಪಾದಿಸುವ ಮತ್ತು ಪ್ರಕಟಿಸುವ ಕಾರ್ಯ ನಡೆಯಿತು. ಜಾನಪದಕ್ಕಾಗಿಯೇ ಇಡೀ ಬದುಕನ್ನು ಮುಡಿಪಾಗಿಟ್ಟ ವಿದ್ವತ್ ವಲಯವೊಂದೆಡೆಗೆ, ಜಾನಪದ ಸಾಹಿತ್ಯವನ್ನು ಆಳವಾಗಿ ಅಧ್ಯಯನಿಸಿ, ಸೈದ್ಧಾಂತಿಕ ನೆಲೆಯಲ್ಲಿ ಜಾನಪದದ ವಿಮರ್ಶೆ ಸಂಶೋಧನೆಗೆ ತೊಡಗಿಸಿಕೊಂಡ ಸಮೂಹ ಮತ್ತೊಂದೆಡೆಗಿದೆ. ವಿಶ್ವವಿದ್ಯಾಲಯಗಳು, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳು, ಮಹಾವಿದ್ಯಾಲಯಗಳಲ್ಲಿ ವೃತ್ತಿ ಕೈಗೊಂಡವರು ಇವೆರಡು ಕ್ಷೇತ್ರಗಳಲ್ಲಿ ಶ್ರದ್ಧೆಯಿಂದ ದುಡಿದರು.

ವಿದ್ವತ್‌ವಲಯ ಮತ್ತು ಅಧ್ಯಯನಶೀಲರು ಜಾನಪದದ ಕಾರ್ಯವನ್ನು ಅತೀವ ನಿಷ್ಠೆಯಿಂದ ಕೈಗೊಂಡರು. ಇದರ ಜೊತೆಗೆ ಗ್ರಾಮೀಣ ಸ್ತರದಲ್ಲಿ ವೃತ್ತಿಯಿಂದ ಭಿನ್ನವಾಗಿ, ಸಾಹಿತ್ಯಿಕ ವಲಯದಿಂದ ದೂರವುಳಿದು ಕೇವಲ ಜನಪದ ಸಾಹಿತ್ಯದ ಪ್ರೀತಿಯಿಂದಾಗಿ ಹಾಗೂ ಜನಪದ

[illegible]

[illegible]

[illegible]

[illegible]

[illegible]

ಸಾಹಿತ್ಯವು ನಗರೀಕರಣದ ಭರಾಟೆಯಲ್ಲಿ ಅಳಿದು ಹೋಗಬಾರದು, ಉಳಿದುದನ್ನು ಉಳಿಸಬೇಕೆಂಬ ಸಂಕಲ್ಪದಿಂದ 'ಹವ್ಯಾಸಿ'ಗಳಾಗಿ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು. ಈ ಮೂರನೆಯ ಭಾಗದಲ್ಲಿ ಶ್ರೀ ಜಿ.ಬಿ. ಖಾಡೆಯವರು ಬರುತ್ತಾರೆ. ಹವ್ಯಾಸಿಯಾಗಿ ಜನಪದ ಸಂಗ್ರಹ ಹಾಗೂ ಪ್ರಕಟನೆಗೆ ತೊಡಗಿದವರ ಶ್ರಮವನ್ನು ಅಲಕ್ಷಿಸುವಂತಿಲ್ಲ. ಅವರ ಪ್ರಾಮಾಣಿಕ ಪ್ರಯತ್ನ ನಿರಾಕರಿಸುವಂತಿಲ್ಲ. ಆದ್ದರಿಂದಲೇ ಅಂಥವರ ಪರಿಶ್ರಮವನ್ನು ನಿರ್ಲಕ್ಷಿಸಬಾರದೆಂಬ ಉದ್ದೇಶದಿಂದ 'ಸಂಕಲಿತ ಸಾಹಿತ್ಯ'ವನ್ನು ಈ ಪ್ರಬಂಧದಲ್ಲಿ ಅಧ್ಯಯನಕ್ಕೆ ಅಳವಡಿಸಲಾಗಿದೆ. ಇಲ್ಲಿ ವ್ಯಕ್ತಿಗತ ವಿವರ ಪರಿಚಯ, ಜೀವನ, ಸಾಧನೆಗಳನ್ನು ಎತ್ತಿಕೊಳ್ಳಲಾರದೆ; ಕೇವಲ 'ವಸ್ತು'ವನ್ನು ಮಾತ್ರ ಪರಿಗಣಿಸಲಾಗಿದೆ. ಹೀಗಾಗಿ ಖಾಡೆಯವರ ಸಂಕಲಿತ ಜಾನಪದ ಸಾಹಿತ್ಯವೆಂದು ಶಿರ್ಷಿಕೆಯನ್ನಿರಿಸಿಕೊಳ್ಳಲಾಗಿದೆ.

ಅಧ್ಯಾಯ ಒಂದು ಯಥಾವತ್ತಾಗಿದೆ. ಇದರಲ್ಲಿ ಪ್ರಬಂಧದ ಉದ್ದೇಶ ಮತ್ತು ಸ್ವರೂಪವನ್ನು ವಿವರಿಸಲಾಗಿದೆ. ಅಧ್ಯಾಯ ಎರಡು ಜನಪದ ಸಾಹಿತ್ಯದ ಪ್ರವೇಶವಾಗಿದೆ. ಇದರಲ್ಲಿ ವಿದ್ವತ್‌ಪೂರ್ಣ ಜನಪದ ಸಾಹಿತಿಗಳು, ಅಧ್ಯಯನಶೀಲ ಜಾನಪದ ಸಾಹಿತಿಗಳು ಮತ್ತು ಆಸಕ್ತಿದಾಯಕ ಅಥವಾ ಹವ್ಯಾಸಿ ಜನಪದ ಸಾಹಿತಿಗಳು ಎಂದು ಮೂರು ಭಾಗವಾಗಿಸಿಕೊಂಡು ಅಧ್ಯಯನಿಸಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಹೀಗೆ ವಿಭಾಗಿಸಿ ಅವರ ಸಾಹಿತ್ಯವನ್ನು ಸ್ಥೂಲವಾಗಿ ಪರಿಯಿಸುತ್ತ, ಖಾಡೆಯವರ ಸಾಹಿತ್ಯವನ್ನು ಚರ್ಚಿಸಲಾಗಿದೆ. ಜಾನಪದ ವಲಯದ ಹದಿನಾಲ್ಕು ವ್ಯಕ್ತಿಗಳ ಜನಪದದ ಕಾರ್ಯವನ್ನಿಲ್ಲಿ ಪರಿಚಯಿಸಲಾಗಿದೆ.

ಅಧ್ಯಾಯ ಮೂರರಲ್ಲಿ 'ಜಿ.ಬಿ. ಖಾಡೆಯವರ ಸಂಕಲಿತ ಜನಪದ ಸಾಹಿತ್ಯ'ವನ್ನು ವಿವೇಚಿಸಲಾಗಿದೆ. ಜನಪದ ಪದ್ಯ ಸಂಕಲನಗಳು ಮತ್ತು ಜನಪದ ಗದ್ಯ ಸಂಕಲನಗಳೆಂದು ಅಧ್ಯಯನಕ್ಕಾಗಿ ವಿಭಜಿಸಿಕೊಂಡು ತಲಸ್ಪರ್ಶಿಯಾಗಿ ಚರ್ಚಿಸಲಾಗಿದೆ. ಸಂಗ್ರಹದ ಪ್ರೇರಣೆ, ಅನುಸರಿಸಿದ ಕ್ರಮ, ಸಂಕಲಿಸಿದ ವಿಧಾನ, ಲಭ್ಯ ಸಾಮಗ್ರಿಗಳ ಮೇಲೆ ನಿರ್ಣಯಕ್ಕೆ ಬಂದದ್ದು, ಕ್ಷೇತ್ರಕಾರ್ಯ ಮುಂತಾದವುಗಳನ್ನು ಕೃತಿಗಳ ಜೊತೆಗೆ ಪರಿಚಯಿಸಲಾಗಿದೆ.

ಸಂಕಲಿತ ಸಾಹಿತ್ಯದಲ್ಲಿ ಖಾಡೆಯವರ 'ಅಸ್ಮಿತತೆ'ಯನ್ನು ಸಂಕಲನಕಾರರ ಅನುಭವಗಳನ್ನು ದಾಖಲಿಸುವಲ್ಲಿ ಅವರು ಹೇಳುವ ಕ್ಷೇತ್ರಕಾರ್ಯದ ಕೆಲವು ಪ್ರಸಂಗಗಳು ವಿಶಿಷ್ಟವಾಗಿವೆ. ಜನಪದ ಸಾಹಿತ್ಯದ ಸಂಗ್ರಹಕ್ಕಾಗಿ ಹೋದಾಗ ನಾಯಿ ಕಡಿಸಿಕೊಂಡ ಪ್ರಸಂಗ ಕುತೂಹಲಕರವಾಗಿವೆ. ಹಾಗೆಯೇ ಇಂಥ ಸಂಗ್ರಹದ ನಿಮಿತ್ಯ ಕ್ಷೇತ್ರಕಾರ್ಯಕ್ಕೆ ಹೋದಾಗ 'ಮಕ್ಕಳ ಕಳ್ಳ'ನೆಂದು ತಪ್ಪಾಗಿ ಅರ್ಥೈಸಿ ಖಾಡೆಯವರನ್ನು ಜತ್ತದ ಜೈಲಿನಲ್ಲಿಟ್ಟು, ಅವುಗಳ ಅನುಭವಗಳನ್ನು ರೋಚಕವಾಗಿ ನಿರೂಪಿಸಿದ್ದಾರೆ. ಹಾಗೆಯೇ ಸಂಗೋಪನ ಸಾಹಿತ್ಯದಲ್ಲಿ ಕುಡುಕನ ಪ್ರಸಂಗ ಚಿತ್ರಿಸಿ, ಕಪಟ ಸ್ವಾಮಿಯ ಕುತಂತ್ರ ಬಯಲಿಗೆಳೆದ ಪ್ರಸಂಗ ಇವು ತುಂಬ ರೋಚಕ ಹಾಗೂ ವಾಸ್ತವಿಕ ಘಟನೆಗಳಾಗಿವೆ. ಇಂತಹ ಘಟನೆಗಳನ್ನು ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಜನಪದ ಸಂಗ್ರಹಕಾರ ಮತ್ತು ಸಂಪಾದನಾಕಾರನ ವಿಶಿಷ್ಟ ಅನುಭವಗಳನ್ನು ಅನನ್ಯವಾಗಿ ಖಾಡೆಯವರು ಚಿತ್ರಿಸಿದ್ದಾರೆ.

[illegible]

ಹೀಗೆ ಜನಪದ ಸಂಕಲಿತ ಸಾಹಿತ್ಯದಲ್ಲಿ ಜಿ.ಬಿ. ಖಾಡೆಯವರ ಅಸ್ಮಿತೆ ಮತ್ತು ಅನನ್ಯತೆಗಳೆರಡನ್ನೂ ಇದರಲ್ಲಿ ವಿವರಿಸಲಾಗಿದೆ. ಅಧ್ಯಾಯ ನಾಲ್ಕು – ಸಂಗೋಪನ ಸಾಹಿತ್ಯವಾಗಿದೆ. ಸಂಗೋಪನ ಸಾಹಿತ್ಯದ ವ್ಯಾಖ್ಯೆ, ಸಂಗೋಪನ ಸಾಹಿತ್ಯವನ್ನು ಪರಿಚಯಿಸುತ್ತ ಶ್ರೀ ಜಿ.ಬಿ. ಖಾಡೆಯವರ ಸಂಗೋಪನ ಸಾಹಿತ್ಯವನ್ನು ಪ್ರಸ್ತುತ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ. ಸೃಜನಶೀಲವೆನ್ನಬಹುದಾದ ಕೃತಿಗಳು ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು, ಗಂಡಸರಿಗೆ ಹೆರಿಗೆ ಬ್ಯಾನಿ ಎದ್ದಾಗ ಮತ್ತು ಮೂರು ಹೂಗಳು ಈ ಮೂರನ್ನು ಇದರಲ್ಲಿ ವಿವೇಚಿಸಲಾಗಿದೆ. ಅವುಗಳ ವೈಶಿಷ್ಟ್ಯಗಳನ್ನು ಸಾಧಾರದೊಡನೆ ದಾಖಲಿಸಲಾಗಿದೆ. ಅಪರೂಪವೆನ್ನಬಹುದಾದ ಅಂಶಗಳನ್ನು ಇದರಲ್ಲಿ ನಿರೂಪಿಸಲಾಗಿದೆ.

'ಜಿ.ಬಿ. ಖಾಡೆಯವರ ಸಂಕಲಿತ ಜನಪದ ಸಾಹಿತ್ಯದ ಪರಿಶೀಲನೆ ಮತ್ತು ಪರಾಮರ್ಶೆ'ಯನ್ನು ಐದನೆಯ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ. ಇದರಲ್ಲಿ ಖಾಡೆಯವರ ಒಟ್ಟು ಸಾಹಿತ್ಯವನ್ನು ಸಂಕಲಿತ ಹಾಗೂ ಸಂಗೋಪನ ಸಾಹಿತ್ಯವೆಂದು ಮುಖ್ಯವಾಗಿ ಎರಡು ನಿಟ್ಟಿನಲ್ಲಿ ತಲಸ್ಪರ್ಶಿಯಾಗಿ ಅಧ್ಯಯನಿಸಲಾಗಿದೆ .ಇಲ್ಲಿ ವಿಮರ್ಶೆಯಿದೆ, ವಿವೇಚನೆಯಿದೆ, ವಿಶ್ಲೇಷಣೆಯಿದೆ. ಒಟ್ಟಾರೆ ಅವರ ಸಾಹಿತ್ಯದ ಒಟ್ಟು ನೆಲೆ, ಬೆಲೆಗಳನ್ನು ಇದರಲ್ಲಿ ದಾಖಲಿಸುವ ಪ್ರಯತ್ನವಿದೆ. ಜನಪದ ಸಂಕಲಿತ ಸಾಹಿತ್ಯ, ಅವರ ಕ್ಷೇತ್ರಕಾರ್ಯ, ಸಂಗ್ರಹಣೆ, ಸಂಪಾದನೆ, ಪುಸ್ತಕ ರೂಪ ನೀಡಿದ್ದು, ಪ್ರಕಟನೆಗೊಳಿಸಿದ್ದು ಸಮಸ್ತವನ್ನು ಚರ್ಚಿಸಲಾಗಿದೆ. ಅವರ ಬರವಣಿಗೆಯ ಹೆಚ್ಚುಗಾರಿಕೆಯನ್ನು ತಿಳಿಸುತ್ತ ಅವರ ಸಂಕಲಿತ ಸಾಹಿತ್ಯದ ಮಿತಿಗಳನ್ನೂ ಕೂಡ ಚರ್ಚಿಸಲಾಗಿದೆ.

ಸಂಕಲಿತ ಪದ್ಯಸಾಹಿತ್ಯದಲ್ಲಿ 'ಕಾಡು ಹೂಗಳು' ಹಾಗೂ 'ಹಳ್ಳಿ ಹಬ್ಬಿಸಿದ ಹೂಬಳ್ಳಿ' ಜನಪದ ಗೀತಸಂಕಲನದ ವಿಶೇಷತೆ, ಮುನ್ನುಡಿಯಲ್ಲಿರುವ ಅಂಶ, ಸಂಪಾದನಾ ಕಾರ್ಯಗಳನ್ನು ಚರ್ಚಿಸುತ್ತ ಇತರ ಜಾನಪದ ವಿದ್ವಾಂಸರ ಅಭಿಪ್ರಾಯಗಳನ್ನು ಪರಿಶೀಲಿಸುತ್ತ ತೌಲನಿಕ ಅಧ್ಯಯನ ಕೈಗೊಳ್ಳಲಾಗಿದೆ. ಗದ್ಯ ಜನಪದ ಸಾಹಿತ್ಯದಲ್ಲಿ 'ಬೆಳವಲ ಬೆಳಕು' ಕೃತಿಯನ್ನು ಆಧಾರವಾಗಿ ಇಟ್ಟುಕೊಳ್ಳಲಾಗಿದೆ. ಇಲ್ಲಿರುವ ಒಟ್ಟು ಕಥೆಗಳನ್ನು ಅನುಲಕ್ಷಿಸಿ, ಇತರ ಕಥಾಸಂಕಲನಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಸಂಗೋಪನ ಸಾಹಿತ್ಯದಲ್ಲಿ ಖಾಡೆಯವರ ಕೃತಿಗಳನ್ನು ಆಳವಾಗಿ ಅಧ್ಯಯನಿಸಿ, ವಿಮರ್ಶೆಗೆತ್ತಿಕೊಳ್ಳಲಾಗಿದೆ. ವಿಶೇಷತೆಗಳನ್ನು ಚರ್ಚಿಸಲಾಗಿದೆ. ಈ ಅಧ್ಯಾಯ ಅಂತ್ಯಂತ ಮಹತ್ವದ್ದಾಗಿದೆ. ಒಟ್ಟು ಪ್ರಬಂಧದ ಕೇಂದ್ರಬಿಂದುವೆಂದರೆ ಈ ಅಧ್ಯಾಯವೆಂದೇ ಹೇಳಬಹುದಾಗಿದೆ. ಸಂಕಲಿತ ಜನಪದ ಸಾಹಿತ್ಯ ಹಾಗೂ ಸಂಗೋಪನ ಜನಪದ ಸಾಹಿತ್ಯದ ಮಹತ್ವ, ಅದರ ಹಿಂದಿರುವ ಉದಾತ್ತತೆ, ಜನಪದೀಯ ಕಾಳಜಿಗಳನ್ನು ಗುರುತಿಸಲಾಗಿದೆ.

ವಿದ್ವತ್–ವಲಯ ಮತ್ತು ಅಧ್ಯಯನವಲಯದಿಂದ ಹವ್ಯಾಸಿ ಜನಪದ ಸಾಹಿತಿಗಳ ಪರಿಶ್ರಮಗಳು ಅವರ ಜನಪದ ಪ್ರೀತಿ ಉಳಿದವರಿಗಿಂತ ಅವರ ಕಾರ್ಯ ಹೇಗೆ ವಿಭಿನ್ನವಾಗಿದೆಯೆಂಬುದನ್ನು ಚರ್ಚಿಸಲಾಗಿದೆ. ಈ ಭಾಗವು ವಿಮರ್ಶೆಗೆ ವಿಮರ್ಶೆಯಾಗಿ, ಸಂಶೋಧನೆಗೆ ಸಂಶೋಧನೆಯಾಗಿ, ತೌಲನಿಕಕ್ಕೆ ತೌಲನಿಕವಾಗಿ ನಿಂತುಕೊಳ್ಳುತ್ತದೆ. ವಿದ್ವತ್–ವಲಯ

ವಿದೂರವಾದ ಗ್ರಾಮೀಣ ಜನಪದ ಸಂಗ್ರಹಕಾರ ಪರಿಚಯವನ್ನು ಅವರ ಶ್ರದ್ಧೆಯನ್ನಿದರಲ್ಲಿ ಸಾಧಾರವಾಗಿ ಚಿತ್ರಿಸಲಾಗಿದೆ.

ಖಾಡೆಯವರು ಸಂಗ್ರಹಿಸಿದ ಕೆಲವು ತ್ರಿಪದಿಗಳಲ್ಲಿ ಸಮಕಾಲೀನ ಮೌಲ್ಯಗಳ ಜೊತೆಜೊತೆಗೆ ಸಾರ್ವಕಾಲೀನ ಮೌಲ್ಯಗಳನ್ನು ಕಾಣುತ್ತೇವೆ. ಹೆಣ್ಣುಮಕ್ಕಳನ್ನು ಸಮಾನವಾಗಿ ಕಾಣದ ಜಗತ್ತು-ಜಾನಪದರದ್ದು. ಆದರೂ ಅಲ್ಲಿ ಸಾರಾ ಸಗಟಾಗಿ ಎಲ್ಲೆಡೆಯೂ ಹಾಗಿಲ್ಲ. ಅದಕ್ಕೆ ಅಪವಾದವೆಂಬಂತೆ ಈ ಪದ್ಯವಿದೆ.

"ಹೆಂಗಸ ನಿನಗ್ಯಾಕ ಕರವೀತಿ
ಹೆಂಗಸ ನೀಯೆಂದು ಹಂಗೀಸ ಬ್ಯಾಡ
ನಾಲ್ಕು ರಾಜ್ಯವ ಸಲುಹೀನ"

ಇಲ್ಲಿ ಹೆಣ್ಣಿನ ಸ್ವಾಭಿಮಾನ ಕಾಣುತ್ತದೆ. ಹೆಣ್ಣಿನ ಶಕ್ತಿ ಸಾಮರ್ಥ್ಯಗಳು ಇದರಲ್ಲಿ ಮಡುಗಟ್ಟಿವೆ. ನಾಲ್ಕು ರಾಜ್ಯ ಸಲುಹುವ ಸಾಮರ್ಥ್ಯ ತನಗಿದೆಯೆಂದು ಹೇಳುವಲ್ಲಿ ಹೆಣ್ಣಿನ ಕೆಚ್ಚು ಎದ್ದು ತೋರುತ್ತದೆ. ಪುರುಷ ಹೇಳಿದ್ದಕ್ಕೆಲ್ಲ ಜಾನಪದ ಹೆಣ್ಣು ತಲೆದೂಗವವಳಲ್ಲ. ಪ್ರಸಂಗ ಬಂದರೆ ಎದುರುತ್ತರ ನೀಡಬಲ್ಲಳು. ತನ್ನ ಸ್ವಾಭಿಮಾನಕ್ಕೆ ಧಕ್ಕೆ ಒದಗಿದಾಗ ಸಿಡಿದೇಳಬಲ್ಲಳು ಎಂಬುದಕ್ಕೆ ಈ ಮೇಲಿನ ಪದ್ಯ ನಿದರ್ಶನವಾಗಿದೆ.

ಇಂದು 'ಸ್ತ್ರೀ ಭ್ರೂಣ ಹತ್ಯೆ' ವಿಪರೀತವಾಗಿದೆ. ಸರಕಾರ ಕಾಯ್ದೆ ಕಾನೂನುಗಳಿಂದ ಇದನ್ನು ತಡೆಗಟ್ಟಲು ಸಾಧ್ಯವಿಲ್ಲ. ಆದರೆ ಪರಂಪರಾಗತ ನಂಬಿಗೆಯು 'ಸ್ತ್ರೀ ಭ್ರೂಣ ಹತ್ಯೆ' ತಡೆಯುವಲ್ಲಿ ಸಫಲವಾಗಬಹುದು. ಅಂದಿನ ಜಾನಪದ ಜನಾಂಗದ ನಂಬಿಗೆಯಿಲ್ಲಿ ಮಡುಗಟ್ಟಿದೆ. ನೋಡಿ,

ಹತ್ತಗಂಡ ಹಡದವರ ಮತ್ತ ಬಂಜಿ ಅನ್ನುವರ
ಕಿರಣಿಯ ಉಡುವ ಧರಣೆವ್ವನ ಹಡದರ
ಮಕ್ಕಳ ತಾಯೆಂದು ಕರೆದಾರ"

ಈ ನಂಬಿಕೆಯು ಸ್ತ್ರೀ ಭ್ರೂಣ ಹತ್ಯೆ ತಡೆಯುತ್ತದೆ. ಪುರುಷರಿದ್ದರೂ ಹೆಣ್ಣುಮಕ್ಕಳು ಬೇಕು ಎಂಬ ಸದಾಶಯ ಇದರಲ್ಲಿದೆ. ಇಂಥ ನಂಬಿಕೆಗಳು ಇಂದಿನ ಸಮಾಜಕ್ಕೆ ಅವಶ್ಯಕವಾಗಿವೆ. ಸ್ತ್ರೀ-ಪುರುಷರ ಅನುಪಾತದಲ್ಲಿ ಏರುಪೇರಾಗಿರುವುದನ್ನು ಈ ನಂಬಿಕೆ ತಡೆಗಟ್ಟಬಹುದಾಗಿದೆ.

ಇಂಥ ತ್ರಿಪದಿಗಳು ಸ್ತ್ರೀ ಜಾಗೃತಿ, ಸ್ತ್ರೀಪರ ವಿಚಾರಗಳನ್ನು ಪ್ರತಿಪಾದಿಸುತ್ತವೆ. ಇವು ಹೊಚ್ಚ ಹೊಸ ತ್ರಿಪದಿಗಳು ಖಾಡೆಯವರ ಸಂಕಲಿತ ಸಾಹಿತ್ಯದ ಹೆಚ್ಚುಗಾರಿಕೆಯಾಗಿದೆ. ರಿವಾಯತ್ ಪದ್ಯಗಳು ತುಂಬ ಮಹತ್ತರವಾದವುಗಳು. ಇದರಲ್ಲಿ ಹಿಂದೂ ಮುಸ್ಲಿಂ ಭಾವೈಕ್ಯತೆ ಇದೆ. ಇಂದಿನ ಕೋಮು ದಳ್ಳುರಿ, ಪರಸ್ಪರ ಅಪನಂಬಿಕೆಯ ಸಂದರ್ಭದಲ್ಲಿ ರಿವಾಯತ್ ಪದಗಳ ಆಶಯ ಸಮಕಾಲೀನ ಸಮಾಜಕ್ಕೆ ದಾರಿದೀಪವಾಗಬಹುದು.

ಉರ್ದು ಪದಗಳು, ಮರಾಠಿ ಮಿಶ್ರಿತ ಕನ್ನಡ ಪದಗಳು, ಇನ್ನಿತರ ಪದಗಳು ಜಾನಪದ ತ್ರಿಪದಿಗಳಲ್ಲಿ ಬಳಕೆಯಾಗಿವೆ. ಒಂದು ಭಾಷೆ ಬೆಳೆಯಬೇಕಾದರೆ ಮಡಿವಂತಿಕೆ ಇಟ್ಟುಕೊಳ್ಳಬಾರದು. ಮಡಿವಂತಿಕೆಯಿಂದ ಯಾವುದೇ ಭಾಷೆ ಬೆಳೆಯಲಾರದು. ಕನ್ನಡ-ಮರಾಠಿ-ಉರ್ದು ಪದಗಳ

[illegible]

ಬಳಕೆಯಿಂದ ಭಾಷೆಗೆ ಹೊಸ ಕಸುವು ಪ್ರಾಪ್ತವಾಗಿದೆ. ಖಾಡೆಯವರ ಸಂಕಲಿತ ಸಾಹಿತ್ಯ ಭಾಷಾ ವಿಜ್ಞಾನಿಗಳ ಅಧ್ಯಯನಕ್ಕೆ ವಿಫುಲವಾದ ಸಾಮಗ್ರಿ ಒದಗಿಸುತ್ತದೆ. ಸಂಸ್ಕೃತಿನಿಷ್ಠ ಸಂಶೋಧನೆಗೆ ಶ್ರಿಯುತರ ಸಾಹಿತ್ಯವೊಂದು ವಿಶೇಷ ಗಣಿಯಾಗಿದೆ ಅಲ್ಲದೆ ರಿವಾಯತ್ ಪದಗಳನ್ನು ಬರೆದ ಕವಿಗಳ ಹೆಸರುಗಳೂ ಇಲ್ಲಿ ಮೂಡಿಬಂದದ್ದು ವಿಶೇಷವಾಗಿದೆ.

ನಗರ ಪ್ರದೇಗಳಿಂದ ದೂರವಾಗುಳಿದಿರುವ ಜನಪದ ಪದ್ಯ ಸಂಕಲನಕಾರರನ್ನು, ಗದ್ಯ ಸಂಕಲನಕಾರರನ್ನು, ಹಳ್ಳಿ-ಹಳ್ಳಿಗಳಲ್ಲಿ ಎಲೆ ಮರೆಯ ಕಾಯಂತೆ ಇರುವ ಜನಪದ ಸಾಹಿತ್ಯ ಸಂಗ್ರಹಕಾರರನ್ನು, ಲಾವಣಿಕಾರರನ್ನು, ಆಟ-ಬಯಲಾಟದ ರಚಕರನ್ನು, ಸಂಕಲನಕಾರರನ್ನು ಅಧ್ಯಯನಿಸುವ ಅವಕಾಶ ವಿಫುಲವಾಗಿದೆ. ಆಧುನಿಕ ಆಣೆಕಟ್ಟುಗಳು ತಲೆಯೆತ್ತಿರುವ ಸಂದರ್ಭದಲ್ಲಿ ಮುಳುಗಡೆ ಜನಾಂಗದ ತಲ್ಲಣಗಳು, ಅವರ ಸಂಸ್ಕೃತಿ ಅವರ ಜೀವನ ವಿಧಾನ ಹಾಗೂ ಅವರ ಜನಪದ ಸಾಹಿತ್ಯವನ್ನು ಸಂಕಲಿಸುವ, ಅವರ ಕುರಿತಾಗಿ ಸಂಶೋಧನೆ ಕೈಗೊಳ್ಳುವ ಅವಕಾಶಗಳು ಹೇರಳವಾಗಿವೆ. ಜನಪದ ಸಾಹಿತ್ಯ ಅತ್ಯಂತ ಸಂಪದ್ಭರಿತವಾಗಿದೆ. ಕಾರ್ಯ ಪ್ರವೃತ್ತರಾಗುವ ಸಾಹಸಶೀಲ ಸಂಶೋಧಕರಿಗೆ ಗ್ರಾಮೀಣ ಬದುಕು ಅವರ ಸಾಹಿತ್ಯ ಸಂಸ್ಕೃತಿಗಳು ಅಧ್ಯಯನ ಕೈಗೊಳ್ಳುವವರಿಗೆ ಬಂಗಾರದ ಗಣಿಗಳಾಗಿದೆ.

ಅನುಬಂಧಗಳು

ಪರಾಮರ್ಶನ ಗ್ರಂಥಪಟ್ಟಿ

೧. **ಆಯ್ದ ಜನಪದ ಕಥನ ಗೀತಗಳು,** ಸುಂಕಾಪುರ, ಎಂ.ಎಸ್. (ಪ್ರ.ಸಂ) ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೮೧.

೨. **ಇಗೋ ಕನ್ನಡ,** ವೆಂಕಟಸುಬ್ಬಯ್ಯ. ಜಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೬.

೩. **ಏಕಲವ್ಯನ ಪಾತ್ರ ಒಂದು ಅಧ್ಯಯನ,** ಅಶೋಕ ನರೋಡೆ, ಶ್ರೀ ಸಿದ್ದೇಶ್ವರ ಪ್ರಕಾಶನ, ಹಂದಿಗುಂದ, ೨೦೦೧.

೪. **ಕನ್ನಡ ನಾಟಕ ಸಮೀಕ್ಷೆ,** ಮರುಳಸಿದ್ದಪ್ಪ, ಕೆ, ಪ್ರತಿಮಾ ನಾಟಕ ಪ್ರಕಾಶನ, ಬೆಂಗಳೂರು, ೧೯೮೬.

೫. **ಕರ್ನಾಟಕ ಸಂಗಾತಿ,** ಬರಗೂರು ರಾಮಚಂದ್ರಪ್ಪ, (ಪ್ರ.ಸಂ), ಕನ್ನಡ ಅಭಿವೃದ್ಧಿ ಪ್ರಾಧಿಕಾರ, ೨೦೦೨.

೬. **ಕರ್ನಾಟಕ ಸಾಹಿತ್ಯ ಸಮೀಕ್ಷೆ,** ಸಂ.೧. ಶಿವರುದ್ರಪ್ಪ, ಜಿ.ಎಸ್. ಪ್ರಸಾರಾಂಗ ಬೆಂಗಳೂರು. ವಿವಿ, ೨೦೦೦.

೭. **ಕರ್ನಾಟಕ ಸಂಸ್ಕೃತಿ ಸಮೀಕ್ಷೆ,** ತಿಪ್ಪೇರುದ್ರಸ್ವಾಮಿ, ಎಚ್. ಡಿ.ವ್ಹಿ.ಕೆ. ಮೂರ್ತಿ ಪ್ರಕಾಶನ ಮೈಸೂರು, ೧೯೬೮.

೮. **ಕನ್ನಡ ಸಂಸ್ಕೃತಿ ಮೀಮಾಂಸೆ,** ಹೊನ್ನಯ್ಯ. ಸಿ.ಬಿ. (ಸಂ), ಜೈಭೀಮ್ ಪ್ರಕಾಶನ, ಮೈಸೂರು, ೨೦೦೫.

೯. **ಕನ್ನಡ ಸಾಹಿತ್ಯ ಕೋಶ,** ರಾಜಪ್ಪ ದಳವಾಯಿ ರಾಘವೇಂದ್ರ ಪ್ರಕಾಶನ ಬೆಂಗಳೂರು, ೨೦೦೬.

೧೦. **ಕನ್ನಡ ಸಾಹಿತ್ಯ ಚರಿತ್ರೆ,** ಮುಗುಳಿ, ರಂ.ಶ್ರೀ. ಸಮಾಜ ಪುಸ್ತಕಾಲಯ, ಧಾರವಾಡ, ೨೦೦೨.

೧೧. **ಕನ್ನಡ ಸಾಹಿತ್ಯ ಚರಿತ್ರೆ,** ಶ್ಯಾಮರಾಯ. ತ.ಸು, ತ.ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೧.

೧೨. **ಕನ್ನಡ ಸಂಶೋಧನೆ ತಾತ್ವಿಕ ವಿಚಾರ,** ರೆಹಮತ್ ತರಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೩. **ಕನ್ನಡ ಸಾಹಿತ್ಯದಲ್ಲಿ ಕರ್ಣ, ಮಾಳಿ. ವ್ಹಿ.ಎಸ್,** ಸಿರಿಗನ್ನಡ ಪ್ರಕಾಶನ,ಹಾರುಗೇರಿ,೧೯೯೨.

೧೪. **ಕಾಡು ಹೂಗಳು,** ಖಾಡೆ. ಜಿ.ಬಿ. (ಸಂ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೩.

೧೫. **ಕಿರಿಯರ ಕರ್ನಾಟಕ,** ಶೇಷಗಿರಿರಾವ್. ಎಲ್.ಎಸ್, (ಪ್ರ.ಸಂ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೧೬. **ಕುರುಬರ ಗುರು ಒಡೆಯರು,** ಹಳ್ಳೀಕೇರಿ, ಎಫ್.ಟಿ. (ಸಂ), ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೭.

೧೭. **ಗರತಿಯ ಹಾಡು,** ಹಲಸಂಗಿ ಗೆಳೆಯರು, ಸಮಾಜ ಪುಸ್ತಕಾಲಯ ಪ್ರಕಾಶನ, ಧಾರವಾಡ, ೧೯೭೮.

೧೮. **ಜನಪದ ಸಾಹಿತ್ಯ** (ವಿವಿಧ ಲೇಖಕರು) ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು, ೧೯೭೭.

೧೯. **ಜನ-ಜನಪದ-ಜಾನಪದ,** ಚಿದಾನಂದಮೂರ್ತಿ ಎಂ, ಸಪ್ನ ಬುಕ್‌ಹೌಸ್ ಬೆಂಗಳೂರು, ೨೦೦೨.

೨೦. **ಜನಪದ ಕಾವ್ಯ ಪ್ರಥಮ ವಿಮರ್ಶೆ,** ವೀರಣ್ಣ ದಂಡೆ, (ಸಂ), ಪ್ರಗತಿ ಪ್ರಕಾಶನ, ಕಲ್ಬುರ್ಗಿ, ೧೯೯೩.

೨೧. **ಜಾನಪದ ನಾಲ್ದಳ,** ಶಿವಾನಂದ ಚರಂತಿಮಠ, ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳಿ ಮೂರುಸಾವಿರಮಠ ಹುಬ್ಬಳ್ಳಿ ೧೯೮೪.

೨೨. **ಜಾನಪದವಿಹಾರ,** ಕ್ಯಾತನಹಳ್ಳಿರಾಮಣ್ಣ, ದಿನಕರ ಪ್ರಕಾಶನ, ಬೆಂಗಳೂರು, ೧೯೮೫.

೨೩. **ಜಾನಪದ ಕೈಪಿಡಿ**, ಲಕ್ಕಪ್ಪಗೌಡ. ಎಚ್.ಜೆ, (ಸಂ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೭.

೨೪. **ಜಾನಪದ ಉಪಾಸನೆ**, ಜ್ಯೋತಿ ಹೊಸೂರು, ಕಾಲಗಿತಿ ಪ್ರಕಾಶನ, ರಾಯಬಾಗ, ೧೯೮೧.

೨೫. **ಜಾನಪದ ದರ್ಶನ**, ಚನ್ನಬಸಪ್ಪ, ಗೊ.ರೂ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು–೧೯೯೧.

೨೬. **ಜಾನಪದ ವ್ಯಾಸಂಗ**, ಅರವಿಂದ ಮಾಲಗತ್ತಿ, ಶೈಲ ಪ್ರಕಾಶನ, ಮುದ್ದೇಬಿಹಾಳ, ೧೯೮೫.

೨೭. **ಜಾನಪದ ಸಮ್ಮುಖ**, ದೇವೇಂದ್ರಕುಮಾರ ಹಕಾರಿ, ಶ್ರೀ ಸಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ ಮೂರುಸಾವಿರಮಠ, ಪ್ರಕಾಶನ, ಹುಬ್ಬಳ್ಳಿ – ೧೯೮೩.

೨೮. **ಜನಪದ ಕಥಾಸಂಗಮ**, ಲಿಂಗಯ್ಯ. ಡಿ. (ಸಂ), ದಿನಕರ ಪ್ರಕಾಶನ, ಬೆಂಗಳೂರು – ೧೯೭೮.

೨೯. **ಜಾನಪದ ಜಯಂತಿ**, ನಿಂಗಣ್ಣ ಸಣ್ಣಕ್ಕಿ, ಜಾನಪದ ಮಾಳಸ ರಾಯಬಾಗ ಪ್ರಕಾಶನ, ೧೯೮೨.

೩೦. **ಜಾನಪದ ಸಾಹಿತ್ಯ ದರ್ಶನ**, ಸುಂಕಾಪುರ. ಎಂ.ಎಸ್, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೦.

೩೧. **ಡೊಳ್ಳಿನ ಪದಗಳು**, ಅರ್ಜುನ್ ಗೊಳಸಂಗಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೮.

೩೨. **ತ್ರಿಪದಿ, ರಗಳೆ, ಮತ್ತು ಜನಪದ ಸಾಹಿತ**, ಸಂ.೭, ಕಾಳೇಗೌಡ ನಾಗವಾರ, ಪ್ರಸಾರಾಂಗ, ಬೆಂಗಳೂರು, ೧೯೭೫.

೩೩. ದಾಂಗುಡಿ, **ಜನಪದ ಅಧ್ಯಯನ ಲೇಖನಗಳು**, ಪಡಶೆಟ್ಟಿ. ಎಂ.ಎಂ. ನೆಲೆ ಪ್ರಕಾಶನ, ಸಿಂದಗಿ, ೨೦೦೭.

೩೪. **ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು**, ಖಾಡೆ, ಜಿ.ಬಿ. ಅನಿಕೇತನ ಪ್ರಕಾಶನ ಬಾಗಲಕೋಟ, ೨೦೦೬.

೩೫. **ನವೋದಯ ಕಾವ್ಯದ ಮೇಲೆ ಜಾನಪದ ಪ್ರಭಾವ**, ಪ್ರಕಾಶ ಖಾಡೆ, ಅನಿಕೇತನ ಪ್ರಕಾಶನ, ಬಾಗಲಕೋಟ, ೧೯೯೭.

೩೬. **ಪುರಾಣನಾಮ ಚೂಡಾಮಣಿ**, ಬೆನಗಲ್ ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೪೧.

೩೭. **ಬಾಗಲಕೋಟ ಜಿಲ್ಲಾ ದರ್ಶನ**, ಮಲ್ಲಿಕಾರ್ಜುನ ಹುಲಗಬಾಳಿ. (ಸಂ) ಅಖಿಲಭಾರತ ೬೮ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ೨೦೦೦.

೩೮. **ಬೆಳವಲ ಬೆಳಕು**, ಖಾಡೆ, ಜಿ.ಬಿ. (ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.

೩೯. **ಮಾರ್ಗ–೪**, ಕಲಬುರ್ಗಿ, ಎಂ.ಎಂ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೪.

೪೦. **ಬಂಗಾರದ ಹುರಿಗೆಜ್ಜಿ ನುಡಿದಾವ**, ಶಿವಯೋಗಿ ಬಿದರಿ, (ಸಂ), ಹಿಂದಿ ಶೈಕ್ಷಣಿಕ ಸೇವಾ ಸಮಿತಿ, ಬಿಜಾಪೂರ,

೪೧. **ಬಂಡಾಯ ಜಾನಪದ**, ಬಸವರಾಜ ಸಬರದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೪೨. **ಮಲ್ಲಿಗೆ ದಂಡೆ**, ಹಲಸಂಗಿ ಗೆಳೆಯರು, ಸಮಾಜ ಪುಸ್ತಕಾಲಯ, ಧಾರವಾಡ, ೨೦೦೦.

೪೩. **ಮುಸ್ಲಿಮರ ಹಬ್ಬ ಮತ್ತು ಉರುಸುಗಳು**, ದಸ್ತಗೀರ ಅಲ್ಲೀಭಾಯಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,೧೯೯೬.

೪೪. **ಮಧುರ ಚೆನ್ನ**, ಬಸವರಾಜ ನರೇಗಲ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪.

೪೫. **ಮಾರ್ಗ–೨**, ಕಲಬುರ್ಗಿ ಎಂ. ಎಂ. ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೮೮.

೪೬. **ಮಾರ್ಗ–೩**, ಕಲಬುರ್ಗಿ, ಎಂ.ಎಂ. ಕರ್ನಾಟಕ ಬುಕ್ ಏಜೆನ್ಸಿ ಪ್ರಕಾಶನ, ಬೆಂಗಳೂರು, ೧೯೯೮.

೪೭. **ಸಾಹಿತ್ಯ,** ಶೇಷಗಿರಿರಾವ್. ಎಲ್.ಎಸ್. (ಪ್ರ.ಸಂ), ಸಪ್ನ ಬುಕ್‌ಹೌಸ್ ಬೆಂಗಳೂರು, ೧೯೯೯,

೪೮. **ಸಂಬಂಧವಾಚಕಗಳು ಮತ್ತು ಸಂಬೋಧನೆಗಳು,** ಅಂಗಡಿ. ಎಸ್.ಎಸ್. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೨.

೪೯. **ಸೋಮೇಶ್ವರ ಶತಕ,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೧.

೫೦. **ಸಾಂಸ್ಕೃತಿಕ ಸಂಶೋಧನೆ,** ತಾಳ್ತಜೆ ವಸಂತಕುಮಾರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೫೧. **ಹಳ್ಳಿ ಹಬ್ಬಿಸಿದ ಹೂಬಳ್ಳಿ,** ಖಾಡೆ. ಜಿ.ಬಿ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೧.

೫೨. **ಹಲಗಲಿ: ಗ್ರಾಮ ಜಾನಪದ,** ಶ್ರೀರಾಮ ಇಟ್ಟಣ್ಣವರ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ ಬೆಳಗಾವಿ, ೧೯೯೫.

೫೩. **ಹಾಲಸ್ವಾರಿಯ ಸುತ್ತ ಯಾಲಕ್ಕಿ ಬಿದ್ದಾವ,** ಬಿದರಿ. ಎಸ್.ಎಂ. ಮಿತ್ರಭಾರತಿ ಪ್ರಕಾಶನ, ವಿಜಾಪುರ, ೧೯೭೭.

೫೪. **ಹೊಸತು ಹೊಸತು,** ಚಿದಾನಂದಮೂರ್ತಿ. ಎಂ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೮.

೫೫. **ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ,** ಶಿವಾನಂದ ಗುಬ್ಬಣ್ಣವರ್, ಅಕ್ಷಯ ಪ್ರಕಾಶನ, ೧೯೯೧.

೫೬. **ವಂದನೆ ಅಭಿನಂದನೆ,** ಅಶೋಕ ನರೋಡೆ, (ಸಂ), ಅಪೂರ್ವ ಪ್ರಕಾಶನ, ಮಹಾಲಿಂಗಪೂರ.

ಜಿ.ಬಿ.ಖಾಡೆಯವರ ಕೃತಿಗಳು

ಪ್ರಕಟಿತ:

೧). **ಕಾಡು ಹೂಗಳು**,ಜನಪದ ಗೀತ ಸಂಕಲನ, ಮೈಸೂರು ವಿಶ್ವವಿದ್ಯಾಲಯ. ೧೯೭೩.

೨). **ಹಳ್ಳಿ ಹಬಿಸಿದ ಹೂಬಳ್ಳಿ**, ರಿವಾಯತ ಪದಗಳು, ಕನ್ನಡ ಸಾಹಿತ್ಯ ಪರಿಷತ್, ೧೯೮೧.

೩). **ಬೆಳವಲ ಬೆಳಕು**, ಜನಪದ ಕಥೆಗಳು, ಕನ್ನಡ ಸಾಹಿತ್ಯ ಪರಿಷತ್, ೧೯೮೧.

೪). **ಮೂರು ಹೂಗಳು**,ನಾಟಕ ಸಂಕಲನ, ಸರಸ್ವತಿ ಪ್ರಕಾಶನ,ಜಮಖಂಡಿ, ೧೯೬೮.

೫). **ಜಗೃತ ಸಂಗಮ**, ಸ್ಮರಣ ಸಂಚಿಕೆ, ಗ್ರಾಮ ಲೆಕ್ಕಾಧಿಕಾರಿಗಳ ಸಂಘ,ಬೆಂಗಳೂರು, ೧೯೮೬.

೬). **ರಾಜಸ್ವ ಸ್ಮೃತಿ**, ಸ್ಮರಣ ಸಂಚಿಕೆ, ಕಂದಾಯ ನೌಕರರ ಸಂಗ, ಬೆಂಗಳೂರು, ೧೯೮೩.

೭). **ಬೆಳವಲ ಬೆಡಗು**, ಸ್ಮರಣ ಸಂಚಿಕೆ, ಅಖಿಲ ಭಾರತ ಸಾಹಿತ್ಯ ಸಮ್ಮೇಳನ,ಮುಧೋಳ, ೧೯೯೫.

೮). **ನಕ್ಕು ನಗಿಸುವ ಹಾಸ್ಯ ಪ್ರಸಂಗಗಳು**, ಜನಪದ ಹಾಸ್ಯಕಥೆಗಳು.ಅನಿಕೇತನ ಪ್ರಕಾಶನ, ಬಾಗಲಕೋಟ.೨೦೦೬

೯). **ಗಂಡಸರಿಗೆ ಹೆರಿಗೆ ಬ್ಯಾನಿ ಎದ್ದಾಗ**, ಜನಪದ ಹಾಸ್ಯಕಥೆಗಳು. ಅನಿಕೇತನ ಪ್ರಕಾಶನ, ಬಾಗಲಕೋಟ.೨೦೦೭

೧೦). **ನೇಗಿಲ ಯೋಗಿ**, ರೇಡಿಯೋ ನಾಟಕ, ಆಕಾಶವಾಣಿ ಧಾರವಾಡ, ೧೯೬೦.


೧೧). **ಶಿವಭಕ್ತ ಶರಿಯಾಳ**, ರೇಡಿಯೋ ನಾಟಕ, ಆಕಾಶವಾಣಿ ಧಾರವಾಡ, ೧೯೬೧.

ಅಪ್ರಕಟಿತ :

೧). **ಹೆಂಡತಿಯ ಗುಣ ಪರೀಕ್ಷೆ** ಏಕಾಂಕ ನಾಟಕ, ಅಚ್ಚಿನಲ್ಲಿ, ೨೦೦೮

೨). **ಜಗವೆಲ್ಲ ನಗುತುರಲಿ**, ಜೀವನ ಚರಿತ್ರೆ, ಅಚ್ಚಿನಲ್ಲಿ, ೨೦೦೮

ಛಾಯಾಚಿತ್ರಗಳು




ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಪ್ರಶಸ್ತಿ – 2004



ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ – 1998



ಶ್ರೇಷ್ಠ ಜಾನಪದ ಸಾಹಿತಿ ಪ್ರಶಸ್ತಿ – 1996







ಪ್ರಶಸ್ತಿ ಪತ್ರಗಳು

...ಟಕ ಜಾನಪದ ಮತ್ತು
...ಗಾನ ಅಕಾಡೆಮಿ
...ರು



ಜಾನಪದ : ಜ್ಞಾನ–ವಿಜ್ಞಾನ ಪ್ರಶಸ್ತಿ

೨೦೦೩

ಶ್ರೀ ಜಿ.ಜಿ. ಖಾಡೆ ಅವರು


ಜನಪದ ಸಾಹಿತ್ಯ ಪ್ರಚಾರ ಕ್ಷೇತ್ರದಲ್ಲಿ ಸಲ್ಲಿಸಿರುವ

ಸುದೀರ್ಘ ಸೇವೆಗೆ ಗೌರವಪೂರ್ವಕವಾಗಿ ನೀಡಿದ ಪ್ರಶಸ್ತಿಪತ್ರ

ಎಂ. ಮುನಿರಾಜು
ರಿಜಿಸ್ಟ್ರಾರ್

ಪ್ರೊ. ಹಿ.ಶಿ. ರಾಮಚಂದ್ರೇಗೌಡ
ಅಧ್ಯಕ್ಷರು

ಫೆಬ್ರವರಿ ೨೮, ೨೦೦೪
ಕಾರವಾರ



ಜಿ.ಬಿ. ಖಾಡೆ

ಜಾನಪದ ಪ್ರಸಾರ : ಪ್ರಚಾರ : ಅಭಿವೃದ್ಧಿ

'ಜನಪದ ನಿಲಯ'
ಜಯನಗರ ಬಡಾವಣೆ
ಮುಧೋಳ
ಬಾಗಲಕೋಟ ಜಿಲ್ಲಾ

ಟೇಪ್ ರೆಕಾರ್ಡರ್ ಇಲ್ಲದ ದಿನಗಳಲ್ಲಿ ಹಳ್ಳಿ ಹಳ್ಳಿ ಸುತ್ತಿ ಗ್ರಾಮೀಣ ಜನರ ಬಾಯಿಯಲ್ಲಿದ್ದ ಸಾಹಿತ್ಯವನ್ನು ಕೇಳಿ, ನೇರವಾಗಿ ಬರೆದುಕೊಂಡು, ಅಳಿದು ಹೋಗುತ್ತಿದ್ದ ಜನಪದ ಸಾಹಿತ್ಯವನ್ನು ಉಳಿಸಿದವರಲ್ಲಿ ಗಣಪತಿ ಬಾಪೂ ಖಾಡೆಯವರ ಪಾತ್ರ ಹಿರಿದಾದುದು. ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಸಂಪತ್ತನ್ನು ಸಂಗ್ರಹಿಸಿಕೊಟ್ಟಿರುವ ಹಿರಿಯ ಜಾನಪದ ವಿದ್ವಾಂಸ ಖಾಡೆಯವರು ನಿಗರ್ವಿಗಳು ಹಾಗೂ ಹಾಸ್ಯಪ್ರಿಯರು. ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ತೊದಲಬಾಗಿಯಲ್ಲಿ ಜನಿಸಿದ (1943) ಸದ್ಯ ಮುಧೋಳದಲ್ಲಿ ನೆಲೆಸಿರುವ ಖಾಡೆಯವರು ವೃತ್ತಿಯಲ್ಲಿ ಗ್ರಾಮಲೆಕ್ಕಿಗರಾದರೂ, ಪ್ರವೃತ್ತಿಯಲ್ಲಿ ಜಾನಪದ ಸಂಗ್ರಾಹಕರು. ಕರ್ನಾಟಕದ ಉತ್ತರ ಭಾಗದಲ್ಲಿ ಹಲಸಂಗಿ ಗೆಳೆಯರ ನಂತರ ಖಾಡೆಯವರು ಜಾನಪದ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡಿರುತ್ತಾರೆ. ಇವರ ಕಾಡುಹೂಗಳು, ಹಳ್ಳಿ ಹಬ್ಬಿಸಿದ ಹೂಬಳ್ಳಿ, ಜನಪದ ರಿವಾಯತ್ ಪದಗಳು, ಜಾನಪದ ಕತೆಗಳು, ಬೆಳವಲದ ಬೆಡಗು ಇವೇ ಮೊದಲಾದ ಕೃತಿಗಳು ಹೊರಬಂದಿವೆ. ಜನಸಂಪರ್ಕವನ್ನು ವಿಶೇಷವಾಗಿ ಹೊಂದಿರುವ ಮತ್ತು ಜಾನಪದದ ಬಗೆಗೆ ಮೂಲಭೂತ ಕಾಳಜಿ ತಿಳುವಳಿಕೆಯನ್ನು ಹೊಂದಿರುವ ಜಿ.ಬಿ. ಖಾಡೆಯವರ ಜಾನಪದ ಸೇವೆಯನ್ನು ಗುರುತಿಸಿ. ನಾಡಿನ ಹತ್ತು ಹಲವು ಸಂಘ ಸಂಸ್ಥೆಗಳು ಗೌರವಿಸಿ ಸನ್ಮಾನಿಸಿವೆ.

ಶ್ರೀ ಜಿ.ಬಿ. ಖಾಡೆಯವರ ಜಾನಪದ ನಿಷ್ಠೆ, ಜಾನಪದ ಬೆಳವಣಿಗೆಗೆ ಕೈಗೊಂಡ ಕೆಲಸವನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 2003 ರ ಸಾಲಿನ ಪ್ರಶಸ್ತಿ ನೀಡಿ ಗೌರವಿಸುತ್ತಿದೆ.

|| ಸಿರಿಗನ್ನಡಂ ಗೆಲ್ಗೆ ||

ಸ್ಥಾಪನೆ : 1990

ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ

(ಕೇರಳ ರಾಜ್ಯ ಕನ್ನಡ ಭಾಷಾ ಅಲ್ಪಸಂಖ್ಯಾತರ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಸಂಘಟನೆ)

ಪಾರೆಕಟ್ಟೆ ರಸ್ತೆ, ಅಂಚೆ : ರಾಮದಾಸ ನಗರ, ಕಾಸರಗೋಡು - 671 125

ದೂರವಾಣಿ : 04994 - 227911, ಮೊಬೈಲ್ : 94485 72016

ಹಾಗೂ

ಕೇರಳ ರಾಜ್ಯದ ವಿವಿಧ ಕನ್ನಡ ಸಂಘ ಸಂಸ್ಥೆಗಳ ಸಹಯೋಗದಲ್ಲಿ

29 ಜನವರಿ 2006
ಆದಿತ್ಯವಾರ

ಲಲಿತ ಕಲಾ ಸದನ (ರಿ.),
ಕಾಸರಗೋಡು

ಕಾಸರಗೋಡು ಜನವರಿ 29 2006

ಕೇರಳ ರಾಜ್ಯ
ದ್ವಿತೀಯ ಕನ್ನಡ ಸಮ್ಮೇಳನ - 2006

ರಾಷ್ಟ್ರೀಯ ವಿಚಾರ ಸಂಕಿರಣ / ಅಂತಾರಾಜ್ಯ ಕವಿಗೋಷ್ಠಿ /
ಅಂತಾರಾಜ್ಯ ಚುಟುಕು ವಾಚನ ಗೋಷ್ಠಿ / ಅಂತಾರಾಜ್ಯ ಸಾಂಸ್ಕೃತಿಕೋತ್ಸವ
ಕಾರ್ಯಕ್ರಮದಲ್ಲಿ ಭಾಗವಹಿಸಿದ

ಶ್ರೀ. ಜಿ. ಬಿ. ಖಾಡೆ. ಜಾನಪದ
ವಿದ್ವಾಂಸರು ಮುಧೋಳ ಜಿ: ಬಾಗಲಕೋಟ

ಇವರಿಗೆ ನೀಡಿದ

ಅಭಿನಂದನ ಪತ್ರ

ಅಧ್ಯಕ್ಷರು
ಕೇರಳ ರಾಜ್ಯ ದ್ವಿತೀಯ ಕನ್ನಡ ಸಮ್ಮೇಳನ - 2006
ಕಾಸರಗೋಡು

[illegible]
ಅಧ್ಯಕ್ಷರು
ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ, ಕಾಸರಗೋಡು

ಕನ್ನಡ ರಾಜ್ಯೋತ್ಸವ - ೧೯೯೮

ಕನ್ನಡ ರಾಜ್ಯೋತ್ಸವ ಆಚರಣಾ ಸಮಿತಿ, ಬಾಗಲಕೋಟ

:: ಸನ್ಮಾನ ಪತ್ರ ::


ಶ್ರೀಮತಿ / ಶ್ರೀ ___ಜಿ.ಬಿ. ಖಾಡೆ___ ಇವರು ___ಜಾನಪದ___ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಪ್ರಯುಕ್ತ ಶ್ರೀಯುತರ ಸೇವೆಯನ್ನು ಪರಿಗಣಿಸಿ ಕನ್ನಡ ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ಈ ಸನ್ಮಾನ ಪತ್ರವನ್ನು ಗೌರವಪೂರ್ವಕವಾಗಿ ಪ್ರದಾನ ಮಾಡಲಾಗಿದೆ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಕನ್ನಡ ರಾಜ್ಯೋತ್ಸವ ಆಚರಣಾ ಸಮಿತಿ,
ಬಾಗಲಕೋಟ ಜಿಲ್ಲೆ, ಬಾಗಲಕೋಟ

ಬಾಗಲಕೋಟ
ದಿನಾಂಕ: ೧- ೧೧- ೧೯೯೮

ವಂಶಾವಳಿ

ರಾವಜಿ ಪಾಟೀಲ (ಮೂಲ ಪುರುಷ) ಶಕೆ ೧೧೨೬.



ಶ್ರೀ. ಬಿ. [illegible]ಯವರ ಹಸ್ತಾಕ್ಷರ

ಭಾಗ ೨

[illegible]

[illegible]